ಮಾನವಿಕ ಕರ್ಣಾಟಕ

ಸಂಪುಟ ೮ ಸಂಚಿಕೆ ೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೮

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೧೨ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೮ ಸಂಚಿಕೆ ೩

೩೧

ಮೇ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೮

MANAVIKA KARNATAKA, Kannada Quartery of the University of Mysore, Volume 8, Number 3, May 1978. Edited by Dr. B. R. Gopal and Dr, B. S. Srikantharadhya.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಹರ್ಷ ಪ್ರಿಂಟರ್ಸ್ ವಿದ್ಯಾರಣ್ಯಪುರಂ ಮೈಸೂರು-570 008

ವಿಷಯ ಸೂಚಿ

		ಶ್ರೀಯುತರಾದ	
1. ಸರ್ ಮಾರ್ಟಿಮರ್ ವೀಲರ್	....	ಎಚ್. ಎಂ. ನಾಗರಾಜರಾವ್	೧
2. ಶಿಕ್ಷಣ ಮತ್ತು ಜೀವನ ಮೌಲ್ಯಗಳು	....	ಪಾ. ವೆಂ. ಆಚಾರ್ಯ	೯
3. ಜೈನಧರ್ಮ	....	ಹು. ಲ. ಚಂದ್ರಶೇಖರ	೧೯
4. ವಿಶ್ವವಿದ್ಯಾನಿಲಯ ಪ್ರಕಟಣೆಗಳ ಮಾರುಕಟ್ಟೆಯ ವಿಸ್ತರಣೆ [ಕೆಲವು ಸಲಹೆಗಳು]	....	ಮೂಲ: ಕೆ.ಎಸ್ ದೇಶಪಾಂಡೆ ಅನು: ಆರ್.ಎಲ್. ಅನಂತರಾಮಯ್ಯ	೨೯
5. ಹವ್ಯಕರಲ್ಲಿ ಔಷಧ ಪದ್ಧತಿ	....	ಮಾವಿನಕುಳಿ ಶ್ರೀನಿವಾಸ	೪೧
6. ಉಪ್ಪಿನಂಗಡಿ ಪರಿಸರದ ಊರುಗಳು	....	ಕೆ. ರಘುಪತಿ ಭಟ್ಟ	೪೫
7. ಕರ್ನಾಟಕದ ಜೈನ ಮಂತ್ರಿಗಳು ಸೇನಾಪತಿಗಳು	....	ಎಸ್. ಪಿ. ಪಾಟೀಲ	೫೫
8. ಪ್ರಬುದ್ಧ ಶಿಲ್ಪಿ ಎನ್. ನಾಗೇಂದ್ರ ಸ್ಥಪತಿ	....	ಪಿ. ಆರ್. ತಿಪ್ಪೇಸ್ವಾಮಿ	೬೫
9. ಚಿಂತನ–೭	....	ಸಿ. ಪಿ. ಕೃಷ್ಣಕುಮಾರ್	೭೧

ಈ ಸಂಚಿಕೆಯ ಲೇಖಕರು

1. ಎಚ್. ಎಂ. ನಾಗರಾಜರಾವ್, — ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು–೫೭೦ ೦೦೬

2. ಪಾ. ವೆಂ. ಆಚಾರ್ಯ, — ನಿವೃತ್ತ ಪತ್ರಿಕೋದ್ಯಮಿ, 82, ಕೆ.ಎಚ್.ಬಿ. ಕಾಲೋನಿ, ಹುಬ್ಬಳ್ಳಿ–೫೮೦ ೦೨೨

3. ಹು. ಲ. ಚಂದ್ರಶೇಖರ, — ನಂ. 30, ದೇವೀರಮ್ಮಣ್ಣಿ ಅಗ್ರಹಾರ, ಮೈಸೂರು–೫೭೦ ೦೦೪

4. ಕೆ. ಎಸ್. ದೇಶಪಾಂಡೆ, — ಗ್ರಂಥಪಾಲರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ–೫೮೦ ೦೦೩

5. ಆರ್. ಎಲ್. ಅನಂತರಾಮಯ್ಯ, — ಉಪನಿರ್ದೇಶಕರು, ಪ್ರಸರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦ ೦೧೨

6. ಮಾವಿನಕುಳಿ ಶ್ರೀನಿವಾಸ, — ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಅಂಚೆ ಮತ್ತು ತೆರಪಿನಶಿಕ್ಷಣ, ಮಾನಸ ಗಂಗೋತ್ರಿ, ಮೈಸೂರು–೫೭೦ ೦೦೬

7. ಕೆ. ರಘುಪತಿ ಭಟ್ಟ, — ಕನ್ನಡ ಅಧ್ಯಾಪಕ, ಜೂನಿಯರ್ ಕಾಲೇಜು, ಮಣಿಪಾಲ, ದಕ್ಷಿಣ ಕನ್ನಡ ಜಿಲ್ಲೆ

8. ಎಸ್. ಪಿ. ಪಾಟೀಲ, — C/O ಎಸ್. ಟಿ. ಪಾಟೀಲ, ಬಿ.ಎ., ಎಲ್.ಎಲ್.ಬಿ. ಶಿವಾನಂದನಗರ, ಧಾರವಾಡ–೫೮೦ ೦೦೧

9. ಪಿ. ಆರ್. ತಿಪ್ಪೇಸ್ವಾಮಿ, — ಕ್ಯೂರೇಟರ್, ಜಾನಪದ ವಸ್ತುಸಂಗ್ರಹಾಲಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೫೭೦ ೦೦೬

10. ಸಿ. ಪಿ. ಕೃಷ್ಣಕುಮಾರ್, — ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–೫೭೦ ೦೦೬



ಸರ್ ಮಾರ್ಟಿಮರ್ ವೀಲರ್ (1889–1976)

ಎಚ್. ಎಂ. ನಾಗರಾಜರಾವ್

ಸರ್ ಮಾರ್ಟಿಮರ್ ವೀಲರ್

ಸರ್ ರಾಬರ್ಟ್ ಎರಿಕ್ ಮಾರ್ಟಿಮರ್ ವೀಲರ್ ಅವರದು ಪ್ರಪಂಚದ ಪುರಾತತ್ತ್ವ ಇತಿಹಾಸದಲ್ಲಿ, ವಿಶೇಷವಾಗಿ ಭಾರತೀಯ ಪುರಾತತ್ತ್ವ ಇತಿಹಾಸದಲ್ಲಿ, ಬಹಳ ದೊಡ್ಡ ಹೆಸರು. ಉಕ್ಕಿನ ಮೈಕಟ್ಟು, ವಿಶಾಲವಾದ ಹಣೆ, ಒಳಗಿನದನ್ನೆಲ್ಲ ಮೊದಲ ನೋಟಕ್ಕೇ ಅಳೆಯುವಂಥ ತೀಕ್ಷ್ಣ ಕಣ್ಣುಗಳು, ಕೊಕ್ಕೆಯಾಕಾರದ ಮೂಗು, ಪೊದೆ ಮೀಸೆಯುಳ್ಳ ಆರಡಿಗೂ ಎತ್ತರದ ಈ ಭವ್ಯ ಮೂರ್ತಿಯನ್ನೊಮ್ಮೆ ಯಾರೋ ಒಬ್ಬರು ಕೇಳಿದರಂತೆ: " ನೀವೊಬ್ಬ ಪತ್ತೇದಾರರಂತೆ ಕಾಣುತ್ತೀರಿ ?" ಎಂದು. ವೀಲರ್ ಆ ಮಾತನ್ನು ತಕ್ಷಣವೇ ಒಪ್ಪಿಕೊಂಡು " ಪುರಾತತ್ತ್ವಜ್ಞನ ಕೆಲಸವೂ ಪತ್ತೇದಾರನ ಕೆಲಸವೇ.... ತಿಳಿದ ವಿಷಯದಿಂದ ತಿಳಿಯದ ವಿಷಯದತ್ತ ಮುನ್ನಡೆವುದು " ಎಂದು ಹೇಳಿದನಂತೆ !

1889ರಲ್ಲಿ ಸ್ಕಾಟ್ಲೆಂಡಿನ ಗ್ಲಾಸ್ಗೋ ನಗರದಲ್ಲಿ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಈತ ಜನಿಸಿದ. ತಂದೆ ಯಾರ್ಕ್‌ಷೈರಿನ ಪತ್ರಿಕೆಯೊಂದರ ಉಪಸಂಪಾದಕ. ಬಡತನದಲ್ಲೆ ಬಾಲ್ಯವನ್ನು ಕಳೆದ ವೀಲರನ ಮೊದಲ ವಿದ್ಯಾಭ್ಯಾಸ ನಡೆದದ್ದು ಬ್ರ್ಯಾಡ್‌ಫೋರ್ಡಿನಲ್ಲಿ. ತಂದೆಯಿಂದ ಬೇಟೆ, ಮೀನು ಹಿಡಿಯುವುದನ್ನು ಕಲಿತು ಬಾಲ್ಯದಿಂದಲೇ ಸಾಹಸ ಪ್ರವೃತ್ತಿಯನ್ನು ಬೆಳೆಸಿಕೊಂಡ. ಈತನಿಗೆ ಬಾಲ್ಯದಲ್ಲಿ ಚಿತ್ರಗಾರನಾಗಬೇಕೆಂಬ ಹಂಬಲವಿತ್ತು. ತನ್ನ ಹನ್ನೆರಡನೆಯ ವರ್ಷದಲ್ಲಿ ಈತ ರಚಿಸಿದ ಚಿತ್ರವೊಂದು ಬ್ರ್ಯಾಡ್‌ಫೋರ್ಡ್ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನಗೊಂಡು ಪತ್ರಿಕೆಗಳ ಹಾಗೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು. ಈತ ಹದಿನಾಲ್ಕು ವರ್ಷದವನಾಗಿದ್ದಾಗ ಇವನ ತಂದೆಗೆ ಲಂಡನ್ನಿಗೆ ವರ್ಗವಾಯಿತು. ಅಲ್ಲಿ ಇವನ ವ್ಯಾಸಂಗ ಬಹಳ ಕಷ್ಟದಿಂದ ಮುಂದುವರಿಯಿತು. ಅರ್ನೆಸ್ಟ್ ಗಾರ್ಡನರ್ ಎಂಬುವನಲ್ಲಿ ಗ್ರೀಕ್ ಕಲೆಯನ್ನು ಅಭ್ಯಸಿಸಿದ. ಸ್ವಲ್ಪಕಾಲ ಸ್ವಶಿಕ್ಷಣದ ನಂತರ ಕ್ವೀನ್ಸ್ ಕಾಲೇಜು ಮತ್ತು ಯೂನಿವರ್ಸಿಟಿ ಕಾಲೇಜುಗಳಲ್ಲಿ ವಿದ್ಯಾರ್ಥಿವೇತನ ದೊರೆತು ಅಧ್ಯಯನವನ್ನು ಮುಂದುವರಿಸಿದ. ವಿದ್ಯಾರ್ಥಿಸಂಘದ ಪತ್ರಿಕೆಯ(ಯೂನಿಯನ್ ಮ್ಯಾಗಜೈನ್) ಸಂಪಾದಕನಾಗಿದ್ದ. ಯೂನಿವರ್ಸಿಟಿ ಕಾಲೇಜಿನ ಅಧ್ಯಕ್ಷ ಸರ್ ಗ್ರೆಗರಿ ಫಾಸ್ಟರ್‌ಗೆ ಆಪ್ತ ಕಾರ್ಯದರ್ಶಿಯಾಗಿದ್ದ. ಅನಂತರ ಆತನ ಪ್ರಕಟಣಾ ಕಾರ್ಯದರ್ಶಿಯಾದ. 1912ರಲ್ಲಿ ಲಂಡನ್ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿಗಳಿಸಿದ. ಈ ವೇಳೆಗಾಗಲೇ ತೆಸ್ಸಾ ಎಂಬುವಳೊಂದಿಗೆ ಇವನ ವಿವಾಹ ನಿಶ್ಚಯವಾಗಿತ್ತು. 1914ರಲ್ಲಿ ಇವರ ವಿವಾಹ ನಡೆಯಿತು. 1915ರಲ್ಲಿ ಮೈಕೇಲ್ ಎಂಬ ಗಂಡು ಮಗು ಜನಿಸಿತು.

ಈ ಅವಧಿಯಲ್ಲಿ ನಡೆದ ಒಂದು ಘಟನೆ ವೀಲರನ ಭವಿಷ್ಯವನ್ನು ನಿರ್ಣಯಿಸಿತು. ಅದು ಹೀಗೆ: ಲಂಡನ್ ವಿಶ್ವವಿದ್ಯಾನಿಲಯ ಹಾಗೂ ಲಂಡನ್ನಿನ ಸೊಸೈಟಿ ಆಫ್ ಆ್ಯಂಟಿಕ್ವೇರೀಸ್ ಕೂಡಿ

ಸ್ಥಾಪಿಸಿದ್ದ ಅಗಸ್ಟಸ್ ವೊಲ್ಲಸ್ಟನ್ ಫ್ರಾಂಕ್ಸ್ (Augustus Wollaston Franks) ಸ್ಮಾರಕ ಪುರಾತತ್ತ್ವ ವಿದ್ಯಾರ್ಥಿ ವೇತನಕ್ಕೆ 1913ರಲ್ಲಿ ಈತ ಅರ್ಜಿ ಹಾಕಿದ್ದ. ಸರ್ ಹರ್ಕ್ಯುಲಸ್ ರೀಡ್ (Hircules Read) ಎಂಬಾತನ ಅಧ್ಯಕ್ಷತೆಯಲ್ಲಿ ಸೇರಿದ್ದ ಸಮಿತಿಯೊಂದು ಅಭ್ಯರ್ಥಿಯ ಆಯ್ಕೆಗಾಗಿ ಸಂದರ್ಶನ ನಡೆಸಿತು. ಮಿನೋಅ (Minoan) ನಾಗರಿಕತೆಯ ಅನ್ವೇಷಕ ಸರ್ ಆರ್ಥರ್ ಇವಾನ್ಸ್, ಪ್ರೊ. ಅರ್ನೆಸ್ಟ್ ಗಾರ್ಡ್ನರ್ ಮತ್ತು ಇತರರು ಈ ಸಮಿತಿಯಲ್ಲಿದ್ದರು. ವೀಲರ್ ತನ್ನ ಸಂಶೋಧನೆಗಾಗಿ ನಮೂದಿಸಿದ್ದ ವಿಷಯ ರೋಮನೋ–ರೇನಿಷ್ ಕುಂಭಗಳ ಅಧ್ಯಯನ. ರೋಮನ್–ಬ್ರಿಟಿಷ್ ಕುಂಭಗಳ ಅಧ್ಯಯನಕ್ಕೆ ಇದೊಂದು ಪೀಠಿಕೆಯಾಗಿತ್ತು. ಈತನೇ ಸೂಕ್ತ ವ್ಯಕ್ತಿಯೆಂದು ಆಯ್ಕೆಯಾದ. ರೈನ್‌ಲ್ಯಾಂಡಿಗೆ ಹೋಗಿ ಬರುವ ಪ್ರಯಾಣ ವೆಚ್ಚವೂ ಸೇರಿದಂತೆ ವರ್ಷಕ್ಕೆ ಐವತ್ತು ಪೌಂಡುಗಳ ಸಂಶೋಧನ ವೇತನ ನಿಗದಿಯಾಯಿತು. ಈ ವಿದ್ಯಾರ್ಥಿ ವೇತನದ ಅವಧಿ ಎರಡು ವರ್ಷಗಳು. ರೋಮಾಂಚಗೊಂಡಿದ್ದ ವೀಲರ್ ಯೋಚಿಸುತ್ತಾ ಕಾರಿಡಾರಿನಲ್ಲಿ ನಡೆಯುತ್ತಿದ್ದಾಗ, ಈತನತ್ತ ಹಿಂದಿನಿಂದ ಕೇಳಿಬರುತ್ತಿದ್ದ ಹೆಜ್ಜೆಗಳ ಸಪ್ಪಳ ಇವನನ್ನು ಎಚ್ಚರಿಸಿತು. ತಿರುಗಿ ನೋಡಿದಾಗ ಕಂಡಿದ್ದು ಕುಳ್ಳನೆಯ ಆರ್ಥರ್ ಇವಾನ್ಸ್ ಇವನತ್ತ ಓಡಿಬರುತ್ತಿದ್ದುದು! "ಆ ಐವತ್ತು ಪೌಂಡುಗಳು ಬಹಳವೇನಲ್ಲ; ನಿನಗಾಗಿ ಅದನ್ನು ಇಮ್ಮಡಿಗೊಳಿಸಬಯಸುತ್ತೇನೆ". ಈ ಮಾತಿನಿಂದ, ವಿಶ್ವಾಸದಿಂದ ಮೂಕನಾದ ವೀಲರ್ ವಂದನೆ ಹೇಳಬೇಕೆನ್ನುವಷ್ಟರಲ್ಲೇ ಇವಾನ್ಸ್ ಹೊರಟುಹೋಗಿದ್ದ. ಈ ಘಟನೆಯನ್ನು ವೀಲರ್ ಬಾಳಿನುದ್ದಕ್ಕೂ ನೆನಪಿಸಿಕೊಳ್ಳುತ್ತಿದ್ದ. ಹೀಗೆ ವೀಲರನ ಭವಿಷ್ಯ ನಿರ್ಣಯವಾಯಿತು. ಚಿತ್ರಗಾರನಾಗಬೇಕೆಂದು ಬಯಸಿದವನು ಪುರಾತತ್ತ್ವಶಾಸ್ತ್ರಜ್ಞನಾಗುವ ಹಾದಿಗೆ ಪದಾಕ್ರಾಂತ ಮಾಡಿದ.

ಮುಂದೆ ಯೂನಿವರ್ಸಿಟಿ ಕಾಲೇಜಿನ ವಾಸ್ತುಶಿಲ್ಪ ಶಾಲೆಯಲ್ಲಿ ರಾತ್ರಿಹೊತ್ತು ಕೆಲಸ ಮಾಡಿದ. 1914ರಲ್ಲಿ ಆರಂಭವಾದ ಮೊದಲ ಮಹಾಯುದ್ಧದಲ್ಲಿ ಸೈನ್ಯದ 'ರಾಯಲ್ ಆರ್ಟಿಲೆರಿ' ಯಲ್ಲಿದ್ದ. 1917ರಲ್ಲಿ ಫ್ರಾನ್ಸ್‌ಗೆ ತಲೆತಪ್ಪಿಸಿಕೊಂಡು ಹೋದವನು 1919ರಲ್ಲಿ ಲಂಡನ್ನಿಗೆ ಹಿಂದಿರುಗಿದ. 1919ರ ಜುಲೈನಲ್ಲಿ ಈತ ಯುದ್ಧ ವ್ಯವಹಾರಗಳಿಂದ ಬಿಡುಗಡೆ ಹೊಂದಿ ಇಂಗ್ಲೆಂಡಿನ 'ರಾಯಲ್ ಕಮಿಷನ್ ಆಫ್ ಹಿಸ್ಟಾರಿಕಲ್ ಮಾನ್ಯುಮೆಂಟ್ಸ್' ಸಂಸ್ಥೆಯಲ್ಲಿ 'ಜೂನಿಯರ್ ಇನ್‌ವೆಸ್ಟಿಗೇಟರ್' ಹುದ್ದೆಗೆ ನೇಮಕಗೊಂಡ. ಪ್ಲೆಷೆ (Pleshey), ಎಸೆಕ್ಸ್ (Essex), ಕಾಲ್ಚೆಸ್ಟರ್ (Colchester) ಹಾಗೂ ಸೆಗಾಂಟಿಯಮ್ (Segontium) ಮುಂತಾದ ರೋಮನ್ ಕಾಲದ ಗ್ರಾಮಗಳಲ್ಲಿ ಪರಿಶೋಧನೆ ನಡೆಸಿದ. ಮುಂದೆ ನ್ಯಾಷನಲ್ ಮ್ಯೂಸಿಯಂ ಆಫ್ ವೇಲ್ಸ್‌ನಲ್ಲಿ ಕೀಪರ್ ಆಫ್ ಆರ್ಕಿಯಾಲಜಿ, ಕಾರ್ಡಿಫ್‌ನ ಯೂನಿವರ್ಸಿಟಿ ಕಾಲೇಜಿನಲ್ಲಿ ಪುರಾತತ್ತ್ವ ಅಧ್ಯಾಪಕ, ಕೀಪರ್ ಆಫ್ ಲಂಡನ್ ಮ್ಯೂಸಿಯಂ, ವೇಲ್ಸ್‌ನ ನ್ಯಾಷನಲ್ ಮ್ಯೂಸಿಯಮ್ಮಿನ ನಿರ್ದೇಶಕ—ಹೀಗೆ ವಿವಿಧ ಹುದ್ದೆಗಳಲ್ಲಿ ಈತ ಕೆಲಸ ಮಾಡಿದ. ಎಡಿನ್‌ಬರ್ಗ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಪ್ರಾಗೈತಿಹಾಸಿಕ ಪುರಾತತ್ತ್ವ ಪೀಠದ ಅಧ್ಯಕ್ಷನಾಗಬೇಕೆಂಬ ಆಹ್ವಾನ ಈತನಿಗೇ ಪ್ರಪ್ರಥಮವಾಗಿ ದೊರೆತುದು. ಆದರೆ ವೀಲರ್ ಈ ಆಹ್ವಾನವನ್ನೊಪ್ಪಿಕೊಳ್ಳಲಿಲ್ಲ.

1880–1900ರ ಕಾಲದಲ್ಲೆ ಜನರಲ್ ಪಿಟ್ ರಿವರ್ಸ್ (Pitt Rivers) ಪುರಾತತ್ತ್ವ ಕ್ಷೇತ್ರದಲ್ಲಿ ಅನುಸರಿಸಬೇಕಾದ ವೈಜ್ಞಾನಿಕ ವಿಧಾನಗಳ ಬಗ್ಗೆ ತಿಳಿಸಿದ್ದರೂ ಪುರಾತತ್ತ್ವಜ್ಞರು 'ಆಲೂಗೆಡ್ಡೆ ಕತ್ತರಿಸುವಂತೆ' ಭೂಮಿಯನ್ನು ಅಗೆದು ಹಾಕುತ್ತಿದ್ದಾರೆಂಬ ಕೊರಗು ವೀಲರ್‌ನನ್ನು ಬಾಧಿಸತೊಡಗಿತು. ಈ ಬಗ್ಗೆ ಯೋಜನೆಯೊಂದು ಆತನ ಮನಸ್ಸಿನಲ್ಲೇ ರೂಪುಗೊಳ್ಳತೊಡಗಿತು.

1927 ರಿಂದ ವೀಲರ್ ಕೆಲವು ಪಟ್ಟಿ (catalogue) ಗಳನ್ನು ಸಿದ್ಧಪಡಿಸಿ ಪ್ರಕಟಿಸ ಲಾರಂಭಿಸಿದ. ಲಂಡನ್ನಿನ ವಸ್ತು ಸಂಗ್ರಹಾಲಯಕ್ಕೆ ವ್ಯವಸ್ಥಿತ ರೂಪುಕೊಟ್ಟ. "ರಾಯಲ್ ಸೊಸೈಟಿ ಆಫ್ ಆರ್ಟ್ಸ್" ಸಂಸ್ಥೆಯಲ್ಲಿ "ಹಿಸ್ಟರಿ ಆಫ್ ಎಕ್ಸ್‌ಕವೇಷನ್ಸ್" ಎಂಬ ವಿಷಯದ ಬಗ್ಗೆ ಉಪನ್ಯಾಸನೀಡಿದ.

ವೀಲರನ ಪತ್ನಿ ತೆಸ್ಸಾ ಆತನ ಎಲ್ಲ ಪುರಾತತ್ತ್ವ ಶೋಧನೆ ಮತ್ತು ಉತ್ಖನನಗಳಲ್ಲಿ ಮುಖ್ಯ ಸಹಾಯಕಿಯಾಗಿ ಕೆಲಸಮಾಡಿದಳು. ಪುರಾತತ್ತ್ವ ಕ್ಷೇತ್ರದಲ್ಲಿ ಆಕೆ ಸಾಕಷ್ಟು ಪರಿಣತಿಹೊಂದಿದ್ದಳು. ಪುರಾತತ್ತ್ವ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬ ವೀಲರನ ಹೆಬ್ಬಯಕೆಗೆ ಮೂಲ ಪ್ರೇರಣೆಯಾಗಿ ನಿಂತವಳು. 1936ರಲ್ಲಿ ಆಕೆ ಮರಣಹೊಂದಿದಳು. ಅನಂತರ, ಎಂದರೆ ಯೋಜನೆ ಹಾಕಿದ ಹತ್ತು ವರ್ಷಗಳ ನಂತರ, 1937ರ ಏಪ್ರಿಲ್ 29 ರಂದು 'ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಯಾಲಜಿ' ಅಸ್ತಿತ್ವಕ್ಕೆ ಬಂತು. ವೀಲರನೇ ಅದರ ಪ್ರಥಮ ನಿರ್ದೇಶಕನಾದ.

ಈತ ಉತ್ಖನನ ನಡೆಸಿದ ಮುಖ್ಯ ಸ್ಥಳಗಳಲ್ಲಿ ಲಿಡ್ನಿಪಾರ್ಕ್ (Lydney Park), ಮೈಡೆನ್ ಕ್ಯಾಸಲ್ (Maiden Castle) ಹಾಗೂ ವೆರುಲಮಿಯಂ (Verulamium) ಮುಂತಾದವು ಸೇರಿವೆ.

ಎರಡನೆ ಮಹಾಯುದ್ಧದ ಸಮಯದಲ್ಲಿ ಈತ ಸೈನ್ಯದಲ್ಲಿ ಸೇವೆಸಲ್ಲಿಸಿದ. ಯುದ್ಧ ವಿರಾಮಕಾಲದಲ್ಲಿ ಪುರಾತತ್ತ್ವ ವಿಷಯಗಳ ಬಗೆಗೂ ಗಮನ ನೀಡಿದ.

ಭಾರತದಲ್ಲಿ 1862ರಲ್ಲಿ ಸರ್ ಅಲೆಕ್ಸಾಂಡರ್ ಕನಿಂಗ್‌ಹ್ಯಾಮ್ ಪುರಾತತ್ತ್ವ ವಿಭಾಗದ ನಿರ್ದೇಶಕನಾಗಿದ್ದ. 1871 ರಲ್ಲಿ ಈತನೇ ಭಾರತೀಯ ಪುರಾತತ್ತ್ವ ಇಲಾಖೆಯ ಪ್ರಪ್ರಥಮ ಪ್ರಧಾನ ನಿರ್ದೇಶಕ (Director General) ನಾಗಿ ನೇಮಕಗೊಂಡ. ಉತ್ತರ ಭಾರತದ ಪ್ರದೇಶಗಳಿಗೇ ಈತ ಹೆಚ್ಚು ಗಮನ ನೀಡಿದ. 1874ರಲ್ಲಿ ದಕ್ಷಿಣ ಭಾರತದ ಸರ್ವೇಕ್ಷಣಾ ಕಾರ್ಯವನ್ನು ಡಾ. ಜೇಮ್ಸ್ ಬರ್ಜೆಸ್ (James Burgess) ಎಂಬಾತನಿಗೆ ವಹಿಸಲಾಯಿತು. 1885ರಲ್ಲಿ ಕನಿಂಗ್‌ಹ್ಯಾಮ್‌ನ ನಂತರ ಬರ್ಜೆಸ್ ಪ್ರಧಾನ ನಿರ್ದೇಶಕನಾದ. 1889ರಲ್ಲಿ ಈತ ನಿವೃತ್ತಿಯಾದ ನಂತರ ಈ ಇಲಾಖೆ ಹೆಚ್ಚು ಕಡಿಮೆ ಸತ್ತಂತೆಯೇ ಆಗಿತ್ತು.

ಲಾರ್ಡ್ ಕರ್ಜನನ ಉತ್ಸಾಹ ಈ ವಿಭಾಗದ ಪುನಶ್ಚೇತನಕ್ಕೆ ನಾಂದಿಯಾಯಿತು. ಸರ್ ಜಾನ್ ಮಾರ್ಷಲ್ (John Marshall) ಇಲಾಖೆಯ ಪ್ರಧಾನ ನಿರ್ದೇಶಕನಾಗಿ ನೇಮಕಗೊಂಡ. ಈತನ ಆಸಕ್ತಿ, ಹುರುಪು ಇಲಾಖೆಗೆ ಕಳೆ ತಂದಿತು. ಚಟುವಟಿಕೆ ಮೂಡಿತು. ಮೊಗಲ್ ವಾಸ್ತುಶಿಲ್ಪವನ್ನು ರಕ್ಷಿಸಲು ಕೈಕೊಂಡ ಕ್ರಮ, ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಕಾನೂನು, ಶಾಸನ ವಿಭಾಗದ ಸ್ಥಾಪನೆ, ತಕ್ಷಶಿಲೆಯ ಉತ್ಖನನ, ಸಿಂಧೂ ನಾಗರಿಕತೆಯ ಅನ್ವೇಷಣೆ ಇತ್ಯಾದಿ ಭಾರತೀಯ ಪುರಾತತ್ತ್ವ ಕ್ಷೇತ್ರಕ್ಕೆ ಮಾರ್ಷಲ್ ನೀಡಿದ ಅನುಪಮ ಕೊಡುಗೆ. ಆದರೆ ಈತನ ಉತ್ಖನನ ವಿಧಾನಗಳು ಹಳೆಯವೂ ಒರಟುತೆರನದ್ದೂ ಅವೈಜ್ಞಾನಿಕವೂ ಆಗಿದ್ದವು. 1929ರಲ್ಲಿ ಈತ ನಿವೃತ್ತಿಯಾದ ನಂತರ ಇಲಾಖೆ ಮತ್ತೆ ಸ್ಥಗಿತವಾಯಿತು. 1932 ರಿಂದ ಇಲಾಖೆಗೆ ನೀಡುತ್ತಿದ್ದ ಆರ್ಥಿಕ ನೆರವನ್ನೂ ಕಡಿತಗೊಳಿಸಲಾಯಿತು

1938ರಲ್ಲಿ ಅಂದಿನ ವೈಸ್‌ರಾಯರು ಈ ಇಲಾಖೆಯ ಪುನಶ್ಚೇತನಕ್ಕೆ ಸಲಹೆ ನೀಡಲು ಸರ್ ಲಿಯೋನಾರ್ಡ್ ವೂಲಿ (Leonard Wooley) ಎಂಬ ವಿದ್ವಾಂಸನನ್ನು ಭಾರತಕ್ಕೆ ಆಹ್ವಾನಿಸಿದರು. ಎಲ್ಲ ಸ್ಥಿತಿಗತಿಗಳನ್ನು ಪರಿಶೀಲಿಸಿದ ವೂಲಿ ಇತ್ತ ಸಲಹೆಗಳಿವು: ತುಂಬ ಗಮನಾರ್ಹ ನಿವೇಶನ ಅಥವಾ ಸರ್ವೇಕ್ಷಣ ಸ್ಥಳಗಳನ್ನು ಗುರುತಿಸುವುದು; ಉತ್ಖನನದಲ್ಲಿ ಉತ್ತಮ, ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಳ್ಳುವುದು; ವಿಶ್ವವಿದ್ಯಾನಿಲಯವೇ ಮುಂತಾದ ಶೈಕ್ಷಣಿಕ ಸಂಸ್ಥೆಗಳ ನೆರವನ್ನು ಪಡೆದು ಅಲ್ಲಿನ ಜನರಿಗೆ ತರಬೇತಿ ನೀಡುವುದು ಇತ್ಯಾದಿ. ವೂಲಿ

ಭಾರತದ ಪುರಾತತ್ತ್ವ ಇಲಾಖೆ ಕ್ರಿಯಾಶೀಲವಾಗಲು ಒಬ್ಬ ಐರೋಪ್ಯ ಸಲಹೆಗಾರನ ನೇಮಕ ಅವಶ್ಯವೆಂದು ಪರಿಗಣಿಸಿಲಾಗಿದ್ದ. ಈ ಹುದ್ದೆಗೆ ವೀಲರನೇ ಸೂಕ್ತ ವ್ಯಕ್ತಿ ಎಂದೂ ತಿಳಿಸಿದ್ದ. ಭಾರತಕ್ಕೆ ವೀಲರ್‌ನನ್ನು ಆಹ್ವಾನಿಸಲಾಯಿತು.

ಭಾರತಕ್ಕೆ ಬಂದಿಳಿದಾಗ ತನ್ನ ಮನಸ್ಥಿತಿ ಹೇಗಿತ್ತೆಂಬುದನ್ನು ವೀಲರ್ ತಿಳಿಸುತ್ತಾನೆ: I stepped ashore with a mind full of ill-digested Indian History but with a pretty clean plan of campaign. ಬೊಂಬಾಯಿಯಲ್ಲಿ ಎರಡು ದಿನ ತಂಗಿದ್ದು ಅಲ್ಲಿಂದ ದೆಹಲಿ ಮಾರ್ಗವಾಗಿ ಸಿಮ್ಲಾಕ್ಕೆ ಪ್ರಯಾಣ ಮಾಡಿದ. ಆಗ ಸಿಮ್ಲಾದಲ್ಲಿದ್ದ ಪುರಾತತ್ತ್ವ ಇಲಾಖೆಯನ್ನು ವೀಲರ್ ಚಿತ್ರಿಸುವುದು ಹೀಗೆ:

> ಸಿಮ್ಲಾದಲ್ಲಿ ರೈಲ್ವೆ ಬೋರ್ಡಿನ ನಿರಾಕರ್ಷಕ ಕಟ್ಟಡದ ಮೇಲಂತಸ್ತಿನಲ್ಲಿ ಆಗ ಇದ್ದ ಪುರಾತತ್ತ್ವ ಸರ್ವೇಕ್ಷಣ ಕಾರ್ಯಾಲಯಕ್ಕೆ ಕಾಲಿಟ್ಟೆ; ಅಲ್ಲಿನ ಅಧಿಕಾರವನ್ನು ಅಂದು ಬೆಳಿಗ್ಗೆ ತಾನೆ ನನ್ನ ಭಾರತೀಯ ಪೂರ್ವಾಧಿಕಾರಿಯಿಂದ ವಹಿಸಿಕೊಂಡಿದ್ದೆ. ಜವಾನರು ವಿವಿಧ ಭಂಗಿಗಳಲ್ಲಿ ಪವಡಿಸಿದ್ದರು; ಕೆಲಸವಿಲ್ಲದ ಗುಮಾಸ್ತರ ಹಾಗೂ ಅವರ ಅನುಚರರ ಗುಂಪು ಕಿಟಕಿಗಳಿಂದ ಕಾಣುತ್ತಿತ್ತು. ನನ್ನ ಕೊಠಡಿಯ ಬಾಗಿಲನ್ನು ತೆರೆಯುತ್ತ ನಾನೊಮ್ಮೆ ಹಿಂದಿರುಗಿ ನೋಡಿದೆ. ನಿದ್ದೆಯಲ್ಲಿದ್ದವರು ಏಳುವಂತೆ ಕಾಣಲಿಲ್ಲ. ದೂರದಲ್ಲಿನ ದುಂಬಿಗಳ ಝೇಂಕಾರದಂಥ ಕಂಪಿಸುತ್ತಿರುವ ಅಸ್ಪಷ್ಟ ಧ್ವನಿಗಳು ಮಾತ್ರ ಒಳಗಡೆಯಲ್ಲಿ ಮಾನವ ಪ್ರಾಣಿಗಳ ಅಸ್ತಿತ್ವವನ್ನು ಸೂಚಿಸಿದವು. ಗೂಳಿ ಗುಟುರು ಹಾಕುವಂತೆ ಒಮ್ಮೆ ಅಬ್ಬರಿಸಿದೆ.... ನನ್ನ ಕೇಂದ್ರ ಕಾರ್ಯಾಲಯದ ಸಿಬ್ಬಂದಿವರ್ಗದವರು ಒಬ್ಬರಾದ ಮೇಲೆ ಒಬ್ಬರಂತೆ ಒಳಕ್ಕೆ ಬಂದರು; ಮುಕ್ಕಾಲು ಗಂಟೆಯೊಳಗೇ ಎಲ್ಲವೂ ಒಂದು ವ್ಯವಸ್ಥೆಗೆ ಬಂದಿತ್ತು. ಬಾಗಿದ ಬೆನ್ನುಗಳು, ಭೀತಿಯುಕ್ತ ನಮಸ್ಕಾರಗಳು ಬಹಳ ದಿನಗಳಿಂದ ಕೆಲಸ ಮಾಡದ ಕಾರ್ಯಾಲಯವಿದೆಂಬುದನ್ನು ಸೂಚಿಸಿದವು. ಅಂದು ಸಂಜೆ ಜವಾನರಲ್ಲೊಬ್ಬ (ಮುಂದೆ ಕೇಂದ್ರ ಕಾರ್ಯಾಲಯದಲ್ಲಿ ಉತ್ತಮ ಜಮೇದಾರನೆನ್ನಿಸಿಕೊಂಡ) ನಡುಗುತ್ತ ನನ್ನ ಡೆಪ್ಯುಟಿ ಅಧಿಕಾರಿಯ ಐರಿಷ್ ಪತ್ನಿಯೊಂದಿಗೆ ಹೇಳಿದನಂತೆ: "ಓಹ್.... ಮೇಮ್ ಸಾಬ್ ಇಂದು ನನಗೊಂದು ಭಯಂಕರ ಅನುಭವವಾಯಿತು........"

ವೀಲರನ ನೇಮಕದ ಬಗ್ಗೆ ಎಲ್ಲೆಡೆ ವಿರೋಧ ವ್ಯಕ್ತವಾಗತೊಡಗಿತು. ಇಲಾಖೆಯಲ್ಲೂ ಅಸಮಾಧಾನ ಹೊಗೆಯಾಡುತ್ತಿತ್ತು. ಭಾರತದ ಪತ್ರಿಕೆಗಳಂತೂ ಈತನನ್ನು 'ಬ್ರಿಗೇಡಿಯರ್ ವೀಲರ್' ಎಂದೇ ಉಲ್ಲೇಖಿಸಿ, ಇವನಿಗಾಗಿಯೇ ಒಂದು ಹುದ್ದೆ ಖಾಲಿಯಾಗಿ ಬಿಟ್ಟದ್ದಂತೆ ಅಭಿಪ್ರಾಯ ತಳೆದಿದ್ದುವು. 'ರೋಮನ್ ಕಾಲದ ಬ್ರಿಟನ್' ಇತಿಹಾಸತಜ್ಞನಿಗೂ ಭಾರತಕ್ಕೂ ಏನು ಸಂಬಂಧ ಎಂದು ಹಲವರು ಮೂಗು ಮುರಿದರು. ಈ ಎಲ್ಲ ಬಗೆಯ ಅಸಮಾಧಾನ, ಸಂದೇಹ, ವಿರೋಧಗಳಿಗೆ ಉಚಿತ ಉತ್ತರ ಕೊಡಲು ಈತ ಸಕಾಲಕ್ಕಾಗಿ ಕಾಯಬೇಕಿತ್ತು.

ವೀಲರ್ ತನ್ನ ತತ್‌ಕ್ಷಣದ ಕಾರ್ಯಕ್ರಮಗಳನ್ನು ರೂಪಿಸಿಕೊಂಡದ್ದು ಹೀಗೆ: ಸೋಮಾರಿ ಸಿಬ್ಬಂದಿವರ್ಗದವರನ್ನು ಕೆಲಸದಲ್ಲಿ ತೊಡಗಿಸುವುದು: ಇಡೀ ದೇಶದ ಪುರಾತತ್ತ್ವ ಸಂಬಂಧದ ಸಮಸ್ಯೆಗಳನ್ನು ಗುರುತಿಸುವುದು: ಪೇಷಾವರದಿಂದ ಮದ್ರಾಸಿನವರೆಗೆ ದೇಶದಲ್ಲಿದ್ದ ತನ್ನ ಇಲಾಖೆಯ ಸಹೋದ್ಯೋಗಿಗಳನ್ನು ಭೇಟಿಮಾಡುವುದು ಇತ್ಯಾದಿ.

1775ರಿಂದ ದಕ್ಷಿಣ ಭಾರತದಲ್ಲಿ ದೊರೆತ ರೋಮನ್ ನಾಣ್ಯಗಳ ಪಟ್ಟಿಯೊಂದನ್ನು ಸಿದ್ಧಪಡಿಸಿದ. ಇಬ್ಬರು ಅಧಿಕಾರಿಗಳನ್ನು ಉತ್ಖನನ ಯೋಗ್ಯ ನಿವೇಶನಗಳನ್ನು ಗುರುತಿಸಿಕೊಂಡು ಬರಲು ಕಳುಹಿಸಿದ. ಮಾರ್ಷಲ್ ಉತ್ಖನನ ನಡೆಸಿದ್ದ ಹರಪ್ಪದ ಕೆಲವು ದಿಬ್ಬಗಳನ್ನು

ಉತ್ಖನನಕ್ಕೆ 1944ರಲ್ಲಿ ಆರಿಸಿಕೊಂಡ. ಹರಪ್ಪದಲ್ಲಿದ್ದ ಕೋಟೆಕೊತ್ತಲಗಳನ್ನು ಪತ್ತೆ ಹಚ್ಚಿದ್ದು ಈತನ ಮಹತ್ಸಾಧನೆಗಳಲ್ಲೊಂದು. ಆರ್ಯರು ನಿರ್ಮಾಮಗೊಳಿಸಿದ ಕೋಟೆಗಳು ಇವೇ ಎಂಬ ತನ್ನ ಊಹೆಯನ್ನು ಮಂಡಿಸಿದ. ಈ ಅನ್ವೇಷಣೆಯಿಂದಾಗಿ ಗಾರ್ಡನ್ ಚೈಲ್ಡ್ (Gordon Childe) ಎಂಬ ವಿದ್ವಾಂಸ ತನ್ನ 'ನ್ಯೂ ಲೈಟ್ ಆನ್ ದಿ ಮೋಸ್ಟ್ ಏನ್ಶೆಂಟ್ ಈಸ್ಟ್' (1934) ಎಂಬ ಗ್ರಂಥವನ್ನು ಪರಿಷ್ಕರಿಸಬೇಕಾಯಿತು.

ಪಾಟ್ನಾದಲ್ಲಿ ಸಭೆ ಸೇರಿದ್ದ ಹತ್ತೊಂಬತ್ತು ವಿಶ್ವವಿದ್ಯಾನಿಲಯಗಳ ಕುಲಪತಿಗಳ ಸಭೆಯಲ್ಲಿ ಪುರಾತತ್ತ್ವ ಶೋಧನೆ ಬಗ್ಗೆ ಯುವಕರಿಗೆ ತರಬೇತಿ ನೀಡಬೇಕಾದ ಅವಶ್ಯಕತೆಯನ್ನು ಒತ್ತಿಹೇಳಿದ. ಈತನ ಸೂಚನೆಗೆ ಎಲ್ಲರಿಂದ ಉತ್ತಮ ಪ್ರತಿಕ್ರಿಯೆ ಹಾಗೂ ಬೆಂಬಲ ದೊರೆತವು.

ಮದ್ರಾಸಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿನ ಅವಶೇಷಗಳನ್ನು ಗಮನಿಸುವಾಗ ಕುಂಭವೊಂದರ ಕಂಠಭಾಗ ಹಾಗೂ ಹಿಡಿಗಳು ವೀಲರನ ಗಮನ ಸೆಳೆದವು. ಈ ಪ್ರದೇಶಕ್ಕೆ ಅವು ಅಪರೂಪವೂ ಅಪರಿಚಿತವೂ ಆಗಿದ್ದವು. ಅವನ್ನು ಕಂಡಕೂಡಲೆ ಅವನಿಗೆ ನೆನಪಾದುದು What has Roman Britain got to do with India ? ಎಂದು ವಿಧಾನ ಸಭೆಯಲ್ಲಿ ಕೇಳಲಾದ ಪ್ರಶ್ನೆ! ಆ ಪ್ರಶ್ನೆಗೆ ಉತ್ತರ ಇಲ್ಲಿ ಸಿಕ್ಕಿತ್ತು. ದಕ್ಷಿಣ ಭಾರತದ ಪ್ರಾಗೈತಿಹಾಸದ ಪರಿಚಯಕ್ಕೆ ಈ ಕುಂಭಾವಶೇಷಗಳೇ ನಾಂದಿಯಾದುವು. ಈ ಮೊದಲೇ ರೋಮನ್ ನಾಣ್ಯಗಳು ಇಲ್ಲಿನ ಪ್ರದೇಶದಲ್ಲಿ ದೊರೆತಿದ್ದವು. ಈ ಕುಂಭಾವಶೇಷಗಳು ಪಾಂಡಿಚೆರಿ ಬಳಿಯ ನಿವೇಶನವೊಂದರಲ್ಲಿ ದೊರೆತಿದ್ದವು. ಡಾ. ಅಯ್ಯಪ್ಪನ್ ಅಲ್ಲಿ ಪ್ರಾಯೋಗಿಕ (trial) ಉತ್ಖನನ ನಡೆಸುತ್ತಿದ್ದರು.

1944ರ ಅಕ್ಟೋಬರ್‌ನಿಂದ 1945ರ ಮಾರ್ಚ್‌ವರೆಗೆ ವೀಲರ್ ತನ್ನ ಐರೋಪ್ಯ ಮಿತ್ರರು ಹಾಗೂ ಭಾರತದ ವಿವಿಧ ವಿಶ್ವವಿದ್ಯಾನಿಲಯ ಮತ್ತು ಪುರಾತತ್ತ್ವ ಇಲಾಖೆಗಳಿಂದ ಬಂದ ಅರವತ್ತೊಂದು ವಿದ್ಯಾರ್ಥಿಗಳ ತಂಡದೊಂದಿಗೆ ತಕ್ಷಶಿಲೆಯಲ್ಲಿ ಉತ್ಖನನವನ್ನು ನಡೆಸಿದ. ಉತ್ಖನನ ಕಾರ್ಯದಲ್ಲಿ ಅನುಸರಿಸಬೇಕಾದ ವೈಜ್ಞಾನಿಕ ವಿಧಾನಗಳು ಮತ್ತು ದೊರೆತ ಅವಶೇಷಗಳನ್ನು ದಾಖಲು ಮಾಡುವ ಕ್ರಮಗಳ ಬಗ್ಗೆ ಒಳ್ಳೆಯ ತರಬೇತಿ ಸಿಕ್ಕಿತು. ಬೆಳಿಗ್ಗೆ 8-45ಕ್ಕೆ ಕ್ಷೇತ್ರಕ್ಕೆ ಹೊರಟು ಸಂಜೆ 6 ಗಂಟೆಗೆ ವಿದ್ಯಾರ್ಥಿಗಳು ಕೆಲಸ ಮುಗಿಸಿ ಹಿಂದಿರುಗುತ್ತಿದ್ದರು. ರಾತ್ರಿ ಒಂಬತ್ತು ಗಂಟೆಯ ನಂತರ ಪುರಾತತ್ತ್ವ ಅಥವಾ ಮಾನವಶಾಸ್ತ್ರಗಳ ಬಗ್ಗೆ ಉಪನ್ಯಾಸ, ಚರ್ಚೆಗಳಿರುತ್ತಿದ್ದವು. ಈ ಉತ್ಖನನದಲ್ಲಿ ಭಾಗವಹಿಸಿದ ವಿದ್ಯಾರ್ಥಿ ತಂಡವನ್ನು ವೀಲರ್ ಪ್ರಶಂಸಿಸಿದ್ದಾನೆ.

1945ರಲ್ಲಿ ಸಿಮ್ಲಾದಲ್ಲಿ ಮಾರ್ಗರೆಟ್ ಎಂಬುವಳನ್ನು ವೀಲರ್ ವಿವಾಹವಾದ. ಈಕೆ ಸಹ ತೆಸ್ಸಾಳಂತೆಯೇ ವೀಲರನ ಪುರಾತತ್ತ್ವ ಶೋಧನೆ, ಉತ್ಖನನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ನೆರವು ನೀಡಿದಳು.

ಅರಿಕಮೆಡು ಎಂಬಲ್ಲಿ ಸ್ಥಳೀಯ ಹುಡುಗರಿಗೆ ಆಕಸ್ಮಿಕವಾಗಿ ಮಣಿಯೊಂದು ಸಿಕ್ಕಿತ್ತು. ಅವರು ಅದನ್ನು ಭಕ್ಷೀಸು ಪಡೆದು ಅಲ್ಲಿನ ಫ್ರೆಂಚ್ ಪ್ರಾಚೀನಾನ್ವೇಷಕನೊಬ್ಬನಿಗೆ ಕೊಟ್ಟಿದ್ದರು. ರೋಮನ್ ಶೈಲಿಯ ಶಿರವನ್ನು ಅದರ ಮೇಲೆ ಕೆತ್ತಲಾಗಿತ್ತು. ಅದು ಅಗಸ್ಟಸ್‌ನದೆಂದು ಊಹಿಸಲಾಗಿತ್ತು. ವೀಲರ್ 1945ರಲ್ಲಿ ಅರಿಕಮೆಡುವಿನಲ್ಲಿ ಉತ್ಖನನಗಳನ್ನು ನಡೆಸಿದ. 1946ರಲ್ಲಿ ಪ್ರಕಟವಾದ 'ಏನ್ಶೆಂಟ್ ಇಂಡಿಯಾ'ದ ಮೊದಲ ಸಂಪುಟದಲ್ಲಿ ಅರಿಕಮೆಡು ಉತ್ಖನನದ ಬಗ್ಗೆ ವರದಿ ಇದೆ. ಪ್ರಕಟಣೆಗೆ 1936ರಿಂದ ವಿಧಿಸಲಾಗಿದ್ದ ನಿರ್ಬಂಧವನ್ನು ತೆಗೆಸಲು ವೀಲರ್ ತುಂಬ ಶ್ರಮಪಡಬೇಕಾಯಿತು.

ಅರಿಕಮೆಡುವಿನಲ್ಲಿ ಉತ್ಖನನ ನಡೆಯುತ್ತಿದ್ದಾಗ ಎರಡನೆಯ ಮಹಾಯುದ್ಧ ಕೊನೆಗೊಂಡಿತು. ಮಿತ್ರರಾಷ್ಟ್ರಗಳಲ್ಲಿ ಎಲ್ಲೆಡೆ ಸಂತೋಷಕೂಟಗಳು ನಡೆಯತೊಡಗಿದವು. ವೀಲರ್ ಸ್ವಸಂತೋಷದಿಂದ ತನ್ನ ಕೆಲಸಗಾರರಿಗೆ ಹೆಚ್ಚಿನ ವೇತನ ನೀಡಿದ. ದುಭಾಷಿ ಕೆಲಸಗಾರರಿಗೆ ವಿಷಯ ತಿಳಿಸಿದಾಗ "ಯಾವ ಜಯ? ಯಾವ ಯುದ್ಧ?" ಎಂದು ಕೇಳಿದರಂತೆ ಆ ಮುಗ್ಧ ಜನ! ದುಭಾಷಿ ಎಲ್ಲ ವಿಷಯವನ್ನೂ ತಿಳಿಸಿ ಸಾಹೇಬರಿಗೆ ಖುಷಿಯಾಗಿರುವುದರಿಂದ ಹೆಚ್ಚು ಹಣ ನೀಡುತ್ತಿದ್ದಾರೆಂದು ಹೇಳಿದ ಅದರೂ ಕೆಲಸಗಾರರ ಮುಖದ ಮೇಲಿದ್ದ ಆಶ್ಚರ್ಯ, ಕುತೂಹಲ ಮಾಯವಾಗಲಿಲ್ಲ. ವೀಲರ್ ತನ್ನ ದುಭಾಷಿಗೆ ಹೇಳಿದ: "ಇನ್ನೇನೂ ಹೇಳಬೇಡ....ನನ್ನಿಂದಲ್ಲವಿದ್ದರೆ....ದೇವರು ತಮಗೆ ನೀಡಿದ ಬೋನಸ್ ಎಂದು ಅವರು ಭಾವಿಸಲಿ!" ಎರಡು ದಿನಗಳ ಅನಂತರ ಕೆಲಸಗಾರರೆಲ್ಲ ಸೇರಿ ವೀಲರನ ಗೌರವಾರ್ಥ ಸಂತೋಷಕೂಟವೊಂದನ್ನು ಏರ್ಪಡಿಸಿದರು. ವೀಲರನನ್ನು ಅತ್ಯಂತ ವೈಭವದಿಂದ ಸ್ವಾಗತಿಸಿ ಸಭೆಗೆ ಕರೆದೊಯ್ಯಲಾಯಿತು. ಭಾಷೆ ಬರದಿದ್ದರೂ ವೀಲರನಿಗೆ ಪ್ರತಿಯೊಬ್ಬ ಕೆಲಸಗಾರನೂ ಪರಿಚಿತನಾಗಿದ್ದ. ಸಂಗೀತ, ಕೋಲಾಟ, ಕೀಲುಕುದುರೆ ನೃತ್ಯ ಮುಂತಾದ ಕಾರ್ಯಕ್ರಮಗಳಿಂದ ಆ ಸಂಜೆ ರಂಜಿಸಿದ್ದನ್ನು ವೀಲರ್ ನೆನಪಿಸಿಕೊಂಡಿದ್ದಾನೆ.

1945ರಲ್ಲಿ ಬೃಹತ್ ಶಿಲಾಯುಗದ ಸಮಾಧಿ ನಿವೇಶನವಾದ ಬ್ರಹ್ಮಗಿರಿ ಈತನ ದೃಷ್ಟಿಗೆ ಬಿತ್ತು. ಡಾ. ಎಂ. ಎಚ್. ಕೃಷ್ಣ ಇಲ್ಲಿ ಉತ್ಖನನ ನಡೆಸಿದ್ದರೂ ಅದು ಅವೈಜ್ಞಾನಿಕವಾದುದಾಗಿತ್ತು. 1946ರಲ್ಲಿ ಬ್ರಹ್ಮಗಿರಿಯಲ್ಲಿ ವೀಲರ್ ಉತ್ಖನನ ಕಾರ್ಯವನ್ನಾರಂಭಿಸಿದ. ಒಂದರ ನಂತರ ಮತ್ತೊಂದರಂತೆ ಮೂರು ಸಂಸ್ಕೃತಿಗಳ ಅವಶೇಷಗಳು ಇಲ್ಲಿ ದೊರೆತವು. ದಕ್ಷಿಣ ಭಾರತ ಪ್ರಾಗೈತಿಹಾಸದ ಕಾಲಾನುಪೂರ್ವಿಯನ್ನು ಸಿದ್ಧಪಡಿಸುವಲ್ಲಿ ಬ್ರಹ್ಮಗಿರಿ ಭದ್ರ ಬುನಾದಿಯಾಗಿ ಪರಿಣಮಿಸಿತು. ಬ್ರಹ್ಮಗಿರಿಯ ಬಳಿ ಇರುವ ಚಂದ್ರವಳ್ಳಿಯಲ್ಲೂ ಮೇಲ್ಮೈ ಅಗೆತದಲ್ಲೇ ಅರಿಕಮೆಡುವಿನಲ್ಲಿ ದೊರೆತಂಥ ಕುಂಭಾವಶೇಷಗಳೂ ಅಗಸ್ಟಸ್, ಟೈಬೀರಿಯಸ್ ಮುಂತಾದ ರೋಮನ್ ಅರಸರು ಟಂಕಿಸಿದ್ದ ನಾಣ್ಯಗಳೂ ದೊರೆತಿದ್ದವು. ಉತ್ಖನನದಲ್ಲಿ ಕ್ರಿ. ಶ. 26ರಿಂದ 37ರವರೆಗೆ ರಾಜ್ಯವಾಳಿದ ಟೈಬೀರಿಯಸ್‌ನ ನಾಣ್ಯ ದೊರೆತು ದಕ್ಷಿಣ ಭಾರತದ ಇತಿಹಾಸಕ್ಕೆ ಹೊಸ ತಿರುವನ್ನು ನೀಡಿತು. ವೀಲರನ ಮಾತುಗಳಲ್ಲಿ ಹೇಳುವುದಾದರೆ It was the crowning feature of three years of steady planning and steadily attendant luck. ಹರಪ್ಪದಲ್ಲಿ ಪ್ರತಿಕೂಲ ಹವಾಮಾನವಿದ್ದರೂ ಉತ್ಖನನ ನಡೆಸಿ, ಅದರ ವಿವರಗಳನ್ನು 1947ರ ಜನವರಿಯಲ್ಲಿ 'ಏನ್ಷೆಂಟ್ ಇಂಡಿಯಾ'ದಲ್ಲಿ ಪ್ರಕಟಿಸಿದ.

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದು ದೇಶ ವಿಭಜನೆಯಾಯಿತು. ವೀಲರನ ಕೈಕೆಳಗಿದ್ದ ಏಳು ಜನ ಮುಸ್ಲಿಂ ಅಧಿಕಾರಿಗಳು ಪಾಕಿಸ್ತಾನ ಸೇರಿದರು. 1948ರಲ್ಲಿ ಈತನ ನೇಮಕದ ಅವಧಿ ಮುಗಿಯಿತು. ನವದೆಹಲಿಯಿಂದ ಕರಾಚಿಗೆ ಹೋದ. ಪಾಕಿಸ್ತಾನದ ಪುರಾತತ್ತ್ವ ಇಲಾಖೆ ಜಾತಿ ಆಧಾರದ ಮೇಲೆ ವಿಂಗಡಣೆಯಾಗಿದ್ದರಿಂದ ತುಂಬ ದುರ್ಬಲವಾಗಿತ್ತು. ಪಾಕಿಸ್ತಾನದ ಶಿಕ್ಷಣಮಂತ್ರಿ ಫಜ್ಲುರ್‌ರಹಮಾನ್ ಈತನನ್ನು ಭೇಟಿಮಾಡಲು ಬಯಸಿ ಈತನಿಗೆ ಆಹ್ವಾನ ಕಳಿಸಿದರು. ಪಾಕಿಸ್ತಾನಕ್ಕೆ ಬಂದು ಸರ್ಕಾರಕ್ಕೆ ಒಪ್ಪೊತ್ತಿನ ಪುರಾತತ್ತ್ವ ಸಲಹೆಗಾರರಾಗಿರಬೇಕೆಂದು ಕೇಳಿಕೊಂಡರು. ಆದರೆ ಭಾರತದ ವಿಭಜನೆಗೆ ಮೊದಲು ವೀಲರ್ ಮುಸ್ಲಿಂ ಅಧಿಕಾರಿಯೊಬ್ಬನ ವಿಚಾರಣೆ ನಡೆಸಿದ್ದನೆಂಬ ಕಾರಣಕ್ಕಾಗಿ ಆತನನ್ನು ದ್ವೇಷಿಸುತ್ತಿದ್ದರು. ಈಗ ಹಳೆಯ ಕಹಿಯನ್ನು ಮರೆತು ಈತನನ್ನು ಆಹ್ವಾನಿಸಿದರು. ವರ್ಷಕ್ಕೆ ಮೂರು–ನಾಲ್ಕು ತಿಂಗಳು ಪಾಕಿಸ್ತಾನಕ್ಕೆ ಬಂದು ಪುರಾತತ್ತ್ವ ವಿಷಯಗಳಲ್ಲಿ ಸಲಹೆಗಾರನಾಗಿರುವಂತೆ ಮೂರು ವರ್ಷಗಳ ಒಪ್ಪಂದ ಏರ್ಪಟ್ಟಿತು.

1949 ಮತ್ತು 50ರಲ್ಲಿ ಪಾಕಿಸ್ತಾನಕ್ಕೆ ವೀಲರ್ ಭೇಟಿ ನೀಡಿ ಅಲ್ಲಿನ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ; ವ್ಯಾಪಕವಾಗಿ ಪ್ರವಾಸಮಾಡಿದ; ನಿವೇಶನಗಳಲ್ಲಿ ಉತ್ಖನನ ನಡೆಸಿದ; ಗ್ರಂಥ ರಚಿಸಿದ; ಪಾಕಿಸ್ತಾನದ ರಾಷ್ಟ್ರೀಯ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ. 'ಪಾಕಿಸ್ಥಾನ ಮ್ಯೂಸಿಯಂ ಅಸೋಸಿಯೇಶನ್' ಸ್ಥಾಪನೆಯಾಗಿ ಪೆಷಾವರದಲ್ಲಿ ಮೊದಲ ಸಭೆ ಸೇರಿತು. ವೀಲರನೇ ಅದರ ಮೊದಲ ಅಧ್ಯಕ್ಷ. 195)ರಲ್ಲಿ ಪಾಕಿಸ್ಥಾನದ ರಾಷ್ಟ್ರೀಯ ವಸ್ತುಸಂಗ್ರಹಾಲಯ ಅಧಿಕೃತವಾಗಿ ಆರಂಭವಾಯಿತು.

ಪಾಕಿಸ್ಥಾನದಲ್ಲಿನ ಕೆಲವು ಪರೀಕ್ಷೆಗಳ ಅಕ್ರಮಗಳನ್ನು ಗಮನಿಸಿದ ಈತ 1951ರಲ್ಲಿ ಸಚಿವರ ಆಹ್ವಾನವನ್ನು ನಿರಾಕರಿಸಿದ. In 1954 the Pakistan Department of Archaeology is numbered amongst the unburied dead ಎಂದು ತಿಳಿಸುವಷ್ಟು ಭ್ರಮನಿರಸನವಾಯಿತು ವೀಲರನಿಗೆ.

1956ರಲ್ಲಿ ಪೂರ್ವ ಆಫ್ರಿಕದ ಪುರಾತತ್ತ್ವದಲ್ಲೂ ಆಸಕ್ತಿ ತಳೆದು ಅಲ್ಲಿಯೂ ವಸ್ತು ಸಂಗ್ರಹಾಲಯವೊಂದನ್ನು ಸ್ಥಾಪಿಸಿದ. 1958ರಲ್ಲಿ ಪೆಷಾವರದ ಬಳಿಯ ಚರ್ಸದ (Charsada) ಎಂಬ ನಿವೇಶನದಲ್ಲಿ ಉತ್ಖನನ ನಡೆಸಿ ಪ್ರಾಚೀನ ಗಾಂಧಾರದ ರಾಜಧಾನಿ ಪುಷ್ಕಲಾವತಿ ಇದೇ ಎಂಬುದನ್ನು ಸಿದ್ಧಪಡಿಸಿದ.

ಭಾರತದ ಪುರಾತತ್ತ್ವ ಕ್ಷೇತ್ರದಲ್ಲಿ ವೈಜ್ಞಾನಿಕ ವಿಧಾನಗಳ ಅಳವಡಿಕೆ ಮತ್ತು ಇಂದು ಭಾರತೀಯ ಪುರಾತತ್ತ್ವ ಇಲಾಖೆ ಹಾಗೂ ವಿಶ್ವವಿದ್ಯಾನಿಲಯಗಳ ಪುರಾತತ್ತ್ವ ವಿಭಾಗಗಳಲ್ಲಿ ಉನ್ನತ ಪದವಿಗಳಲ್ಲಿರುವ ಹೆಚ್ಚಿನ ಪುರಾತತ್ತ್ವ ವಿದ್ವಾಂಸರ ಸಮುದಾಯವನ್ನೆ ತರಬೇತಿ ನೀಡಿ ಸೃಷ್ಟಿಸಿದ್ದಕ್ಕಾಗಿ ವೀಲರನಿಗೆ ನಾವು ಋಣಿಗಳಾಗಿರಬೇಕು. 1961ರಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ವಿಭಾಗದ ಶತಮಾನೋತ್ಸವ ಸಂದರ್ಭದಲ್ಲಿ ಆತ "ಪುರಾತತ್ತ್ವದ ಉದ್ದೇಶವನ್ನು ಭಾರತಕ್ಕಿಂತ ಉತ್ತಮವಾಗಿ ಬೇರೆಲ್ಲಿಯೂ ಸಾಧಿಸಲು ಸಾಧ್ಯವಿಲ್ಲ" ಎಂದು ಘೋಷಿಸಿದ. 1964-65ರಲ್ಲಿ ಎಂ. ಸಿ ಛಗಲಾ ಶಿಕ್ಷಣ ಮಂತ್ರಿಗಳಾಗಿದ್ದಾಗ ಭಾರತ ಸರ್ಕಾರದ ಆಹ್ವಾನದ ಮೇರೆಗೆ ವೀಲರ್ ಭೇಟಿ ನೀಡಿ, ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಕೆಲಸವನ್ನು ಪರಿಶೀಲಿಸಿ ಅದರ ಅಭಿವೃದ್ಧಿ ಹಾಗೂ ಪುನರ್‌ವ್ಯವಸ್ಥೆಗೆ ಕೆಲವು ಸಲಹೆಗಳನ್ನು ನೀಡಿದ. ಇಂಗ್ಲೆಂಡಿನ ಸ್ವಾನ್ ಪ್ರವಾಸಿಗಳೊಂದಿಗೆ ವೀಲರ್ ಕೆಲವು ಸಲ ಭಾರತ ಪಾಕಿಸ್ಥಾನಗಳಿಗೆ ಭೇಟಿ ನೀಡಿದ.

ವೀಲರ್ ಅತ್ಯಂತ ಜನಪ್ರಿಯನಾದ ಟೆಲಿವಿಷನ್ ಉಪನ್ಯಾಸಕಾರನಾಗಿದ್ದ. ಪುರಾತತ್ತ್ವ ಶಾಸ್ತ್ರವನ್ನು ಜನಪ್ರಿಯಗೊಳಿಸುವಲ್ಲಿ ಆತನ ಸಾಧನೆ ಆತನ ಪುರಾತತ್ತ್ವ ಶಾಸ್ತ್ರ ಪರಿಣತಿಯಷ್ಟೇ ಮಹತ್ತ್ವದ್ದು.

1976 ಜುಲೈ 22ರಂದು ವೀಲರ್ ತನ್ನ 86ನೆಯ ವಯಸ್ಸಿನಲ್ಲಿ ಮೃತನಾದ.

ವೀಲರನ ಎಲ್ಲ ಉತ್ಖನನಗಳೂ ಪ್ರಾಮಾಣಿಕ ಪ್ರಕಟಣೆಗಳಿಂದ ಕೂಡಿವೆ. "ಪ್ರತಿಯೊಂದು ಉತ್ಖನನವೂ ಅದು ಸರಿಯಾಗಿ ದಾಖಲಾಗದಿದ್ದರೆ ನಾಶವೇ" ಎಂಬುದು ಆತನ ಸಿದ್ಧಾಂತ. ಅಂಥ ಪ್ರೇರಣೆಯನ್ನೇ ವಿದ್ಯಾರ್ಥಿಗಳ ಮೇಲೆ ಬೀರಿದ್ದ. ಸೈನಿಕಗುಣ ಆತನಲ್ಲಿ ಮನೆಮಾಡಿದ್ದ ರಿಂದಲೇ ಆತನಿಗೆ ತಕ್ಷಶಿಲೆಯ ಕಡು ಚಳಿಯಲ್ಲಿ ಪಾಂಡಿಚೆರಿಯ ಸುಡು ಬೇಸಿಗೆಯಲ್ಲಿ ಉತ್ಖನನ ನಡೆಸುವುದು ಸಾಧ್ಯವಾಯಿತು. ಪ್ರತಿ ಕೆಲಸದಲ್ಲೂ ಒಂದು ರೀತಿಯ ಶಿಸ್ತು, ಅಚ್ಚುಕಟ್ಟು. ಓವರ್‌ಕೋಟು ಹಾಕಿಕೊಂಡು ಬರದ ವಿದ್ಯಾರ್ಥಿಯೊಬ್ಬನನ್ನು ನಿವೇಶನದಿಂದ ಹಿಂದಕ್ಕೆ ಕಳಿಸಿದ್ದನಂತೆ. ನಿರ್ದಿಷ್ಟ ಗುರಿಸಾಧನೆಗೆ ಉಚಿತ ಮಾರ್ಗವನ್ನು ಅನುಸರಿಸುವುದು ಆತನ ವೈಶಿಷ್ಟ್ಯ.

ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ 'ಏನ್ಷೆಂಟ್ ಇಂಡಿಯಾ' ಎಂಬ ಬುಲೆಟಿನ್

ಸ್ಥಾಪಿಸಿ ಪ್ರಕಟಿಸಿದ್ದೂ ಈತನೇ. ಪ್ರಕಟಣೆಯಲ್ಲಿ ವೀಲರ್‌ನದು ಸಿದ್ಧಹಸ್ತ. ಬಹುಶಃ ತಂದೆಯ ಗುಣವೇ ರಕ್ತಗತವಾಗಿರಬೇಕು.

ವೀಲರನ ಬರವಣಿಗೆ ಗಣಿತದಷ್ಟು ಕರಾರುವಾಕಾದ್ದು. ಬರವಣಿಗೆಯಲ್ಲಿ ನವಿರಾದ ವ್ಯಂಗ್ಯ; ಪತ್ರಿಕೋದ್ಯಮಿಯೂ ಕರುಬುವಂಥ ಸೊಗಸಾದ ಶೈಲಿ. ಈತನ ತಂದೆ ಈತನಿಗೊಮ್ಮೆ ತಿಳಿಸಿದ್ದರಂತೆ: "ಒಂದು ಪದಕ್ಕೆ ಆರು ಷಿಲ್ಲಿಂಗ್‌ನಂತೆ ಖರ್ಚಾಗುವ ಕೇಬಲ್ ಬರೆಯುತ್ತಿದ್ದೇನೆಂದು ಭಾವಿಸಿ ಬರೆ" ಎಂದು! ಅದಕ್ಕೇ ಅಷ್ಟೊಂದು ಖಚಿತತೆ. ಗಂಭೀರವಾದರೂ ವೀಲರನ ಶೈಲಿ ಸುಲಲಿತವಾಗಿ ಓದಿಸಿಕೊಂಡು ಹೋಗುವಂಥದು.

ವೀಲರನ ಪ್ರಮುಖ ಕೃತಿಗಳು ಇವು:

(1) Early India and Pakistan
(2) The Indus valley Civilization
(3) 5000 years of Pakistan
(4) Civilization of Indus valley
(5) Still Digging (autobiography)
(6) Alms for Oblivion (collection of essays)
(7) Archaeology from the Earth ಇತ್ಯಾದಿ.

ಪಾ. ವೆಂ. ಆಚಾರ್ಯ

ಶಿಕ್ಷಣ ಮತ್ತು ಜೀವನಮೌಲ್ಯಗಳು

ಶಿಕ್ಷಣ ಮತ್ತು ಮೌಲ್ಯ ಇವೆರಡೂ ಪ್ರಾಣಿಲೋಕದಲ್ಲಿ ಮನುಷ್ಯನಿಗೇ ವಿಶೇಷವಾದ ಪದಾರ್ಥಗಳು. ಈ ಏಕದೇಶೀಯತೆ ಆಕಸ್ಮಿಕವಲ್ಲ ಎಂದು ನನಗೆ ತೋರುತ್ತದೆ. ತಿರ್ಯಕ್ ಪ್ರಾಣಿಗಳಲ್ಲಿ ನಾವು ತಿಳಿಯುವ ಅರ್ಥದಲ್ಲಿ ಶಿಕ್ಷಣ ಇಲ್ಲ. ಹುಲಿಯಂಥ ಪ್ರಾಣಿ ಮರಿಗಳಿಗೆ ಬೇಟೆ ಆಡಲು ಅಷ್ಟಿಷ್ಟು ತರಬೇತಿಯನ್ನು ಕೊಡಬಹುದು. ಆದರೆ ಅನೇಕ ಪ್ರಾಣಿಗಳಲ್ಲಿ ಅಷ್ಟೂ ಇಲ್ಲ. ಕಣಜದ ಹುಳ ತೆಗೆದುಕೊಳ್ಳಿ. ಅದು ತತ್ತಿಗಳನ್ನಿಡುವ ಮುಂಚೆ ಒಂದು ಅರೆಜೀವ ಹುಳುವನ್ನು ತಂದು ಅದರ ಮೇಲೆಯೇ ತತ್ತಿ ಇಟ್ಟು ಗೂಡನ್ನು ಮುಚ್ಚಿ ಹೊರಟು ಹೋಗುತ್ತದೆ. ಆಮೇಲೆ ತನ್ನ ಸಂತಾನವನ್ನು ಅದು ಹಿಂತಿರುಗಿಯೂ ನೋಡುವುದಿಲ್ಲ. ತತ್ತಿ ಒಡೆದು ಮರಿಗಳಾಗಿ ಅವುಗಳು ಆ ಹುಳುವನ್ನು ತಿಂದು ಹೊರಬಂದು ವಿಶಾಲ ವಿಶ್ವದಲ್ಲಿ ತಮ್ಮ ಪಾಡಿಗೆ ತಾವು ಬದುಕನ್ನು ಕಂಡುಕೊಳ್ಳುತ್ತವೆ. ಮಕ್ಕಳ ಕಾಟದಿಂದ ಸೋತ ಎಷ್ಟೋ ತಾಯಂದಿರು ತಾವು ಕಣಜದ ಹುಳಗಳಾಗಿ ಹುಟ್ಟಲಿಲ್ಲವಲ್ಲ ಎಂದು ಪಶ್ಚಾತ್ತಾಪ ಪಡಬಹುದು. ವಾಸ್ತವಿಕವಾಗಿ ಪ್ರಾಣಿಗಳು ಹುಟ್ಟಿನಿಂದ ಸಾವಿನವರೆಗೆ ತಮ್ಮ ವಾಸನಾಬಲದಿಂದ ಅಂದರೆ ತಮ್ಮ ಪ್ರಕೃತಿಯಲ್ಲಿ ಅಡಕವಾದ ಪ್ರಚೋದನೆಯಿಂದಲೇ ಸಕಲ ಕ್ರಿಯೆಗಳನ್ನೂ ಮಾಡುತ್ತವೆ. ಯಾವ ಸಮಸ್ಯೆ ಎದುರು ಬಂದರೂ ಈ ಪ್ರಕೃತಿದತ್ತ ವಾಸನೆಯಿಂದಲೇ ಅವು ಪರಿಹಾರ ಕಂಡುಕೊಳ್ಳುತ್ತವೆ. ಬುದ್ಧಿಯನ್ನುಪಯೋಗಿಸಬೇಕಾದ ಪ್ರಮೇಯವೇ ಇಲ್ಲ. ಎಷ್ಟು ಸುಖಿಗಳು ಅಲ್ಲವೆ? ಅದರೆ ತಮ್ಮ ಪ್ರಕೃತಿಯಲ್ಲಿ ಉತ್ತರವಿಲ್ಲದ ಸಮಸ್ಯೆಗಳು ಎದುರಾದರೆ ಪ್ರಾಣಿಗಳು ಅವುಗಳನ್ನು ಪರಿಹರಿಸಿಕೊಳ್ಳಲಾರದೆ ಬಿದ್ದು ಹೋಗುತ್ತವೆ. ಪ್ರಾಗೈತಿಹಾಸಿಕ ಕಾಲದ ಪೆಡಂಭೂತಗಳು ನಿರ್ವಂಶವಾದದ್ದು ಹೀಗೆಯೇ ಎಂಬ ಸಂಶಯವಿದೆ. ಹೊಸಪರಿಸ್ಥಿತಿಗಳಿಗೆ ಹೊಸ ಪರಿಹಾರ ಕಂಡು ಹಿಡಿಯಲು ಅವುಗಳ ಪ್ರಕೃತಿಯಲ್ಲಿ ವ್ಯವಸ್ಥೆ ಇರಲಿಲ್ಲ. ಕೆಲ ಪ್ರಾಣಿಗಳಲ್ಲಿ ಸೂಕ್ಷ್ಮರೂಪದಲ್ಲಿ ಶಿಕ್ಷಣ ಇರಬಹುದು. ಆದರೆ ಈ ಪ್ರಾಣಿಗಳಿಗೆ ಕೂಡ ಮನುಷ್ಯ ತರಬೇತಿ ಕೊಟ್ಟರೆ ಮಾಡುವಷ್ಟು ಆಶ್ಚರ್ಯಕರ ಕೆಲಸಗಳನ್ನು ಸ್ವಜಾತಿಯಿಂದ ತರಬೇತಿ ಹೊಂದಿದ ಪ್ರಾಣಿಗಳು ಮಾಡಲಾರವು. ಅವು ತಮ್ಮನ್ನು ತಿಳಿದುಕೊಂಡದ್ದಕ್ಕಿಂತ ಹೆಚ್ಚಾಗಿ ಮನುಷ್ಯ ಅವುಗಳನ್ನು ಅರ್ಥಮಾಡಿಕೊಂಡಿರುವುದೇ ಇದಕ್ಕೆ ಕಾರಣ. ಪ್ರಾಣಿಗಳಿಗೆ ಗೊತ್ತು ಇದೆ; ಆದರೆ ಅರ್ಥವಾಗುವುದಿಲ್ಲ: They know, but don't understand.

ಹಾಗೆಯೇ ಪ್ರಾಣಿಗಳಿಗೆ ಮೌಲ್ಯದ ಅರಿವು ಇಲ್ಲ. ಮಂಗನಂಥ ಕೆಲ ಪ್ರಾಣಿಗಳನ್ನು ಮನುಷ್ಯ ತರಬೇತು ಮಾಡಿದಾಗ ಒಂದು ತರಹದ 'ವ್ಯಾಪಾರಿ ಮೌಲ್ಯ'ದ ಕಲ್ಪನೆಯನ್ನು ಅವು ಮಾಡಿಕೊಂಡ ಉದಾಹರಣೆಗಳು ಇವೆ. ಯಂತ್ರದ ಹಿಡಿಕೆ ತಿರುಗಿಸಿದರೆ ರಟ್ಟಿನ ಬಿಲ್ಲೆಗಳು ಬರುತ್ತವೆ; ಬಿಲ್ಲೆಗಳನ್ನು ಕೊಟ್ಟರೆ ಬಾಳೆಹಣ್ಣು ಸಿಗುತ್ತದೆ. ಹೀಗೆ ವ್ಯವಸ್ಥೆ ಮಾಡಿದಾಗ ಮಂಗಗಳು

ಬಿಲ್ಲೆಗಳನ್ನು ಗಳಿಸುವುದಕ್ಕೆ ಹಿಡಿಕೆ ತಿರುಗಿಸಿ ದುಡಿದವು. ದುಡ್ಡು ಕಂಡರೆ ಕುಂಜಾರು ದಡ್ಡನ ತಲೆ ಕೂಡ ಓಡತೊಡಗುತ್ತದೆ. ಆದರೆ ಇವನ್ನು ಕೂಡ ಮನುಷ್ಯನ ಮೌಲ್ಯ ಕಲ್ಪನೆಗೆ ಹೋಲಿಸಲು ಸಾಧ್ಯವಿಲ್ಲ.

ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ಈ ವೈಷಮ್ಯದ ಚರ್ಚೆ ಈ ನಿಟ್ಟಿನಲ್ಲಿ ಅಪ್ರಸ್ತುತ ಎನಿಸಬಹುದು. ಆದರೆ ಮೌಲ್ಯ ಮತ್ತು ಶಿಕ್ಷಣ ವಿಷಯದಲ್ಲಿ ನಾನು ಮುಂದೆ ಪ್ರತಿಪಾದಿಸಲಿರುವ ಅಂಶಗಳು ಇದಕ್ಕೆ ಸಂಬಂಧಿಸಿವೆ.

ಆದರೆ ಮೊದಲು ಮೌಲ್ಯ ಎಂದರೇನು? ತತ್ವಜ್ಞಾನಿಗಳು ನೂರಾರು ವರ್ಷಗಳಿಂದ ಇದನ್ನು ಚರ್ಚಿಸಿದ್ದಾರೆ. ಅರ್ಥಶಾಸ್ತ್ರಿಗಳು ಇದರಲ್ಲಿದ್ದಾರೆ. ಪ್ರಾಚೀನ ಭಾರತೀಯರ 'ಸತ್', 'ಪುರುಷಾರ್ಥ', 'ಪ್ರಯೋಜನ' ಮೊದಲಾದ ಶಬ್ದಗಳಲ್ಲಿ ಮೌಲ್ಯ ಕಲ್ಪನೆಯ ಅಂಶ ಇದೆ. ಗ್ರೀಕರ 'ಒಳಿತಿನ' ಕಲ್ಪನೆಯಲ್ಲಿಯೂ ಮೌಲ್ಯದ ಅಂಶ ಉಂಟು. ಕೇವಲ ಭೌತಿಕ ದೃಷ್ಟಿಯಿಂದ ಮೌಲ್ಯ ಎಂಬ ಪದಾರ್ಥಕ್ಕೆ ಅಸ್ತಿತ್ವ ಇಲ್ಲ. ಆದರೂ ಕ್ಯಾಂಟ್ ಹೇಳುವ ಹಾಗೆ ಮನುಷ್ಯ ಪ್ರಪಂಚದಲ್ಲಿ ಸಂಯೋಜಿತ ಕ್ರಿಯೆ ಸಾಧ್ಯವಾಗಬೇಕಾದರೆ ಮೌಲ್ಯದ ಸತ್ಯತ್ವವನ್ನೂ ಸಾಂಗತ್ಯವನ್ನೂ ಒಪ್ಪಬೇಕಾಗುತ್ತದೆ. ಶಿವ ಅಂದರೆ ನನಗೂ ಸುತ್ತಲಿನವರಿಗೂ ಹಿತ ಅಥವಾ ಮಂಗಲವನ್ನುಂಟುಮಾಡುವಂಥಾದ್ದು, ಸುಂದರ ಎಂದರೆ ಸಂಗೀತ, ಕಲೆ, ಆಕಾರಸೌಷ್ಠವ ಮುಂತಾದವುಗಳಿಂದ ಮನಸ್ಸಿಗೆ ಹಿತವಾದ ಅನುಭವವನ್ನುಂಟುಮಾಡುವಂಥಾದ್ದು ಮತ್ತು ಸತ್ಯ ಅಂದರೆ ಲೌಕಿಕ ತಥ್ಯಗಳಿಗಿಂತ ಬೇರೆ ಸ್ತರದಲ್ಲಿ ಪ್ರಪಂಚದಲ್ಲಿ ಒಂದು ಏಕಸೂತ್ರತೆಯನ್ನು ಕಾಣುವಂಥದ್ದು. ಇವೆಲ್ಲವೂ ಮೌಲ್ಯಗಳ ಪರಿಧಿಯಲ್ಲಿ ಬರುತ್ತವೆ. ಕೆಲ ತತ್ವಜ್ಞಾನಿಗಳು ಆರ್ಥಿಕ, ತಾರ್ಕಿಕ, ಕಲಾತ್ಮಕ, ನೈತಿಕ ಮತ್ತು ಆಧ್ಯಾತ್ಮಿಕ ಎಂದು ಪಂಚವಿಧ ಮೌಲ್ಯಗಳನ್ನು ಹೇಳುತ್ತಾರೆ. ಇವು ಉತ್ತರೋತ್ತರವಾಗಿ ಒಂದಕ್ಕಿಂತ ಒಂದು ಶ್ರೇಷ್ಠವೆಂದು ಭಾವಿಸಲ್ಪಡುತ್ತದೆ. ಮೌಲ್ಯಗಳ ಪ್ರಯೋಜನ ವಿಶೇಷವಾದದ್ದು. ಆಹಾರ ಮೊದಲಾದವುಗಳ ಸೇವನೆಯಿಂದ ಜೀವಿಗೆ ಒಂದು ಸಮಾಧಾನ ದೊರಕುತ್ತದೆ. ಆ ಸಮಾಧಾನದ ಸಲುವಾಗಿ ಜೀವಿ ಪುನಃ ಪುನಃ ಆ ವಸ್ತುಗಳನ್ನು ಸೇವಿಸುತ್ತದೆ. ಆದರೆ ಮೌಲ್ಯಗಳಿಂದ ನನಗೆ ದೊರಕುವ ಸಮಾಧಾನ ಈ ವರ್ಗದ್ದಲ್ಲ. ಅದಕ್ಕಿಂತ ಮೇಲಿನ ಸ್ತರದಲ್ಲಿ ಮನಸ್ಸಿಗೆ ಅದು ಒಂದು ಹಿತವಾದ ಭಾವನೆಯನ್ನುಂಟುಮಾಡುತ್ತದೆ. ಒಬ್ಬನಿಗೆ ಉಪಕಾರ ಮಾಡಿದರೆ ಆಗುವ ಸಮಾಧಾನ, ಸುಖ ಇವುಗಳನ್ನು ಇಲ್ಲಿ ಉದಾಹರಿಸಬಹುದು. ಪ್ರಾರ್ಥನೆಯಿಂದ ದೊರಕುವ ಸುಖವೂ ಇಂಥಾದ್ದೇ. (ಕಣ್ಣು ಮುಚ್ಚಿದರೆ ಕೃಷ್ಣ ಮೂರ್ತಿಯ ಬದಲು ಇನ್ನಾವುದಾದರೂ ಮೂರ್ತಿ ಕಾಣತೊಡಗಿದರೆ ಆ ಮಾತು ಬೇರೆ.)

ಮನುಷ್ಯನನ್ನು ಮನುಷ್ಯನಾಗಿ ಮಾಡುವುದು ಮೌಲ್ಯದ ಕಲ್ಪನೆ ಮತ್ತು ಜೀವನದಲ್ಲಿ ಅದರ ಅನುಸಂಧಾನದ ಯತ್ನವೇ ಆಗಿದೆ. ಆದರೂ ಮೌಲ್ಯಪ್ರಜ್ಞೆ ಹೆಚ್ಚುಮಟ್ಟಿಗೆ ತರಬೇತಿಯಿಂದ ಬರತಕ್ಕದ್ದು. ತರಬೇತಿಗೆ ಸಂಬಂಧಪಟ್ಟದ್ದೆಲ್ಲ ಶಿಕ್ಷಣ ರಂಗದಲ್ಲಿ ಸೇರುತ್ತದೆ. ಮೌಲ್ಯ ಪಾಲನೆಯಿಂದ ಮನುಷ್ಯನಿಗೆ ದೊರಕುವ ಸಮಾಧಾನದ ಲೋಕೋತ್ತರ ಆನಂದದ ವರ್ಗದ್ದೆಂಬುದು ನಿಜವಾದರೂ ಅದು ಮನುಷ್ಯನ ಅಸ್ತಿತ್ವಕ್ಕೆ ಅನಿವಾರ್ಯವಾದದ್ದು. ಮೌಲ್ಯಗಳ ಪ್ರಜ್ಞೆ ಬೆಳೆದಿರದಿದ್ದರೆ ಮಾನವ ಕುಲದ ಜೀವಶಾಸ್ತ್ರೀಯ ಉಳಿವೇ ಗಂಡಾಂತರಕ್ಕೆ ಸಿಲುಕಬಹುದಾಗಿತ್ತು. ಆದ್ದರಿಂದ ಶಿಕ್ಷಣದಲ್ಲಿ ಮೌಲ್ಯಕ್ಕೆ ಪ್ರಾಧಾನ್ಯ ಇರಬೇಕು.

ಶಿಕ್ಷಣದಲ್ಲಿ ಮೌಲ್ಯದ ಸ್ಥಾನವನ್ನು ಚರ್ಚಿಸುವ ಮೊದಲು ಮೌಲ್ಯ ಕಲ್ಪನೆಯ ಹುಟ್ಟು ಬೆಳವಣಿಗೆಗಳ ಬಗ್ಗೆ ಕೆಲ ಸಂಗತಿಗಳನ್ನು ಗಮನಿಸಬೇಕು. ಮೌಲ್ಯವೆಂಬುದು ಎಷ್ಟೇ ಲೋಕೋತ್ತರವಾದರೂ ಅದು ಜೀವಶಾಸ್ತ್ರೀಯ ದೃಷ್ಟಿಯಲ್ಲಿ ಪ್ರಕೃತಿಜನ್ಯ ಪ್ರವೃತ್ತಿಯ ವಿಸ್ತರಣೆ ಅಥವಾ

ಅದರ ಸ್ಥಳವಲ್ಲಿ ಹುಟ್ಟಿಕೊಂಡ ಗುಣವೇ ಆಗಿದೆ. ಪ್ರಾಣಿಗಳಲ್ಲಿ ಪ್ರಕೃತಿಯ ಪ್ರಚೋದನೆ ಅಥವಾ ವಾಸನೆ (instinct) ಸರ್ವಸ್ವವಾಗಿದೆಯೆಂದು ಆಗಲೇ ಹೇಳಿದ್ದೇನೆ. ಅದೇ ಪ್ರಾಣಿಯನ್ನು ನಡೆಸುತ್ತದೆ ಮತ್ತು ಪ್ರಾಣಿ ಕುಲಗಳನ್ನು ಕಾಪಾಡಿದೆ. ಇಂದ್ರಿಯ ತೃಷ್ಣೆಗಳಾದ ಆಹಾರ ಮತ್ತು ಮೈಥುನದ ಹಂಬಲ ಪ್ರಾಣಿಗಳಲ್ಲಿ ಇದೆ. ಅದಕ್ಕಿಂತ ಉದಾತ್ತ ಎನ್ನಬಹುದಾದ ಮರಿಗಳನ್ನು ಕಾಪಾಡುವ ಪ್ರವೃತ್ತಿಯೂ ಇದೆ. ಇದು ಸರ್ವವಿದಿತವಾದದ್ದು. ಹಾಗೆಯೆ ಕಾಮಕ್ಕೆ ಜೊತೆಯಾದ ಕ್ರೋಧ ಮತ್ತು ಮತ್ಸರಗಳೂ ಪ್ರಾಣಿಗಳಲ್ಲಿವೆ. ಅದರ ಪರಿಣಾಮವಾದ ಹೋರಾಟವೂ ಇದೆ. ಆದರೆ ಹೆಣ್ಣಿನ ಸಲುವಾಗಿಯೋ ಬೇರೆ ಯಾವ ಕಾರಣಕ್ಕಾಗಿಯೋ ಎರಡು ಗಂಡು ನಾಯಿಗಳಲ್ಲಿ ಎಂಥಾ ಕಲಹವಾದರೂ ಅವು ಒಂದನ್ನೊಂದು ತೀರ ಗಂಭೀರವಾಗಿ ಹಿಂಸಿಸುವುದಿಲ್ಲ. ಎರಡರಲ್ಲಿ ದುರ್ಬಲವಾದದ್ದು ಹಿಂದೆ ಸರಿಯುತ್ತದೆ. ಆಮೇಲೆ ಸಬಲವಾದದ್ದು ಅದನ್ನು ಕಾಡುವುದಿಲ್ಲ. ಎರಡು ಸಮಬಲ ನಾಯಿಗಳಲ್ಲಿ ದೀರ್ಘ ಹೋರಾಟವಾಗಬಹುದು. ಕೊನೆಗೆ ಸೋತ ನಾಯಿ ಅಂಗಾತ ಬಿದ್ದು ತನ್ನ ನಾಲಿಯನ್ನು ಗೆದ್ದ ನಾಯಿಯ ಮುಂದೆ ಒಡ್ಡುತ್ತದೆ. ಇದು ಶರಣಾಗತಿಯ ಸೂಚನೆ. ಶರಣಾಗತವಾದ ನಾಯಿಯನ್ನು ಬಲಿಷ್ಠ ನಾಯಿ ಮುಂದೆ ಸ್ವಲ್ಪವೂ ಹಿಂಸಿಸುವುದಿಲ್ಲ. ಜಲ ಸ್ಥಲ ಗಗನ ಚರ ಇವೆಲ್ಲ ಪ್ರಾಣಿವರ್ಗಗಳಲ್ಲಿಯೂ ಸ್ವಜಾತೀಯ ಪ್ರಾಣಿಗಳನ್ನು ಕೊಲ್ಲದಿರುವ, ಹಿಂಸಿಸದಿರುವ ಮನೋವೃತ್ತಿ—ನಿರೋಧಕ ಅಂತರ್ವೃತ್ತಿ—inhibition ಹೆಚ್ಚು ಮಟ್ಟಿಗೆ ಇರುವುದನ್ನು ಪ್ರಾಣಿಶಾಸ್ತ್ರಿಗಳು ಗಮನಿಸಿದ್ದಾರೆ. ಇದು ಬುದ್ಧನ ಅಹಿಂಸಾಬೋಧೆ ಕೇಳಿಬಂದ ಬುದ್ಧಿಯಲ್ಲ. ಅವುಗಳ 'ರಕ್ತ'ಗತವಾದ ಗುಣ. ಅವುಗಳಿಗೆ ಸ್ವಜಾತಿಯನ್ನು ಕೊಲ್ಲದಂತೆ ಪ್ರಕೃತಿಯೇ ತಡೆಹಾಕುತ್ತದೆ.

ಲೈಂಗಿಕ ವಿಚಾರವಲ್ಲಿಯೂ ಪ್ರಾಣಿಗಳಲ್ಲಿ ಪ್ರಕೃತಿದತ್ತ ನಿರೋಧಗಳು ಇವೆ. ಬಲಾತ್ಕಾರವಾಗಿ ಹೆಣ್ಣನ್ನು ಭೋಗಿಸುವ ಕ್ರಮ ಸಾಮಾನ್ಯ ಸ್ಥಿತಿಯಲ್ಲಿ ಪ್ರಾಣಿಗಳಲ್ಲಿ ಇಲ್ಲ. ಬೆದೆಗೆ ಬಂದ ಹೆಣ್ಣಿಲಿಯನ್ನು ಗಂಡು ಬೆನ್ನಟ್ಟುತ್ತದೆ. ಹೆಣ್ಣು ಹೋಗಿ ಬಿಲ ಹೊಕ್ಕರೆ ಗಂಡು ಪ್ರವೇಶಿಸುವುದಿಲ್ಲ. ರಾಣೀ ಸಾಹೇಬರ ಚಿತ್ತಕ್ಕೆ ಬರುವವರೆಗೆ ಹೊರಗೇ ಕಾಯುತ್ತದೆ. ರಾಣೀ ಸಾಹೇಬರ ಚಿತ್ತಕ್ಕೆ ಬಾರದೆನೇ ಹೋದರೆ ಒದೆ ತಿಂದ ನಾಯಿಯ ಹಾಗೆ ಜೋಲುಮೋರೆ ಹಾಕಿಕೊಂಡು ವಾಪಸಾಗುತ್ತದೆಯೇ ಹೊರತು ಅತಿಕ್ರಮಣ ಅದು ಮಾಡುವುದು ಅಪರೂಪ. ಪೀನಲ್ ಕೋಡಿನ sanctions ಇಲ್ಲದೇನೇ ಕ್ಷುದ್ರಪ್ರಾಣಿಯಾದ ಇಲಿ ನೀತಿಯುತವಾಗಿ ವರ್ತಿಸುತ್ತದೆ. ಇದು ನಿಸರ್ಗದ ಮೋಡಿ. ಬುದ್ಧಿಯ ಗಾಡಿಯಲ್ಲ.

ಸಾರಾಂಶ ಇಷ್ಟೇ. ತಿರ್ಯಕ್ ಪ್ರಾಣಿಗಳಲ್ಲಿ ಪ್ರಕೃತಿ ನಿಟ್ಟು ನಿಟ್ಟಿನಲ್ಲಿಯೂ ದಾರಿಯನ್ನು ತೋರಿಸುತ್ತದೆ. ಅಪಾಯಕರ ಸಂಘರ್ಷಗಳಿಂದ ಕಾಪಾಡುತ್ತದೆ. ಮನುಷ್ಯನ fight to the finish ಮನೋವೃತ್ತಿ ಪ್ರಾಣಿಗಳಲ್ಲಿಲ್ಲ. ಹಾಗಿದ್ದಿದ್ದರೆ ಕೋಡು, ಉಗುರು, ಹಲ್ಲುಗಳಿಂದ ಸಜ್ಜಿತವಾದ ಪ್ರಾಣಿಗಳ ಇಡೀ ಕುಲಗಳೇ ಹೆಣ್ಣು ಅಥವಾ ನಾಯಕತ್ವಕ್ಕಾಗಿ ನಡೆಯುವ ಹೋರಾಟಗಳಲ್ಲಿ ಸುಂದೋಪಸುಂದರ ಹಾಗೆ ನಾಶವಾಗಿ ಹೋಗಬಹುದಿತ್ತು.

ಇನ್ನು ಮನುಷ್ಯನನ್ನು ನೋಡೋಣ. ವಿಕಾಸದ ಯಾವುದೋ ಗಳಿಗೆಯಲ್ಲಿ ಮನುಷ್ಯನ ಮಿದುಳಲ್ಲಿ ವಿಚಾರ ಶಕ್ತಿಗೆ ಪ್ರಾಧಾನ್ಯ ಬಂತು. ಊಹಾ ಮತ್ತು ಅಪೋಹಾ ವಿಧಾನದ ತತ್ತ್ವದಿಂದ ಮನುಷ್ಯ ತನ್ನ ಪರಿಸರವನ್ನು ಅರ್ಥಮಾಡಿಕೊಂಡ. ಪ್ರಕೃತಿಯ ಪ್ರಚೋದನೆಗಳಿಗೆ ಅಧೀನನಾಗಿ ಉಳಿಯದೆ ಪರಿಸರದ ಮೇಲೆ ಪ್ರಭುತ್ವ ಸ್ಥಾಪಿಸುವುದು ತರ್ಕದಿಂದ ಅವನಿಗೆ ಸಾಧ್ಯವಾಯಿತು. ಇದನ್ನೇ ನಾವು ಸಂಸ್ಕೃತಿ ಎನ್ನುವುದು. ಆದರೆ ಯಾವುದು ತನ್ನನ್ನು ಪ್ರಾಣಿಲೋಕದ ಪ್ರಭುವಾಗಿ ಮಾಡಿತೋ ಆ ವಿಚಾರಶಕ್ತಿಗೆ ಮನುಷ್ಯ ಬೆಲೆ ತೆರಬೇಕಾಯಿತು. ಮೆಲ್ಲ ಮೆಲ್ಲನೆ ಪ್ರಕೃತಿಯ ಆತ್ಮರಕ್ಷಕ ಮತ್ತು ಜಾತಿರಕ್ಷಕ ವಾಸನೆಗಳು ಅವನನ್ನು ಬಿಟ್ಟುಹೋದವು.

ಆದರೆ ಸಕಲ ಪ್ರಾಣಿಗಳಲ್ಲಿಯೂ ಕಾಮ, ಕ್ರೋಧ, ಸ್ಪರ್ಧೆ, ಮತ್ಸರಗಳು ಅವನಲ್ಲಿಯೂ ಬಲವಾಗಿಯೇ ಇದ್ದವು. ಬಲಾತ್ಕಾರ, ಮಾರಕವಾದ ಪ್ರತಿಹಿಂಸೆಗಳಿಗೆ ತಡೆಹಾಕುವ inhibitions ಮಾತ್ರ ಮಾಯವಾದವು. ಬುದ್ಧಿಬಲವನ್ನುಪಯೋಗಿಸಿ ತನ್ನ ಎದುರಾಳಿಯನ್ನು ಸೋಲಿಸಿದ ಮೇಲೆ ಎದುರಾಳಿಯನ್ನು ಕೊಲ್ಲಬಾರದೆಂದು ಅವನ ಪ್ರವೃತ್ತಿ ತಡೆಹಾಕಲಿಲ್ಲ. ಹೀಗೆ ಮನುಷ್ಯನು ಸ್ವಜಾತಿಯವರನ್ನು ಹೋರಾಟದಲ್ಲಿ ಕೊಲ್ಲುವ ಮತ್ತು ತಿನ್ನುವ ಅಪೂರ್ವ ಪಶುವಾದ. ಮನುಷ್ಯನ ಈ ಅಮಾನುಷ ಯುಗದ ಆಗುಹೋಗುಗಳ ಬಗ್ಗೆ ಪುರಾತತ್ವಶಾಸ್ತ್ರಿಗಳೂ ಮನುಷ್ಯಶಾಸ್ತ್ರಿಗಳೂ ಧಾರಾಳವಾದ ಪುರಾವೆಗಳನ್ನು ಅಗೆದು ತೆಗೆದಿದ್ದಾರೆ.

ಬಹುಶಃ ಈ ನಿಟ್ಟಿನಲ್ಲಿ ಮಾನವಜಾತಿಯಲ್ಲಿ ಮೌಲ್ಯಗಳು ಎಂದು ನಾವು ಕರೆಯುವ ಅಂಶಗಳು ಸಾವಕಾಶವಾಗಿ ತಲೆಯೆತ್ತಿರಬೇಕು ಮತ್ತು ಮಾನವಕುಲದ ತಲೆ ಕಾಯಲು ಸಹಾಯವಾಗಿರಬೇಕು. ಈ ಬದಲಾವಣೆಯನ್ನು ಹಂತಹಂತವಾಗಿ ಗುರುತಿಸುವುದಕ್ಕೆ ಇಲ್ಲಿ ಸಮಯ ಸಾಲದು. ಆದರೆ ಮಾನವಮಾತ್ರರು ಇಂದು ಸಾರ್ವತ್ರಿಕವಾಗಿ ಒಪ್ಪುವ ದಯೆ, ಶರಣಾಗತ ರಕ್ಷಣೆ, ಸ್ತ್ರೀ ದಾಕ್ಷಿಣ್ಯ ಮೊದಲಾದ ಮೌಲ್ಯಗಳಿಗೂ ಪ್ರಾಣಿಗಳಲ್ಲಿ ನಿಸರ್ಗವೇ ಇಟ್ಟ ನಿರೋಧ (inhibitions) ಗುಣಗಳಿಗೂ ಇರುವ ಸಾಮ್ಯವನ್ನು ನೋಡಿದರೆ ಮೌಲ್ಯ ಕಲ್ಪನೆಯಲ್ಲಿ ಮಾನವನ ಜೀವಶಾಸ್ತ್ರೀಯ ಉಳಿಗಾಲ (biological survival) ಮತ್ತು ಬೆಳೆಗಾಲ (successful propagation)ದ ಅಂಶಗಳೇ ಒಳಗೊಂಡಿವೆ ಎಂದು ಅರ್ಥವಾಗುತ್ತವೆ. ಅಲ್ಲೇ ಕಾನೂನಿನ ಉದಯ. ನ್ಯಾಯದ ಉದಯ. ಪ್ರಾಣಿಮಾತ್ರದಲ್ಲಿ ಹೋರಾಟಕ್ಕೆ ಮುಖ್ಯ ಕಾರಣವಾದದ್ದು ಕಾಮ ಪ್ರವೃತ್ತಿ. ಅದು ಮದ್ದಿನ ಮನೆ. ಅದರ ಅಪಾಯದ ಅಂಚಿನಿಂದ ತಪ್ಪಿಸಲು ವಿವಾಹದ ಉದಯವಾಯಿತು ಮತ್ತು ಪಾತಿವ್ರತ್ಯ ಎಂಬ ಮೌಲ್ಯದ ಉದಯವಾಯಿತು. ನಾವು ಮೌಲ್ಯಗಳೆಂದು ಕರೆಯುವ ಅನೇಕ ನೈತಿಕ ವಿಧಿಗಳು ನೇರವಾಗಿ ಮಾನವಕುಲದ survivalಗೆ ಸಂಬಂಧಿಸಿವೆ. ಆದರೆ ಕಲಾತ್ಮಕ ಮತ್ತು ಆಧ್ಯಾತ್ಮಿಕ ಮೌಲ್ಯಗಳಿಗೆ ಹೀಗೆ ಜೀವಶಾಸ್ತ್ರೀಯ ಬೆಲೆಯನ್ನು ಹೇಳುವುದು ಕಷ್ಟ. ಅವುಗಳ ಜೀವಶಾಸ್ತ್ರೀಯ ಬೆಲೆ ಸಾಮಾಜಿಕ ಮೌಲ್ಯಗಳಿಗಿಂತ ಗೂಢವೂ ಅಷ್ಟೇ ಗಾಢವೂ ಆಗಿರಬಹುದು. ಕಾಮ ಮತ್ತು ಮತ್ಸರಗಳೆಂಬ ಮದ್ದಿನ ಮನೆಗಳನ್ನು ತಣ್ಣಗಿಸುವುದಕ್ಕೆ ಅವು ಸಹಾಯವಾಗಿರಬಹುದು. ಸಂಗೀತ, ಕಲೆಗಳು ಕೊಡುವ ಬೇರೊಂದು ವಿಧವಾದ ಆನಂದವು ಪ್ರಳಯ ತಾಂಡವಕಾರಿಯಾದ ಕಾಮದಿಂದ ಚಿತ್ತವನ್ನು ವ್ಯಸ್ತಗೊಳಿಸುವುದರಿಂದ ನಿಸರ್ಗ ಅವುಗಳ ಬೆಳವಣಿಗೆಗೆ ಮನುಷ್ಯ ಜೀವನದಲ್ಲಿ ಸ್ಥಾನಕೊಟ್ಟಿರಬಹುದೆ? ಕಾಮತೃಪ್ತಿಯಲ್ಲಿ ದೊರೆಯುವ ಆನಂದವನ್ನು ಬ್ರಹ್ಮಾನಂದ ಸೋದರ ಎಂದೂ ಬ್ರಹ್ಮಾನಂದ ಕಾಮಾನಂದಕ್ಕಿಂತ ಸಾವಿರ ಪಾಲು ಹೆಚ್ಚು ಎಂದೂ ಉಪನಿಷತ್ತಿನಲ್ಲಿ ಹೇಳಿದ್ದು ಅರ್ಥಪೂರ್ಣವಾಗಿದೆ. ಅಧಿದೈವಿಕ ಅಧ್ಯಾತ್ಮಿಕ ಕಲ್ಪನೆಗಳು ಮತ್ತು ಮೌಲ್ಯಗಳು ಕೂಡ ಮನುಷ್ಯ ಜಾತಿಯ ಉಳಿಗಾಲಕ್ಕೆ ಅವಶ್ಯವಾಗಿರಬಹುದು. **Religion is the opium of the people** ಎಂದು ಹೇಳಿ ವಿಚಾರವನ್ನು ದೇವತ್ವಕ್ಕೆ ಏರಿಸಿದ ಕಾರ್ಲ್ ಮಾರ್ಕ್ಸ್‌ನ ಅನುಯಾಯಿ ಮತ್ತು ರಶಿಯನ್ ಕ್ರಾಂತಿಯ ನಾಯಕನೂ ಆದ ಲಿಯಾನ್ ಟ್ರಾಟ್ಸ್ಕಿ ಬರೆದ ರಶಿಯನ್ ಕ್ರಾಂತಿಯ ಚರಿತ್ರೆಯಲ್ಲಿ, ರಶಿಯದ ಹಳೆಯ ಝಾರ್ ಸತ್ತೆ spiritual ದಿವಾಳಿಗಿರಿಯಿಂದ ಬಳಲುತ್ತಿತ್ತೆಂದು ಹೇಳುತ್ತಾನೆ. Materialismನ ಅಧ್ವರ್ಯುವಾದ ಟ್ರಾಟ್ಸ್ಕಿ spiritualನ ಅವಶ್ಯತೆಯ ಮಾತಾಡುತ್ತಿದ್ದ. ರಶಿಯದ ಕ್ರಾಂತಿಕಾರರು ಬೈಬಲ್ಲಿನ ದೇವರನ್ನು ಪದಚ್ಯುತಗೊಳಿಸಿದರು. ಆ ಮೇಲೆ ಮಾರ್ಕ್ಸ್‌ನನ್ನೂ ಲೆನಿನ್ನನನ್ನೂ ದೇವರ ಪಟ್ಟಕ್ಕೇರಿಸಿದರು. ಅವರ ಬರವಣಿಗೆಗಳು ವೇದವಾದವು. ಮನುಷ್ಯನಿಗೆ ಒಂದಲ್ಲ ಒಂದು religion ಬೇಕೇಬೇಕೆಂದು ಇದು ತೋರಿಸುವುದಿಲ್ಲವೆ?

ನನ್ನ ತಾತ್ಪರ್ಯ ಇಷ್ಟೇ. ಆರ್ಥಿಕದಿಂದ ಧಾರ್ಮಿಕದವರೆಗೆ, ಕಲಾತ್ಮಕದಿಂದ ಆಧ್ಯಾತ್ಮಿಕದ ವರೆಗೆ ಎಲ್ಲಾ ಮಾನವ ಮೌಲ್ಯಗಳೂ ಜೀವನಮೌಲ್ಯಗಳೂ ಮಾನವಜಾತಿಯ ಉಳಿಗಾಲ ಮತ್ತು ಬೆಳೆಗಾಲ (survival and success)ಗಳಿಗೆ ಅವು ಉಪಷ್ಟಂಭಕಗಳಾಗಿವೆ. Instinctನ್ನು ಕಳೆದುಕೊಂಡದ್ದಕ್ಕೆ ಅವು ಪೂರಕಗಳಾಗಿವೆ. ಮೌಲ್ಯಗಳೆಂಬವು ಕಲಾತ್ಮಕ ಮತ್ತು ಆಧ್ಯಾತ್ಮಿಕವೇ ಆಗಿದ್ದರೂ ಅವು ಹೊಟ್ಟೆತುಂಬಿದ Romantic ಜನರ ಕನಸುಗಳಲ್ಲ. ಮೌಲ್ಯಗಳನ್ನು ಕಳೆದು ಹಾಕಿದರೆ ಮನುಷ್ಯ ಮನುಷ್ಯನಾಗಿ ಉಳಿಯುವುದಿಲ್ಲ, ಮಾತ್ರವಲ್ಲ ಮಾನವ ಜಾತಿಯೇ ಉಳಿಯ ಲಿಕ್ಕಿಲ್ಲ–ಎಂದು ತೋರುತ್ತದೆ. ಕೇವಲ ಇಂದ್ರಿಯ ಪ್ರವೃತ್ತಿಗಳಿಂದ ದೊರೆಯುವ ಸುಖದಿಂದ ತೃಪ್ತಿ ಹೊಂದದೆ ಮನುಷ್ಯ ಮೌಲ್ಯಗಳನ್ನು ಬೆಂಬತ್ತುವುದರಿಂದ ದೊರೆಯುವ ಹೆಚ್ಚಿನ ಸುಖದ ಕಡೆ ಒಲಿಯುತ್ತಾನೆ. ಒಂದು ಪರೋಪಕಾರದ ಕೆಲಸ, ಒಂದು ಕಲೆಯಲ್ಲಿ ಪರಿಣತಿ, ಒಂದು ಧಾರ್ಮಿಕ ಆಚರಣೆ ಇವುಗಳಿಗಾಗಿ ದುಡಿಯುತ್ತಾನೆ. ಆಗ ರಾಗದ್ವೇಷಗಳು ಕಡಿಮೆಯಾಗುತ್ತವೆ. ಸಮಾಜಕ್ಕೂ ಹಿತವಾಗುತ್ತದೆ.

ಹೀಗೆ ಮೌಲ್ಯಗಳ ಮಹತ್ತ್ವವನ್ನು biological function ಜೀವಶಾಸ್ತ್ರೀಯ ಅವಶ್ಯ ಕತೆಯೆಂದು ಹೇಳಬಹುದು. ಆದರೂ ಮೌಲ್ಯಗಳು ಬಹುಮಟ್ಟಿಗೆ ಪ್ರಕೃತಿ ಸಿದ್ಧವಾಗಿರದೆ ಅಭ್ಯಾಸದಿಂದ ಬರಬೇಕಾದವುಗಳೆಂದೂ ನಾವು ಅರಿತುಕೊಳ್ಳಬೇಕು. ಅವು ಎಷ್ಟೇ ಬಲವಾಗಿ ದ್ದರೂ ನಮ್ಮ ಸ್ವಭಾವದಲ್ಲಿ ಪ್ರಕೃತಿದತ್ತ ಪ್ರಚೋದನೆಗಳಷ್ಟು ಬಲವಾದವುಗಳಲ್ಲ. ಮಾತೃತ್ವ ಬಹು ಬಲವಾದ ಭಾವನೆಯೆಂದು ನಾವೆಲ್ಲ ಬಲ್ಲೆವು. 'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ' ಎಂದು ಶಂಕರಾಚಾರ್ಯರು ಅಪ್ಪಣೆ ಕೊಡಿಸಿದ್ದಾರೆ. ಆದರೂ ಕುಮಾರಿ ಮಾತೆಯರು ಮರುವಿಚಾರವಿಲ್ಲದೆ ಶಿಶುಹತ್ಯೆ ಮಾಡುವರು. ಮೌಲ್ಯಗಳ ಬಳಿ ಅಷ್ಟು ದುರ್ಬಲವಾದದ್ದು, ಅದನ್ನು ಜಾಗ್ರತೆಯಿಂದ ಕೃಷಿಮಾಡಬೇಕು, ಕಸಿಮಾಡಬೇಕು, ಕಳೆ ಕೀಳಬೇಕು. ತರಬೇತಿ ಯಿಂದ ಅದು ನಮ್ಮಲ್ಲಿ ಬೇರೂರಬೇಕು. ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುವ formative ವಯಸ್ಸಿನಲ್ಲೇ ಅವು ಅಭ್ಯಾಸವಾಗಬೇಕು. ಈ ವಯಸ್ಸಿನಲ್ಲಿ ಆಧುನಿಕ ಮಾನವನಂತೂ ಶಿಕ್ಷಣ ಸಂಸ್ಥೆಗಳಲ್ಲಿರುತ್ತಾನೆ. ಆದ್ದರಿಂದ ಮೌಲ್ಯಗಳು ಶಿಕ್ಷಣದ ವಿಷಯಗಳಾಗುತ್ತವೆ. ಜೀವ ನೋಪಾಯದ ಶಿಕ್ಷಣ ಅಗತ್ಯ ನಿಜ. ಆದರೆ ಅದು ತಾಯಿ ಹುಲಿ ಮರಿಗೆ ಬೇಟೆಯಾಡುವುದಕ್ಕೆ ಕೊಡುವ ಶಿಕ್ಷಣದ ಮಟ್ಟದ್ದೇ. ನಿಜವಾದ ಶಿಕ್ಷಣ ಎಂದರೆ ಮೌಲ್ಯ ಶಿಕ್ಷಣವೇ. ಜೀವನ ಮೌಲ್ಯಗಳ ಪ್ರತಿಪಾದನೆ, ವಿಶದೀಕರಣ, ವಿಮರ್ಶೆ, ಪುನರ್ವಿಚಾರ ಇವೆಲ್ಲ ಶಿಕ್ಷಣದಲ್ಲಿ ಸ್ಥಾನ ಪಡೆಯುತ್ತವೆ. ಸತ್ಯ, ಕ್ಷಮೆ, ದಯೆ, ನ್ಯಾಯಾನ್ಯಾಯ ವಿವೇಕ ಇವೇ ಮೊದಲಾದ ಮೂಲ ಜೀವನ ಮೌಲ್ಯಗಳು ಮಗು ಶಾಲೆಗೆ ಬರುವ ಮೊದಲೇ ಅದರ ಮನಸ್ಸಿನಲ್ಲಿ ದೃಢಗೊಳ್ಳಬೇಕಾದವು ಎಂಬುದು ನಿಜ. ಆದರೆ ಅನೇಕ ನೈತಿಕ ಸಾಮಾಜಿಕ ರಾಜಕೀಯ ಮೌಲ್ಯಗಳನ್ನು ಶಿಕ್ಷಣ ಮೂಲಕವಾಗಿಯೇ ರೂಪಿಸಬೇಕಾಗುವುದು. ಕಲಾ ಮೌಲ್ಯಗಳ ಪರಿಷ್ಕರಣವಂತೂ ಶಿಕ್ಷಣದ ಉನ್ನತವಾದ ಕೆಲಸ. ಆಧ್ಯಾತ್ಮಿಕ ಮೌಲ್ಯಗಳ ವಿಷಯ ನಾನು ಧೈರ್ಯವಾಗಿ ಹೇಳಲಾರೆ. ಅದು ಅತ್ಯಂತ ಸ್ವಕೀಯ, personal ಅನುಭವಕೋಟಿಯದು.

ದುರ್ದೈವದಿಂದ ಜೀವನ ಮೌಲ್ಯಗಳು ಇಂದಿನ ಶಿಕ್ಷಣ ಪದ್ಧತಿಯಲ್ಲಿ ಮಹತ್ವ ಪಡೆದಿಲ್ಲ. ದೇಶದಲ್ಲಿ ಇಂದು ಉಸಿರುಕಟ್ಟಿಸುವ ವೇಗದಲ್ಲಿ ಸಾಮಾಜಿಕ ಬದಲಾವಣೆಗಳಾಗುತ್ತಿವೆ. ನಿನ್ನೆ ಮೊನ್ನೆಯವರೆಗೆ ಕೆಲ ಮೂಲಭೂತ ಮೌಲ್ಯಗಳ ಪರಿಚಯ ಮಾತ್ರ ಇದ್ದ ವರ್ಗಗಳು ಇಂದು ರಾಷ್ಟ್ರದ ಆಗುಹೋಗುಗಳಲ್ಲಿ ಮಹತ್ವದ ಸ್ಥಾನಕ್ಕೆ ಮೇಲೇರುತ್ತಿವೆ. ಈ ಆಕಾರವಿಲ್ಲದ ಮಾನವ ಪದಾರ್ಥ ಅದರ ಒಂದು ದೊಡ್ಡ ಭಾಗ. ನಮ್ಮ ಶಿಕ್ಷಣ ಸಂಸ್ಥೆಗಳ ಮೂಲಕ ಹಾಯ್ದು ಹೋಗು ತ್ತಿದೆ. ಅದಕ್ಕೆ ಮೌಲ್ಯಗಳ ತಳಹದಿಯಲ್ಲಿ ಆಕಾರ ಕೊಡುವುದು ಶಿಕ್ಷಣದ ಕೆಲಸವಾಗಿದೆ. ಈ

ಜನರು ಶಿಕ್ಷಣದಿಂದ ಯಾವ ಮೌಲ್ಯಾಕಾರವನ್ನೂ ಹೊಂದದೆ ಹೊರಬಿದ್ದಲ್ಲಿ ಇಡೀ ರಾಷ್ಟ್ರದ ಅಸ್ತಿತ್ವಕ್ಕೆ ಗಂಡಾಂತರ ಪ್ರಾಯವಾಗಬಹುದು. ಯಾಕೆಂದರೆ ಶಿಕ್ಷಣದ ಮತ್ತು ನಗರ ಜೀವನದ ಪರಿಸರದಲ್ಲಿ ಆ ಜನವರ್ಗಗಳು ತಮ್ಮಲ್ಲಿದ್ದ ಅನಾದಿ ಜೀವನ ಮೌಲ್ಯಗಳನ್ನು ಕಳೆದುಕೊಳ್ಳುತ್ತವೆ. ಉತ್ತರಭಾರತದ ವಿಶ್ವವಿದ್ಯಾಲಯಗಳ ಗಲಭೆಗಳನ್ನು ಪರಿಶೀಲಿಸಿ ವಿದೇಶೀಯನೊಬ್ಬ ಎನ್‌ಕೌಂಟರ್ ಪತ್ರಿಕೆಯಲ್ಲಿ ಒಂದು ಲೇಖನ ಬರೆದಿದ್ದ. ಅದರಲ್ಲಿ ಆತ ಹಳ್ಳಿಗಾಡಿನಿಂದ ಬಂದ ವಿದ್ಯಾರ್ಥಿಗಳೇ, ಅಧಿಕತರವಾಗಿ, ಗಲಭೆಗಳ ಮುಂಚೂಣಿಯಲ್ಲಿರುತ್ತಾರೆ ಎಂದು ಹೇಳಿದ್ದಾನೆ. ತಕ್ಕ ಮೌಲ್ಯ ತರಬೇತಿಯಾಗದೆ ಇದ್ದರೆ ನಮ್ಮ ಪುರಾತನರು ಹೇಳಿದ ಹಾಗೆ 'ಸಾಕ್ಷರೋ ರಾಕ್ಷಸೋ ಭವೇತ್' ಅಕ್ಷರ ಬಂದ ಮಂದಿ ರಾಕ್ಷಸರೇ ಆಗುತ್ತಾರೆ ಎಂಬುದು ಸತ್ಯವಾಗುತ್ತದೆ. ಹಳೇ ಮೌಲ್ಯಗಳನ್ನು ಕಳೆದುಕೊಂಡವರಿಗೆ ಹೊಸ ಮೌಲ್ಯಗಳನ್ನು ಕೊಡದೆ ಮುಂದೆ ಕಳಿಸಿದ್ದಕ್ಕೆ ಇದು ದೇಶಕ್ಕೆ ಆಗುವ ಶಿಕ್ಷೆ. ಬುದ್ಧಿ ಬಲಿತು ಮೌಲ್ಯಕಲ್ಪನೆ ಇನ್ನೂ ಹುಟ್ಟದಿದ್ದ ಕಾಲದಲ್ಲಿ ಮನುಷ್ಯ ಮನುಷ್ಯನನ್ನು ಕೊಲ್ಲುವ ಅಸ್ವಾಭಾವಿಕ ಪ್ರಾಣಿಯಾದದ್ದನ್ನು ಹಿಂದೆ ನಾನು ಹೇಳಿದ್ದೇನೆ. ಆ ಸ್ಥಿತಿ ಈಗ ಪುನಃ ನಮ್ಮ ದೇಶದಲ್ಲಂತೂ ಇನ್ನೊಮ್ಮೆ ಉಂಟಾಗುತ್ತಿದೆ.

ಮೌಲ್ಯ ದೃಷ್ಟಿಯಿಂದ ನಿರಾಕಾರವಾದ ಈ ಮಾನವ ಸಾಮಗ್ರಿಗೆ ಮೌಲ್ಯಕಾರವನ್ನು ಕೊಡುವುದು ಒಂದು ಶಿಕ್ಷಣ ಸಮಸ್ಯೆಯಾಗಿದ್ದರೆ, ಮೌಲ್ಯಗಳ ಪುನರ್ವಿಚಾರ ಮಾಡುವುದು ಇನ್ನೊಂದು ಪ್ರಶ್ನೆಯಾಗಿದೆ. ಒಂದು ಕಾಲದಲ್ಲಿ ಅತ್ಯಂತ ಹಿತಕರವಾದ ಮೌಲ್ಯಗಳು ಕಾಲಕ್ಕೆ ಭಾರಮಾತ್ರವಾಗಿ ಪರಿಣಮಿಸಬಹುದು. ನನ್ನ ತರುಣ ತತ್ವಜ್ಞಾನಿ ಮಿತ್ರನೊಬ್ಬನ ಹತ್ತಿರ ಮೌಲ್ಯಗಳ ಬಗ್ಗೆ ಮಾತಾಡುತ್ತಿದ್ದೆ. ಆತ ತನ್ನ ಒಂದು ಅನುಭವವನ್ನು ಹೇಳಿದ. ಲಾರೆನ್ಸ್ ಆಫ್ ಅರೇಬಿಯಾ ಚಿತ್ರಕ್ಕೆ ಆತ ಹೋಗಿದ್ದ. ಅದರ ಒಂದು ದೃಶ್ಯದಲ್ಲಿ ಲಾರೆನ್ಸ್ ತನ್ನ ಇಬ್ಬರು ಅರಬ ಸಂಗಡಿಗರೊಡನೆ ಮರಳು ಗಾಡಿನಲ್ಲಿ ಹೋಗುತ್ತಿದ್ದಾನೆ. ಒಮ್ಮೆಲೇ ಅವನ ಒಬ್ಬ ಸಂಗಡಿಗ ಮರಳು ಕಾಡುಗಳಲ್ಲಿ ಇರುವ ಮರಳಿನ ಮಡುವಿನಲ್ಲಿ (quick sand) ಕಾಲಿಟ್ಟು ಸಿಕ್ಕಿಕೊಳ್ಳುತ್ತಾನೆ. ಮರಳಿನಲ್ಲಿ ಆತ ಮುಳುಗುತ್ತಿರುವುದನ್ನು ಕಂಡು ಇನ್ನೊಬ್ಬ ಸಂಗಡಿಗ ಅವನ ಸಹಾಯಕ್ಕೆಂದು ಧಾವಿಸುತ್ತಾನೆ. ಲಾರೆನ್ಸ್ ಆತನನ್ನು ತಡೆದು ನಿಲ್ಲಿಸುತ್ತಾನೆ. ನನ್ನ ಮಿತ್ರನನ್ನು ಮರಳಿನ ಸುಳಿ ನುಂಗುತ್ತಿದೆಯಲ್ಲಾ ಎಂದಾತ ಹೇಳಿದರೆ ಲಾರೆನ್ಸ್, ಹೌದು, ನೀನು ಅವನನ್ನು ಹೊರಗೆಳೆಯುವುದಕ್ಕೆ ಅವನ ಹತ್ತಿರ ಹೋದರೆ ಅದು ನಿನ್ನನ್ನೂ ಎಳೆದುಕೊಳ್ಳುತ್ತದೆ. ನೀನೂ ಹೋಗುತ್ತೀ ಹೊರತು ಅವನನ್ನು ಹೊರಗೆಳೆಯುವುದಕ್ಕೆ ಸಾಧ್ಯವಾಗದು. ಹೋಗಬೇಡ ಎಂದು ಉಪದೇಶಿಸಿ ಅವನನ್ನು ಬಲವಂತದಿಂದ ಎಳೆದುಕೊಂಡು ಮುಂದೆ ಹೋಗುತ್ತಾನೆ. "ಮಿತ್ರನನ್ನು ಉಳಿಸುವುದಕ್ಕೆ ಮಿತ್ರ ಪ್ರಾಣ ಬಲಿಕೊಡಲಿಕ್ಕೆ ಹೋಗುವ ಉದಾತ್ತ ಮೌಲ್ಯದ ಆಚರಣೆಗೆ ಹೊರಟವನನ್ನು ಲಾರೆನ್ಸ್ ನಿಷ್ಕರುಣನಾಗಿ ತಡೆದದ್ದು ನನಗೆ ಹೇಸಿಗೆ ತಂದಿತು" ಎಂದು ನನ್ನ ಮಿತ್ರ ಹೇಳಿದ. ಆದರೆ ಮಿತ್ರನಿಗಾಗಿ ಜೀವಕೊಡುವುದು ಹಿಂದಿನ ಕಾಲದಲ್ಲಿ ಗೌರವಾರ್ಹ ಮೌಲ್ಯವಾಗಿತ್ತು. ಕೆ.ವಿ. ಅಯ್ಯರರ ಶಾಂತಲಾ ಕಾದಂಬರಿಯಲ್ಲಿ ಸ್ವಾಮಿ ಸತ್ತೊಡನೆ ತಾವೂ ಸಾಯುವುದಕ್ಕೆ ಪಣತೊಟ್ಟ ಗರುಡರ ಉದಾಹರಣೆಗಳು ಬರುತ್ತವೆ. ಓದುವಾಗ ಅದು ಆಹಾ! ಅನಿಸುತ್ತದೆ. ಆದರೆ ವ್ಯರ್ಥವಾಗಿ ಜೀವ ಕೊಡುವುದರಲ್ಲಿ ಏನು ಪುರುಷಾರ್ಥ? ಓಬೀರಾಯನ ಕಾಲದ ಈ ಮೌಲ್ಯವನ್ನು ತ್ಯಜಿಸಿದ್ದರಿಂದ ಯುರೋಪಿಯನ್ನರು ಜೀವನದಲ್ಲಿ ಹೆಚ್ಚು ಯಶಸ್ವಿಗಳಾದದ್ದು ಕಾಣಿಸುತ್ತದೆ. ಅದೇ ಚಲಚ್ಚಿತ್ರದಲ್ಲಿ ಲಾರೆನ್ಸ್ ದೂರದಲ್ಲಿ ನಿಂತು ಹಗ್ಗ ಒಗೆದು ಮರಳಿನ ಸುಳಿಯಲ್ಲಿ ಸಿಕ್ಕಿದವನನ್ನು ರಕ್ಷಿಸುವುದಕ್ಕೆ ಹೆಚ್ಚು ವಿಚಾರಪೂರ್ಣ ಪ್ರಯತ್ನವನ್ನೂ ಮಾಡುತ್ತಾನೆ. ಗರುಡ ಹೋಗುವ ಮೌಲ್ಯಕ್ಕಿಂತ ಜೀವಂತ ಉಳಿವೆ ಕಷ್ಟದಲ್ಲಿರುವವರನ್ನು ಕಾಪಾಡುವುದಕ್ಕೆ ಯತ್ನಿಸುವ ಚಿತ್ತಸ್ಥೈರ್ಯವನ್ನು ಕೊಡುವ ಮೌಲ್ಯ survival ದೃಷ್ಟಿಯಿಂದ ಹೆಚ್ಚು ಬೆಲೆಬಾಳುವಂಥಾದ್ದಲ್ಲವೆ?

ಸರ್ವಜ್ಞನ 'ಅಡಿಯ ಮುಂದಿಡೆ ಸ್ವರ್ಗ ಅಡಿಯ ಹಿಂದಿಡೆ ನರಕ' ಎಂಬ ಉದಾತ್ತ ಮೌಲ್ಯವೂ ಪುನರ್ವಿಚಾರಿಸಬೇಕಾದ್ದೇ. ಕೈ ಕೈ ಯುದ್ಧದ ಕಾಲದಲ್ಲಿ ಬೆಳೆಬಾಳುತ್ತಿದ್ದ ಈ ಮೌಲ್ಯ ವೇಗವಾದ ವಾಹನ, ದೂರದಿಂದ ಘಾತಿಸುವ ಆಯುಧಗಳ ಕಾಲದಲ್ಲಿ ಅರ್ಥವನ್ನು ಕಳೆದುಕೊಂಡಿತು. ಯೂರೋಪಿಯನ್ನರೂ ಮುಸ್ಲಿಮರೂ 'ಅಡಿಯ ಹಿಂದಿಡೆ ನರಕ' ಎಂಬ ಮೌಲ್ಯವನ್ನು ನೂರಾರು ವರ್ಷಗಳ ಹಿಂದೆ ತ್ಯಜಿಸಿ ಮುನ್ನಡೆ ಹಿನ್ನಡೆಗಳ ಹೊಸ ಮಿಲಿಟರಿ ಮೌಲ್ಯಗಳನ್ನು ಕಲ್ಪಿಸಿಕೊಂಡದ್ದರಿಂದ ಅವರು ಮಾನವ ಜೀವಗಳನ್ನೂ ಉಳಿಸಿದರು. ಹೆಚ್ಚು ಯುದ್ಧಗಳನ್ನೂ ಗೆದ್ದರು. ನಾವು 'ಅಡಿಯ ಹಿಂದಿಡೆ ನರಕದ' ಮೌಲ್ಯವನ್ನು ನಚ್ಚಿ ಎಷ್ಟೋ ಯುದ್ಧಗಳಲ್ಲಿ ಸೋತೆವು. 1962ರಲ್ಲಿ ಕೂಡ ಈ ಅಡಿಯ ಹಿಂದಿಡೆ ನರಕಕ್ಕೆ ಹೋಗಲೆಂದು ಹೆದರಿಯೇ ಹಿಮಾಲಯದಲ್ಲಿ ನಾವು ಅವಮಾನಕರವಾದ ಸೋಲನ್ನು ಕಂಡೆವೆಂದು ತೋರುತ್ತದೆ.

ಮಾತೃದೇವೋಭವ, ಪಿತೃದೇವೋಭವ ಮತ್ತು ಆಚಾರ್ಯದೇವೋಭವ ಎಂಬ ಮೌಲ್ಯಗಳ ಪುನರ್ವಿಚಾರವೂ ಬೇಕಾಗಿದೆ. ದಯವಿಟ್ಟು ನನ್ನನ್ನು ತಪ್ಪುತಿಳಿದುಕೊಳ್ಳಬಾರದು. ಚಿಕ್ಕ ಚಿಕ್ಕ ಕುಟುಂಬ ಘಟಕಗಳೂ ದೂರದೂರದ ಗುರುಕುಲಗಳೂ ಇದ್ದಾಗ ಈ ಮೌಲ್ಯಕ್ಕೆ ಅರ್ಥವಿತ್ತು. ಈಗ ಅದು ನಿರರ್ಥಕ ಭಾರವಾಗಿದೆ. ಪ್ರತಿಯೊಂದಕ್ಕೂ ತಂದೆ ತಾಯಿ ಗುರುಗಳ ಮುಖ ನೋಡುವುದಕ್ಕೆ ಈ ಮೌಲ್ಯಗಳು ಕಾರಣವಾಗಿವೆ. ೧೫–೧೬ರ ಯೂರೋಪಿಯನ್ ಯುವಕ ಬರಿಗೈಯಲ್ಲಿ ಆಸ್ಟ್ರೇಲಿಯಾಕ್ಕೆ ಹೋಗಿ ತನ್ನ ಭವಿಷ್ಯವನ್ನು ಹುಡುಕಲು ಯತ್ನಿಸುತ್ತಾನೆ. ತಂದೆ ತಾಯಿಗಳು ಆಶೀರ್ವದಿಸುತ್ತಾರೆ. ನಾವು ನಲವತ್ತಾದರೂ ತಂದೆ ತಾಯಿಗಳನ್ನು ಕೇಳದೆ ಏನೂ ಮಾಡಲು ಧೈರ್ಯಪಡುವುದಿಲ್ಲ. ಯೂರೋಪಿಯನ್ ಮನುಷ್ಯ ಹೆಚ್ಚು ಯಶಸ್ವಿಯಾದದ್ದು ಏನಾಶ್ಚರ್ಯ? ನಾನೂ ಒಬ್ಬ ತಂದೆ. ಆದರೂ ಈ ಮೌಲ್ಯ ಹೋಗಬೇಕೆನ್ನುತ್ತೇನೆ. ಮಕ್ಕಳನ್ನು ಸಾಕುವಾಗ ಉಂಟಾಗುವ ಆನಂದವೇ ಅವುಗಳನ್ನು ಸಾಕಿದ್ದರ ಸಾರ್ಥಕ್ಯ ಎಂಬುದಾಗಿ ಶಿವರಾಮ ಕಾರಂತರು ಹೇಳುತ್ತಾರೆ. ಮುಂದೆ ಮಕ್ಕಳು ನಮ್ಮ ಸೆರಗಿಗೆ ಅಂಟಿಕೊಂಡಿರಬೇಕೆಂದು ಅಪೇಕ್ಷಿಸಬಾರದು. ಈ ಹೊಸ ಮೌಲ್ಯವು ತನ್ನ ಮುಪ್ಪನ್ನು ತೆಗೆದುಕೊಳ್ಳಲು ಒಪ್ಪದ ಮಕ್ಕಳಿಗೆ ಶಾಪಕೊಟ್ಟ ಯಯಾತಿಯ ಮೌಲ್ಯಕ್ಕಿಂತ ಹಿರಿದೆಂದು ತೋರುವುದಲ್ಲವೆ? ಇಂದಿನ ಭಾರತದಲ್ಲಿರುವ ನೆಪಾಟಿಸಂ ಮೊದಲಾದ ದುರ್ವ್ಯಾಪಾರಗಳನ್ನು ನಾವೆಲ್ಲ ಖಂಡಿಸುತ್ತೇವೆ. ಮಿತಿಮೀರಿದ ಕುಟುಂಬವಾತ್ಸಲ್ಯವೆ ಈ ದುರ್ವ್ಯಾಪಾರಕ್ಕೆ ಕಾರಣ. ಮಾತೃದೇವೋಭವ ಮೊದಲಾದ ಮೌಲ್ಯಗಳು ಸಂಕುಚಿತ ಕುಟುಂಬ ಭಾವವನ್ನು ಬಲಪಡಿಸುವ ಸಾಧನಗಳಾಗಿವೆ. ಮಾತೃದೇವೋಭವವನ್ನು ಇಟ್ಟುಕೊಂಡು ನೆಪಾಟಿಸಂ ಹೋಗಲಾಡಿಸುವುದು ಸಾಧ್ಯವಾಗಲಿಕ್ಕಿಲ್ಲ.

ಇಂಥಾ ಕಾಲ ವಿರುದ್ಧ ಮೌಲ್ಯಗಳನ್ನು ಚರ್ಚಿಸಿ ವಿದ್ಯಾರ್ಥಿಗಳ ಮನಸ್ಸು ಗಟ್ಟಿಗೊಳ್ಳುವ ಮೊದಲೇ ಆ ಮೌಲ್ಯಗಳ ಅತಿಯಾದ ಹಿಡಿತದಿಂದ ಅವರನ್ನು ಪಾರುಗಾಣಿಸುವುದು ಶಿಕ್ಷಣದ ಕಾರ್ಯವೆಂದು ನನಗೆ ತೋರುತ್ತದೆ.

ಭಾರವಾದ ಮೌಲ್ಯಗಳ ವಿಚಾರ ಇಲ್ಲಿಗೆ ಬಿಡೋಣ. ಕೆಲ ಮಹತ್ವದ ಮೌಲ್ಯಗಳ ಅಭಾವದಿಂದ ಭಾರತೀಯರು ಬಳಲುತ್ತಿರುವುದನ್ನೂ ಹೇಳಬೇಕು. ಬುದ್ಧನ ದೇಶದವರಾದ ನಾವು ಸಾಮಾನ್ಯವಾಗಿ ಪ್ರಾಣಿಗಳ ಮತ್ತು ಮನುಷ್ಯರ ಯಾತನೆಗಳಿಗೆ ಕರಗುವ ಶ್ರೇಷ್ಠ ಮೌಲ್ಯವನ್ನು ಮರೆತೇ ಬಿಟ್ಟಿದ್ದೇವೆ. ನಮ್ಮಲ್ಲಿ ವಿಶೇಷವಾಗಿ ಕೊರತೆಯಾಗಿರುವ ಇನ್ನೊಂದು ಮೌಲ್ಯ ನೈತಿಕ ಧೈರ್ಯದ ಅಭಾವ. ನೀರದ ಚೌಧುರಿಯವರು Hindu Mind ಎಂಬ ಸುತ್ತಲೂ ಲತ್ತೆ ಕೊಡುವ ಒಂದು ಪುಸ್ತಕ ಬರೆದಿದ್ದಾರೆ. ಅದರಲ್ಲಿ ಮುಸಲ್ಮಾನರಿಗಿಂತ ಹಿಂದುಗಳಿಗೆ ನೈತಿಕ

ಧೈರ್ಯ ಕಡಿಮೆಯಾಗಿದೆ ಎಂದು ಹೇಳಿ ವಿದೇಶೀಯರಿಗೆ ಹಿಂದುಗಳಿಗಿಂತ ಮುಸಲ್ಮಾನರು ಹೆಚ್ಚು ಮೆಚ್ಚಿಕೆಯಾಗುವುದಕ್ಕೆ ಇದೊಂದು ಕಾರಣ ಎನ್ನುತ್ತಾರೆ. ಮಹಾರಾಷ್ಟ್ರದ ಪ್ರಗತಿಶೀಲ ಮುಸ್ಲಿಂ ಬುದ್ಧಿಜೀವಿ ಹಮೀದ ದಲವಾಯಿಯವರೂ ಹಿಂದೂಗಳಲ್ಲಿ ನೈತಿಕ ಧೈರ್ಯವಿಲ್ಲದ್ದರಿಂದ ಪ್ರತಿಗಾಮಿ ಮುಸ್ಲಿಮರು ರಾಜಕಾರಣದಲ್ಲಿ ಮೆರೆಯುತ್ತಿದ್ದಾರೆ ಎನ್ನುತ್ತಾರೆ. ವಾಸ್ತವಿಕವಾಗಿ ನಮ್ಮಲ್ಲಿ ಶೌರ್ಯಕ್ಕೆ ಕೊರತೆಯಿಲ್ಲ. ಸಾಯುವುದಕ್ಕೆ ನಾವೆಲ್ಲ ಸಿದ್ಧರೇ. ಆದರೆ ಧೈರ್ಯದ್ದೇ ಕೊರತೆ. ಅಪಾಯದ ಎದುರಲ್ಲಿ ಪಕ್ಕನೆ ನಿರಾಶರಾಗದಿರುವುದೇ ಧೈರ್ಯ. ಶೌರ್ಯವಿದ್ದರೂ ಧೈರ್ಯದ ಅಭಾವದಿಂದ ನಾವು ಸೋತ ಯುದ್ಧಗಳೆಷ್ಟೋ, ಸೋತ ಕ್ರಿಕೆಟ್ ಆಟಗಳೆಷ್ಟೋ.

ಮೌಲ್ಯಗಳ ರಕ್ಷಣೆ, ಪೋಷಣೆ, ನವಮೌಲ್ಯಗಳ ಪ್ರತಿಪಾದನೆ, ನಿರರ್ಥಕ ಮೌಲ್ಯಗಳ ನಿರಸನ ಮೊದಲಾದ ಇವೆಲ್ಲಾ ಶಿಕ್ಷಣದ ಕೆಲಸಗಳಾಗಬೇಕು ಎಂದು ಹೇಳಿದ ಮೇಲೆ ಈಗೇನಾಗುತ್ತಿದೆ ಎಂದು ಕೇಳಿದರೆ ನಿರಾಶಾದಾಯಕ ಸಂಗತಿಗಳು ಕಣ್ಣಿಗೆ ಬೀಳುತ್ತವೆ. ನಮ್ಮ ಶಿಕ್ಷಣ ಸಂಸ್ಥೆಗಳು ಯಾವ ಮೌಲ್ಯಗಳನ್ನು ಸಾಧಿಸಬೇಕೋ ಆ ಮೌಲ್ಯಗಳು ಸ್ವತಃ ಶಿಕ್ಷಣಸಂಸ್ಥೆಗಳಲ್ಲಿ ಉಂಟೇ? ಎಲ್ಲಾ ಮೌಲ್ಯಗಳ ಪ್ರಯೋಜನ ಒಂದು ಮನಸ್ಸಮಾಧಾನ, ಒಂದು ಅಲೌಕಿಕ ತೃಪ್ತಿ ಎಂದು ಹೇಳಿದ್ದೇನೆ. ಹಾಗೆಯೆ ಎಲ್ಲಾ ಮೌಲ್ಯಗಳ ತಾಯಿ ಪ್ರಾಮಾಣಿಕತೆ. ಮಾಡುವ ಕೆಲಸವನ್ನು ಸಾಧ್ಯವಿದ್ದಷ್ಟು ಪರಿಪೂರ್ಣವಾಗಿ ಮಾಡುವುದೇ ಪ್ರಾಮಾಣಿಕತೆ. ಆದರೆ ಶಾಲೆಯಿಂದ ಹಿಡಿದು ವಿಶ್ವವಿದ್ಯಾಲಯಗಳವರೆಗೆ ವಿಷಯಜ್ಞಾನಕ್ಕಿಂತ ಮಾರ್ಕು ಗಿಟ್ಟಿಸುವುದಕ್ಕೆ, ಜ್ಞಾನಕ್ಕಿಂತ ಡಿಗ್ರಿಗೆ ಮಹತ್ವ ಕೊಡುವಾಗ ಮೌಲ್ಯ ಎಲ್ಲಿ ಸಿಕ್ಕೀತು? ಪರೀಕ್ಷೆಗೆ ಅದೇನು ಬರುವುದಿಲ್ಲವೋ ಯಾಕೆ ಓದಿ ತಲೆಕೆಡಿಸಿಕೊಳ್ಳುತ್ತೀ ಎನ್ನುವ ಗುರುಗಳೂ ನೋಟ್ಸು ಕೊಟ್ಟುಬಿಡಿ ಎಂಬ ಶಿಷ್ಯರೂ ಫಲಿತಾಂಶ ಕಡಿಮೆಯಾದರೆ ಗ್ರೇಸ್ ಮಾರ್ಕು ಕೊಟ್ಟು ಪರ್ಸೆಂಟೇಜು ಹೆಚ್ಚಿಸಿರಿ ಎನ್ನುವ ವಿಶ್ವವಿದ್ಯಾಲಯಗಳೂ ಎಂಥಾ ಮೌಲ್ಯಗಳನ್ನು ಸಾಧಿಸಬಲ್ಲವು? ಶಿಕ್ಷಣ ಇಂದು ವಿದ್ಯಾರ್ಜನೆಯ ಪ್ರಶ್ನೆಯಾಗಿಲ್ಲ. ಎಂಜಿನಿಯರಿಂಗ್ ಸಮಸ್ಯೆಯಾಗಿದೆ. ಆದಷ್ಟು ಕಡಿಮೆ ಶ್ರಮ ವ್ಯಯದಿಂದ ಆದಷ್ಟು ಹೆಚ್ಚು ಕೆಲಸ ಮಾಡಿಸುವುದು ಎಂಜಿನಿಯರಿಂಗ್ ಉದ್ದೇಶ. ಆದಷ್ಟು ಕಡಿಮೆ ಓದಿ ಆದಷ್ಟು ಹೆಚ್ಚು ಮಾರ್ಕು ಹೊಂದುವುದು ಶಿಕ್ಷಣದ ಗುರಿಯೆಂದು ನಾವು ತಿಳಿದುಕೊಂಡಿದ್ದೇವೆ.

ನಾವೆಲ್ಲರೂ ಪರಿಸ್ಥಿತಿಗಳ ದಾಸರು. ಕಾಲವೇ ಹಾಗಾಗಿ ಬಿಟ್ಟಿದೆ, ಎಂಬ ಉತ್ತರ ಬರುತ್ತದೆಂದು ನಾನು ಬಲ್ಲೆ. ಆದರೆ ಪರಿಸ್ಥಿತಿಗಳ ದಾಸ್ಯದಿಂದ ಮುಕ್ತರಾಗಲು ಮೌಲ್ಯಗಳೇ ಬೇಕಲ್ಲವೆ? ಶಾಲೆ ಕಾಲೇಜುಗಳನ್ನು ಬಾಯಿಪಾಠದ ವಾತಾವರಣದಿಂದ ಮುಕ್ತಗೊಳಿಸಿ ಮುಕ್ತ ಚರ್ಚೆ, ಸಾಧನೆ, performance ತಳಹದಿಯ ಮೇಲೆ ನಿಲ್ಲಿಸಿದರೆ ಮೌಲ್ಯಗಳ ಬೆಳವಣಿಗೆಗೆ ಸಹಾಯವಾಗಲಾರವೆ? ಈಗಿಗಿಂತ ಒಳ್ಳೇ ಪಠ್ಯಪುಸ್ತಕಗಳು ನೆರವಾಗಲಾರವೇ? ಪರೀಕ್ಷೆಗಳ ಬದಲು ನಿತ್ಯಾಭ್ಯಾಸದ ಮೇಲೆ ವಿದ್ಯಾರ್ಥಿಯ ಯೋಗ್ಯತೆಯನ್ನು ನಿರ್ಧರಿಸುವ ಅಮೇರಿಕದ ಪದ್ಧತಿಯನ್ನು ತರಲಾಗದೆ? ಈ ಬಗೆಯ ಪ್ರಯೋಗಗಳು ಆಗಿಲ್ಲವೆಂದಲ್ಲ. ಆದರೆ ಒಂದು ವರ್ಷ ಕೂಡ ಆ ಪ್ರಯೋಗಗಳನ್ನು ಪ್ರಾಮಾಣಿಕವಾಗಿ ಪೂರೈಸದೆ ಮತ್ತೆ ಹಳೇ ಕಂಬಿಗೇ ನಮ್ಮ ರೈಲು ಬಂದು ಕೂಡುವಂತೆ ಮಾಡುತ್ತೇವೆ. ಶಿಕ್ಷಣ ಕ್ಷೇತ್ರಕ್ಕೆ ಈಗಿಗಿಂತ ಹೆಚ್ಚು ಜನ ಪ್ರಥಮ ವರ್ಗದ ಜನರನ್ನು ತರಬೇಕು. ಆದರೂ ಪ್ರಥಮ ವರ್ಗದ ಮಾನವ ಸಾಮಗ್ರಿ ವಿದೇಶಗಳಿಗೆ ರಫ್ತಾಗುತ್ತಿದೆ. ನಮ್ಮ ಜನರ ಬುದ್ಧಿ ಮಟ್ಟ ಬೇರಾವ ದೇಶಕ್ಕಿಂತ ಕೆಳಗಿಲ್ಲ. ಈ ದೇಶ ಬಿಟ್ಟು ಹೋದ ಹತ್ತು ವರ್ಷಗಳೊಳಗೆ ಅದು ನೋಬೆಲ್ ಬಹುಮಾನ ತರಲು ಸಮರ್ಥವಾಗುತ್ತದೆ. ಆದರೆ ಪ್ರಾಮಾಣಿಕತೆಯ ಅಭಾವದ ವಾತಾವರಣದಲ್ಲಿ ಅದು ಈ ದೇಶದಲ್ಲಿ ಅರಳದೆ ಹೋಗುತ್ತದೆ. ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ನಿರ್ಭಯ ವಾತಾವರಣವಿಲ್ಲ. ಮೌಲ್ಯಗಳ ಬೆಳ

ವಣಿಗೆಗೆ ಪೋಷಕವಾದ ಬಹಿರಂಗ ಸ್ಪರ್ಧೆಯ ಬದಲು ಒಳಸಂಚಿನಿಂದ ಸ್ಥಳಗಳನ್ನು ಗಿಟ್ಟಿಸಲಾಗುತ್ತಿದೆ. Spiritual—ಆಧ್ಯಾತ್ಮಿಕವೆಂದು ಹೇಳಿಕೊಳ್ಳುವ ಈ ದೇಶ stark materialism-ಶುದ್ಧ ಭೌತಿಕ ಸ್ವಾರ್ಥದಿಂದ ಬಳಲುತ್ತಿದೆ. ಈ ಪರಿಸ್ಥಿತಿಯ ಬದಲಾವಣೆಗೆ ಶತಪ್ರಯತ್ನ ಬೇಕು. ಅದರ ಕಷ್ಟವನ್ನೆಲ್ಲ ಶಿಕ್ಷಣ ರಂಗದಲ್ಲಿರುವವರೇ ಹೊರಬೇಕಾದರೂ ಸಾರ್ವಜನಿಕ ನೀತಿಯ ಬೆಂಬಲ ಅಗತ್ಯವಿದೆ. ಶಿಕ್ಷಕ ಏನೇ ಸಸಿ ನಟ್ಟರೂ ಪ್ರಾಮಾಣಿಕತೆಗೆ ಬೆಲೆಯಿಲ್ಲ ಎನ್ನುವ ಸ್ಥಿತಿ ದೇಶದಲ್ಲಿದ್ದರೆ ಹೊರಗೆ ಬಂದೊಡನೆ ಸಸಿ ಒಣಗಿ ಹೋದೀತು.

ಈ ಪರಿಸ್ಥಿತಿ ಇರುವವರೆಗೆ ಮೌಲ್ಯಗಳು ಶಿಕ್ಷಣಕ್ಷೇತ್ರದೊಳಗಿಗಿಂತಲೂ ಹೊರಗೆ ಬೆಳೆಯಬಹುದಷ್ಟೇ. ಕಾರಂತರ ಹಾಗೆ ಮತ್ತು ಅವರ ಈಚೆಗಿನ ಕೆಲ ಕಾದಂಬರಿಗಳ ನಾಯಕರ ಹಾಗೆ ತಮ್ಮ ಮೌಲ್ಯವನ್ನು ತಾವೇ ಹುಡುಕಿ ತೆಗೆದು, ಕಷ್ಟವೇನೇ ಬಂದರೂ ಆ ಮೌಲ್ಯಗಳನ್ನು ಬೆಂಬತ್ತಿ, ಅದರಿಂದ ದೊರೆಯುವ ಲೋಕೋತ್ತರ ಸಮಾಧಾನವೇ ತಮಗೆ ಸಾಕೆನ್ನುವ ಅಪರೂಪ ವ್ಯಕ್ತಿಗಳೇ ಮೌಲ್ಯಗಳ ಆಧಾರಸ್ತಂಭವಾಗಬಹುದಷ್ಟೇ. ಆದರೆ ಅಷ್ಟು ಸಾಲದು. ರಾಷ್ಟ್ರದ ಉನ್ನತಿಯಾಗಬೇಕಾದರೆ ಅದರ ವ್ಯಕ್ತಿಗಳಲ್ಲಿ ಒಂದು ದೊಡ್ಡ ಅಂಶ ಮೌಲ್ಯಗಳಿಗೆ ಮುಖಹಾಕಿ ನಡೆಯುವವರಿರಬೇಕು. ನಂಬಿದ ಮೌಲ್ಯಗಳನ್ನು ಬಾಯಿಯಿಂದ ಪಾಠಹೇಳಿ ಆಮೇಲೆ ವ್ಯವಹಾರಿಕ ಕಾರಣಗಳ ನೆವ ಹೇಳಿ ಆ ಮೌಲ್ಯಗಳನ್ನು ಮೀರಿ ನಡೆಯುವವರ ಮುಂದಾಳ್ತನದಲ್ಲಿ ಅದು ಸಾಧ್ಯವಿಲ್ಲ. ಮೌಲ್ಯ ಯಾವಾಗಲೂ ಸ್ವಲ್ಪ ತ್ಯಾಗವನ್ನು ಒಳಗೊಂಡಿರುತ್ತದೆ. ಸ್ವಲ್ಪ ನೈತಿಕ ಸ್ಥೈರ್ಯವನ್ನೂ ಅಪೇಕ್ಷಿಸುತ್ತದೆ. ಈ ಬೆಲೆ ತೆರುವುದಕ್ಕೆ ಸಿದ್ಧರಾಗದೆ ನಮ್ಮನ್ನೊಳಗೊಂಡು ಎಲ್ಲರ ನಿಜವಾದ ರಕ್ಷಣೆ, ವಿಕಾಸ ಸಾಧ್ಯವಿಲ್ಲ. ಬೈಬಲ್ಲಿನಲ್ಲಿ ಹೇಳಿದ ಹಾಗೆ ಜೀವ ಉಳಿಸಿಕೊಳ್ಳಬೇಕೆಂಬವರು ಕಳೆದುಕೊಳ್ಳುತ್ತಾರೆ, ಜೀವ ಕೊಡುವವರು ಅದನ್ನು ಉಳಿಸಿಕೊಳ್ಳುತ್ತಾರೆ.

ಆರ್ಥಿಕ ವಿಕಾಸ ಹೊಂದದ ಅನೇಕ ದೇಶಗಳಲ್ಲಿ ನಮ್ಮಲ್ಲಿಯ ಸ್ಥಿತಿಯೇ ಇದೆ. ನಮ್ಮದೇನೂ, ಏಕಮಾತ್ರ ಉದಾಹರಣೆಯಲ್ಲ. ಬಹುಶಃ ಆರ್ಥಿಕ ಸ್ಥಿತಿ ಸುಧಾರಿಸಿ ಎಲ್ಲರಿಗೂ ಹೊಟ್ಟೆ ಬಟ್ಟೆಗೆ ತತ್ವಾರ ಇಲ್ಲ ಎಂದಾದಮೇಲೆ ಒಂದು ವೇಳೆ ಮೌಲ್ಯಗಳ ಶಿಕ್ಷಣ ಹೆಚ್ಚು ಸಂಭವವಾದೀತು. ಆದರೂ ಮೌಲ್ಯಗಳಿಗೆ ಪ್ರಾಧಾನ್ಯವಿಲ್ಲದ ಸಮಾಜದಲ್ಲಿ ಅನ್ನ ವಸ್ತ್ರಾದಿಗಳನ್ನು ಎಲ್ಲರಿಗೂ ಒದಗಿಸುವುದಕ್ಕೆ ಬೇಕಾದ ಪ್ರಯತ್ನವಾದರೂ ಸಫಲವಾಗಬಹುದೇ ಎಂಬುದು ಸಂಶಯ.

ಸಜೀವವಾದ ಮತ್ತು ನಿಜವಾದ ಶಿಕ್ಷಣವು ವ್ಯಕ್ತಿ, ಆ ವ್ಯಕ್ತಿಯ ಸಾಮಾನ್ಯ ಮತ್ತು ವಿಶಿಷ್ಟವಾದ ಗುಣ ರಾಷ್ಟ್ರ ಅಥವಾ ಮಾನವತೆ, ಜನತೆ ಮತ್ತು ವಿಶ್ವಗಳೆಂಬ ಮೂರು ಘಟಕಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬ ನಮ್ಮ ನಿಲುವಿಗೆ ಬಹಳಷ್ಟು ವಿರೋಧವಿಲ್ಲವೆಂದು ನಾವು ಭಾವಿಸಿದ್ದೇವೆ. ಈ ಮೂರು ಘಟಕಗಳನ್ನು ಸಂಪೂರ್ಣವಾಗಿ ಪರಿಶೀಲಿಸಲು ಸಹಾಯ ಮಾಡುವ ಶಿಕ್ಷಣವೇ ನಿಜವಾದ ಸಜೀವ ಶಿಕ್ಷಣವಾಗುತ್ತದೆಯೆಂದು ಸಿದ್ಧವಾಗುವುದು. ಅದು ವ್ಯಕ್ತಿಯಲ್ಲಿಯ ಎಲ್ಲ ಸತ್ವಗುಣಗಳನ್ನು ಜೀವನ ಸಂಗ್ರಾಮಕ್ಕೆ ಯೋಗ್ಯವಾಗುವಂತೆ ಅಣಿಮಾಡಿ ಜೀವನದಲ್ಲಿ ಯೋಗ್ಯವಾದ ಸ್ಥಾನವನ್ನು ಪಡೆಯಲು ಸಹಾಯಕವಾಗುತ್ತದೆ. ಅದರಿಂದ ತನ್ನ ಸುತ್ತಲಿನ ಜನರಲ್ಲಿ ಹೊಂದಿಕೊಂಡು ಮಾನವೀಯ ಮನಸ್ಸು ಮತ್ತು ಚೈತನ್ಯಗಳನ್ನು ಪಡೆದು ವಿಶ್ವಬಾಂಧವ್ಯಕ್ಕೆ ಯೋಗ್ಯವಾಗುತ್ತಾನೆ. ಯಾವ ಜನಾಂಗದ ಅಥವಾ ರಾಷ್ಟ್ರದ ಒಂದು ಘಟಕವಾಗಿ ಕಂಡರೂ ಅವಿಭಾಜ್ಯ ಭಾಗವಾಗಿ ಉಳಿಯುತ್ತಾನೆ. ಈ ವಿಶಾಲವಾದ ಮತ್ತು ಪೂರ್ಣವಾದ ತತ್ವವನ್ನು ಅನುಸರಿಸಿ ಈ ಶಿಕ್ಷಣ ಸಮಸ್ಯೆಯನ್ನು ಪರೀಕ್ಷಿಸಿದರೆ ಮಾತ್ರ ನಮಗೆ ಎಂತಹ ಶಿಕ್ಷಣ ಬೇಕೆಂಬುದನ್ನು ಮತ್ತು ರಾಷ್ಟ್ರೀಯ ಶಿಕ್ಷಣದಿಂದ ನಾವು ಏನನ್ನು ಸಾಧಿಸಿಕೊಳ್ಳಲು ಇಚ್ಛಿಸುತ್ತೇವೆಂಬುದು ಸ್ಪಷ್ಟವಾಗುವುದು.

ಮೂಲ : ‘ ಶಿಕ್ಷಣವನ್ನು ಕುರಿತು ಶ್ರೀ ಅರವಿಂದರ ಮತ್ತು ತಾಯಿಯವರ ವಿಚಾರಗಳು ’ (ಅನುವಾದಕರು : ಎಲ್. ಜಿ. ಮೊಕ್ತಾಲಿ.) ಪು. 10

ಹು. ಲ. ಚಂದ್ರಶೇಖರ

ಜೈನ ಧರ್ಮ

ಜೈನಧರ್ಮದಲ್ಲಿ ಶ್ರದ್ಧಾನಂಬಿಕೆಗಳನ್ನು ಜನರಲ್ಲಿ ಮೂಡಿಸಿದವರೇ ತೀರ್ಥಂಕರರು. ಈ ತೀರ್ಥಂಕರರ ಸಾಲಿನಲ್ಲಿ ಮೊದಲನೆಯವನು ಋಷಭದೇವ. ಇಪ್ಪತ್ತನಾಲ್ಕನೆಯವನೇ ವರ್ಧಮಾನ. ಇವನಿಂದಲೇ ಕ್ರಿ.ಪೂ. ಆರನೆಯ ಶತಮಾನದಲ್ಲಿ ಜೈನಧರ್ಮವು ಪುನಶ್ಚೇತನಗೊಂಡಿತು. ಇವನು ಕ್ರಿ.ಪೂ. 540ರಲ್ಲಿ ಮಗಧ ರಾಜ್ಯದಲ್ಲಿ (ಬಿಹಾರ) ಜನಿಸಿದನು. ಕ್ಷತ್ರಿಯ ಮನೆತನಕ್ಕೆ ಸೇರಿದ ಈತನು ತನ್ನ ಇಪ್ಪತ್ತೆಂಟನೆಯ ವಯಸ್ಸಿನಲ್ಲಿ ಸಾಂಸಾರಿಕ ಜೀವನವನ್ನು ತೊರೆದು ತಪಸ್ಸು ಮಾಡಲು ಹೊರಟುಹೋದನು. ಅನಂತರ ಹನ್ನೆರಡು ವರ್ಷಗಳ ಕಾಲ ನಿರಂತರವಾಗಿ ತಪಸ್ಸನ್ನಾಚರಿಸಿ ಕೇವಲಾವಸ್ಥೆಯನ್ನು ತಲುಪಿದನು. ದಿವ್ಯಜ್ಞಾನವನ್ನು ಹೊಂದಿ ಎಲ್ಲ ದುಃಖಗಳಿಂದಲೂ ಬಿಡುಗಡೆಹೊಂದಿದ ಈತನನ್ನು 'ಜಿನ, ಮಹಾವೀರ' ಇತ್ಯಾದಿ ಹೆಸರುಗಳಿಂದ ಕರೆಯಲಾಯಿತು. ತನ್ನ ಕಡೆಯ ಮೂವತ್ತು ವರ್ಷಗಳನ್ನು ಜೈನಧರ್ಮವನ್ನು ಬೋಧಿಸುವುದರಲ್ಲೇ ಕಳೆದ ಈತನು ತನ್ನ 72ನೆಯ ವಯಸ್ಸಿನಲ್ಲಿ ಶರೀರತ್ಯಾಗ ಮಾಡಿದನು.

ಜೈನ ಸಿದ್ಧಾಂತವನ್ನು ಕೆಳಕಂಡಂತೆ ವಿವರಿಸಬಹುದು.

ಸತ್ಯವು ವಾಸ್ತವಿಕ (Realistic) ಮತ್ತು ಅನೇಕಾಂತ (Pluralistic) ವಾಗಿದೆ. ಎಂದರೆ ಚೇತನ ಮತ್ತು ಅಚೇತನ ತತ್ವಗಳೆರಡೂ ಸ್ವತಂತ್ರ ಅಸ್ತಿತ್ವವನ್ನು ಪಡೆದಿವೆ. ಸತ್ಯವನ್ನು 'ದ್ರವ್ಯ' ಎಂದು ಕರೆಯುತ್ತಾರೆ. ಪ್ರಪಂಚವು ದ್ರವ್ಯಗಳಿಂದ ರಚಿಸಲ್ಪಟ್ಟಿದೆ. ಎಲ್ಲ ವಸ್ತುಗಳ ಸಾರಭೂತವಾಗಿ, ಆ ವಸ್ತುಗಳ ಮೂಲಕ ವಿವಿಧರೂಪಗಳಲ್ಲಿ ವ್ಯಕ್ತವಾಗಿ, ಉತ್ಪತ್ತಿ, ನಾಶ ಮತ್ತು ನಿತ್ಯತೆಯೆಂಬ ಲಕ್ಷಣಗಳಿಂದ ಕೂಡಿರುವುದೇ 'ದ್ರವ್ಯ'. ದ್ರವ್ಯವು ಸದಾಕಾಲವೂ ಬದಲಾವಣೆಗೆ ಒಳಗಾಗುತ್ತಿದ್ದರೂ ತನ್ನ ಸ್ವರೂಪವನ್ನು ಉಳಿಸಿಕೊಂಡಿರುತ್ತದೆ. ದ್ರವ್ಯದ ಮೊದಲೆರಡು ಲಕ್ಷಣಗಳಾದ ಉತ್ಪತ್ತಿ ಮತ್ತು ನಾಶಗಳು ವಸ್ತುವಿನ ಅನಿತ್ಯತೆಯನ್ನು ಸೂಚಿಸುತ್ತವೆ. ಅವುಗಳನ್ನು ಪರ್ಯಾಯಗಳೆಂದು ಕರೆಯುತ್ತಾರೆ. ದ್ರವ್ಯದ ಕಡೆಯ ಲಕ್ಷಣವಾದ ನಿತ್ಯತೆಯು ದ್ರವ್ಯದ ಸ್ವರೂಪವನ್ನು ಕಾಪಾಡುತ್ತದೆ. ಅದನ್ನು 'ಗುಣ' ಎಂದು ಕರೆಯುತ್ತಾರೆ. ಪರ್ಯಾಯಗಳು ಬದಲಾವಣೆ ಹೊಂದುತ್ತಿದ್ದರೂ ಗುಣವು ದ್ರವ್ಯದ ಐಕ್ಯತೆಯನ್ನು ಉಳಿಸಿಕೊಂಡೇ ಇರುತ್ತದೆ.

ದ್ರವ್ಯಗಳಿಂದ ರಚಿತವಾದ ಪ್ರಪಂಚದ ಪ್ರತಿಯೊಂದು ವಸ್ತುವೂ ಅನೇಕ ಧರ್ಮಗಳಿಂದ ಕೂಡಿದೆ. ವಸ್ತುವಿನ ಸಮಗ್ರಜ್ಞಾನವು ನಮಗೆ ಬರಬೇಕಾದರೆ ವಸ್ತುವಿನ ಎಲ್ಲ ಧರ್ಮಗಳನ್ನೂ ನಾವು ಅರಿಯಬೇಕು. ಈ ಧರ್ಮಗಳು ಭಾವಾತ್ಮಕ (Positive) ಮತ್ತು ನಿಷೇಧಾತ್ಮಕ (Negative) ಗಳೆರಡೂ ಆಗಿರುತ್ತವೆ. ವಸ್ತುವು ಏನೇನು ಆಗಿದೆಯೋ ಅವುಗಳನ್ನು ಭಾವಾತ್ಮಕ ಗುಣಗಳು ಸೂಚಿಸುತ್ತವೆ ಉದಾಹರಣೆಗೆ ಪುಸ್ತಕವೆಂಬ ವಸ್ತುವಿನ ವಿಷಯ,

ಕರ್ತೃ, ಭಾಷೆ ಇತ್ಯಾದಿಗಳು ಭಾವಾತ್ಮಕ ಗುಣಗಳು. ವಸ್ತುವು ಏನೇನಾಗಿಲ್ಲವೋ ಅವುಗಳೆಲ್ಲಾ ನಿಷೇಧಾತ್ಮಕ ಗುಣಗಳು. ಉದಾಹರಣೆಗೆ ಪುಸ್ತಕದ ಕರ್ತೃ ಕಪಿಲ ಮಹರ್ಷಿಗಳಲ್ಲ, ವಿಷಯ ಸಾಂಖ್ಯವಲ್ಲ, ಭಾಷೆ ಸಂಸ್ಕೃತವಲ್ಲ ಇತ್ಯಾದಿ ಗುಣಗಳು ಪುಸ್ತಕದ ನಿಷೇಧಾತ್ಮಕ ಗುಣಗಳು. ವಾಸ್ತವವಾಗಿ ವಸ್ತುವಿನ ನಿಷೇಧಾತ್ಮಕ ಗುಣಗಳೇ ಭಾವಾತ್ಮಕಗುಣಗಳಿಗಿಂತ ಅಪರಿಮಿತ ಸಂಖ್ಯೆಯಲ್ಲಿರುತ್ತವೆ. ಏಕೆಂದರೆ ಪ್ರಪಂಚದ ಉಳಿದ ಎಲ್ಲಾ ವಸ್ತುಗಳನ್ನು ಮತ್ತು ಅವುಗಳ ಗುಣಗಳನ್ನೂ ಆ ಒಂದು ವಸ್ತುವಿನಲ್ಲಿ ನಿಷೇಧಿಸಲಾಗಿರುತ್ತದೆ. ಇದರಿಂದ ಪ್ರಪಂಚದಲ್ಲಿನ ಪ್ರತಿಯೊಂದು ವಸ್ತುವು ಎಷ್ಟು ಸಂಕೀರ್ಣವೆಂಬುದು (complex) ನಮಗೆ ತಿಳಿಯುತ್ತದೆ. ಇಂತಹ ಸಂಕೀರ್ಣವಾದ ಒಂದು ವಸ್ತುವನ್ನು ಅರಿತರೆ ಪ್ರಪಂಚದ ಇನ್ನಿತರ ವಸ್ತುಗಳೆಲ್ಲವನ್ನೂ ಅರಿತಂತೆ ಆಗುತ್ತದೆ. ಇದು ಮುಕ್ತ ಅಥವಾ ಕೇವಲ ಜ್ಞಾನಿಗೆ ಮಾತ್ರ ಸಾಧ್ಯ.

ಸಾಮಾನ್ಯ ಮನುಷ್ಯನಾದರೋ ವಸ್ತುವಿನ ಬಗ್ಗೆ ತಾನು ಅರಿತಿರುವುದೇ ಸತ್ಯವೆಂದು ತಿಳಿಯುತ್ತಾನೆ. ಕೇವಲ ತನ್ನ ಒಂದು ದೃಷ್ಟಿಯಿಂದ ಮಾತ್ರ ಅಧ್ಯಯನ ಮಾಡಿದ್ದರಿಂದ ಬಂದ ಈತನ ಸಿದ್ಧಾಂತವು ಸಾಪೇಕ್ಷವಾದದ್ದು (Relative) ಅವನ ಸಿದ್ಧಾಂತವನ್ನು ಎಲ್ಲ ದೃಷ್ಟಿಗಳಿಂದಲೂ ಒಪ್ಪಿಕೊಳ್ಳಲು ಆಗುವುದಿಲ್ಲ. 'ಒಬ್ಬ ಮನುಷ್ಯನು ಬರುತ್ತಿದ್ದಾನೆ' ಎಂದರೆ 'ಮನುಷ್ಯನು ಯಾವಾಗಲೂ ಎಲ್ಲೆಲ್ಲೂ ಬರುತ್ತಿದ್ದಾನೆ' ಎಂದು ತಿಳಿಯಬಾರದು. 'ಮನುಷ್ಯನು ಈ ದಿನ ಈ ಹೊತ್ತಿನಲ್ಲಿ ನಮ್ಮ ಮನೆಗೆ ಬರುತ್ತಿದ್ದಾನೆ' ಎಂದು ಅರ್ಥ. ಆದ್ದರಿಂದ ವಸ್ತುವಿನ ಜ್ಞಾನವು ಕೆಲವೊಂದು ದೃಷ್ಟಿಗೆ, ಉಪಾಧಿಗೆ ಸಂಬಂಧಿಸಿದಂತೆ ಸತ್ಯ. ಆದರೆ ಆ ಜ್ಞಾನವು ಪರಿಪೂರ್ಣವಾದುದಲ್ಲ. ಇದನ್ನು ಜೈನರು ಒಂದು ಕಥೆಯ ಮೂಲಕ ತೋರಿಸಿಕೊಡುತ್ತಾರೆ. ಆರು ಜನ ಕುರುಡರು ಒಂದು ಆನೆಯನ್ನು ಮುಟ್ಟುತ್ತಾರೆ. ಒಬ್ಬನು ಆನೆಯ ಕಿವಿಯನ್ನು ಸ್ಪರ್ಶಿಸಿ 'ಆನೆಯು ಬೀಸಣಿಗೆಯಂತಿದೆ' ಎಂದು ನುಡಿಯುತ್ತಾನೆ. ಎರಡನೆಯವನು ಆನೆಯ ಕಾಲನ್ನು ಮುಟ್ಟಿ 'ಆನೆಯು ಸ್ತಂಭದಂತಿದೆ' ಎಂದು ಹೇಳುತ್ತಾನೆ. ಮೂರನೆಯವನು ಸೊಂಡಿಲಿಗೆ ಕೈಹಾಕಿ ಆನೆಯನ್ನು ಹೆಬ್ಬಾವಿಗೆ ಹೋಲಿಸುತ್ತಾನೆ. ನಾಲ್ಕನೆಯವನು ಆನೆಯ ಬಾಲವನ್ನು ಹಿಡಿದುಕೊಂಡು 'ಆನೆಯು ಹಗ್ಗದಂತಿದೆ' ಎಂದು ಕೂಗಿಕೊಳ್ಳುತ್ತಾನೆ. ಐದನೆಯವನು ಕೈಗಳಿಂದ ಆನೆಯ ಪಕ್ಕೆಗಳನ್ನು ಸ್ಪರ್ಶಿಸಿದಾತನು 'ಆನೆಯು ವಿಶಾಲವಾದ ಗೋಡೆಯಂತಿದೆ' ಎಂದು ಹೇಳುತ್ತಾನೆ. ಕಡೆಯವನು ಕುಂಭಸ್ಥಲವನ್ನು ಸ್ಪರ್ಶಿಸಿ ಆನೆಯನ್ನು ಪರ್ವತಕ್ಕೆ ಹೋಲಿಸುತ್ತಾನೆ. ಹೀಗೆ ಇವರೆಲ್ಲರೂ ಆನೆಯ ಅಂಗವನ್ನೇ ಆನೆಯೆಂದು ಭ್ರಮಿಸುತ್ತಾರೆ. ನಮ್ಮ ಎಲ್ಲ ದಾರ್ಶನಿಕರ ಪಾಡೂ ಇದೇ ಆಗಿದೆ. ಪ್ರತಿಯೊಬ್ಬರೂ ತಾವು ನುಡಿದುದೇ ಸತ್ಯವೆಂದು ತಿಳಿಯುತ್ತಾರೆ. ಅವರ ಜ್ಞಾನವು ಸಾಪೇಕ್ಷವಾಗಿಯೇನೋ ಸತ್ಯ, ನಿಷ್ಕೃಷ್ಟವಾಗಲ್ಲ. ಉದಾಹರಣೆಗೆ ಕಾಲಿನ ದೃಷ್ಟಿಯಿಂದ ಆನೆಯು ಸ್ತಂಭದಂತಿದೆ. ಆದರೆ ಕಾಲೇ ಆನೆಯಲ್ಲ. ಸತ್ಯವನ್ನು ಒಂದೇ ದೃಷ್ಟಿಯಿಂದ ವಿವರಿಸುವುದನ್ನು ಏಕಾಂತವಾದವೆಂದು ಕರೆಯುತ್ತಾರೆ. ಜೈನರು ಏಕಾಂತವಾದವನ್ನು ಒಪ್ಪುವುದಿಲ್ಲ. ಅವರು ಎಲ್ಲ ದೃಷ್ಟಿಗಳಲ್ಲೂ ಸತ್ಯಾಂಶವಿದೆಯೆನ್ನುತ್ತಾರೆ. ಯಾವುದರಲ್ಲೂ ಸತ್ಯವು ಸಂಪೂರ್ಣವಾಗಿ ಅಳವಡಿಸಲ್ಪಟ್ಟಿಲ್ಲವಾದ್ದರಿಂದ ಸತ್ಯದ ವಿವಿಧ ಮುಖಗಳನ್ನು ಒಟ್ಟುಗೂಡಿಸಿ ಸಮಗ್ರ ದೃಷ್ಟಿಯನ್ನು ಜೈನರು ಮುಂದಿಡುತ್ತಾರೆ. ಇದಕ್ಕೆ ಜೈನರ ಪರಿಭಾಷೆಯಲ್ಲಿ ಅನೇಕಾಂತವಾದ ಎಂದು ಹೆಸರು. ಇದು ಸ್ಯಾದ್ವಾದದ ಮೂಲ ಅಭಿಪ್ರಾಯ. ಬೇರೆ ದೃಷ್ಟಿಗಳಿಂದ ವಸ್ತುವು ಸತ್ಯವಾಗಿದೆ ಎಂಬ ಕಾರಣದಿಂದಲೇ ಜೈನರು ಇತರರ ಸಿದ್ಧಾಂತಗಳನ್ನು ಖಂಡಿಸದೇ ಗೌರವಿಸುತ್ತಾರೆ. ಇದು ಅವರ ವಿಶಾಲಮನೋಭಾವದ ಕುರುಹು.

ಸ್ಯಾದ್ವಾದ

ವಸ್ತುವಿನ ಬಗ್ಗೆ ನಾವು ತಿಳಿದಿರುವುದು ಅಪರಿಪೂರ್ಣವೆಂದು ಮೇಲೆ ತಿಳಿಸಿದೆ. ಸೋಪಾಧಿಕವಾದ ವಸ್ತುವಿನ ನಮ್ಮ ಜ್ಞಾನವನ್ನು 'ನಯ' ಎಂದು ಕರೆಯುತ್ತಾರೆ. ಈ ಜ್ಞಾನವನ್ನು ತಿಳಿಸುವ ತಾರ್ಕಿಕವಾಕ್ಯವನ್ನೂ 'ನಯ' ಎಂದು ಕರೆಯುತ್ತಾರೆ. ಹಿಂದೆ ಸತ್ಯವನ್ನು ಬೋಧಿಸುವ ವಾಕ್ಯಗಳು ಮೂರು ವಿಧವಾಗಿ ಇರುತ್ತಿತ್ತು. ಸಾಂಖ್ಯರು 'ವಸ್ತುವು ಇದೆ' ಎಂದು ಹೇಳುತ್ತಿದ್ದರು. ಬೌದ್ಧರು 'ವಸ್ತುವು ಇಲ್ಲ' ಎಂದು ಹೇಳುತ್ತಿದ್ದರು. ಉಪನಿಷತ್‌ಕಾರರು 'ವಸ್ತುವು ಇದೆ ಅಥವಾ ಇಲ್ಲವೆಂದು ನಿಶ್ಚಿತವಾಗಿ ಹೇಳಲಾಗುವುದಿಲ್ಲ; ಆದ್ದರಿಂದ ಅದು ಅವರ್ಣನೀಯ' ಎಂದು ನುಡಿದರು. ಜೈನರು ಈ ಯಾವ ವಾಕ್ಯಗಳನ್ನೂ ಒಪ್ಪಿಕೊಳ್ಳಲಿಲ್ಲ. ಅವರ ಪ್ರಕಾರ ಸಂಕೀರ್ಣವಾದ ಸತ್ಯವನ್ನು ಹಾಗೆ ಒಂದೇ ಒಂದು ಹಂತದಿಂದ ನಿರ್ದಿಷ್ಟವಾಗಿ ತೋರಿಸಲಾಗುವುದಿಲ್ಲ. ಆದ್ದರಿಂದ ಅವರು ಸಂಕೀರ್ಣವಾದ ವಸ್ತುವಿನ ಜ್ಞಾನವನ್ನು 'ಸಪ್ತಭಂಗೀನಯ'ದ ಮೂಲಕ ಎಂದರೆ ಏಳು ಹಂತಗಳ ಮೂಲಕ ತೋರಿಸುತ್ತಾರೆ.

ಪ್ರತಿಯೊಂದು ಹಂತವು ಎಂದರೆ ತಾರ್ಕಿಕವಾಕ್ಯವೂ 'ಸ್ಯಾತ್' ಎಂದು ವಿಶೇಷಿಸಲ್ಪಟ್ಟಿದೆ. ಈ 'ಸ್ಯಾತ್' ಎಂಬ ಪದವು ಅಪೂರ್ಣವನ್ನೇ ಪೂರ್ಣವೆಂದು ತಪ್ಪಾಗಿ ತಿಳಿಯುವಾಗ ಆಗುವ ನಯಾಭಾಸವನ್ನು ತಪ್ಪಿಸುತ್ತದೆ. ಅಂದರೆ ಸ್ಯಾತ್ ಪದವು ವಾಕ್ಯದ ಪರಿಮಿತಿಯನ್ನೂ ಮತ್ತು ಇತರ ದೃಷ್ಟಿಗಳಿಂದ ಮಾಡಲಾಗಿರುವ ಇತರ ವಾಕ್ಯಗಳೂ ಸತ್ಯವೆಂಬುದನ್ನೂ ಮನದಟ್ಟು ಮಾಡಿಕೊಡುತ್ತದೆ. ಈ ಸ್ಯಾತ್ ಎಂಬ ಪದಕ್ಕೆ ಇರಬಹುದು ಎಂದರ್ಥ. ಸ್ಯಾತ್ ಅಸ್ತಿ ಎಂದರೆ ವಸ್ತುವು ಇರಬಹುದು ಎಂದಾಗುತ್ತದೆ. ಹೀಗೆಂದ ಮಾತ್ರಕ್ಕೆ ನಾವು ಸತ್ಯವೆಂಬುದು ಅನಿಶ್ಚಿತ (Indefinite) ಎಂದು ತಿಳಿಯಬಾರದು. ಸ್ಯಾತ್ ಪದವು ವಸ್ತುವಿನ ಸಾಪೇಕ್ಷ ಸತ್ಯತೆಯನ್ನು ಸೂಚಿಸುವುದರಿಂದ ಸಾಪೇಕ್ಷವಾಗಿ ಎಂದೇ ಸ್ಯಾತ್ ಪದಕ್ಕೆ ಅರ್ಥಮಾಡಲಾಗಿದೆ. ಜೈನರ ಈ ಸಾಪೇಕ್ಷತಾವಾದಕ್ಕೆ ಸ್ಯಾದ್ವಾದ ಎಂದು ಹೆಸರು. ಪ್ರತಿಯೊಂದು ತಾರ್ಕಿಕ ವಾಕ್ಯವು ವಸ್ತುವಿನ ಜ್ಞಾನವನ್ನು ದ್ರವ್ಯ, (ಸಾಮಗ್ರಿ) ಕ್ಷೇತ್ರ, ಕಾಲ ಮತ್ತು ರೂಪ ಎಂಬ ನಾಲ್ಕು ದೃಷ್ಟಿಗಳಿಂದ ತೋರಿಸಿಕೊಡುತ್ತದೆ. ಸ್ಯಾತ್ ಅಸ್ತಿ ಎಂದರೆ ವಸ್ತುವು ಸ್ವದ್ರವ್ಯ, ಸ್ವಕ್ಷೇತ್ರ, ಸ್ವರೂಪ ಮತ್ತು ಸ್ವಕಾಲ ದೃಷ್ಟಿಗಳಿಂದ ಇರುತ್ತದೆ ಎಂದು ತಿಳಿಯಬೇಕು. ಎಂದರೆ ವಸ್ತುವು "ಮಣ್ಣಿನಿಂದ (ದ್ರವ್ಯ) ತಯಾರಿಸಲ್ಪಟ್ಟು ನನ್ನ ಕೊಠಡಿಯಲ್ಲಿ (ಕ್ಷೇತ್ರ) ಘಟಾಕಾರದಲ್ಲಿ (ರೂಪ) ಈ ದಿನ (ಕಾಲ) ಇದೆ" ಎಂದು ತಿಳಿಯಬೇಕು. 'ಸ್ಯಾತ್ ನಾಸ್ತಿ' ಎಂದರೆ ವಸ್ತುವು ಪರದ್ರವ್ಯ ಪರಕ್ಷೇತ್ರ, ಪರರೂಪ ಮತ್ತು ಪರಕಾಲ ದೃಷ್ಟಿಗಳಿಂದ ಇಲ್ಲವೆಂದು ತಿಳಿಯಬೇಕು. ಎಂದರೆ ವಸ್ತುವು ಲೋಹದಿಂದ ತಯಾರಿಸಲ್ಪಟ್ಟುದಾಗಿ ಕೊಠಡಿಯಾಚೆ ತಟ್ಟೆಯಾಕಾರದಲ್ಲಿ ನಿನ್ನೆ ಇರಲಿಲ್ಲ ಎಂದು ತಿಳಿಯಬೇಕು. ಮೊದಲಿನಿಂದ ಏಳು ವಾಕ್ಯಗಳನ್ನು ಕೆಳಕಂಡಂತೆ ತೋರಿಸಬಹುದು. (ಇಲ್ಲಿ ವಾಕ್ಯಗಳನ್ನು ಒಂದೇ ದೃಷ್ಟಿಯಿಂದ ಉದಹರಿಸಲಾಗಿದೆ.)

1) ಸ್ಯಾತ್ ಅಸ್ತಿ. ಸಾಪೇಕ್ಷವಾಗಿ ಇದೆ. ಇದೊಂದು ಭಾವಾತ್ಮಕ (Affirmative) ತಾರ್ಕಿಕವಾಕ್ಯ. ಒಂದು ದೃಷ್ಟಿಯಿಂದ ವಸ್ತುವಿದೆ. ಘಟವು ಸ್ವದ್ರವ್ಯದೃಷ್ಟಿಯಿಂದ ಕೆಂಪು ಬಣ್ಣವುಳ್ಳದ್ದಾಗಿದೆ. (ದ್ರವ್ಯ ಮತ್ತು ಗುಣಗಳು ಅಭಿನ್ನ)

2) ಸ್ಯಾತ್ ನಾಸ್ತಿ. ಸಾಪೇಕ್ಷವಾಗಿ ಇಲ್ಲ. ಇದೊಂದು ನಿಷೇಧಾತ್ಮಕ (Negative) ತಾರ್ಕಿಕವಾಕ್ಯ. ಇಲ್ಲಿ ಮಾಡಲಾಗಿರುವ ನಿಷೇಧವು ಸ್ವದೃಷ್ಟಿಯಿಂದಲ್ಲ. ಪರದೃಷ್ಟಿಯಿಂದ ಮಾಡಲಾಗಿರುವುದು. ಘಟವು (ಪರದ್ರವ್ಯ ದೃಷ್ಟಿಯಿಂದ) ಕಪ್ಪು ಬಣ್ಣವುಳ್ಳದ್ದಲ್ಲ.

3) ಸ್ಯಾತ್ ಅಸ್ತಿ ನಾಸ್ತಿ. ಸಾಪೇಕ್ಷವಾಗಿ ಇದೆ ಮತ್ತು ಇಲ್ಲ. ಘಟವು ಕೆಲವು ಸಂದರ್ಭದಲ್ಲಿ ಕೆಂಪುಬಣ್ಣವುಳ್ಳದ್ದು, ಇನ್ನು ಕೆಲವು ಸಂದರ್ಭದಲ್ಲಿ ಕೆಂಪುವರ್ಣರಹಿತವಾಗಿ ಇರುತ್ತದೆ. ಇಂತಹ ಸಂಕೀರ್ಣವಾದ ವಸ್ತು ಸ್ಥಿತಿಯನ್ನು ಮೂರನೇ ವಾಕ್ಯದಿಂದ ತೋರಿಸಬಹುದು. ಸಾಪೇಕ್ಷವಾಗಿ ಘಟವು ಕೆಂಪುಬಣ್ಣದಿಂದ ಕೂಡಿದೆ ಮತ್ತು ಕೆಂಪುಬಣ್ಣದಿಂದ ಕೂಡಿಲ್ಲ ಎಂಬುದೇ ಮೂರನೇ ವಾಕ್ಯ. ಈ ಮೂರನೇ ತಾರ್ಕಿಕವಾಕ್ಯವು ಮೊದಲೆರಡು ವಾಕ್ಯಗಳ ಕ್ರಮ ಸಂಯೋಜನೆಯಾಗಿದೆ.

4) ಸ್ಯಾತ್ ಅವಕ್ತವ್ಯಂ. ಸಾಪೇಕ್ಷವಾಗಿ ಅವಕ್ತವ್ಯವಾದುದು. ಘಟವು ಕೆಲವು ವೇಳೆ ಕೆಂಪು ಬಣ್ಣದಿಂದ ಕೂಡಿಯೂ ಮತ್ತೆ ಕೆಲವು ವೇಳೆ ಆ ಬಣ್ಣದಿಂದ ಕೂಡಿಲ್ಲದೆಯೂ ಇರುತ್ತದೆ. ಉದಾಹರಣೆಗೆ ಘಟವು ಹಸಿಮಣ್ಣಿನ ರೂಪದಲ್ಲಿದ್ದಾಗ ಕೆಂಪು ಬಣ್ಣದಿಂದ ಕೂಡಿಲ್ಲದೆ ಕಪ್ಪುಬಣ್ಣದಿಂದ ಕೂಡಿರುತ್ತದೆ. ಅದರ ಬೇಯಿಸಿದ ಮೇಲೆ ಕೆಂಪುಬಣ್ಣದಿಂದ ಕೂಡಿರುತ್ತದೆ. ಎಲ್ಲ ಸಂದರ್ಭಗಳಲ್ಲೂ ಘಟದ ನಿಜವಾದ ಬಣ್ಣವೇನೆಂದು ಕೇಳಿದಾಗ ನಮಗೆ ಒಮ್ಮೆಲೇ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಅವರ್ಣನೀಯ ಸ್ಥಿತಿಯನ್ನೇ ನಾಲ್ಕನೇ ವಾಕ್ಯದಲ್ಲಿ ತೋರಿಸಿಕೊಡಲಾಗಿದೆ.

ಉಳಿದ ಮೂರು ವಾಕ್ಯಗಳು ಮೊದಲ ಮೂರು ವಾಕ್ಯಗಳನ್ನು ಬೇರೆಬೇರೆಯಾಗಿ ನಾಲ್ಕನೇ ವಾಕ್ಯದೊಡನೆ ಸೇರಿಸುವುದರಿಂದ ಬರುತ್ತವೆ.

5) ಸ್ಯಾತ್ ಅಸ್ತಿ ಚ ಅವಕ್ತವ್ಯಂ. ಸಾಪೇಕ್ಷವಾಗಿ ಇದೆ ಮತ್ತು ಅವಕ್ತವ್ಯ. ಘಟವೇನೋ ಕೆಂಪಗಿದೆ. ಆದರೆ ಯಾವಾಗ ಕಪ್ಪಗಿದೆಯೆಂದು ಹೇಳಲಾಗುವುದಿಲ್ಲ. ವಸ್ತುವಿದ್ದರೂ ನಿರ್ದಿಷ್ಟವಾದ ಸಂದರ್ಭಕ್ಕೆ ಸಂಬಂಧಿಸದೇ ವಸ್ತುವನ್ನು ವಿವರಿಸಲಾಗುವುದಿಲ್ಲವೆಂಬುದನ್ನು ಈ ವಾಕ್ಯವು ತೋರಿಸಿಕೊಡುತ್ತದೆ.

6) ಸ್ಯಾತ್ ನಾಸ್ತಿ ಚ ಅವಕ್ತವ್ಯಂ. ಸಾಪೇಕ್ಷವಾಗಿ ಇಲ್ಲ ಮತ್ತು ಅವಕ್ತವ್ಯ. ಘಟವು ಕಪ್ಪಗಿಲ್ಲ. ಯಾವಾಗ ಕಪ್ಪಗಿರುವುದೋ ಹೇಳಲಾಗುವುದಿಲ್ಲ.

7) ಸ್ಯಾತ್ ಅಸ್ತಿ ನಾಸ್ತಿ ಚ ಅವಕ್ತವ್ಯಂ. ಸಾಪೇಕ್ಷವಾಗಿ ಇದೆ, ಇಲ್ಲ ಮತ್ತು ಅವಕ್ತವ್ಯ. ಘಟವು ಕೆಂಪಗಿದೆ, ಕಪ್ಪಗಿಲ್ಲ ಮತ್ತು ಸ್ವಪರ ದೃಷ್ಟಿಗಳೆರಡರಿಂದಲೂ ಅವರ್ಣನೀಯ.

ಈ ರೀತಿಯಾಗಿ ಸಂಕೀರ್ಣವಾದ ಪ್ರತಿಯೊಂದು ವಸ್ತುವನ್ನೂ ಸಮಗ್ರವಾಗಿ ಈ ಏಳು ಹಂತಗಳಿಂದಲೇ ವಿವರಿಸಲು ಸಾಧ್ಯ. ಒಂದೆರಡು ಹಂತಗಳಿಂದ ವಸ್ತುವನ್ನು ವಿವರಿಸಬಹುದಾದರೂ, ಆ ಜ್ಞಾನವು ಕೇವಲ ಸಾಪೇಕ್ಷ ಸತ್ಯ. ಇದು ಒಂದೇ ದೃಷ್ಟಿಯಿಂದ ವಸ್ತುವಿನ ಜ್ಞಾನವನ್ನು ತೋರಿಸುತ್ತದೆ.

ಜ್ಞಾನ

ಪ್ರತ್ಯಕ್ಷ ಮತ್ತು ಪರೋಕ್ಷವೆಂದು ಜ್ಞಾನವು ಎರಡು ವಿಧ. ಸಾಮಾನ್ಯವಾಗಿ ಇಂದ್ರಿಯಗಳ ಮೂಲಕ ಬಂದ ವಸ್ತುಜ್ಞಾನವನ್ನು ನಾವು ಪ್ರತ್ಯಕ್ಷವೆಂದು ತಿಳಿಯುತ್ತೇವೆ. ಅನುಮಾನಜ್ಞಾನಕ್ಕೆ ಹೋಲಿಸಿದಾಗ ಇಂದ್ರಿಯ ಮಾಧ್ಯಮದಿಂದ ಬಂದ ಈ ಜ್ಞಾನವು ಪ್ರತ್ಯಕ್ಷವಾಗುತ್ತದೆ. ಇದನ್ನು ಸಂವ್ಯವಹಾರಿಕ ಪ್ರತ್ಯಕ್ಷವೆಂದೂ ಕರೆಯುತ್ತಾರೆ. ಆದರೆ ನಿಜವಾದ ಪ್ರತ್ಯಕ್ಷಜ್ಞಾನವು ಇಂದ್ರಿಯ ಮತ್ತು ಮನಸ್ಸುಗಳ ಮೂಲಕ ಬಂದದ್ದಲ್ಲ. ವಸ್ತುವಿನ ಜ್ಞಾನಕ್ಕೆ ಅಡ್ಡಿಯಾಗಿರುವ ಕರ್ಮಾಣುಗಳನ್ನು ಹೋಗಲಾಡಿಸಿಕೊಂಡು ಇಂದ್ರಿಯ ಮನಸ್ಸುಗಳ

ಸಹಾಯವಿಲ್ಲದೇ ಜೀವನು ಪಡೆಯುವ ಜ್ಞಾನವನ್ನು ಪ್ರತ್ಯಕ್ಷವೆಂದು ಕರೆಯುತ್ತಾರೆ. ಈ ಪ್ರತ್ಯಕ್ಷ ದಲ್ಲಿ ಮೂರು ವಿಧ. ಅವುಗಳನ್ನು ಕ್ರಮವಾಗಿ ಅವಧಿ, ಮನಃಪರ್ಯಾಯ ಮತ್ತು ಕೇವಲ ಎಂದು ಕರೆಯುತ್ತಾರೆ.

1) ಇಂದ್ರಿಯ ಮತ್ತು ಮನಸ್ಸುಗಳಿಂದ ಕಂಡುಹಿಡಿಯಲಾಗದ ವಸ್ತುವು ಎಂದರೆ ಬಹುದೂರದಲ್ಲಾಗಲೀ ಅಥವಾ ಸೂಕ್ಷ್ಮವಾಗಿಯೋ ಇರಲಿ ಅಥವಾ ಅಡಗಿಕೊಂಡೇ ಇರಲಿ— ಅಂತಹ ವಸ್ತುವಿನ ಜ್ಞಾನವನ್ನು 'ಅವಧಿ' ಎಂದು ಕರೆಯುತ್ತಾರೆ. ರೂಪವುಳ್ಳ ವಸ್ತುವಿನ ಜ್ಞಾನವನ್ನು ಕೊಡುವುದರಿಂದ ಅವಧಿ ಜ್ಞಾನವು ಪರಿಮಿತವಾದದ್ದು.

2) ಮತ್ತೊಬ್ಬರ ಅಂತರಾಳದಲ್ಲಿ ಹಿಂದೆ ಇದ್ದ, ಈಗ ಇರುವ ಆಲೋಚನೆಗಳನ್ನು ಇಂದ್ರಿಯ ಅಥವಾ ಅಪ್ತವಾಕ್ಯದ ಸಾಧನವಿಲ್ಲದೆಯೇ ಅರಿಯುವುದೇ ಮನಃಪರ್ಯಾಯ.

3) ಮತ್ತೊಬ್ಬರ ಮನದಲ್ಲಿರಬಹುದಾದ ಆಲೋಚನೆಗಳನ್ನು ಅರಿಯುವ ಶಕ್ತಿಯಿದ್ದರೂ ಜೀವನಿಗೆ ಸಂಪೂರ್ಣಜ್ಞಾನವಿರುವುದಿಲ್ಲ. ತನಗೆ ಬಾಧಕವಾಗಿರುವ ಕರ್ಮವನ್ನು ಸಂಪೂರ್ಣವಾಗಿ ತೊಡೆದು ಹಾಕಿದನೆಂದರೆ, ವಸ್ತುವಿನ ಪರಿಪೂರ್ಣಜ್ಞಾನವನ್ನು ಅವನು ಪಡೆದುಕೊಳ್ಳುತ್ತಾನೆ. ಈ ಪರಿಪೂರ್ಣ ಜ್ಞಾನವನ್ನೇ 'ಕೇವಲಜ್ಞಾನ' ಎಂದು ಕರೆಯುತ್ತಾರೆ. ಈ ಜ್ಞಾನವು ಜೀವನ ಮುಕ್ತಾವಸ್ಥೆಯನ್ನು ಬಿಂಬಿಸುತ್ತದೆ. ಈ ಅವಸ್ಥೆಯಲ್ಲಿ ಜೀವನು ವಸ್ತುವನ್ನು ಅದರ ಎಲ್ಲ ಗುಣಗಳ ಜೊತೆಗೆ ಸಂಪೂರ್ಣವಾಗಿ ಅರಿತಿರುತ್ತಾನೆ.

ಪರೋಕ್ಷ ಜ್ಞಾನವು ಮತಿ ಮತ್ತು ಶ್ರುತ ಎಂದು ಎರಡು ವಿಧವಾದುದು. ಇಂದ್ರಿಯ ಮತ್ತು ಮನಸ್ಸುಗಳ ಸಹಾಯದಿಂದ ಬಂದ ಜ್ಞಾನವು ಮತಿಜ್ಞಾನ. ಸಂವ್ಯವಹಾರಿಕ ಪ್ರತ್ಯಕ್ಷ, ಸ್ಮೃತಿ (Memory) ಸಂಜ್ಞೆ [Recognition] ಮತ್ತು ಅಭಿನಿಬೋಧ (Inference) ಎಂದು ನಾಲ್ಕು ವಿಧವಾದ ಮತಿಜ್ಞಾನಗಳಿವೆ. ಶ್ರುತಜ್ಞಾನವು ಇತರರಿಂದ ಕೇಳಲ್ಪಟ್ಟಿದ್ದರಿಂದ ಅಥವಾ ಬರೆಯಲ್ಪಟ್ಟಿದ್ದರಿಂದ ನಮಗೆ ದೊರಕುತ್ತದೆ.

ದ್ರವ್ಯಗಳ ವರ್ಗೀಕರಣ

ಪ್ರಪಂಚದಲ್ಲಿರುವ ವಸ್ತುಗಳೆಲ್ಲವನ್ನೂ ಜೀವ ಮತ್ತು ಅಜೀವ ಎಂಬುದಾಗಿ ವಿಂಗಡಿಸಬಹುದು. ಜೀವವು ವಸ್ತುಗಳನ್ನು ಅರಿಯಬಲ್ಲ, ಸುಖದುಃಖಗಳನ್ನೂ ಅನುಭವಿಸಬಲ್ಲ ಚೇತನಾತ್ಮಕ ದ್ರವ್ಯ. ಯಾವುದನ್ನು ಜೀವವು ಅರಿಯಬಲ್ಲದೋ ಅಂತಹ ಅಚೇತನಾತ್ಮಕ ದ್ರವ್ಯವನ್ನು 'ಅಜೀವ' ಎಂದು ಕರೆಯುತ್ತಾರೆ.

ಜೀವ: 1) ಜೀವವು ಒಂದು ಅಸ್ತಿಕಾಯ ದ್ರವ್ಯ. ಎಂದರೆ ಜೀವವು ದೇಶವನ್ನು ಆಕ್ರಮಿಸುತ್ತದೆ. ಆದರೆ ಜಡವಸ್ತು ಆಕ್ರಮಿಸುವಂತೆ ಅದು ದೇಶವನ್ನು ಆಕ್ರಮಿಸುವುದಿಲ್ಲ. ಒಂದೇ ಸ್ಥಳದಲ್ಲಿ ಒಂದಕ್ಕಿಂತ ಹೆಚ್ಚು ಜೀವಗಳು ಇರಬಹುದು—ಒಂದೇ ವಸ್ತುವನ್ನು ಎರಡು ಬೆಳಕುಗಳು ಪ್ರಕಾಶಪಡಿಸುವಂತೆ.

2) ಜೀವವು ಅನಂತದರ್ಶನ, ಅನಂತಜ್ಞಾನ, ಅನಂತಸುಖ ಮತ್ತು ಅನಂತವೀರ್ಯ ಎಂಬ ಲಕ್ಷಣಗಳುಳ್ಳದ್ದು. ಆದರೆ ಕರ್ಮಾಣುಗಳು ವಿವಿಧ ಪ್ರಮಾಣಗಳಿಂದ ಜೀವವನ್ನು ಆವರಿಸುವುದರಿಂದ, ಪ್ರಪಂಚದ ವಸ್ತುಗಳಲ್ಲಿ ಜೀವದ ಚೈತನ್ಯ ಪ್ರಕಟಣೆಯು ವೈವಿಧ್ಯಮಯವಾಗಿರುತ್ತದೆ. ವಿಶೇಷವೇನೆಂದರೆ ಮನುಷ್ಯನಿಗೆ ಚಕ್ಷುರಾದಿ ಇಂದ್ರಿಯಗಳು ಜ್ಞಾನಸಾಧನಗಳಾಗಿರದೇ, ಜ್ಞಾನಬಾಧಕಗಳಾಗಿವೆ. ಏಕೆಂದರೆ ಮನುಷ್ಯನ ಶರೀರ, ಇಂದ್ರಿಯಗಳು, ಪ್ರಾಣ

ಇತ್ಯಾದಿಗಳೂ ಕರ್ಮ ಅಣುಗಳಿಂದ ರಚಿತವಾದದ್ದು. ಜೀವವನ್ನು ಇವು ಆವರಿಸಿ ಅದರ ನಿಜಸ್ವರೂಪ ಪ್ರಕಟಣೆಗೆ ತಡೆಯಾಗಿವೆ.

3) ಜೀವಿಗಳಲ್ಲಿ ಮಾತ್ರ ಜೀವ ಇರದೇ ಜಡವಸ್ತುಗಳಾದ ಕಲ್ಲು, ಲೋಹ ಇತ್ಯಾದಿಗಳಲ್ಲೂ ಜೀವವಿರುತ್ತದೆ. ಈ ವಸ್ತುಗಳಲ್ಲಿ ಕರ್ಮದ ಆವರಣವು ಬಲವಾಗಿರುವುದರಿಂದ ಈ ವಸ್ತುಗಳಲ್ಲಿರುವ ಜೀವಗಳ ಚೈತನ್ಯ ಸ್ವರೂಪದ ಅರಿವು ನಮಗೆ ಉಂಟಾಗುವುದಿಲ್ಲ.

4) ಮೂಲತಃ ರೂಪರಹಿತವಾಗಿದ್ದರೂ, ತಾನು ಆಕ್ರಮಿಸುವ ಶರೀರದ ಪರಿಮಾಣವನ್ನೇ [magnitude] ಜೀವವು ಪಡೆಯುತ್ತದೆ. ಇರುವೆಯಲ್ಲಿ ಜೀವವು ಚಿಕ್ಕದಾಗಿದ್ದರೆ ಆನೆಯಲ್ಲಿ ದೊಡ್ಡದಾಗಿರುತ್ತದೆ.

5) ತಾನು ಹೊಂದಿರುವ ಇಂದ್ರಿಯಗಳ ಸಂಖ್ಯೆಗಳ ಆಧಾರದ ಮೇಲೆ ಜೀವವು ಐದು ಬಗೆಯಾಗಿದೆ. ಮಾನವ, ಸಿಂಹ ಇತ್ಯಾದಿ ಪ್ರಾಣಿಗಳು ಚಕ್ಷು, ಶ್ರೋತ್ರ, ಘ್ರಾಣ, ರಸನ ಮತ್ತು ತ್ವಕ್ ಎಂಬ ಐದು ಇಂದ್ರಿಯಗಳನ್ನು ಪಡೆದಿರುವ ಉತ್ಕೃಷ್ಟ ಮಟ್ಟದ ಜೀವಗಳು. ಮಾನವನು ಈ ಇಂದ್ರಿಯಗಳ ಜೊತೆಗೆ ಮನಸ್ಸೆಂಬ ಅನಿಂದ್ರಿಯವನ್ನು ಪಡೆದಿರುತ್ತಾನೆ. ಜೇನುನೊಣಗಳು ತ್ವಕ್, ರಸನ, ಘ್ರಾಣ, ಚಕ್ಷುಸ್ಸೆಂಬ ನಾಲ್ಕು ಇಂದ್ರಿಯಗಳನ್ನು ಪಡೆದಿವೆ. ಇರುವೆಗಳು ತ್ವಕ್, ರಸನ, ಘ್ರಾಣವೆಂಬ ಮೂರು ಇಂದ್ರಿಯಗಳನ್ನು ಹೊಂದಿವೆ. ಹುಳುಗಳು ತ್ವಕ್ ಮತ್ತು ರಸನವೆಂಬ ಎರಡು ಇಂದ್ರಿಯಗಳನ್ನು ಪಡೆದಿರುವ ಜೀವಿಗಳು. ಸಸ್ಯಗಳು ತ್ವಕ್ ಎಂಬ ಏಕಮಾತ್ರ ಇಂದ್ರಿಯವನ್ನು ಪಡೆದಿರುವ ಕೆಳಮಟ್ಟದ ಜೀವಗಳಾಗಿವೆ.

ಅಜೀವ: ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಎಂಬುದಾಗಿ ಅಜೀವ ದ್ರವ್ಯಗಳನ್ನು ವಿಂಗಡಿಸಲಾಗಿದೆ. ಮೊದಲನೆಯದು ರೂಪವುಳ್ಳ ಅಜೀವದ್ರವ್ಯವಾದರೆ ಕಡೆಯ ನಾಲ್ಕು ರೂಪರಹಿತ ಅಜೀವ ದ್ರವ್ಯಗಳು.

ಪುದ್ಗಲವು ಒಂದು ಭೌತತತ್ತ್ವ. ಇದಕ್ಕೆ ಎರಡು ರೂಪಗಳಿವೆ. ಒಂದು ಅವಿಭಾಜ್ಯವಾದ ಅಣುರೂಪ. ಇನ್ನೊಂದು ಈ ಅಣುಗಳ ಸಂಘಾತ ಅಥವಾ ಸ್ಕಂಧರೂಪ. ನಮಗೆ ಗೋಚರವಾಗುವ ಪ್ರಪಂಚವು ಪುದ್ಗಲದ ಸ್ಕಂಧರೂಪವಾಗಿದೆ. ಈ ಪ್ರಪಂಚವೂ ಪುದ್ಗಲದ 'ಮಹಾಸ್ಕಂಧ'ವೇ ಆಗಿದೆ. ಎರಡು ಅಥವಾ ಹೆಚ್ಚು ಅಣುಗಳು ಒಟ್ಟಾಗಿ ಸೇರಿ ಸ್ಕಂಧವಾಗುತ್ತದೆ. ಅನಂತರ ಈ ಸ್ಕಂಧಗಳು ಸೇರಿ ಪ್ರಪಂಚ ವಸ್ತುಗಳು ಉತ್ಪನ್ನವಾಗುತ್ತವೆ. ಪ್ರಪಂಚದ ವಸ್ತುಗಳಲ್ಲಿನ ವ್ಯತ್ಯಾಸಕ್ಕೆ ಮೂಲತಃ ಯಾವ ವ್ಯತ್ಯಾಸವೂ ಕಂಡುಬರದ ಅಣುಗಳ ವಿವಿಧ ರೀತಿಯ ಸಂಯೋಜನೆಯೇ ಕಾರಣ.

ಅಣುಗಳ ಮತ್ತು ವಸ್ತುಗಳ ಚಲನೆಗೆ 'ಧರ್ಮ' ಎಂಬ ದ್ರವ್ಯವು ಸಹಾಯಕವಾಗಿದೆ. ವಸ್ತುಗಳು ಒಂದು ಕಡೆ ನಿಲ್ಲುವುದಕ್ಕೆ ಅಧರ್ಮ ಎಂಬ ದ್ರವ್ಯವು ಸಹಕರಿಸುತ್ತದೆ. ಈ ಧರ್ಮಾಧರ್ಮಗಳನ್ನು ಪುಣ್ಯಪಾಪಗಳೆಂದು ತಿಳಿಯಬಾರದು. ಈ ದ್ರವ್ಯಗಳು ವಸ್ತುಗಳ ಚಲನೆಗೆ ಮತ್ತು ನಿಲ್ಲುವುದಕ್ಕೆ-ನೀರು ಮೀನು ಚಲಿಸುವುದಕ್ಕೆ ಸಹಾಯವಾಗಿದ್ದಂತೆ–ಸಹಾಯವಾದ ದ್ರವ್ಯಗಳಾಗಿವೆ.

ಜೀವ, ಪುದ್ಗಲ, ಧರ್ಮ ಮತ್ತು ಅಧರ್ಮಗಳೆಂಬ ದ್ರವ್ಯಗಳು ಆಕಾಶವನ್ನು ವ್ಯಾಪಿಸುವ ದ್ರವ್ಯಗಳು. ಆದ್ದರಿಂದ ಅವುಗಳನ್ನು ಅಸ್ತಿಕಾಯ ದ್ರವ್ಯಗಳೆಂದು ಕರೆಯುತ್ತಾರೆ. ಆದರೆ ಕಾಲವೆಂಬ ಅಜೀವ ದ್ರವ್ಯ ಮಾತ್ರ ಆಕಾಶವನ್ನು ವ್ಯಾಪಿಸುವುದಿಲ್ಲ. ಅದು ಅನಸ್ತಿಕಾಯದ್ರವ್ಯ. ಈ ಕಾಲಕ್ಕೆ ಎಲ್ಲ ವಸ್ತುಗಳೂ ಅಧೀನವಾಗಿವೆ. ಈ ಕಾಲವೆಂಬ ದ್ರವ್ಯದ ಸಹಾಯದಿಂದ

ವಸ್ತುಗಳ ಇರುವಿಕೆ, ಬದಲಾವಣೆ, ಚಲನೆ, ಹೊಸತನ ಇತ್ಯಾದಿ ಲಕ್ಷಣಗಳನ್ನು ನಾವು ಅರಿಯ ಬಹುದು. ಕಾಲವೆನ್ನುವುದು ಅನಂತ ಮತ್ತು ವ್ಯಾಪ್ತಿ.

ಅಸ್ತಿಕಾಯದ್ರವ್ಯಗಳ ಆಕ್ರಮಣಕ್ಕೆ ಸ್ಥಳ ನೀಡುವ ದ್ರವ್ಯವನ್ನು 'ಆಕಾಶ'ವೆಂದು ಕರೆಯುತ್ತಾರೆ. ವಸ್ತುಗಳು ಆಕ್ರಮಿಸುವ ಒಂದು ನಿರ್ದಿಷ್ಟ ಜಾಗವನ್ನು ಆಕಾಶವೆಂದು ಕರೆಯುವರು. ಆಕಾಶವು ಲೋಕಾಕಾಶ ಮತ್ತು ಅಲೋಕಾಕಾಶವೆಂದು ಎರಡು ವಿಧ. ಪ್ರಪಂಚದಲ್ಲಿ ಪರಿಮಿತಿಯೊಳಗೆ ಕಂಡು ಬರುವ ಸ್ಥಳವನ್ನು ಲೋಕಾಕಾಶವೆಂದೂ, ಪ್ರಪಂಚದಿಂದ ಹೊರಗೆ ಇರುವ ಶೂನ್ಯಕ್ಕೆ ಅಲೋಕಾಕಾಶವೆಂದು ಕರೆಯುತ್ತಾರೆ.

ಮೋಕ್ಷ : ಸ್ವರೂಪತಃ ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ ಮತ್ತು ಅನಂತಸುಖ ವೆಂಬ ಲಕ್ಷಣಗಳಿಂದ ಕೂಡಿರುವ ಜೀವನ ಬಂಧನಕ್ಕೆ ಕರ್ಮಾವರಣವೇ ಕಾರಣ. ಈ ಕರ್ಮವು ಭೌತಿಕ ಸ್ವಭಾವವುಳ್ಳದ್ದು. ಅಣುರೂಪದಲ್ಲಿ ಕರ್ಮವು ಜೀವನನ್ನು ಆವರಿಸಿ ಅವನ ನಿಜವಾದ ಸ್ವರೂಪವನ್ನು ಮುಚ್ಚಿಬಿಡುತ್ತದೆ.

ಜೀವಿಯ ಇಚ್ಛೆಯೇ ಕರ್ಮಾವರಣಕ್ಕೆ ಕಾರಣ. ಈ ಇಚ್ಛೆಯು ಕ್ರೋಧ, ಮಾನ, ಮಾಯಾ ಮತ್ತು ಲೋಭಗಳ ರೂಪದಲ್ಲಿ ಮನುಷ್ಯನಲ್ಲಿರುವುದು. ಪೂರ್ವದಲ್ಲಿ ತಾನು ಆಚರಿಸಿದಂತಹ ಕೃತಿಗಳನ್ನು ಅನುಸರಿಸಿ ಈ ಗುಣಗಳು ಮನುಷ್ಯನಲ್ಲಿ ಉದಯಿಸುತ್ತವೆ. ಅವನಲ್ಲಿದ್ದು ಕೊಂಡು ಅವು ಕರ್ಮಾಣುಗಳನ್ನು ಆಕರ್ಷಿಸುತ್ತವೆ. ಆಗ ಕರ್ಮಾಣುಗಳು ಜೀವನೆಡೆಗೆ ಹರಿದು ಬರುತ್ತವೆ. ಕರ್ಮಾಣುಗಳು ಹೀಗೆ ಜೀವನೆಡೆಗೆ ಹರಿದು ಬರುವುದನ್ನು 'ಆಸ್ರವ' ಎಂದು ಕರೆಯುತ್ತಾರೆ. ನಂತರ ಈ ಕರ್ಮಾಣುಗಳು ಜೀವನನ್ನು ಎಲ್ಲೆಡೆಗಳಿಂದಲೂ ಬಲವಾಗಿ ಮುತ್ತಿ ಅವನ ನಿಜಸ್ವರೂಪಕ್ಕೆ ಆವರಣವುಂಟು ಮಾಡುತ್ತವೆ. ಇದನ್ನು ಬಂಧ ಎಂದು ಕರೆಯುವರು. ಆಮೇಲೆ ಕರ್ಮಾಣುಗಳು ವ್ಯವಸ್ಥಿತ ರೀತಿಯಲ್ಲಿ ತಾವು ತಾವೇ ವಿನ್ಯಾಸಗೊಂಡು ಕಾರ್ಮಣ ಶರೀರವನ್ನು ಸೃಷ್ಟಿಸುತ್ತವೆ. ಸ್ಥೂಲಶರೀರ, ಇಂದ್ರಿಯಗಳು, ಮನಸ್ಸು, ಪ್ರಾಣ ಮತ್ತು ಜೀವನ ಸ್ವರೂಪಕ್ಕೆ ಅಡ್ಡಿಯಾಗಿರುವ ವಸ್ತುಗಳೆಲ್ಲವನ್ನೂ 'ಕಾರ್ಮಣ ಶರೀರ' ಎಂದು ಕರೆಯುತ್ತಾರೆ. ಪುಣ್ಯಪಾಪಗಳನ್ನು ಭೋಗಿಸಿಬಿಡುವುದರಿಂದ ಈ ಕಾರ್ಮಣ ಶರೀರವು ಕರಗಿಹೋಗುತ್ತದೆ. ಆದರೆ ಸಾಮಾನ್ಯ ಜೀವಿಯಲ್ಲಿ ಅವನಲ್ಲಿರುವ ಇಚ್ಛೆಯ ಕಾರಣ, ಹೊಸ ಹೊಸ ಕರ್ಮಾಣುಗಳು ಜೀವನೆಡೆಗೆ ಹರಿದು ಬರುತ್ತಲೇ ಇದ್ದು ಅವನಿಗೆ ಅವು ಬಂಧಪ್ರಾಯವಾಗಿರುತ್ತವೆ.

ಆದ್ದರಿಂದ ಮೋಕ್ಷವನ್ನು ಬಯಸುವವನು ಮೊದಲು ಹೊಸ ಕರ್ಮಾಣುಗಳನ್ನು ತನ್ನೆಡೆಗೆ ಬರದಂತೆ ತಡೆಯಬೇಕು. ಕರ್ಮಾಣುಗಳನ್ನು ತನ್ನೆಡೆಗೆ ಬರದಂತೆ ನಿಲ್ಲಿಸುವುದಕ್ಕೆ 'ಸಂವರ' ಎಂದು ಕರೆಯುತ್ತಾರೆ. ಸಂವರವನ್ನು ಮಾನವನು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳೆಂಬ ಪಂಚಮಹಾವ್ರತವನ್ನು ಕೈಗೊಳ್ಳುವುದರಿಂದ ಸಾಧಿಸಬಹುದು. ಸಂವರವನ್ನು ಸಾಧಿಸಿದ ನಂತರ ಜೀವನು ಈ ಹಿಂದೆಯೇ ಆವರಿಸಿದ್ದಂತಹ ಕರ್ಮಾಣುಗಳನ್ನು ನಾಶಮಾಡಬೇಕು. ಇದನ್ನೇ 'ನಿರ್ಜರ' ಎಂದು ಕರೆಯುತ್ತಾರೆ. ಪುಣ್ಯಪಾಪಗಳನ್ನು ಅನುಭವಿಸಿಬಿಡುವುದರಿಂದ ಆವರಿಸಿದ್ದಂತಹ ಕರ್ಮಾಣುಗಳೇನೋ ನಾಶವಾಗುತ್ತವೆ. ಆದರೆ ಮೋಕ್ಷವನ್ನು ಬೇಗ ಪಡೆಯಬೇಕೆಂಬ ತೀವ್ರವಾದ ಆಕಾಂಕ್ಷೆಯುಳ್ಳವನು ತಪಸ್ಸಿನಿಂದ ದೇಹವನ್ನು ದಂಡಿಸಿ ಈ ಕರ್ಮಾಣುಗಳನ್ನು ತೊಡೆದುಹಾಕುತ್ತಾನೆ. ಯಾವಾಗ ಅವನು ತನ್ನನ್ನು ಆವರಿಸಿದ್ದಂತಹ ಕರ್ಮವನ್ನು ಸಂಪೂರ್ಣವಾಗಿ ಕರಗಿಸಿಬಿಡುವನೋ ಆಗ ಅವನು ತನ್ನ ನಿಜಸ್ವರೂಪವನ್ನು ಅರಿತುಕೊಳ್ಳುತ್ತಾನೆ. ಅಲ್ಲದೇ ಪ್ರಪಂಚದ ಪ್ರತಿಯೊಂದು ವಸ್ತುವಿನ ಜ್ಞಾನವನ್ನೂ ಪಡೆಯುತ್ತಾನೆ. ಈ ಸ್ಥಿತಿಯನ್ನೇ ಮೋಕ್ಷ ಎಂದು ಕರೆಯುತ್ತಾರೆ. ಮೋಕ್ಷವನ್ನು ಪಡೆದ ಮಹ

ನೀಯನನ್ನು ಕೇವಲ ಜ್ಞಾನಿ ಅಥವಾ ಸಿದ್ಧ ಎಂದು ಕರೆಯುತ್ತಾರೆ. ತೀರ್ಥಂಕರರೆಲ್ಲಾ ಈ ಅವಸ್ಥೆಯನ್ನು ತಲುಪಿದ್ದರೆಂದು ಜೈನಧರ್ಮವು ತಿಳಿಸುತ್ತದೆ. ಜೈನರು ಅವರನ್ನು ಭಕ್ತಿಗೌರವಗಳಿಂದ ಪೂಜಿಸುತ್ತಾರೆ. ಜೈನರಿಗೆ ಈ ತೀರ್ಥಂಕರರೇ ದೇವರು.

ಮೋಕ್ಷಸಾಧನ

ಜೀವನ ಸಂವರ ಮತ್ತು ನಿರ್ಜರೆಗಳಿಗೆ ಸಮ್ಯಕ್‌ಜ್ಞಾನ, ಸಮ್ಯಕ್‌ದರ್ಶನ ಮತ್ತು ಸಮ್ಯಕ್ ಚಾರಿತ್ರ್ಯಗಳು ಸಾಧನಗಳಾಗಿವೆ. ಇವುಗಳನ್ನು 'ತ್ರಿರತ್ನ' ಅಥವಾ 'ರತ್ನತ್ರಯ'ಗಳೆಂದು ಕರೆಯುತ್ತಾರೆ.

ಮಾನವನಲ್ಲಿ ಕ್ರೋಧ, ಮಾನ, ಮೋಹ ಮತ್ತು ಲೋಭ ಎಂಬ ಗುಣಗಳು ಉದಯಿಸುವುದಕ್ಕೆ ಅವನ ಅಜ್ಞಾನವೇ ಕಾರಣ. ಜೀವ ಮತ್ತು ಅಜೀವಗಳ ನಿಜಸ್ವರೂಪವನ್ನು ಅರಿಯದಿರುವುದೇ ಅಜ್ಞಾನ. ಈ ಅಜ್ಞಾನವನ್ನು ಹೋಗಲಾಡಿಸಲು ಸಮ್ಯಕ್ ಎಂದರೆ ಸರಿಯಾದ ಜ್ಞಾನ ಮಾನವನಿಗೆ ಅಗತ್ಯ. ಈ ಸಮ್ಯಕ್ ಜ್ಞಾನವು ತೀರ್ಥಂಕರರ ಬೋಧನೆಗಳನ್ನು ಶ್ರದ್ಧಾ ನಂಬಿಕೆಗಳಿಂದ ಅಧ್ಯಯನಮಾಡುವುದರಿಂದ ಎಂದರೆ ಸಮ್ಯಕ್ ದರ್ಶನದಿಂದ ಲಭಿಸುತ್ತದೆ. ಆದರೆ ಮೋಕ್ಷಕ್ಕೆ ಬರೀ ಜ್ಞಾನಮಾತ್ರ ಸಾಲದು. ಆಚರಣೆಯೂ ಬೇಕು. ಎಂದರೆ ಮನುಷ್ಯನು ಸಮ್ಯಕ್ ಚಾರಿತ್ರ್ಯವುಳ್ಳವನಾಗಬೇಕು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳೆಂಬ ಪಂಚಮಹಾವ್ರತವನ್ನು ನಿಷ್ಠೆಯಿಂದ ಪಾಲಿಸುವುದೇ ಸಮ್ಯಕ್ ಚಾರಿತ್ರ್ಯ. ಈ ಪಂಚವ್ರತಗಳನ್ನು ಕೆಳಕಂಡಂತೆ ವಿವರಿಸಬಹುದು.

1) ಜೈನರು ಅಹಿಂಸೆಗೆ ಬಹು ಪ್ರಾಧಾನ್ಯವಿತ್ತಿದ್ದಾರೆ. ಇತರ ವೈದಿಕ ದರ್ಶನಕಾರರು ಅಹಿಂಸಾಚರಣೆಯನ್ನು ಬೋಧಿಸಿದ್ದರೂ, ಜೈನರು ಅಹಿಂಸಾಪಾಲನೆಗೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ವೈದಿಕದರ್ಶನಗಳೇಕೆ, ಅವೈದಿಕ ದರ್ಶನವಾದ ಅಹಿಂಸೆಯನ್ನು ಬೋಧಿಸುವ ಬೌದ್ಧ ಮತವೂ ಅಹಿಂಸೆಗೆ ಇಷ್ಟು ಪ್ರಾಧಾನ್ಯವಿತ್ತಿಲ್ಲ. "ಚಲಿಸುವ, ಚಲಿಸದಿರುವ ಎಲ್ಲ ವಸ್ತುಗಳಲ್ಲೂ ಜೀವವಿರುವುದರಿಂದ, ಯಾವ ಸಂದರ್ಭದಲ್ಲೂ ಅವುಗಳಿಗೆ ಹಿಂಸೆಯಾಗದಂತೆ ವರ್ತಿಸಬೇಕು" ಎಂದು ಜೈನ ಸಂನ್ಯಾಸಿಗಳು ಬೋಧಿಸುತ್ತಾರೆ. ನಡೆಯುವಾಗ, ಮಾತನಾಡುವಾಗ, ಉಸಿರಾಡುವಾಗ, ಭಿಕ್ಷೆ ಸ್ವೀಕರಿಸುವಾಗ, ಊಟಮಾಡುವಾಗ, ಮಲಮೂತ್ರಗಳನ್ನು ವಿಸರ್ಜಿಸುವಾಗ ಜೀವಿಗಳಿಗೆ ನೋವಾಗದಂತೆ ವರ್ತಿಸಬೇಕೆಂದು ಅವರು ಸಾರುತ್ತಾರೆ. ಆದರೆ ಇಷ್ಟು ಕಠಿಣವಾದ ಆಚರಣೆಯು ಸಂನ್ಯಾಸಿಗೆ ಮಾತ್ರ. ಮನುಷ್ಯನು ತಾನು ಸಂನ್ಯಾಸಿಯಾಗುವ ಯೋಗ್ಯತೆಯನ್ನು ಸಂಪಾದಿಸುವ ತನಕ ಈ ಅನುಷ್ಠಾನವನ್ನು ಇಷ್ಟು ತೀವ್ರವಾಗಿ ಪಾಲಿಸಬೇಕಾದ್ದಿಲ್ಲ.

2) ಸುಳ್ಳು ಹೇಳದಿರುವುದು, ಇನ್ನೊಬ್ಬರಿಗೆ ಹಿತವನ್ನುಂಟುಮಾಡುವ ಉದ್ದೇಶದಿಂದ ನುಡಿದ ಸತ್ಯವೇ ಸತ್ಯ.

3) ಕೊಡದಿದ್ದನ್ನು ತೆಗೆದುಕೊಳ್ಳದಿರುವುದೇ ಅಸ್ತೇಯ.

4) ಇಹಪರಗಳಲ್ಲಿ ಕಾಮಸುಖವನ್ನು ಬಯಸದಿರುವುದು ಮತ್ತು ಇತರರನ್ನು ಕಾಮಸುಖಕ್ಕೆ ಪ್ರೇರೇಪಿಸದಿರುವುದೇ ಬ್ರಹ್ಮಚರ್ಯ.

5) ಇಂದ್ರಿಯವಿಷಯಗಳಾಗಿರುವ ಮತ್ತು ಬಂಧನಕ್ಕೆ ಕಾರಣವಾಗಿರುವ ವಸ್ತುಗಳಿಂದ ದೂರವಿರುವುದೇ ಅಪರಿಗ್ರಹ.

ಜೈನಸಂನ್ಯಾಸಿಗಳು ಈ ಕಠೋರ ವ್ರತಗಳನ್ನು ಇಂದಿಗೂ ನಿಷ್ಠೆಯಿಂದ ಪಾಲಿಸುತ್ತಾರೆ. ವೇದ ಪ್ರಾಮಾಣ್ಯವನ್ನು ಒಪ್ಪಿಕೊಳ್ಳದಿದ್ದರೂ ವೇದ ಪ್ರಣೀತವಾದ ಸಾಮಾನ್ಯ ಧರ್ಮಕ್ಕೆ ಇವರು ಬಹಳ ಪ್ರಾಶಸ್ತ್ಯಕೊಟ್ಟಿದ್ದಾರೆ. " ಇತರರ ಮತಗಳನ್ನು ಖಂಡಿಸಿದೇ ಗೌರವಿಸು, ಜೀವಿಗಳಿಗೆ ನೋವನ್ನುಂಟುಮಾಡಬೇಡ " ಎಂದು ಎಲ್ಲರಿಗೂ ಬೋಧಿಸುವ ಇವರು ಪ್ರಪಂಚದಾದ್ಯಂತ ಪೂಜ್ಯಸ್ಥಾನವನ್ನು ಪಡೆದಿದ್ದಾರೆ.

ಪರಾಮರ್ಶಿಸಲಾಗಿರುವ ಗ್ರಂಥಗಳು

1) *Indian Philosophy* Vol I [on Jainism] by
Dr. S. Radhakrishnan

2) *Essentials of Indian Philosophy* [Chapter 3] by
Prof. M. Hiriyanna

3) *An Introduction to Indian Philosophy* [Chapter 3] by
S. Chatterjee & D. M. Datta

4) *A Critical Survey of Indian Philosophy* [Chapter 4] by
Chandradhar Sharma

5) ಭಾರತೀಯ ತತ್ತ್ವಶಾಸ್ತ್ರದ ಮೂಲಾಂಶಗಳು

Tr. by Dr. K. B. Ramakrishna Rao

ಹರಪ್ಪಾ-ಮೊಹೆಂಜೊದಾರೊಗಳಲ್ಲಿ ನಡೆದ ಉತ್ಖನನಗಳಲ್ಲಿ ದೊರೆತ ವೃಷಭಲಾಂಛನವುಳ್ಳ ಪ್ರತಿಮೆ ಮೊದಲ ತೀರ್ಥಂಕರನದೆಂದೂ, ಇದು ಜೈನಧರ್ಮದ ಪ್ರಾಚೀನತೆಗೆ ಕುರುಹೆಂದೂ ಆರ್. ಪಿ. ಚಂದಾ ತಿಳಿಸಿದ್ದಾರೆ. ಇದು ಹೇಗಿದ್ದರೂ ಜೈನಧರ್ಮ ಬಹು ಪ್ರಾಚೀನವೆಂಬುದು ಎಲ್ಲರೂ ಒಪ್ಪಿರುವ ವಿಷಯ. ತಪೋಬಲದಿಂದ ಜ್ಞಾನಾವರಣೀಯ ಮೊದಲಾದ ಎಂಟು ಕರ್ಮಗಳನ್ನು ಗೆದ್ದವನು ಜಿನ. ಆತನು ಕಂಡು ಬೋಧಿಸಿದುದು ಜಿನಧರ್ಮ. ಯಾರು ತಮ್ಮ ಕರ್ಮವನ್ನು ಗೆಲ್ಲುವರೋ ಅವರು ಜಿನರಾಗುವರು. ಜೈನರ ಪರಮಾತ್ಮ ವಿಕಾರಗಳಿಂದ ದೂರನಾಗಿ, ಸರ್ವಜ್ಞನೂ ವೀತರಾಗನೂ ಕೃತಕೃತ್ಯನೂ ಪರಿಪೂರ್ಣನೂ ಆಗಿರುತ್ತಾನೆ. ಸೃಷ್ಟಿ, ಸ್ಥಿತಿ, ಸಂಹಾರಕಾರ್ಯಗಳು ಆತನವಲ್ಲ. ಪರಮಾತ್ಮನು ಮುಕ್ತಾತ್ಮ. ಈ ಪರಮಾತ್ಮಪದ ಸಾಧನೆಯಿಂದ ಲಭ್ಯ. ಆದ್ದರಿಂದ ಪರಮಾತ್ಮನೆಂಬ ಒಬ್ಬ ವ್ಯಕ್ತಿಯನ್ನು ಜೈನಧರ್ಮ ಒಪ್ಪುವುದಿಲ್ಲ.

[ಬಾ. ರಾ. ಗೋ.]

ಮೂಲ : ಕೆ. ಎಸ್. ದೇಶಪಾಂಡೆ
ಅನು : ಆರ್. ಎಲ್. ಅನಂತರಾಮಯ್ಯ

ವಿಶ್ವವಿದ್ಯಾನಿಲಯ ಪ್ರಕಟಣೆಗಳ ಮಾರುಕಟ್ಟೆಯ ವಿಸ್ತರಣೆ (ಕೆಲವು ಸಲಹೆಗಳು)

1. ಪ್ರವೇಶ ಪೀಠಿಕೆ

ಭಾರತದ ವಿಶ್ವವಿದ್ಯಾನಿಲಯಗಳ ಪ್ರಕಾಶನ ಸಂಸ್ಥೆಗಳ ಒಕ್ಕೂಟವೊಂದನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ರಚಿಸಬೇಕು ಎಂಬ ಸಲಹೆ ಅತ್ಯಂತ ಸ್ವಾಗತಾರ್ಹವಾದದ್ದು. ಇದರಿಂದ ವಿವಿಧ ವಿಶ್ವವಿದ್ಯಾನಿಲಯಗಳ ಉಗ್ರಾಣಗಳಲ್ಲಿ ಸುಮ್ಮನೆ ರಾಶಿಬಿದ್ದಿರುವ ಬಹ್ವಂಶ ಪುಸ್ತಕಗಳ ದಾಸ್ತಾನನ್ನು ಮಾರುವ ಪ್ರಯತ್ನದಲ್ಲಿ ಈ ಕ್ರಮ ಬಹಳ ಉಪಯುಕ್ತವಾದೀತು. ವಿಶ್ವವಿದ್ಯಾನಿಲಯ ಪ್ರಕಟಣೆಗಳ ಮಾರಾಟದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರೀಕ್ಷೆಮಾಡುವುದಂತೂ ಅತ್ಯಗತ್ಯ.

ಒಂದು ಸಂಸ್ಕೃತಿಗೆ ಶಿಕ್ಷಣಕ್ಕೆ ಕೇಂದ್ರಬಿಂದು ಪುಸ್ತಕಗಳು. ಉನ್ನತ ವಿದ್ಯಾಭ್ಯಾಸಕ್ಕೆ ಈ ಮಾತು ಇನ್ನೂ ಹೆಚ್ಚು ಅನ್ವಯಿಸುತ್ತದೆ. ಪುಸ್ತಕಗಳಿಲ್ಲದೆ ಅಧ್ಯಾಪಕ ಉತ್ತಮವಾಗಿ ಬೋಧಿಸಲಾರ, ವಿದ್ಯಾರ್ಥಿ ಉತ್ತಮವಾಗಿ ಕಲಿಯಲಾರ, ಸಂಶೋಧಕರು ಉತ್ತಮ ರೀತಿಯಲ್ಲಿ ಜ್ಞಾನದಿಗಂತಗಳನ್ನು ವಿಸ್ತರಿಸಲಾರರು. ವಿಶ್ವವಿದ್ಯಾನಿಲಯದ ವಿದ್ವಜ್ಜನರಲ್ಲದೆ ಬೇರೆ ಯಾರು ತಾನೆ ಆ ಬಗೆಯ ಪ್ರೌಢವಾದ ವಿದ್ವತ್ ಗ್ರಂಥಗಳನ್ನು ಬರೆಯಲು ಸಮರ್ಥರು ? ಉನ್ನತ ಶಿಕ್ಷಣದ ಪೀಠವೇ ಆದ ವಿಶ್ವವಿದ್ಯಾನಿಲಯವಲ್ಲದೆ ಬೇರೆ ಯಾವ ಸಂಸ್ಥೆ ತಾನೆ ಅಂತಹ ಅಮೋಘ ಕೃತಿಗಳನ್ನು ಪ್ರಕಟಿಸಲು ಅರ್ಹತೆ ಪಡೆದಿದ್ದೀತು ?

2. ವಿಶ್ವವಿದ್ಯಾನಿಲಯದ ಕಾರ್ಯವ್ಯಾಪ್ತಿ

ಆಧುನಿಕ ವಿಶ್ವವಿದ್ಯಾನಿಲಯವೊಂದು ಕೈಗೊಳ್ಳಬೇಕಾದ ಕಾರ್ಯ ಚಟುವಟಿಕೆಗಳ ಪೈಕಿ ಅತ್ಯಂತ ಮುಖ್ಯವಾದ್ದು ಐದು. ಅವುಗಳಲ್ಲೂ ಮೊದಲನೆಯ ಸ್ಥಾನಕ್ಕೆ ಅರ್ಹವಾಗುವುದು ಪ್ರಕಟಣ ಕಾರ್ಯಕ್ರಮ. ಮಿಕ್ಕ ನಾಲ್ಕು ಇವು : (ಅ) ಜ್ಞಾನ ಸಂರಕ್ಷಣೆ (ಆ) ಜ್ಞಾನ ಪ್ರಸಾರ (ಇ) ಜ್ಞಾನದ ಸೀಮೆಗಳನ್ನು ವಿಸ್ತರಿಸುವುದು (ಈ) ವಿಸ್ತರಣ ಯೋಜನೆಗಳು. ಈ ಧ್ಯೇಯಗಳನ್ನು ಈಡೇರಿಸಿಕೊಳ್ಳಲು ಎಂದು ವಿಶ್ವವಿದ್ಯಾನಿಲಯ ಮೂರು ಬಗೆಯ ಪ್ರಕಟಣೆಗಳನ್ನು ಕೈಗೊಳ್ಳಬೇಕಾಗುವುದು. (i) ಪಠ್ಯಪುಸ್ತಕಗಳು (ii) ಸಾಮಾನ್ಯ ಪುಸ್ತಕಗಳು ಮತ್ತು (iii) ಸಂಶೋಧನ ಪ್ರಕಟಣೆಗಳು.

ಪಠ್ಯಪುಸ್ತಕಗಳು

ವಿದ್ಯಾರ್ಥಿಗಳಿಗಾಗಿ ಇವನ್ನು ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗದವರಿಂದಲೇ ಬರೆಯಿಸಿ ಪ್ರಕಟಿಸಬೇಕು. ನಮಗೆ ಸ್ವಾತಂತ್ರ್ಯ ಲಭಿಸಿ 27 ವರ್ಷಗಳಾದಮೇಲೂ ನಾವು ಪಠ್ಯಪುಸ್ತಕಗಳೂ ಸೇರಿದಂತೆ ವಿದೇಶೀ ಪುಸ್ತಕಗಳು ಮತ್ತು ನಿಯತಕಾಲಿಕಗಳನ್ನು ಅವಲಂಬಿಸುವುದು ಇನ್ನೂ ಮುಂದುವರಿದೇ ಇದೆ. ಸ್ನಾತಕೋತ್ತರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಈ ಹೊರೆ ಇನ್ನೂ ಹೆಚ್ಚಿದೆ. ಅದ್ದರಿಂದ ಈ ತೃತೀಯ ವಿಶ್ವದ ಸಮಸ್ಯೆಗಳನ್ನು ಕುರಿತು ಸೂಕ್ತವಾದ ಪಠ್ಯಪುಸ್ತಕಗಳನ್ನು ಅಧ್ಯಾಪಕವರ್ಗದವರಿಂದ ಬರೆಸುವತ್ತ ಈಗ ವಿಶ್ವವಿದ್ಯಾನಿಲಯಗಳು ಹೆಚ್ಚು ಕಾಳಜಿ ವಹಿಸಬೇಕಾಗಿದೆ.

ಭಾರತಕ್ಕೆ ಇಂದಿಗೂ ವಿದೇಶಗಳಿಂದ ಆಮದಾಗುತ್ತಿರುವ ನಿಯತಕಾಲಿಕಗಳ ಮೌಲ್ಯ ವರ್ಷಕ್ಕೆ ಸುಮಾರು ಹತ್ತುಕೋಟಿ ರೂಪಾಯಿ ; ಹಾಗೆ ತರಿಸಿಕೊಳ್ಳುತ್ತಿರುವ ಪುಸ್ತಕಗಳ ಮೌಲ್ಯ ಕೇವಲ ಎರಡು ಕೋಟಿ ರೂಪಾಯಿ. ನಮ್ಮದೇ ವಿಶ್ವವಿದ್ಯಾಲಯ ಗ್ರಂಥಾಲಯದಲ್ಲಿ ಕಳೆದ ಮೂರುವರ್ಷ ಸೇರ್ಪಡೆಗೊಂಡ ಪುಸ್ತಕಗಳನ್ನು ಕುರಿತು ಅಂಕಿ ಅಂಶಗಳ ಒಂದು ವಿಶ್ಲೇಷಣೆ ನಮಗೆ ಏನನ್ನು ತೋರಿಸುತ್ತದೆ? ಗ್ರಂಥಾಲಯಕ್ಕೆ ಕೂಡಿಸಿಕೊಂಡ ಪುಸ್ತಕಗಳಲ್ಲಿ ಸುಮಾರು ಅರ್ಧಭಾಗ ವಿದೇಶೀ ಮೂಲದವು. ಚಂದಾದಾರಿಕೆ ಕೊಟ್ಟ ನಿಯತಕಾಲಿಕಗಳ ಬಗ್ಗೆ ಪರಿಮಾಣ 1 ಕ್ಕೆ 2 ಎಂದಾಗಬಹುದು. ಸುಮಾರು 4. 20 ಲಕ್ಷ ರೂ. ವೆಚ್ಚದಲ್ಲಿ ಚಂದಾದಾರಿಕೆ ಸಲ್ಲಿಸಿ ಪಡೆದ ಒಟ್ಟು 1002 ನಿಯತಕಾಲಿಕ ಪತ್ರಿಕೆಗಳಲ್ಲಿ, ಕೇವಲ 331 ನಿಯತಕಾಲಿಕಗಳು ಭಾರತದಲ್ಲಿ ಪ್ರಕಾಶಿತವಾಗುವಂಥವು; ಇವುಗಳ ಮೌಲ್ಯ ವರ್ಷಕ್ಕೆ ಸುಮಾರು 20, 000 ರೂಪಾಯಿ. ಸುಮಾರು 4 ಲಕ್ಷ ರೂ. ಬೆಲೆಯ 671 ಪತ್ರಿಕೆಗಳು ಹೊರದೇಶದಿಂದ ಬರುವಂಥವು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಇದ್ದ ವಿಶ್ವವಿದ್ಯಾನಿಲಯಗಳು ಕೇವಲ 28. ಈಗ ಅವುಗಳ ಸಂಖ್ಯೆ 102. ಈ ಇಪ್ಪತ್ತೇಳು ವರ್ಷಗಳಾದಮೇಲೆ ಇಷ್ಟು ವಿಶ್ವವಿದ್ಯಾನಿಲಯಗಳು ಉದಯಿಸಿದಲ್ಲಿ ವಿದೇಶೀ ಪಠ್ಯಪುಸ್ತಕಗಳು ಮತ್ತು ನಿಯತಕಾಲಿಕಗಳನ್ನು ಅವಲಂಬಿಸಲೇ ಬಾರದಾಗಿತ್ತು ಎಂದು ಯಾರೇ ಆದರೂ ನಿರೀಕ್ಷಿಸುವುದು ಸರಿಯಷ್ಟೆ.

ಸಾಮಾನ್ಯ ಗ್ರಂಥಗಳು

ಪ್ರಾದೇಶಿಕ ಭಾಷೆಗಳಲ್ಲಿ ಸಾಮಾನ್ಯ ಪುಸ್ತಕಗಳನ್ನು ಬರೆಯಿಸಿ ವಿಶ್ವವಿದ್ಯಾನಿಲಯಗಳು ಪ್ರಕಟಿಸಬೇಕು. ನಮ್ಮದೇ ವಿಶ್ವವಿದ್ಯಾನಿಲಯದ ಬಗ್ಗೆ ಹೇಳುವುದಾದರೆ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರಗಳ ಫಲವಾಗಿ ಈ ಪ್ರಕಟಣ ಕಾರ್ಯ ನಡೆದಿದೆ.

ಸಂಶೋಧನ ಕೃತಿಗಳು

ಜ್ಞಾನಸೀಮೆಗಳನ್ನು ವಿಸ್ತರಿಸುವ ಕಾರ್ಯದಲ್ಲಿ ಸಂಶೋಧನ ಕೃತಿಗಳ ಪ್ರಕಟಣೆ ಅತ್ಯಂತ ಅಗತ್ಯ. ವಿಶ್ವವಿದ್ಯಾನಿಲಯಗಳ ಧ್ಯೇಯವೇ ಇದು. ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಅಧ್ಯಾಪಕರು ಮತ್ತು ಸಂಶೋಧನ ವಿದ್ಯಾರ್ಥಿಗಳು ನಡೆಸುವ ಸಂಶೋಧನೆಗಳ ಫಲವಾಗಿ ಈ ಕೃತಿಗಳು ಲಭ್ಯವಾಗುತ್ತವೆ.

ಹೀಗೆ ಪ್ರತಿಯೊಂದು ವಿಶ್ವವಿದ್ಯಾನಿಲಯವೂ, ತನ್ನ ಅಸ್ತಿತ್ವದ ಸಮರ್ಥನೆಯಾಗಿ, ಪ್ರಕಾಶಕನ ಕರ್ತವ್ಯವನ್ನೂ ನಿರ್ವಹಿಸಲೇಬೇಕಾಗುತ್ತದೆ. ಪಶ್ಚಿಮದ ಅಭಿವೃದ್ಧಿ ರಾಷ್ಟ್ರಗಳಲ್ಲಿ ಮೊದಲಿಗಿಂತ ಹೆಚ್ಚಾಗಿ ಈಗ ಸುಮಾರು ಹತ್ತುವರ್ಷಗಳಿಂದ 'ಪ್ರಕಟಿಸು ಇಲ್ಲವೆ ನಾಶವಾಗು'

ಎಂಬುದು ವಿಶ್ವವಿದ್ಯಾನಿಲಯ ಅಧ್ಯಾಪಕರ ಧ್ಯೇಯವಾಕ್ಯವಾಗಿದೆ. ಇದರ ಫಲವಾಗಿ ಆ ವಿಶ್ವವಿದ್ಯಾನಿಲಯಗಳ ಆವರಣಗಳಲ್ಲಿ ಅಪಾರವಾದ ಪ್ರಕಟಣ ಕಾರ್ಯ ಚಟುವಟಿಕೆ ನಡೆಯುತ್ತಿದೆ.

ನಮ್ಮ ದೇಶದಲ್ಲಿ ವಿದ್ವತ್‌ಕೃತಿಗಳನ್ನು ಪ್ರಕಟಿಸುವ ಕಾರ್ಯಕದಲ್ಲಿ ಮೊದಲು ತೊಡಗಿದ್ದು ಕಲ್ಕತ್ತಾ ವಿಶ್ವವಿದ್ಯಾನಿಲಯ. ಸರ್ ಅಶುತೋಷ್ ಮುಖರ್ಜಿಯವರ ಸಮರ್ಥ ನಾಯಕತ್ವದಲ್ಲಿ ರಾಷ್ಟ್ರಾದ್ಯಂತ ಎಲ್ಲ ಕಡೆಗಳಿಂದಲೂ ಆಕರ್ಷಿಸಿ ವಿದ್ವಾಂಸರ ಒಂದು ತಂಡವನ್ನೇ ಕಟ್ಟಿತು; ತನ್ನ ಪ್ರಕಟಣ ಯೋಜನೆಯನ್ನು ಆರಂಭಿಸಿತು. ತುಂಬ ಅಪರೂಪವಾದ ಅತ್ಯಂತ ಮಹತ್ವವುಳ್ಳ ಸುಮಾರು 1000 ವಿದ್ವತ್‌ಕೃತಿಗಳನ್ನು ಕಲ್ಕತ್ತ ವಿಶ್ವವಿದ್ಯಾನಿಲಯ ಪ್ರಕಟಿಸಿತು. ಅವು ಇಂದು ಮುಗಿದುಹೋಗಿವೆ. ಅವುಗಳಲ್ಲಿ ಅನೇಕ ಪುಸ್ತಕಗಳಿಗೆ ಇಂದಿಗೂ ಅಗಾಧವಾದ ಬೇಡಿಕೆ ಇದೆ. ಇವುಗಳಲ್ಲಿ ಹಲವನ್ನು ಪುನರ್ಮುದ್ರಿಸಲು ಕಲ್ಕತ್ತ ವಿಶ್ವವಿದ್ಯಾನಿಲಯಕ್ಕೆ ಹಣವನ್ನು ಒದಗಿಸಲಾಗಿದೆ ಎಂದು ತಿಳಿದುಬಂದಿದೆ. ಈ ಹಾದಿಯನ್ನೇ ಮದರಾಸು ಮತ್ತು ಮುಂಬಯಿ ವಿಶ್ವವಿದ್ಯಾನಿಲಯಗಳು ಅನುಸರಿಸಿ ಹೊರಟವು. ಇವುಗಳ ಪ್ರಗತಿ ನಿಧಾನವಾಗಿತ್ತು ಅನ್ನೋಣ. ಆಮೇಲೆ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ದಿ ಏಷಿಯಾಟಿಕ್ ಸೊಸೈಟಿ ಆಫ್ ಬಾಂಬೇ, ಇತರ ಕೆಲವು ಓರಿಯಂಟಲ್ ರಿಸರ್ಚ್ ಸಂಸ್ಥೆಗಳು ವಿದ್ವತ್ ಕೃತಿಗಳನ್ನು ಪ್ರಕಟಿಸತೊಡಗಿದುವು. ಹೀಗಾಗಿ ಪುಸ್ತಕ ಪ್ರಕಾಶನದಲ್ಲಿ ತೊಡಗಿರುವ ವಿಶ್ವವಿದ್ಯಾನಿಲಯಗಳು ಮತ್ತು ಪ್ರಾಚ್ಯ ಸಂಶೋಧನ ಸಂಸ್ಥೆಗಳ ಒಟ್ಟು ಸಂಖ್ಯೆ ಸುಮಾರು 395. ರಾಷ್ಟ್ರದಲ್ಲಿ ಇರುವ ಸುಮಾರು 14,000 ಪ್ರಕಾಶಕರಲ್ಲಿ ವಿಶ್ವವಿದ್ಯಾನಿಲಯ ಪ್ರಕಾಶಕರದು ಅಲ್ಪ ಸಂಖ್ಯೆ ಎಂದೇ ಹೇಳಬೇಕು.

3. ಮಾರಾಟ ನಿಧಾನವಾಗಿರುವುದಕ್ಕೆ ಕಾರಣಗಳು

ವಿಶ್ವವಿದ್ಯಾನಿಲಯ ಪ್ರಕಟಣೆಗಳು ಏಕೆ ವೇಗವಾಗಿ ಮಾರಾಟವಾಗುತ್ತಿಲ್ಲ ಎಂಬುದಕ್ಕೆ ಕೆಲವು ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು: (1) ಮಾರಾಟ ವ್ಯವಸ್ಥೆಯ ಕೊರತೆ; (2) ಮಾರಾಟವನ್ನು ಸುಗಮಗೊಳಿಸದಂತಹ ಕಟ್ಟುನಿಟ್ಟಾದ ಕಾನೂನುಗಳು ನಿಬಂಧನೆಗಳು; (3) ಪ್ರಚಾರದ ಕೊರತೆ; (4) ಅವು ಪ್ರಕಟಿಸುತ್ತಿರುವ ಗ್ರಂಥಗಳನ್ನು ಜನರು ಗಮನಿಸುತ್ತಾರೆಯೇ ಹೊರತು ಸಾಮರ್ಥ್ಯವುಳ್ಳ ಕೊಳ್ಳುಗರು ವಾಸ್ತವವಾಗಿ ಕೊಳ್ಳುತ್ತಿಲ್ಲ, ಈ ಗ್ರಂಥಗಳು ಆ ಬಗೆಯವಾಗಿವೆ; (5) ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕಾಗಿ ಅತ್ಯಗತ್ಯವಾಗಿರುವ ಗ್ರಂಥಗಳನ್ನು ಅವು ಪ್ರಕಟಿಸುತ್ತಿಲ್ಲ; (6) ವಿದ್ವತ್ ಕೃತಿಗಳ ಮಾರುಕಟ್ಟೆ ಬಹು ಸೀಮಿತ, ಅದರಿಂದಾಗಿ ಮಾರಾಟದ ವೇಗ ಕುಂಠಿತವಾಗುತ್ತದೆ (7) ಪುಸ್ತಕಗಳಿಗೆ ಇಡುವ ಬೆಲೆ ವಿಪರೀತ ಹೆಚ್ಚು, ಪೇಪರ್‌ಬ್ಯಾಕ್ ಆವೃತ್ತಿಗಳು ದೊರಕುವುದಿಲ್ಲ; (8) ರಾಯಧನ ಬರುವುದೇ ಆದರೂ ಹನಿಹನಿಯಾಗಿ ಬರುತ್ತದೆ; (9) ಈಗ ಕೆಲಸಮಯದ ಹಿಂದೆ ಎನ್‌ಬಿಟಿಯು 1970ರಿಂದ ಪ್ರಕಟಿಸಿದ ಸುಮಾರು 944 ಶೀರ್ಷಿಕೆಗಳ 25 ಲಕ್ಷ ಪುಸ್ತಕಗಳು ಮಾರಾಟವಾಗದೆ ಉಳಿದಿವೆ ಎಂದು ವರದಿಮಾಡಿತು. (ಪ್ರಾಸಂಗಿಕವಾಗಿ ಹೇಳುವುದಾದರೆ ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಕಟಣೆಗಳು ಅದೃಷ್ಟಶಾಲಿಗಳು ಎಂದು ಭಾವಿಸಬೇಕು. ಅವುಗಳಲ್ಲಿ ಹಲವು ಮೂರನೆಯ ನಾಲ್ಕನೆಯ ಆವೃತ್ತಿಗಳನ್ನು ಕಂಡಿವೆ). (10) ಮಾರಾಟ ವ್ಯವಸ್ಥೆಯಿಲ್ಲದ್ದರ ಜೊತೆಗೆ ಮಾರಕವಾದ ಹಣದುಬ್ಬರ ಜನರ ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡಿಬಿಟ್ಟಿರುವುದು ಮಾತ್ರವಲ್ಲ, ಸಂಸ್ಥೆಗಳೂ ಕೊಳ್ಳುವುದು ಕಡಿಮೆಯಾಗಿಬಿಟ್ಟಿದೆ. (11) ಕೊನೆಯದಾದರೂ ಅತ್ಯಂತ ಮುಖ್ಯವಾಗಿ ನಮ್ಮಲ್ಲಿರುವ ಅತ್ಯಲ್ಪ ಸಾಕ್ಷರತೆ. ತುಂಬ ತುಳುಕುವ ಈ ಉಪಖಂಡದಲ್ಲಿ ಕೇವಲ

ಶೇ. 30 ಜನ ಸಾಕ್ಷರರು. ಹೀಗೆ ನಿರಕ್ಷರತೆಯ ಅಗಾಧ ಸಾಗರದಲ್ಲಿ ಗ್ರಂಥಪ್ರಕಟಣೆ ಅಭಿವೃದ್ಧಿ ಹೊಂದದಿದ್ದರೆ ಆಶ್ಚರ್ಯವಿಲ್ಲ.

(1) ಮಾರಾಟ ವ್ಯವಸ್ಥೆಯ ಕೊರತೆ

ವಿಶ್ವವಿದ್ಯಾನಿಲಯಗಳಲ್ಲಿ ಸಮರ್ಥರಾದ ಸೇಲ್ಸ್‌ಮನ್ (ಮಾರಾಟಗಾರ)ಗಳನ್ನು ನೇಮಿಸಿರುವಂತೆ ಕಾಣುವುದಿಲ್ಲ. ಪುಸ್ತಕ ಮಾರಾಟದ ವೇಗ ಹೆಚ್ಚಬೇಕಾದರೆ ಇದು ಅತ್ಯಂತ ಅಗತ್ಯ. ಒಂದು ಕಡೆ, ಮುಂದಿನ ಪ್ರಕಟಣಕಾರ್ಯಕ್ರಮಗಳಿಗೆ ಬೇಕಾದ ಬಂಡವಾಳವನ್ನು ಈಗಿನ ಗ್ರಂಥಗಳ ಮೇಲೆ ವಿಶ್ವವಿದ್ಯಾನಿಲಯಗಳು ಹೂಡಿರುತ್ತವೆ; ಇನ್ನೊಂದುಕಡೆ, ಗ್ರಂಥವಸ್ತು ಹಳೆಯದಾಗಿ ಅನುಪಯುಕ್ತವಾಗಿಬಿಡುವ ಅಪಾಯವೂ ಉಂಟು. ಹಾಗಾದಾಗ ಯಾವ ಉದ್ದೇಶದಿಂದ ಅದನ್ನು ಬರೆಯಲಾಯಿತೋ ಪ್ರಕಟಿಸಲಾಯಿತೋ ಅದು ನೆರವೇರದೆ ಹೋಗುತ್ತದೆ. ಪ್ರತಿಯೊಂದು ವಿಶ್ವವಿದ್ಯಾನಿಲಯವೂ ಒಬ್ಬೊಬ್ಬ ಮಾರಾಟಾಧಿಕಾರಿಯನ್ನು ನೇಮಿಸಿಕೊಳ್ಳಲು ಅವಕಾಶವಿಲ್ಲವಾದರೆ ಕೊನೆಗೆ ಒಂದು ರಾಜ್ಯ ಅಥವಾ ಪ್ರದೇಶದಲ್ಲಿರುವ ಹಲವು ವಿಶ್ವವಿದ್ಯಾನಿಲಯಗಳು ಒಂದಾಗಿ ಕೂಡಿ ಮಾರಾಟಾಧಿಕಾರಿಯನ್ನು ನೇಮಿಸಿಕೊಳ್ಳಬಹುದು. ಹಾಗೆಯೇ ಪ್ರತಿಯೊಂದು ವಿಶ್ವವಿದ್ಯಾನಿಲಯವೂ ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದ ಒಂದು ಗ್ರಂಥ ಪ್ರದರ್ಶನ ಕೇಂದ್ರವನ್ನು ಹೊಂದಿರಬೇಕು. ಬಂದವರು ಅಲ್ಲೇ ಪುಸ್ತಕಕೊಳ್ಳಲು ವ್ಯವಸ್ಥೆ ಮಾಡಿಕೊಡಬೇಕು. "ಒಳಗೆ ಬನ್ನಿ, ಪುಸ್ತಕ ತಿರುವಿಹಾಕಿ" "ಹಣಕೊಟ್ಟು ಕೊಂಡುಹೋಗಿ" ಎಂಬುವು ಅಲ್ಲಿಯ ಘೋಷಣೆಗಳಾಗಬೇಕು.

(2) ಪುಸ್ತಕ ಮಾರಾಟವನ್ನು ಸುಗಮಗೊಳಿಸುವ ಕಾನೂನು ಕಟ್ಟಲೆಗಳು

ಈಗ ಚಾಲ್ತಿಯಲ್ಲಿರುವ ನಿಯಮಾವಳಿಯನ್ನು ಸ್ವಲ್ಪಮಟ್ಟಿಗೆ ಸಡಿಲಗೊಳಿಸಬೇಕಾಗುತ್ತದೆ. ಪುಸ್ತಕ ಮಾರಾಟ ಮಾಡುವ ಏಜೆಂಟರಿಗೆ ಮಾತ್ರವಲ್ಲ, ಪುಸ್ತಕ ಕೊಳ್ಳಬಯಸುವ ವ್ಯಕ್ತಿಗಳೆಲ್ಲರಿಗೂ ಅಧಿಕವರವ ಸೋಡಿ ಕೊಡಬೇಕಾಗುತ್ತದೆ. ಪುಸ್ತಕದ ಬೆಲೆಯನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ದ್ರವ್ಯಶಾಖೆಗೋ ಬ್ಯಾಂಕಿನ ಶಾಖೆಗೋ ಹೋಗಿ ಕಟ್ಟಿ ಅದರ ಚಲನನ್ನು ತಂದು ಪುಸ್ತಕ ಕೊಂಡುಹೋಗಬೇಕು ಎಂದಾಗ ಅಪ್ಪಿತಪ್ಪಿ ಪುಸ್ತಕ ಕೊಳ್ಳಲು ಬಂದ ವ್ಯಕ್ತಿಯ ಉತ್ಸಾಹ ಇಂಗಿಯೇ ಹೋಗುತ್ತದೆ.

(3) ಪ್ರಚಾರದ ಕೊರತೆ

ವಿಶ್ವವಿದ್ಯಾನಿಲಯದ ಪ್ರಕಟಣೆಗಳ ವಾಚಕರು ಸಾಮಾನ್ಯವಾಗಿ ದೂರದೂರಕ್ಕೆ ಹರಡಿಹೋಗಿರುವ ಕೆಲವು ಆರಿಸಿದ ಓದುಗರು. ಆದ್ದರಿಂದ ಸ್ಥಳೀಯ ವರ್ತಮಾನ ಪತ್ರಿಕೆಗಳಲ್ಲಿ ಒಂದೆರಡು ವಿದ್ವತ್ ನಿಯತಕಾಲಿಕಗಳಲ್ಲಿ ಹೊಸ ಪುಸ್ತಕದ ಬಗ್ಗೆ ತಿಳಿಸಿಬಿಟ್ಟರೆ ಸಾಲದು. ವ್ಯಾಪಕವಾದ ಪ್ರಚಾರ ಅತ್ಯಂತ ಅಗತ್ಯ.

(4) ಜನರು ಗಮನಿಸಿದರೂ ಕೊಳ್ಳಲು ಆಕರ್ಷಿತರಾಗದಂತಹ ಪುಸ್ತಕಗಳನ್ನು ವಿಶ್ವವಿದ್ಯಾನಿಲಯಗಳು ಪ್ರಕಟಿಸುತ್ತಿವೆಯೇನು ?

ಖಾಸಗಿ ಪ್ರಕಾಶಕರು ಹೊರತರುವ ಅಂಥವೇ ಪ್ರಕಟಣೆಗಳಿಗೆ ಹೋಲಿಸಿದರೆ ಉನ್ನತವಾದುವೇನೂ ಅಲ್ಲ. ಖಾಸಗೀ ಪ್ರಕಾಶಕರು ಅನುಮಾನಿಸುವ ಪ್ರಕಟಣೆಗಳ ವಿಷಯದಲ್ಲಿ

ವಿಶ್ವವಿದ್ಯಾನಿಲಯಗಳು ಆ ಹಸ್ತಪ್ರತಿಗಳನ್ನು ಸ್ವೀಕರಿಸಲು ಕಾತರತೆಯಿಂದ ಕೈಚಾಚುತ್ತವೆ ಎಂಬ ಟೀಕೆಯೂ ಉಂಟು. ಆದರೆ ಇಲ್ಲಿ ಒಂದು ವಿಚಾರ ಗಮನಿಸಬೇಕು. ವ್ಯಾಪಾರೀ ಪ್ರಕಾಶಕರು ಒಂದು ಪುಸ್ತಕದ ಪ್ರಕಟಣೆಯಿಂದ ತಮಗೆ ಬರಬಹುದಾದ ಲಾಭವನ್ನು ಪ್ರಮುಖವಾಗಿ ಪರಿಗಣಿಸುತ್ತಾರೆ; ವಿಶ್ವವಿದ್ಯಾನಿಲಯದ ಉದ್ದೇಶವಾದರೋ ಆ ಪುಸ್ತಕದಲ್ಲಿ ಮೈದಾಳಿರುವ ವಿಚಾರಗಳನ್ನು ಪ್ರಸಾರಮಾಡುವುದು. ಬಂಡವಾಳಗಾರರು ಪುಸ್ತಕ ಪ್ರಕಾಶನಕ್ಕಿಂತ ಕಾಗದದ ತಯಾರಿಕೆ ಅಥವಾ ಆದರ ಮಾರಾಟಗಳನ್ನು ಹೆಚ್ಚಾಗಿ ಅಪೇಕ್ಷಿಸಬಹುದು; ಏಕೆಂದರೆ, ಕಾಗದದ ಮೇಲೆ ಏನಾದರೂ ಅಚ್ಚಾದ ತಕ್ಷಣವೆ ಆ ಕಾಗದದ ಮೌಲ್ಯವೇ ಕುಗ್ಗಿ ಹೋಗುತ್ತದೆ ಎಂದು ಅವರ ಭಾವನೆಯಾಗಿರುತ್ತದೆ!

'ಭಾರತದಲ್ಲಿ ಪ್ರಕಾಶನೋದ್ಯಮ'ದ ವಿಚಾರವಾಗಿ ಬರೆಯುತ್ತಾ ಭಾರತದ ಮ್ಯಾಕ್‌ಮಿಲನ್ ಸಂಸ್ಥೆಯ ಪ್ರಧಾನ ಸಂಪಾದಕ ಮಾನ್ಯ ತೇಜೇಶ್ವರಸಿಂಗ್ ಹೇಳುತ್ತಾರೆ "....ಜಗತ್ತಿನ ಬೇರೆ ಯಾವುದೇ ರಾಷ್ಟ್ರದಂತಲ್ಲದೆ (ತೃತೀಯ ವಿಶ್ವದ ರಾಷ್ಟ್ರಗಳನ್ನೂ ಇಲ್ಲಿ ಸೇರಿಸುತ್ತಿದ್ದೇನೆ), ಹೆಸರಿಗೆ ಅರ್ಹವಾಗಿರುವ ಪ್ರಕಾಶನ ಸಂಸ್ಥೆಯನ್ನು ಯಾವುದೇ ವಿಶ್ವವಿದ್ಯಾನಿಲಯ ಪಡೆದಿಲ್ಲ. ಬೇರೆ ಕಡೆಗಳಲ್ಲಿ ವಿಶ್ವವಿದ್ಯಾನಿಲಯಗಳು ವಿದ್ವತ್ತನ್ನೂ ಶೈಕ್ಷಣಿಕ ಗುಣಮಟ್ಟವನ್ನೂ ಪ್ರೋತ್ಸಾಹಿಸಲು ಬೇಕಾದಷ್ಟು ಪ್ರಯತ್ನ ನಡೆಸಿವೆ. ಸೀಮಿತ ಮಾರುಕಟ್ಟೆಯುಳ್ಳ, ಖಾಸಗೀ ಪ್ರಕಾಶಕರು ಮನಸ್ಸು ಮಾಡದಂತಹ ಪ್ರೌಢಗ್ರಂಥಗಳನ್ನು ಹೊಸ ಹೊಸ ಆಯಾಮಗಳನ್ನು ತೆರೆಯುವ ಪಠ್ಯಪುಸ್ತಕಗಳನ್ನೂ ಅವು ಪ್ರಕಟಿಸಿವೆ."

(5) ವಿಶ್ವವಿದ್ಯಾನಿಲಯ ಪ್ರಕಟಣಗಳು ಮಂಜೂರಾಗವು

ಸಾಮಾನ್ಯವಾಗಿ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಪುಸ್ತಕಗಳನ್ನು ಕೊಳ್ಳುವುದು ವಿಭಾಗದ ಮುಖ್ಯಸ್ಥರ ಶಿಫಾರಸಿನಮೇಲೆ. ನನ್ನದೇ ಅನುಭವದಿಂದ ಹೇಳುವುದಾದರೆ ಎಲ್ಲ ವಿಭಾಗ ಮುಖ್ಯಸ್ಥರೂ ತಮ್ಮ ತಮ್ಮ ವಿಷಯ ಕ್ಷೇತ್ರದಲ್ಲಿ ಇತರ ವಿಶ್ವವಿದ್ಯಾನಿಲಯಗಳು ಪ್ರಕಟಿಸಿರುವ ಎಲ್ಲ ಗ್ರಂಥಗಳನ್ನೂ ಶಿಫಾರಸು ಮಾಡುವುದಿಲ್ಲ. ಅಧ್ಯಯನ ವಿಷಯಗಳಾಗಿ ಅವುಗಳನ್ನು ನಿಯಮಿಸುವುದಿಲ್ಲ.

ಇತರ ಕಾರಣಗಳ ಬಗೆಗೆ ವಿವರಣೆ ಅನಗತ್ಯ, ಅವೇ ಸ್ಪಷ್ಟವಾಗಿವೆ. ಇದಿಷ್ಟನ್ನು ಹಿನ್ನೆಲೆಯಾಗಿಟ್ಟುಕೊಂಡು ಈ ಕೆಳಗಿನ ಪರಿಹಾರಗಳನ್ನು ಸೂಚಿಸಿದೆ.

4. ಪರಿಹಾರಗಳು

(1) ಒಕ್ಕೂಟದ ಈ ಭಾವನೆಯನ್ನು ಕ್ಷಿಪ್ರವಾಗಿ ಪ್ರಾಮಾಣಿಕವಾಗಿ ಮೂರ್ತರೂಪಕ್ಕೆ ತರಬೇಕು. ಪಂಜಾಬ್ ವಿಶ್ವವಿದ್ಯಾನಿಲಯದ ಪ್ರಕಟಣ ವಿಭಾಗದ ಕಾರ್ಯದರ್ಶಿ ಬಾಲಕೃಷ್ಣ, ತೇಜೇಶ್ವರಸಿಂಗ್ ಮುಂತಾದವರೆಲ್ಲ ಈ ಬಗೆಯ ಒಂದು ಸಂಸ್ಥೆಯನ್ನು ರಾಷ್ಟ್ರಮಟ್ಟದಲ್ಲಿ ರೂಪಿಸಬೇಕೆಂದು ಹೇಳಿದ್ದಾರೆ. ಕಲಕತ್ತೆಯ ಕಲ್ಕತ್ತ ಯೂನಿವರ್ಸಿಟಿ ಪ್ರೆಸ್‌ನ ಸೂಪರಿಂಟೆಂಡೆಂಟ್ ಆದ ಎಸ್ ಕಂಜೀಲಾಲ್ ಅವರು ವಿಶ್ವವಿದ್ಯಾನಿಲಯ ಮುದ್ರಣಾಲಯಗಳ ಸಂಘದ ವ್ಯವಸ್ಥಾಪಕ ಕಾರ್ಯದರ್ಶಿಯಾಗಿದ್ದಾರೆಂದು ತಿಳಿದು ಬರುತ್ತದೆ. ಅವರೊಂದಿಗೆ ಪತ್ರ ವ್ಯವಹಾರ ಮಾಡಿ ಎಷ್ಟು ಮಟ್ಟಿನ ಪ್ರಗತಿ ಸಾಧಿತವಾಗಿದೆ ಎಂದು ಕಂಡುಹಿಡಿಯಬೇಕಾಗಿದೆ. ಇಂಥದ್ದೊಂದು ಸಂಘದ ವತಿಯಿಂದ ವಿಶ್ವವಿದ್ಯಾಲಯ ಪ್ರಕಟಣೆಗಳ ಮಾರಾಟವನ್ನು ವರ್ಧಿಸುವುದು ಸಾಧ್ಯವಾಗಬಹುದು.

(2) ತತ್‌ಕ್ಷಣವೇ ರಾಷ್ಟ್ರದ ಎಲ್ಲ ವಿಶ್ವವಿದ್ಯಾನಿಲಯಗಳೂ ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಇತರ ವಿಶ್ವವಿದ್ಯಾನಿಲಯಗಳು ಪ್ರಕಟಿಸಿದ ಎಲ್ಲ ಪುಸ್ತಕಗಳ ಕನಿಷ್ಠ ಒಂದು ಪ್ರತಿಯನ್ನು ತಮ್ಮ ಗ್ರಂಥಾಲಯಕ್ಕೆ ಕೊಳ್ಳಲು ಸನ್ಮತಿಸಬೇಕು.

(3) ವಿವಿಧ ಪಠ್ಯಕ್ರಮಗಳ ಪಠ್ಯವಿಷಯಗಳನ್ನು ಹೆಚ್ಚುಹೆಚ್ಚಾಗಿ ಭಾರತೀಯಗೊಳಿಸಲು ತೀವ್ರ ಕ್ರಮ ಕೈಗೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚುಹೆಚ್ಚಾಗಿ ಭಾರತೀಯ ಗ್ರಂಥಗಳನ್ನೇ ಅಧ್ಯಯನಕ್ಕೆ ನಿಯಾಮಿಸಲು ಅನುಕೂಲವಾಗುತ್ತದೆ.

(4) ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಇತರ ಪುಸ್ತಕಗಳೊಂದಿಗೆಯೇ ವಿಶ್ವವಿದ್ಯಾನಿಲಯದ ಪ್ರಕಟಣೆಗಳನ್ನೂ ಪಠ್ಯಗ್ರಂಥಗಳಾಗಿಯೋ ಅಧ್ಯಯನಕ್ಕೆ ನಿಯಾಮಿಸಿದ ಪೂರಕ ಗ್ರಂಥಗಳಾಗಿಯೋ ನಿಗದಿ ಮಾಡಬೇಕು. ಕೆಲವು ವಿಶ್ವವಿದ್ಯಾನಿಲಯಗಳು ತಮ್ಮ ತಮ್ಮಲ್ಲಿ ಇದನ್ನು ನಡೆಸುತ್ತಿರಬಹುದು. ಏಕ ಕಾಲದಲ್ಲಿ ಹಲವು ವಿಶ್ವವಿದ್ಯಾನಿಲಯಗಳು ಅವುಗಳನ್ನು ಹೀಗೆ ನಿಯಾಮಿಸುವಂತೆ ಮಾಡುವುದು ಅಗತ್ಯ.

(5) ವಿಶ್ವವಿದ್ಯಾನಿಲಯದ ಪ್ರಕಟಣೆಗಳನ್ನು ಎಷ್ಟು ಸಾಧ್ಯವೋ ಅಷ್ಟು ವಿದ್ವತ್ ಪತ್ರಿಕೆಗಳಿಗೆ ವಿಮರ್ಶೆಗಾಗಿ ಕಳುಹಿಸಬೇಕು, ಕೆಲವು ಪ್ರಸಿದ್ಧ ವಿದೇಶೀ ನಿಯತಕಾಲಿಕಗಳಿಗೂ ಕಳುಹಿಸಬಹುದು. ಒಂದು ಸಂತೋಷದ ವಿಷಯವೆಂದರೆ ನವದೆಹಲಿಯ ವಿವೇಕ್ ಟ್ರಸ್ಟ್, ಭಾರತೀಯ ವಿಶ್ವವಿದ್ಯಾಲಯಗಳ ಸಂಘದ ಕಾರ್ಯದರ್ಶಿ ಡಾ. ಅಮೃಕ್‌ಸಿಂಗರ ಸಮರ್ಥ ನೇತೃತ್ವದಲ್ಲಿ 1976ರ ಜನವರಿ ತಿಂಗಳಿಂದ ಒಂದು ಪತ್ರಿಕೆಯನ್ನು ಪ್ರಾರಂಭಿಸಿದೆ. "ಇಂಡಿಯನ್ ಬುಕ್ ಕ್ರಾನಿಕಲ್: ನ್ಯೂಸ್ ಎಂಡ್ ರಿವ್ಯೂಸ್ ಎಂಬ ಹೆಸರಿನ ಈ ಪತ್ರಿಕೆ ಸುಪ್ರಸಿದ್ಧ ಸುಪ್ರಸಿದ್ಧ ಟೈಮ್ಸ್ ಲಿಟರರಿ ಸಪ್ಲಿಮೆಂಟ್ ಮಾದರಿಯಲ್ಲಿದ್ದು ಭಾರತದಲ್ಲಿ ಪ್ರಕಟವಾಗುವ ಪ್ರೌಢ ಪ್ರಕಟಣೆಗಳೆಲ್ಲವನ್ನೂ ವಿಮರ್ಶಿಸುತ್ತದೆ. ಈ ಅತಿಮುಖ್ಯ ಪತ್ರಿಕೆಗೆ ಎಲ್ಲ ವಿಶ್ವವಿದ್ಯಾನಿಲಯಗಳೂ ತಮ್ಮ ಪ್ರಕಟಣೆಗಳನ್ನು ವಿಮರ್ಶೆಗಾಗಿ ಕಳುಹಿಸಬೇಕು.

(6) ವಿಶ್ವವಿದ್ಯಾನಿಲಯಗಳು ತಮ್ಮ ವಿದ್ವತ್ ಕೃತಿಗಳ ವಿಚಾರವಾಗಿ ವಿವರಣ ಕರಪತ್ರಗಳನ್ನು ಹೊರಡಿಸಿ ಅವನ್ನು ಮುಖ್ಯರಾದ ಪುಸ್ತಕ ವ್ಯಾಪಾರಿಗಳು, ವಿಶ್ವವಿದ್ಯಾನಿಲಯ ಗ್ರಂಥಪಾಲರು, ಸಂಶೋಧನ ಸಂಸ್ಥೆಗಳು, ಆಯಾ ವಿಷಯಗಳನ್ನು ಬೋಧಿಸುತ್ತಿರುವ ಪ್ರಾಧ್ಯಾಪಕರು ಎಲ್ಲರಿಗೂ ಹಂಚಬೇಕು. ಇವಾದ 2-3 ತಿಂಗಳ ನಂತರ ಬಿಡಿಬಿಡಿ ಕರಪತ್ರಗಳನ್ನು ಸಿದ್ಧಪಡಿಸಿ ಅನುಪರಿಗೆ ಆ ಪುಸ್ತಕಗಳ ಬಗ್ಗೆ ಪ್ರಕಟವಾದ ವಿಮರ್ಶೆಯ ಭಾಗಗಳನ್ನು ಅಚ್ಚುಮಾಡಿ ಕೊಡಬೇಕು. ಈ ಸಂದರ್ಭದಲ್ಲಿ ಪ್ರತಿಯೊಂದು ದಾಖಲೆಯನ್ನೂ ಬೇರೆಬೇರೆಯಾಗಿ ಪರಿಗಣಿಸಿ ಸ್ವತಂತ್ರವಾಗಿಯೇ ಪ್ರಕಟಿಸಬೇಕಾದ್ದು ಅತ್ಯಗತ್ಯ ಎಂಬುದನ್ನು ಗಮನಿಸಬೇಕು.

(7) ಆಗಿಂದಾಗ ವಿಶ್ವವಿದ್ಯಾನಿಲಯಗಳು ಏರ್ಪಡಿಸುವ ಕಾರ್ಯಾಗಾರಗಳು, ಸಮ್ಮೇಳನಗಳು, ಮತ್ತಿತರ ಶೈಕ್ಷಣಿಕ ಕೂಟಗಳಲ್ಲಿ ವಿಶ್ವವಿದ್ಯಾನಿಲಯ ಪ್ರಕಟಣೆಗಳ ಪ್ರದರ್ಶನಗಳನ್ನು ವ್ಯವಸ್ಥೆಗೊಳಿಸಬೇಕು. ಆಗಾಗ ವಿಶ್ವವಿದ್ಯಾನಿಲಯದ ಆವರಣದಿಂದ ಹೊರಗೆ ಮುಖ್ಯ ಸಾಂಸ್ಕೃತಿಕ ಕೇಂದ್ರಗಳಲ್ಲಿ (ವಿಶೇಷವಾಗಿ ರಾಜಧಾನಿಗಳನ್ನೂ ಕೂಡಿ) ಇಂಥ ಪ್ರದರ್ಶನಗಳನ್ನು ಏರ್ಪಡಿಸುವುದರಿಂದಲೂ ಅಪೇಕ್ಷಿತ ಫಲ ದೊರಕಬಹುದು.

(8) ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲೂ ಪ್ರಕಟಣ ವಿಭಾಗಕ್ಕೆ ಸೇರಿದಂತೆ ಒಂದು ಪ್ರದರ್ಶನಾಲಯ ಹಾಗೂ ಮಾರಾಟ ಕೇಂದ್ರ ಇರಬೇಕು. ಪ್ರದರ್ಶನಾಲಯದಲ್ಲಿ ಪುಸ್ತಕ ನೋಡಬಂದವರು ಒಂದೋ ಎರಡೋ ಪುಸ್ತಕ ಕೊಳ್ಳಲು ಇಚ್ಛೆಪಟ್ಟರೆ ಅಲ್ಲೇ ನಗದು ಹಣ ಕೊಟ್ಟು ಪುಸ್ತಕ ಕೊಳ್ಳಲು ಅವಕಾಶ ಇರಬೇಕು. ಇಂಥ ಪ್ರದರ್ಶನಾಲಯಗಳು ಜನ ನೆರೆಯುವಂಥ ಮುಖ್ಯ ಸ್ಥಳಗಳಲ್ಲಿ ಇರಬೇಕು. ಬಸ್ಸು ನಿಲ್ದಾಣದಂಥ ಸ್ಥಳಗಳು ಅಪೇಕ್ಷಣೀಯ.

(9) ವಿಶ್ವವಿದ್ಯಾನಿಲಯವು ಇತರ ವಿಶ್ವವಿದ್ಯಾನಿಲಯಗಳಿಂದ ಎಲ್ಲವನ್ನೂ ಅಲ್ಲದಿದ್ದರೂ ಕೆಲವು ಆರಿಸಿದ ಪುಸ್ತಕಗಳನ್ನು ಪಡೆದು ತಮ್ಮ ಪ್ರಕಟಣೆಗಳೊಂದಿಗೆ ಅವುಗಳನ್ನೂ ಪ್ರದರ್ಶಿಸಬೇಕು.

(10) ವಿಶ್ವವಿದ್ಯಾನಿಲಯಗಳು ತೀರಾ ಸಾರ್ವತ್ರಿಕವಾದ ಸಾಮಾನ್ಯ ಪುಸ್ತಕಗಳ ಪ್ರಕಟಣೆಗಳಿಗಿಂತ ಹೆಚ್ಚಾಗಿ ಆಯಾ ಪ್ರದೇಶಕ್ಕೆ ಸಂಬಂಧಪಟ್ಟ ಕೃತಿಗಳಿಗೆ ಪ್ರಾಮುಖ್ಯ ಕೊಡುವುದು ಮೇಲು.

(11) ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಗತ್ಯವಾದ ಪಠ್ಯಪುಸ್ತಕಗಳನ್ನು ರಚಿಸುವ ಕೆಲಸವನ್ನು ಅವರ ಅಧ್ಯಾಪಕರಿಗೇ ವಹಿಸಿ, ಅವರಿಗೆ ವೇತನ ಸಹಿತ ರಜೆ ಕೊಟ್ಟು ಕೆಲಸವು ಕ್ಷಿಪ್ರವಾಗಿಯೂ ಸಮರ್ಪಕವಾಗಿಯೂ ನಡೆಯುವಂತೆ ಏರ್ಪಾಟುಮಾಡಬೇಕು. “ಪುಸ್ತಕ ಪ್ರಕಾಶನ ಉದ್ಯಮದಲ್ಲಿ ಪಠ್ಯಪುಸ್ತಕಗಳ ಮಾರುಕಟ್ಟೆ ಎನ್ನುವುದು ನಾಯನ್ನು ಆಡಿಸುವ ಬಾಲ” ಎಂದು ಹೇಳುವುದುಂಟು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ವಿಶೇಷವಾಗಿ ಆಫ್ರಿಕದ ದೇಶಗಳಲ್ಲಿ ಭಾರತದ ಪಠ್ಯಪುಸ್ತಕಗಳಿಗೆ ಸಮೃದ್ಧವಾದ ಮಾರುಕಟ್ಟೆಯಿದೆ. ನಾವು ಅದನ್ನು ಈಗಲಾದರೂ ಉಪಯೋಗಿಸಿಕೊಳ್ಳಬೇಕು.

(12) ಪ್ರೌಢ ನಿಬಂಧಗಳನ್ನು ಪ್ರಕಟಿಸುವುದಕ್ಕೆ ಮುಂಚಿತವಾಗಿ ವಿಶ್ವವಿದ್ಯಾನಿಲಯಗಳು ಅವುಗಳನ್ನು ಸಂಪೂರ್ಣವಾಗಿ ಪರಿಷ್ಕರಣ ಮಾಡಿಸಬೇಕು. ನಿಬಂಧ ಮೂಲತಃ ಪದವಿಯನ್ನು ಗಳಿಸಲು ಬರೆದದ್ದು. ಆದ್ದರಿಂದ ಅದರ ವಾಚಕವರ್ಗ ಮೂರೋ ನಾಲ್ಕೋ ಮಂದಿ ಪರಿಣತರಿಗೆ ಸೀಮಿತವಾಗಿರುತ್ತದೆ; ಒಂದು ಗ್ರಂಥವಾದರೆ ಹಾಗಲ್ಲ. ಕೆಲವು ವಿಚಾರಗಳನ್ನು, ಭಾವನೆಗಳನ್ನು ಪ್ರಚುರಪಡಿಸುವುದೇ ಅದರ ಧ್ಯೇಯ. ಆದ್ದರಿಂದ ಪಿ ಎಚ್ ಡಿ ನಿಬಂಧವೊಂದನ್ನು ಒಂದು ಗ್ರಂಥವಾಗಿ ಮಾರ್ಪಡಿಸುವುದಕ್ಕಿಂತ ಮೊದಲು ಅದರ ಕರ್ತೃವು ಒಬ್ಬ ಕಲಾವಿದನ ಅಥವಾ ಒಬ್ಬ ಸೃಷ್ಟಿಶೀಲ ಲೇಖಕನ ಪಾತ್ರ ನಿರ್ವಹಿಸಬೇಕಾಗುತ್ತದೆ ಹಾಗೆಯೇ ವಿಶ್ವವಿದ್ಯಾನಿಲಯಗಳೂ ಪ್ರಕಟಣೆಗೆಂದು ಬಂದ ಪ್ರತಿಯೊಂದು ಹಸ್ತಪ್ರತಿಯನ್ನೂ ಜಾಲಾಡಬೇಕಾಗುತ್ತದೆ. ವಿದ್ವತ್ತು ಸಜೀವವಾಗಿದೆ ಎಂಬ ಭಾವನೆ ಅಚ್ಚೊತ್ತಿರುವಂತಹ ಹಸ್ತಪ್ರತಿಯನ್ನು ಮಾತ್ರವೆ ಆರಿಸಿಕೊಳ್ಳಬೇಕು.

(13) ಗ್ರಂಥವೊಂದು ಬಿಡುಗಡೆಯಾಗುವ ಸಂದರ್ಭ ಬಂದಾಗ ಅದಕ್ಕಾಗಿ ಒಂದು ಔಪಚಾರಿಕ ಸಮಾರಂಭವನ್ನು ಏರ್ಪಡಿಸಬೇಕು. ಸಾಂಪ್ರದಾಯಕ ಸಮಾರಂಭಗಳು ನನಗೆ ಮೈ ಉರಿಸುತ್ತವೆ. ಆದರೂ ಈ ಸಲಹೆಯನ್ನು ಏಕೆ ಕೊಡುತ್ತಿದ್ದೇನೆ ಎಂದರೆ ಹೊಸ ಪುಸ್ತಕಗಳ ಆಗಮನವನ್ನು ಸಂಬಂಧಪಟ್ಟವರ ಗಮನಕ್ಕೆ ತರಬೇಕಾದರೆ ಹೀಗೆ ನಗಾರಿಬಡಿಯುವುದು ಅಗತ್ಯ. ಇಂಥ ಸಮಾರಂಭಗಳಾದರೋ ಊರಿನಿಂದ ದೂರದ ಯಾವುದೋ ಒಂದು ಮೂಲೆಯ ವಿಶ್ವವಿದ್ಯಾನಿಲಯದ ಆವರಣದಲ್ಲಾಗದೆ, ನಗರದ ಹೃದಯಭಾಗದಲ್ಲಿ ಒಂದು ಭವನದಲ್ಲಿ ನಡೆಯಬೇಕು ಎಂದೂ ನಾನು ಸೂಚಿಸಬಯಸುತ್ತೇನೆ. ಸಾಮಾನ್ಯವಾಗಿ ವಿಶ್ವವಿದ್ಯಾನಿಲಯದ ಆವರಣಗಳಿರುವುದು ಊರಿನಿಂದ 2 3 ಮೈಲಿಗಳಾಚೆಯೇ. ನಗರದಲ್ಲಾದರೋ ಉನ್ನತ ಸಂಸ್ಕೃತಿಯನ್ನು ನಿರೂಪಿಸುವ ಪುಸ್ತಕಗಳಲ್ಲಿ ಆಸಕ್ತರಾದ ಜನ ಇರುತ್ತಾರೆ.

(14) ಅಂಥ ಸಮಾರಂಭಗಳಲ್ಲಿ ಒಂದು ಪುಸ್ತಕ ಕೊಳ್ಳಬಯಸುವವರಿಗೆ ವಿಶೇಷವಾದ ರಿಯಾಯಿತಿಯನ್ನು ತೋರಿಸುವುದೂ ಅಗತ್ಯ.

(15) ವಿಶ್ವವಿದ್ಯಾನಿಲಯ ಪ್ರಕಟಣೆಗಳ ಮಾರಾಟವನ್ನು ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳಿಗೇ ವಹಿಸಿಕೊಡಬಹುದು. ದೀರ್ಘವಾದ ಬೇಸಿಗೆ ರಜೆಯಲ್ಲಿ ಅವರ ಪಾಲಿಗೆ ಬೇಕಾದಷ್ಟು ಬಿಡುವು ಇರುವುದುಂಟು. ಆಗ ಅವರು ಸ್ಥಳದಿಂದ ಸ್ಥಳಕ್ಕೆ ಹೋಗಿ ಪುಸ್ತಕಗಳನ್ನು ಮಾರು

ವಂತೆ ಏರ್ಪಡಿಸಿ, ಅವರಿಗೆ ವಿಶೇಷ ರೀತಿಯಿಂದ ಶೇ. 50 ರಷ್ಟು ರಿಯಾಯಿತಿ ಕೊಡಬಹುದು.

(16) ಒಂದು ಗ್ರಂಥಮಾಲೆಗೆ ಅಥವಾ ವಿವಿಧ ಮಾಲೆಗಳಿಗೆ ಸದಸ್ಯರಾಗಿ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ವ್ಯಕ್ತಿಗಳೂ ಸಂಸ್ಥೆಗಳೂ ಪಡೆಯಬಹುದಾದ ವ್ಯವಸ್ಥೆಯನ್ನು ಖಾಸಗಿ ಪ್ರಕಾಶಕರು ಏರ್ಪಡಿಸುತ್ತಾರೆ. ಸ್ಥಳೀಯ ನಿದರ್ಶನವಾಗಿ ಮನೋಹರ ಗ್ರಂಥಮಾಲೆಯನ್ನು ನೋಡಬಹುದು. ಲಂಡನ್ನಿನ ಫಾಯಲ್ಸ್ ಬುಕ್‌ಕ್ಲಬ್ ಕೂಡ ಇಂಥದೇ. ಇವು ಗಣನೀಯ ಪ್ರಮಾಣದ ಯಶಸ್ಸನ್ನು ಸಂಪಾದಿಸಿವೆ.

(17) ಪ್ರತಿಯೊಂದು ವಸ್ತುವಿನಲ್ಲೂ ವಿದೇಶೀಯವಾದದ್ದರ ಮೇಲೆ ಮೋಹ ಕಂಡುಬರುತ್ತದಷ್ಟೆ. ಪುಸ್ತಕಗಳ ವಿಷಯದಲ್ಲೂ ಅದು ಉಂಟು ಈ ಮೋಹ ಹೋಗಿ ನಮ್ಮ ದೇಶದ ವಸ್ತುಗಳ ಮೇಲೆ, ಪುಸ್ತಕಗಳ ಮೇಲೆ ಪ್ರೇಮ ಬೆಳೆಯಬೇಕು.

(18) ವಿಶ್ವವಿದ್ಯಾನಿಲಯ ಪ್ರಕಟಣೆಗಳು ವಿಶಿಷ್ಟವಾಗಬೇಕಾದದ್ದು ಅವುಗಳೊಳಗಿನ ವಿಷಯದ, ಚಿಂತನೆಯ ಉನ್ನತ ಗುಣಮಟ್ಟದಿಂದ ಮಾತ್ರವೇ ಆದರೆ ಸಾಲದು. ಅವುಗಳ ಹೊರರೂಪ, ಸೌಂದರ್ಯ ಕೂಡ ಪ್ರಸಿದ್ಧ ವ್ಯಾಪಾರೀ ಪ್ರಕಾಶಕರು ತರುವ ಪುಸ್ತಕಗಳನ್ನು ಮೀರಿಸುವಂತಾಗಬೇಕು.

(19) ಒಂದು ವಿಶ್ವವಿದ್ಯಾನಿಲಯದ ಕರ್ತವ್ಯ ಜ್ಞಾನಪ್ರಸಾರ. ಪುಸ್ತಕಗಳನ್ನು ಮಾರಿ ಲಾಭ ಸಂಪಾದಿಸುವ ಬಗ್ಗೆ ಅವರು ಏಕೆ ತಲೆಕೆಡಿಸಿಕೊಳ್ಳಬೇಕು? ಆದ್ದರಿಂದ ವಿಶ್ವವಿದ್ಯಾನಿಲಯ ಪ್ರಕಟಣೆಗಳಿಗೆ ಅತ್ಯಂತ ಕಡಿಮೆ ಬೆಲೆಯನ್ನು ನಿಗದಿ ಮಾಡಲಿ. ಎಲ್ಲ ಪುಸ್ತಕದಂಗಡಿಗಳಲ್ಲೂ ಅವು ದೊರೆಯುವಂತಾಗಲಿ. ನನ್ನ ಸಲಹೆ—ಅವು ಬಸ್ ಹಾಗೂ ರೈಲ್ವೆ ನಿಲ್ದಾಣಗಳಲ್ಲಿರುವ ಪುಸ್ತಕದಂಗಡಿಗಳಲ್ಲೂ ಸಿಕ್ಕಬೇಕು ಎನ್ನುವುದು. ಒಳ್ಳೆಯ ಚಲನಚಿತ್ರ ಮಂದಿರಗಳು ಹೋಟೆಲುಗಳನ್ನು ತಾನೆ ಏಕೆ ಬಿಡಬೇಕು? ಸೋವಿಯತ್ ರಷ್ಯಾದಲ್ಲಿ ಪ್ರತಿಯೊಂದು ಥಿಯೇಟರು ಹಾಗೂ ಹೋಟೇಲಿಗೂ ಸೇರಿದಂತೆ ಪುಸ್ತಕದಂಗಡಿ ಇರುತ್ತದೆಂದೂ ಎಲ್ಲ ವರ್ಗದ ಜನರಿಗೆ ಹಿಡಿಸುವ ಪುಸ್ತಕಗಳು ಅಲ್ಲಿ ದೊರಕುವುದೆಂದೂ ಕೇಳಿದ್ದೇನೆ.

ಅಂಚೆಯ ಮೂಲಕ ಪುಸ್ತಕ ತರಿಸಿಕೊಳ್ಳುವಾಗ ಅಂಚೆಯ ಶುಲ್ಕ ಕಡಿಮೆಮಾಡುವುದು; ಸಂಚಾರೀ ಪುಸ್ತಕ ಪ್ರದರ್ಶನಗಳು—ಈ ಕೆಲವು ವಿಧಾನಗಳಿಂದಲೂ ಪುಸ್ತಕ ಮಾರಾಟವನ್ನು ಹೆಚ್ಚುಮಾಡಬಹುದು. ಇವೆಲ್ಲವನ್ನೂ ಯಶಸ್ವಿಯಾಗಿ ನಿರ್ವಹಿಸಿದ ನಂತರ ಒಬ್ಬ ನಿರಾಶಾವಾದೀ ಅಮೆರಿಕನ್ ಪ್ರಕಾಶಕ ಆಡಿದ ಈ ಹೇಳಿಕೆಯನ್ನೂ ನಿರಾಕರಿಸುವ ಚೈತನ್ಯವನ್ನು ಪಡೆಯುತ್ತೇವೆ ಎಂದು ಕಾಣುತ್ತದೆ.

"ನಾವು ಅತ್ಯಂತ ಚಿಕ್ಕ ಆವೃತ್ತಿಗಳನ್ನು ಅತ್ಯಧಿಕ ವೆಚ್ಚದಲ್ಲಿ ತಯಾರಿಸಿ, ಅವುಗಳಿಗೆ ಅತ್ಯಧಿಕ ಬೆಲೆ ನಿಗದಿಮಾಡಿಕೊಳ್ಳಲು ಸಾಮರ್ಥ್ಯ ಸ್ವಲ್ಪವೂ ಇರದ ಜನರ ಮಧ್ಯೆ ಅವುಗಳನ್ನು ಮಾರಾಟ ಮಾಡಲು ಪ್ರಯತ್ನಿಸುತ್ತೇವೆ."

5. ಪ್ರಾದೇಶಿಕ ಭಾಷಾ ಗ್ರಂಥಗಳ ಮಾರಾಟ

ಸಾಮಾನ್ಯವಾಗಿ ಪ್ರಾದೇಶಿಕ ಭಾಷೆಯ ಗ್ರಂಥಗಳನ್ನು ಮಾರಾಟ ಮಾಡುವುದು ವಿಶ್ವವಿದ್ಯಾನಿಲಯಗಳಿಗೆ ಕಷ್ಟವಾಗಲಾರದು. ಅವು ವಿಶ್ವವಿದ್ಯಾನಿಲಯ ಪ್ರಕಟಣೆಗಳಾದುದರಿಂದ ಒಂದು ನಿಶ್ಚಿತ ಗುಣಮಟ್ಟ ಅವುಗಳಲ್ಲಿ ಇದೆ ಎಂಬ ಭಾವನೆ ರೂಢವಾಗಿರುತ್ತದೆ. ಕೊಳ್ಳುವ ಸಂಸ್ಥೆಗಳು ಅವುಗಳ ವ್ಯಾಪಾರದಲ್ಲಿ ಯಾವುದೇ ಶಂಕೆ ಇಟ್ಟುಕೊಳ್ಳಬೇಕಾಗಿರುವುದಿಲ್ಲ.

ಸರಕಾರದ ಕೆಲವು ವಿಭಾಗಗಳಲ್ಲಿ, ಅದರಲ್ಲೂ ಶಿಕ್ಷಣ ವಿಭಾಗಗಳಲ್ಲಿ ಒಳ್ಳೆಯ ಪ್ರಾದೇಶಿಕ ಭಾಷಾ ಗ್ರಂಥಗಳನ್ನು ಪ್ರತಿವರ್ಷವೂ ಒಟ್ಟಾಗಿ ಕೊಂಡು ರಾಜ್ಯದ ಶಿಕ್ಷಣಸಂಸ್ಥೆಗಳಿಗೆ ಹಂಚುವ ಪದ್ಧತಿ ಉಂಟು. ಈ ಉದ್ದೇಶದಿಂದ ಅರ್ಹವಾದ ಪ್ರಕಟಣೆಗಳನ್ನು ವಿಭಾಗಗಳು ಪಟ್ಟಿ ಮಾಡುತ್ತವೆ. ಇಂತಹ ಪಟ್ಟಿಗಳಲ್ಲಿ ವಿಶ್ವವಿದ್ಯಾನಿಲಯಗಳ ಪ್ರಾದೇಶಿಕ ಭಾಷಾ ಪ್ರಕಟಣೆಗಳನ್ನು ಯಾವ ಶಂಕೆಯೂ ಇಲ್ಲದೆ ಸೇರಿಸಬಿಡಬಹುದು.

ಕಳೆದ ಎರಡು ವರ್ಷಗಳಿಂದ ಭಾರತ ಸರಕಾರವು ಪ್ರಾದೇಶಿಕ ಭಾಷಾ ಗ್ರಂಥಗಳನ್ನು ' ದಿ ರಾಜಾರಾಮ ಮೋಹನರಾಯ್ ಲೈಬ್ರರಿ ಫೌಂಡೇಷನ್ ಸ್ಕೀಮ್ " ಎಂಬ ಯೋಜನೆಯ ಪ್ರಕಾರ ಕೊಳ್ಳುತ್ತಿದೆ. ಆಯೂ ರಾಜ್ಯದ ವಿಶ್ವವಿದ್ಯಾನಿಲಯಗಳು ಈ ಯೋಜನೆಗೆ ಪುಸ್ತಕ ಕೊಳ್ಳುವ ಅಧಿಕಾರ ಪಡೆದಿರುವ ಗ್ರಂಥಾಪಾಲನಿಗೆ ತಿಳಿಯಪಡಿಸಿ ವಿಶ್ವವಿದ್ಯಾನಿಲಯ ಪ್ರಕಟಣೆಗಳನ್ನು ಈ ಯೋಜನೆಗೆ ಒಪ್ಪಿಸಬೇಕು. ಈ ಕ್ರಮಗಳನ್ನು ಜಾರಿಗೆ ತಂದದ್ದೇ ಆದರೆ ಪ್ರಾದೇಶಿಕ ಭಾಷಾ ಪುಸ್ತಕಗಳು ಮುದ್ರಣಾಲಯದಿಂದ ಬಂದ ದಿನವೇ ಹಲವು ನೂರು ಪ್ರತಿಗಳನ್ನು ಮಾರಾಟ ಮಾಡುವುದು ಸಾಧ್ಯವಾಗುತ್ತದೆ.

ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಕಟನ ಹಾಗೂ ವ್ಯಾಸಂಗ ವಿಸ್ತರಣ ವಿಭಾಗವು ಈ ಕೆಳಗಿನ ಬಗೆಯ ಪುಸ್ತಕಗಳನ್ನು ಪ್ರಕಟಿಸುತ್ತಿದೆ: (ಅ) ಪ್ರಚಾರೋಪನ್ಯಾಸ ಪುಸ್ತಿಕೆಗಳು (ಆ) ಪಠ್ಯಪುಸ್ತಕಗಳು (ಇ) ಸಾಮಾನ್ಯ ಪುಸ್ತಕಗಳು ಮತ್ತು (ಈ) ಸಂಶೋಧನ ಕೃತಿಗಳು.

ಪ್ರಚಾರೋಪನ್ಯಾಸ ಪುಸ್ತಿಕೆಗಳ ಬೆಲೆ ಒಂದಕ್ಕೆ 25 ಪೈಸೆ. ಸಾಮಾನ್ಯ ಓದುಗರು ಗ್ರಾಮೀಣ ಅಕ್ಷರಸ್ಥ ಜನರನ್ನು ಮನಸ್ಸಿನಲ್ಲಿಟ್ಟುಕೊಂಡೇ ಇವುಗಳ ರಚನೆ ಆಗಿರುತ್ತದೆ, ಪಠ್ಯ ಪುಸ್ತಕಗಳಾದರೋ ಜೂನಿಯರ್ ಹಾಗೂ ಪದವೀ ಕಾಲೇಜುಗಳ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿರುತ್ತವೆ. ಸಾಮಾನ್ಯ ಗ್ರಂಥಗಳು ಸಾರ್ವತ್ರಿಕವಾದುವು ; ಇನ್ನು ಕೊನೆಯವರ್ಗದವು ಉನ್ನತ ಶಿಕ್ಷಣ ಪಡೆದವರ, ಪಡೆಯುವವರ ಸಲುವಾಗಿ.

ಕರ್ನಾಟಕ ರಾಜ್ಯದ ಸಾರ್ವಜನಿಕ ಗ್ರಂಥಾಲಯವು ಮೊದಲನೆಯ ಮೂರು ವರ್ಗದ ಪ್ರಕಟಣೆಗಳನ್ನು ಹಲವು ನೂರು ಪ್ರತಿಗಳಲ್ಲಿ ಕೊಳ್ಳಬಹುದು. ಕರ್ನಾಟಕದಲ್ಲಿ 26,000 ಹಳ್ಳಿಗಳಿವೆ. ಅವುಗಳಲ್ಲಿ ಕೊನೆಯ ಪಕ್ಷ 10,000 ದೊಡ್ಡ ಗ್ರಾಮಗಳಿಗೆ ಪ್ರಚಾರ ಪುಸ್ತಕ ಮಾಲೆಯ ಪುಸ್ತಿಕೆಗಳನ್ನು ತಲಾ ಒಂದರಂತೆ ಏಕೆ ಹಂಚಬಾರದು? ತಾಲೂಕು ಮತ್ತು ಜಿಲ್ಲಾ ಗ್ರಂಥಾಲಯಗಳು ಮೇಲೆ ಹೇಳಿದ (ಆ) ಮತ್ತು (ಇ) ವರ್ಗದ ಪುಸ್ತಿಕೆಗಳನ್ನು ಕೊಳ್ಳಬಹುದು. ಹೀಗೆ ಕರ್ನಾಟಕದ ವಿಶ್ವವಿದ್ಯಾನಿಲಯಗಳಿಗೆ ತಮ್ಮ ಕನ್ನಡ ಪ್ರಕಟಣೆಗಳ ಮಾರಾಟವನ್ನು ಹೆಚ್ಚಿಸಿಕೊಳ್ಳಲು ಏನೇನೂ ಕಷ್ಟವಿರಬಾರದಷ್ಟೆ. ಎಲ್ಲ ವಿಶ್ವವಿದ್ಯಾನಿಲಯಗಳೂ ಸೇರಿ ರಾಜ್ಯ ಸರಕಾರವನ್ನು ಒಪ್ಪಿಸಿ ಎಲ್ಲ ಪ್ರೈಮರಿ ಶಾಲೆಗಳಿಗೆ ಹೈಸ್ಕೂಲು, ಜೂನಿಯರ್ ಕಾಲೇಜು ಮತ್ತಿತರ ಶಿಕ್ಷಣ ಸಂಸ್ಥೆಗಳಿಗೆ ವಿಶ್ವವಿದ್ಯಾನಿಲಯ ಪ್ರಕಟಣೆಗಳನ್ನು ಕೊಳ್ಳುವುದರ ಉಪಯುಕ್ತತೆಯನ್ನು ಮುಂದಟ್ಟುಮಾಡಿಕೊಡಬೇಕು.

ಸರಕಾರವು ಈ ಸೂಚನೆಯನ್ನು ಒಪ್ಪಿದ್ದೇ ಆದರೆ ಈ ಕೆಲವು ಲಾಭಗಳು ವಿಶ್ವವಿದ್ಯಾನಿಲಯಗಳಿಗೆ ಮಾತ್ರವಲ್ಲ, ಜನರಿಗೂ ಲಭಿಸುತ್ತವೆ: (1) ಯಾರನ್ನು ಉದ್ದೇಶಿಸಿ ಪುಸ್ತಕಗಳನ್ನು ಬರೆಯಲಾಯಿತೋ ಅಂಥವರ ಕೈಗಳಿಗೆ ಅವು ತಲಪುತ್ತವೆ. (2) ಸಾರ್ವಜನಿಕ ಗ್ರಂಥಾಲಯ ವಿಭಾಗ ಮತ್ತು ಮೇಲೆ ಹೇಳಿದ ಇತರ ಶೈಕ್ಷಣಿಕ ಸಂಸ್ಥೆಗಳಿಂದ ವಿಶ್ವವಿದ್ಯಾನಿಲಯ ತಾನು ಪುಸ್ತಕಗಳ ಮೇಲೆ ಹೂಡಿದ ವೆಚ್ಚವು ಬಂದುಬಿಡುವುದರಿಂದ, ಅದೇ ಹಣವನ್ನು ಸಮಾಜದ ಏಳಿಗೆಗೆ ಅತ್ಯಗತ್ಯವಾಗಿರುವ ಇತರ ವಿಚಾರಗಳ ಬಗ್ಗೆ ಪುಸ್ತಕ ಬರೆಯಿಸಿ ಪ್ರಕಟಿಸಲು ಬಳಸಿಕೊಳ್ಳಬಹುದು. (3) ವಿಶ್ವವಿದ್ಯಾನಿಲಯಗಳು ಈಗ ಹೊರತರುತ್ತಿರುವುದಕ್ಕಿಂತ ಹೆಚ್ಚು

ಸಂಖ್ಯೆಯ ಪ್ರತಿಗಳನ್ನುಳ್ಳ ಆವೃತ್ತಿಗಳನ್ನು ಪ್ರಕಟಿಸಬಹುದು. ನಿದರ್ಶನಕ್ಕೆ ಪ್ರಚಾರಪುಸ್ತಕ ಮಾಲೆಯನ್ನು ನೋಡೋಣ. ಈಗ ಹೊರಡಿಸುತ್ತಿರುವ 5000 ಪ್ರತಿಗಳ ಆವೃತ್ತಿಗೆ ಬದಲು ಬಹು ಸುಲಭವಾಗಿ ಕೊನೆಯಪಕ್ಷ 10.000 ಪ್ರತಿಗಳನ್ನು ಮುದ್ರಿಸಬಹುದು. (4) ಬಹು ಸಂಖ್ಯಾತ ಪ್ರತಿಗಳ ಆವೃತ್ತಿಯೆಂದರೆ ಸಹಜವಾಗಿಯೇ ಮಿತವ್ಯಯ. (5) ಲೇಖಕರಿಗೆ ಗಣನೀಯವಾದ ರಾಯಧನವನ್ನು ಕೊಡುವುದೂ ಇದರಿಂದ ಸಾಧ್ಯವಾಗುತ್ತದೆ. ಅದರಿಂದ ಅವರ ಉತ್ಸಾಹ ಹೆಚ್ಚಿ ಒಳ್ಳೊಳ್ಳೆಯ ಗ್ರಂಥಗಳನ್ನು ಹೆಚ್ಚು ಸಂಖ್ಯೆಯಲ್ಲಿ ಅವರು ರಚಿಸುತ್ತಾರೆ.

6. ಗ್ರಂಥಾಲಯಗಳು ಮತ್ತು ವಿಶ್ವವಿದ್ಯಾಲಯ ಪ್ರಕಟಣೆಗಳು

(1) ಹೆಚ್ಚು ಹಣದ ಅಗತ್ಯ : ಮೇಲೆ ಸೂಚಿಸಿದಂತೆ ವಿಶ್ವವಿದ್ಯಾಲಯ ಗ್ರಂಥಾಲಯಗಳು ರಾಷ್ಟ್ರದ ಎಲ್ಲ ವಿಶ್ವವಿದ್ಯಾನಿಲಯಗಳಿಗೂ ಪ್ರಕಟಿಸುವ ಇಂಗ್ಲಿಷ್ ಪುಸ್ತಕಗಳ ಒಂದೊಂದು ಪ್ರತಿಯನ್ನು ಕೊಳ್ಳಬಹುದು. ಇದಕ್ಕಾಗಿ ಹೆಚ್ಚಿನ ಹಣದ ಮಂಜೂರಾತಿ ಅಗತ್ಯವಾಗುತ್ತದೆ. ಏಕೆಂದರೆ ವಿಶ್ವವಿದ್ಯಾನಿಲಯ ಗ್ರಂಥಾಲಯಗಳಲ್ಲಿ ಯಾವಾಗಲೂ ಹಣದ ಕೊರತೆಯಿರುತ್ತದೆ. ನನ್ನದೇ ಸಂಸ್ಥೆಯ ನಿದರ್ಶನವನ್ನು ಕೊಡಬಹುದಾದರೆ, ಇಲ್ಲಿ ನಾನು ಒಂದು ಸಾವಿರಕ್ಕೂ ಹೆಚ್ಚು ವಿದ್ವತ್ ಪತ್ರಿಕೆಗಳನ್ನು ತರಿಸುತ್ತಿದ್ದೇನೆ. ಒಂದು ವರ್ಷಕ್ಕೆ ಇವುಗಳ ಚಂದಾದಾರಿಕೆ ಸುಮಾರು 4.25 ಲಕ್ಷ ರೂಪಾಯಿ. ಹೊಸ ಪುಸ್ತಕಗಳ ಹೆಚ್ಚಿನ ಪ್ರತಿಗಳನ್ನು ಕೊಳ್ಳುವ ಸಲುವಾಗಿ ಇನ್ನೊಂದು 2 ಲಕ್ಷ ರೂಪಾಯಿ ಬೇಕು. ಇದರಲ್ಲೇ ಇತರ ಸಾಮಾನ್ಯ ಪುಸ್ತಕಗಳ ಹೆಚ್ಚಿನ ಪ್ರತಿಗಳು ಹಾಗೂ ನಿಯತಕಾಲಿಕೆಗಳ ಹಿಂದಿನ ಸಂಚಿಕೆಗಳನ್ನೂ ಕೊಳ್ಳುವುದಾಗುತ್ತದೆ. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ವಿದ್ವತ್ ಗ್ರಂಥಗಳನ್ನು ಕೊಳ್ಳುವುದಕ್ಕಾಗಿ ಅಷ್ಟೇ ಪ್ರಮಾಣದ ಹಣವನ್ನು ಕೊಡುತ್ತದೆಯಾದರೂ ಚಂದಾದಾರಿಕೆಯ ಹಣವನ್ನು ಮಾತ್ರ ವಿಶ್ವವಿದ್ಯಾನಿಲಯವೇ ಕೊಡಬೇಕೆಂದು ಷರತ್ತು ಹಾಕುತ್ತದೆ. ಹಣಕಾಸಿನ ಮುಗ್ಗಟ್ಟಿನಿಂದಾಗಿ ಕಳೆದ 2–3 ವರ್ಷಗಳಿಂದ ಕೆಲವು ಪತ್ರಿಕೆಗಳಿಗೆ ಸದಸ್ಯತ್ವವನ್ನು ನಿಲ್ಲಿಸಬೇಕಾಗಿ ಬಂದಿದೆ. ಅಥವಾ ಆ ವೆಚ್ಚವನ್ನು ಯು. ಜಿ. ಸಿ. ಹಣಕ್ಕೆ ಖರ್ಚುಹಾಕಬೇಕಾಗಿ ಬಂದಿದೆ. ಹೀಗಾಗಿ ವಿಭಾಗದ ಇತರ ಅಗತ್ಯಗಳನ್ನು ಪೂರೈಸಿಕೊಳ್ಳುವುದರಲ್ಲಿ ಕಷ್ಟ ಎದುರಾಗಿದೆ. ನಮಗೆ ನೀಡಿದ ಹಣವು ಹಿಂದುಹೋಗಲು ಎಂದೂ ನಾವು ಅವಕಾಶಕೊಟ್ಟಿಲ್ಲ; ಯಾವಾಗಲೂ ಹಣ ಸಾಲದು ಎಂಬುದೇ ನಮ್ಮ ದೂರೆಯಾಗಿದೆ ಎಂಬುದನ್ನೂ ಇಲ್ಲಿ ಹೇಳಬಹುದಾಗಿದೆ.

2) ವರ್ಗೀಕರಣ ಮತ್ತು ಸೂಚೀಕರಣ : ಗ್ರಂಥಗಳ ವರ್ಗೀಕರಣ ಮತ್ತು ಸೂಚೀಕರಣದಲ್ಲಿ ನಮ್ಮದು ಸಾಪ್ತಾಹಿಕ ಕಾರ್ಯಕ್ರಮ. ಕೆಲಸವು ರಾಶಿ ಬೀಳಲು ಅವಕಾಶ ಕೊಟ್ಟಿಲ್ಲ. ವಾಸ್ತವವಾಗಿ ವಿಶ್ವವಿದ್ಯಾನಿಲಯವು ಪ್ರಕಟಿಸುವ ಒಂದು ಗ್ರಂಥವು ಇನ್ನೂ ಹಸ್ತಪ್ರತಿಯ ಹಂತದಲ್ಲಿರುವಾಗಲೇ ಅದನ್ನು ವರ್ಗೀಕರಿಸಿ ಸೂಚೀಕರಿಸಬಹುದು. ಹಸ್ತಪ್ರತಿಯನ್ನು ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ ಕಳುಹಿಸಿದರೆ, ಅಲ್ಲಿರುವ ಪರಿಣತರಾದ ಸಿಬ್ಬಂದಿ ಅದನ್ನು ವರ್ಗೀಕರಿಸಿ ಸೂಚಿಯನ್ನು ತಯಾರಿಸಿ ಪ್ರಕಾಶನ ವಿಭಾಗಕ್ಕೆ ಹಸ್ತಪ್ರತಿಯನ್ನು ಹಿಂದಿರುಗಿಸುತ್ತಾರೆ. ಆ ಮಾಹಿತಿಯನ್ನು ಶೀರ್ಷಿಕೆಯ ಹಿಂಪುಟದಲ್ಲಿ ಅಚ್ಚು ಮಾಡಬಹುದು. ವಾಷಿಂಗ್‌ಟನ್ ಡಿಸಿಯ ಲೈಬ್ರರಿ ಆಫ್ ಕಾಂಗ್ರೆಸ್ ತನ್ನ ಕಾಪಿರೈಟ್ ವಿಭಾಗಕ್ಕೆ ಕಳಿಸಲಾಗುವ ಪುಸ್ತಕಗಳ ವಿಷಯದಲ್ಲಿ ಹೀಗೆ ಮಾಡುತ್ತದೆ. ಇದರಿಂದ ಗ್ರಂಥಾಲಯದಲ್ಲಿರುವ ಸಿಬ್ಬಂದಿಗೆ ಸಮಯ ಮತ್ತು ಶ್ರಮಗಳು ಉಳಿತಾಯವಾಗುತ್ತವೆ. ಪ್ರಕಾಶನ ವಿಭಾಗವೂ ಕ್ಯಾಟಲಾಗು ಕಾರ್ಡುಗಳನ್ನೂ ಮುದ್ರಿಸಿ ಗ್ರಂಥದೊಂದಿಗೇ ಕಳಿಸಿಕೊಡಬಹುದು.

ಇದೇ ವಿಧಾನವನ್ನೇ ಇತರ ಪ್ರಕಾಶಕರೂ ಅನುಸರಿಸಬಹುದು.

(3) ಒದಗಿಸುವಿಕೆಯ ನಿಯಮಗಳು : ಕೇಂದ್ರ ಶಿಕ್ಷಣ ಸಚಿವಖಾತೆಯು ಈಗ ರಾಷ್ಟ್ರಮಟ್ಟದಲ್ಲಿ ಪುಸ್ತಕ ಒದಗಣೆಯ ರೀತಿನೀತಿಗಳನ್ನು ಕುರಿತ ನಿಯಮಾವಳಿಯನ್ನು ನಿಗದಿಮಾಡಿದೆಯಾಗಿ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ವ್ಯಾಪಾರಿಗಳೊಂದಿಗೆ ಒಪ್ಪಂದ, ಟೆಂಡರು ಮುಂತಾದ ಕಷ್ಟಗಳಿಗೆ ಸಿಕ್ಕಿಕೊಳ್ಳಬೇಕಾಗಿಲ್ಲ. ಅವುಗಳಿಂದಾಗುವ ವಿಳಂಬ, ಕಷ್ಟಗಳೂ ಇರಬೇಕಾಗಿಲ್ಲ. ಯಾವುದೇ ಆಡಿಟ್ ಆಕ್ಷೇಪಣೆಯ ಭೀತಿಯಿಲ್ಲದೆ ಈಗ ಗ್ರಂಥಾಲಯಗಳು ರಾಷ್ಟ್ರದ ಯಾವುದೇ ಪುಸ್ತಕ ವ್ಯಾಪಾರಿಯಿಂದ ಪುಸ್ತಕಗಳನ್ನು ಕೊಳ್ಳಬಹುದಾಗಿದೆ. ಈ ಸೌಲಭ್ಯವಿರುವುದರಿಂದ ವಿಶ್ವವಿದ್ಯಾನಿಲಯ ಗ್ರಂಥಾಲಯಗಳಿಗೆ ಪುಸ್ತಕ ಕೊಳ್ಳುವ ಕೆಲಸ ಅತ್ಯಂತ ವೇಗವಾಗಿ ಸಮರ್ಪಕವಾಗಿ ನಡೆಯಬಹುದಾಗಿದೆ. ವಿವಿಧ ವಿಷಯ ವಿಭಾಗಗಳ ಪ್ರಾಧ್ಯಾಪಕ ಅಧ್ಯಾಪಕರು ತಮಗೆ ಅಗತ್ಯವಾಗಿರುವ ಪುಸ್ತಕಗಳ ಗ್ರಂಥಸೂಚೀವಿವರಗಳನ್ನು ಸಂಪೂರ್ಣವಾಗಿ ಒದಗಿಸಬೇಕಾದದ್ದು ಮಾತ್ರ ಅತ್ಯಗತ್ಯವಾಗಿರುತ್ತದೆ. ಇದರಿಂದ ಪ್ರಕಾಶಕರ ದಲ್ಲಾಳಿ ಯಾವನಿದ್ದಾನೆಂದು ಹುಡುಕಿ ಅಲ್ಲಿಗೆ ಬೇಡಿಕೆಯನ್ನು ಕಳುಹಿಸುವುದು ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ ಸುಲಭ. ಅಧ್ಯಾಪಕ ವರ್ಗದವರು ದೆಹಲಿ, ಮುಂಬಯಿ, ಕಲ್ಕತ್ತ ಮೊದಲಾದ ಪುಸ್ತಕ ಕೇಂದ್ರ ನಗರಗಳಿಗೆ ಹೋದಾಗ ಪುಸ್ತಕದಂಗಡಿಗಳಿಗೆ ಭೇಟಿ ನೀಡಿ ಉಪಯುಕ್ತವೆನಿಸಿದ ಗ್ರಂಥಗಳನ್ನು ಆರಿಸಬಹುದು. ಅವರು ಮಾಡಬೇಕಾದ್ದು ಇಷ್ಟೆ. ವ್ಯಾಪಾರಿಯನ್ನು ಆ ಪುಸ್ತಕಗಳ ಪಟ್ಟಿಯನ್ನು ಕಳುಹಿಸಿಕೊಡುವಂತೆ ಅಥವಾ ಒಪ್ಪಿಗೆಗಾಗಿ ಎಂದು ಪುಸ್ತಕಗಳನ್ನೇ ಕಳುಹಿಸಿಕೊಡುವಂತೆ ಕೇಳುವುದು. ಇರುವ ಪುಸ್ತಕಗಳೇ ಮತ್ತೆ ಬಾರದಂತೆ ತಾಳೆನೋಡಿ ಪುಸ್ತಕ ಪಟ್ಟಿಗಳನ್ನು ಅಂಗೀಕರಿಸುವುದು ಇದರಿಂದ ಸಾಧ್ಯವಾಗುತ್ತದೆ.

(4) ನೋಂದಣಿ ರಿಜಿಸ್ಟರಿಗೆ ನಮಸ್ಕಾರ : ಪುಸ್ತಕಗಳನ್ನು ಗ್ರಂಥಾಲಯದಲ್ಲಿ ಕ್ರಮಬದ್ಧವಾಗಿ ಜೋಡಿಸಿಡುವ ವಿಚಾರದಲ್ಲಿ ನನ್ನ ಸ್ವಂತ ಅಭಿಪ್ರಾಯ, ವಿಶ್ವವಿದ್ಯಾನಿಲಯ ಗ್ರಂಥಾಲಯಗಳಲ್ಲಿ ಆಡಿಟ್ ನಿಯಮಗಳ ಪ್ರಕಾರ ಬರೆದಿಡಬೇಕಾದ ಆಕ್ಸೆಷನ್ ರಿಜಿಸ್ಟರು ಎನ್ನುವುದು ಪ್ರಾಚೀನವಾದ ಒಂದು ನಿಷ್ಪ್ರಯೋಜಕ ಕೆಲಸ. ಅದನ್ನು ಬಿಟ್ಟುಬಿಡಬಹುದು. ಪುಸ್ತಕ ವ್ಯಾಪಾರಿಗಳು ಕೊಡುವ ಇನ್‌ವಾಯ್ಸ್‌ಗಳನ್ನೇ ಆಕ್ಸೆಷನ್ ಸಂಖ್ಯೆ ನಮೂದಿಸಿ ಫೈಲುಮಾಡಿಕೊಂಡರೆ ತೀರಿತು, ಆ ಉದ್ದೇಶ ನೆರವೇರುತ್ತದೆ. ಆ ರಿಜಿಸ್ಟರು ಕೊಡಬಹುದಾದ ಪ್ರಕಾಶನ ಸ್ಥಳ, ವರ್ಷ, ಪುಟಸಂಖ್ಯೆ ಇತ್ಯಾದಿ ವಿವರಗಳನ್ನು ಈಗ ಸಿಬಿಐ, ಐಎನ್‌ಬಿ, ಬಿಎನ್‌ಬಿ, ಮುಂತಾದ ಯಾವುದೇ ಪ್ರಾಮಾಣಿಕೃತ ಗ್ರಂಥಸೂಚಿಯಲ್ಲಿ ಪಡೆಯಬಹುದು. ಆ ರಿಜಿಸ್ಟರನ್ನು ನಿವಾರಿಸುವುದರಿಂದ ತಾಂತ್ರಿಕ ಕಾರ್ಯದ ಒಂದು ಹಂತವನ್ನು ಕಡಮೆ ಮಾಡಬಹುದು.

(5) ವರ್ಗೀಕರಣದಲ್ಲಿ ಅಧ್ಯಾಪಕರ ನೆರವು: ಪುಸ್ತಕಗಳ ವರ್ಗೀಕರಣದಲ್ಲಿ ಅಧ್ಯಾಪಕರು ನೆರವಾಗುವುದಾದರೆ ಅದನ್ನು ಕ್ಷಿಪ್ರಗೊಳಿಸಬಹುದು. ತಮ್ಮ ತಮ್ಮ ಅಧ್ಯಯನ ವಿಷಯಗಳ ಪೂರ್ವಾರ್ಜಜ್ಞಾನವು ಸೂಕ್ಷ್ಮ ವಿಭಾಗಗಳ ತಿಳಿವಳಿಕೆಯೂ ಅವರಿಗಿರುವುದರಿಂದ ಅವುಗಳನ್ನು ಖಚಿತವಾಗಿ ಅರ್ಥಮಾಡಿಕೊಳ್ಳಲು ಅವುಗಳಿಗೆ ವರ್ಗಸಂಖ್ಯೆ ನೀಡಲು ತಾಂತ್ರಿಕ ಸಿಬ್ಬಂದಿ ಹೆಚ್ಚು ಶ್ರಮಪಡಬೇಕಾಗುವುದಿಲ್ಲ.

(6) ವರ್ಗೀಕರಣದ ಸರಳ ವಿಧಾನ: ಪುಸ್ತಕಗಳನ್ನು ಸುಲಭವಾಗಿಯೂ ಕ್ಷಿಪ್ರವಾಗಿಯೂ ವರ್ಗೀಕರಿಸಿ ಅಲಮಾರುಗಳಿಗೆ ವರ್ಗಾಯಿಸಲು ಸೂಕ್ತವಾದ ಸರಳ ವಿಧಾನದ ವರ್ಗೀಕರಣವನ್ನು ನಾನು ಒಪ್ಪುತ್ತೇನೆ. ಮಿಶ್ರಸೂತ್ರಗಳು ಮತ್ತು ಸಂಕೇತಗಳಿಂದ ನಿಬಿಡವಾದ ದ್ವಿಬಿಂದು (ಕೋಲನ್) ವರ್ಗೀಕರಣ ತಾಂತ್ರಿಕ ಸಿಬ್ಬಂದಿಗೆ ಅನೇಕ ಸಮಸ್ಯೆಗಳನ್ನು ತರುತ್ತದೆ. ಅದಕ್ಕೆ ಪದೇ ಪದೇ ಆಗಿರುವ ಪರಿಷ್ಕರಣ ಸಮಸ್ಯೆಯನ್ನು ಹೆಚ್ಚಿಸಿದೆ. ದಶಾಂಶ (ಡಿ. ಸಿ.) ಅಥವಾ ಯು. ಡಿ. ಸಿ. ವರ್ಗೀಕರಣ ವಿಧಾನವನ್ನು ನಾನು ಉತ್ತಮವೆನ್ನುತ್ತೇನೆ.

(7) ಉಪಸಂಹಾರ: ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸ್ಮರಿಸಬಹುದು. ಕ್ಯೂಬಾದ ಫಿಡೆಲ್ ಕ್ಯಾಸ್ಟ್ರೋ ತಾನು ಹಾಕಿದ ಪಂಚವಾರ್ಷಿಕ ಯೋಜನೆಯ ಧ್ಯೇಯಗಳಲ್ಲಿ ಒಂದಾಗಿ ತನ್ನ ಜನಕ್ಕೆ ಪುಸ್ತಕಗಳನ್ನು ನೀರು ಮತ್ತು ಗಾಳಿಯಷ್ಟೇ ಸಮೃದ್ಧವಾಗಿಯೂ ಅಗ್ಗವಾಗಿಯೂ ದೊರಕಬೇಕೆಂದು ನಿರ್ಧರಿಸಿದನು. ವಿಶ್ವವಿದ್ಯಾನಿಲಯವೊಂದರ ಧ್ಯೇಯವು ನಾಗರಿಕರ ಸಾಂಸ್ಕೃತಿಕ ದಿಗಂತಗಳನ್ನು ವಿಸ್ತರಿಸುವುದು, ಜ್ಞಾನದ ಮಿತಿಗಳನ್ನು ವಿಸ್ತರಿಸುವುದು.

ಆದ್ದರಿಂದ ಪ್ರಕಟಿಸಿದ ಗ್ರಂಥಗಳನ್ನು ಎಷ್ಟು ಸಾಧ್ಯವೋ ಅಷ್ಟು ವ್ಯಾಪಕವಾಗಿ ಹಂಚಬೇಕು. ಅಂದರೆ, ವಿಶ್ವವಿದ್ಯಾನಿಲಯಗಳು ಪುಸ್ತಕಗಳಿಗೆ ಹಾಕುವ ಬೆಲೆ ಸಾಮಾನ್ಯನಿಗೆ ನಿಲುಕದಂತಾಗಬಾರದು.

ಈ ಪ್ರಬಂಧದ ಮೊದಲಲ್ಲಿ ಸೂಚಿಸಿದಂತೆ ಪುಸ್ತಕಗಳು ಮತ್ತು ನಿಯತಕಾಲಿಕಗಳಿಗಾಗಿ ನಾವು ವಿದೇಶೀ ಮಾರುಕಟ್ಟೆಯನ್ನು ಅವಲಂಬಿಸುವುದು ಬಹುಮಟ್ಟಿಗೆ ಕಡಿಮೆಯಾಗಬೇಕು. ಉಪಗ್ರಹವನ್ನು ಕಕ್ಷೆಗೆ ಸೇರಿಸಲು ಸಮರ್ಥವಾದ, ಅಣುಸಾಧನವೊಂದನ್ನು ಆಸ್ಫೋಟಿಸಿ ಅಂತರರಾಷ್ಟ್ರೀಯ ಅಣುಶಕ್ತಿ ಕೂಟವನ್ನು ಪ್ರವೇಶಿಸಿದ ಒಂದು ರಾಷ್ಟ್ರವು ಪುಸ್ತಕಗಳಿಗಾಗಿ ವಿದೇಶೀ ಮಾರುಕಟ್ಟೆಯನ್ನೇ ಪೂರ್ತಿ ಅವಲಂಬಿಸುವುದು ಇನ್ನು ಸಲ್ಲದು. ಕೇಂದ್ರ ಸರಕಾರವೂ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವೂ ಈ ಅಗತ್ಯವನ್ನು ಮನಗಂಡು ಪುಸ್ತಕ ಪ್ರಕಟಣೆಯನ್ನು ಅತ್ಯಂತ ತುರುತಾಗಿ ಸುಧಾರಿಸಬೇಕಾದ ಒಂದು ಉದ್ಯಮವೆಂದು ಪರಿಗಣಿಸಬೇಕು. ವಿಶ್ವವಿದ್ಯಾನಿಲಯಗಳೂ ಸಂಶೋಧನ ಸಂಸ್ಥೆಗಳೂ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಅಗತ್ಯವಾದ ಗ್ರಂಥಗಳನ್ನು ಪ್ರಕಟಿಸುವುದರಲ್ಲಿ ಅಗಾಧವಾದ ನೆರವು ನೀಡಬೇಕು.

ಮಾವಿನಕುಳಿ ಶ್ರೀನಿವಾಸ

ಹವ್ಯಕರಲ್ಲಿ ಔಷಧ ಪದ್ಧತಿ

'ಹವ್ಯಕರು' ಒಂದು ಬ್ರಾಹ್ಮಣ ಉಪಪಂಗಡವಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಅಡಿಕೆ ತೋಟಗಳು ಇರುವ ಕಡೆಗಳಲ್ಲಿ ಇವರ ನೆಲಸುವಿಕೆ ವಿಶೇಷವಾಗಿ ಕಂಡುಬರುತ್ತದೆ. ಆಂಗ್ಲ ಪದ್ಧತಿಯ ಔಷಧ ಕ್ರಮಗಳು ಭಾರತದಲ್ಲಿ ಕಾಲಿರಿಸುವುದಕ್ಕೆ ಮೊದಲಿನಿಂದಲೂ, ತಮ್ಮ ಹಿರಿಯರಿಂದ ಕಲಿತ ಔಷಧ ಪದ್ಧತಿಯನ್ನು ಮುಂದುವರಿಸಿಕೊಂಡು ಬರುತ್ತಿರುವ ಹವ್ಯಕರಿಗೆ ತಮ್ಮ ಪದ್ಧತಿಯ ಬಗ್ಗೆ ಇರುವ ನಂಬಿಕೆ ಸಂಪೂರ್ಣವಾಗಿ ನಶಿಸಿಹೋಗಿಲ್ಲ. ಪೀಳಿಗೆಯಿಂದ ಪೀಳಿಗೆಗೆ ಜನ ವಿದ್ಯಾವಂತರಾಗುತ್ತಾ ಬಂದಂತೆ ಆಂಗ್ಲ ಪದ್ಧತಿಯ ವ್ಯಾಮೋಹಕ್ಕೊಳಪಟ್ಟು ಪ್ರಭಾವಿತರಾಗಿ, ಮೂಲ ಪದ್ಧತಿಯ ಉಪಯೋಗ ಕ್ಷೀಣಿಸುತ್ತಾ ಬಂದಿದೆ. ಜೊತೆಗೆ, ಸಂಬಂಧಪಟ್ಟ ಪದಾರ್ಥಗಳ ಕೊರತೆ, ಬೆಲೆ ಏರಿಕೆ, ಕಲಬೆರಕೆ ಮತ್ತು ಇಂದಿನ ವೈಜ್ಞಾನಿಕ ಯುಗದಲ್ಲಿ ಹಳೆಯ ಪದ್ಧತಿಯನ್ನು ಮುಂದುವರಿಸುವುದು ಅಸಹ್ಯಕರ ಎಂಬ ಮೂಗು ಮುರಿಯುವಿಕೆ ಈ ಪದ್ಧತಿಯ ಅಧಃಪತನಕ್ಕೆ ಮೂಲಕಾರಣಗಳು. ಇದರಿಂದಾಗಿ, ಈ ಪದ್ಧತಿಯ ಕ್ರಮಗಳು ಕಾಲಕ್ರಮೇಣ ರಹಸ್ಯದಲ್ಲಿ ಲೀನವಾಗುವ ಸಾಧ್ಯತೆಗಳುಂಟು. ವೈಜ್ಞಾನಿಕವಾಗಿ ಸುಧಾರಣೆಗಳನ್ನು ತರುವುದರ ಮೂಲಕ ಈ ಪದ್ಧತಿಯಿಂದಾಗುವ ಅನುಕೂಲಗಳೆಷ್ಟು ಎಂಬುದನ್ನು ನಾವು ವಿವೇಚಿಸಬೇಕು. ನನ್ನ ತಾಯಿಗೆ ಗೊತ್ತಿರುವ ಕೆಲವು ಔಷಧಕ್ರಮಗಳನ್ನು ಇಲ್ಲಿ ವಿವರಿಸಲು ಪ್ರಯತ್ನ ಮಾಡಿದ್ದೇನೆ.

1. ಮೆಣಸಿನಕಾಳು ಕಷಾಯ—ಮೆಣಸಿನಕಾಳು ಮತ್ತು ಜೀರಿಗೆಯನ್ನು ನೀರಿಗೆ ಹಾಕಿ ಕುದಿಸಿ ಬೆಲ್ಲ ಸಕ್ಕರೆಯನ್ನು ಬೆರೆಸಿ ಹಾಲು ಹಾಕಿ ಕುಡಿಯುವುದು. ಸಣ್ಣ ಜ್ವರ ಮತ್ತು ಶೀತಕ್ಕೆ ಗುಣಕಾರಿ.

2. ಜೇಷ್ಠಮಧು ಕಷಾಯ—ಜೇಷ್ಠಮಧು ಮತ್ತು ಜೀರಿಗೆಯನ್ನು ನೀರಿಗೆ ಹಾಕಿ ಕುದಿಸಿ ಬೆಲ್ಲ ಸಕ್ಕರೆಯನ್ನು ನೀರಿಗೆ ಬೆರೆಸಿ ಹಾಲು ಹಾಕಿ ಕುಡಿಯುವುದು. ಬಾಯಿ ಹುಣ್ಣಿಗೆ ಒಳ್ಳೆಯ ಔಷಧ.

3. ಮೆಂತ್ಯೆಕಾಳನ್ನು ತುಪ್ಪದಲ್ಲಿ ಹುರಿದು ನೀರಿಗೆ ಹಾಕಿ ಕುದಿಸಿ ಬೆಲ್ಲಹಾಕಿ ಕುದಿಸಿ ನಂತರ ಹಾಲಿನಲ್ಲಿ ಹಾಕಿ ಕುಡಿಯುವುದು. ಕಾಲು, ಕೈಗಳಲ್ಲಿ ಕಸ ಉಂಟಾಗಿ ದಪ್ಪವಾಗುವಿಕೆ(ವಾತ) ಇದರಿಂದ ವಾಸಿಯಾಗುತ್ತದೆ.

4. ನೋವಾದಲ್ಲಿ, ಪೆಟ್ಟಾದಲ್ಲಿ ಮೆಣಸಿನಕಾಳು ಎಣ್ಣೆ ಗುಣಕಾರಿ.

5. ದಡಸಲು ಸುರಪ ಚಕ್ಕೆಯನ್ನು ಜಪ್ಪಿ ನೀರಿನಲ್ಲಿ ಕುದಿಸಿ ಬೆಲ್ಲ ಹಾಕಿ ಹಾಲಿಗೆ ಬೆರಸಿ ಕುಡಿಯುವುದು. ಶೀತೋಷ್ಣದಿಂದ ಉಂಟಾಗುವ ಕೆಮ್ಮಿಗೆ ಒಳ್ಳೆಯದು.

6. ಹೊಳೆನಾಸವಾಳದ ಬೇರು ತಂದು ಕುಟ್ಟಿ, ಜೀರಿಗೆ ಹಾಕಿ ಕುದಿಸಿ ಕಷಾಯ ಮಾಡುವುದು. ರಕ್ತ ಬಣಗಿಹೋಗಿದ್ದರೆ ಈ ಕಷಾಯವನ್ನು 45 ದಿನಗಳು ಕುಡಿಯುವುದರಿಂದ ಮೊದಲಿನ ಸ್ಥಿತಿಗೆ ಬರುತ್ತಾರೆ.

7. ಶರೀರದಲ್ಲಿ ನಂಜು ಸೇರಿಕೊಂಡಿದ್ದರೆ, ಅರಿಸಿನ, ನಿಂಬೆಕಾಯಿ ಮತ್ತು ಮಿಟ್ಲೆ ಸೊಪ್ಪಿನ ಚಟ್ನಿಗಳ ಉಪಯೋಗದಿಂದ ನಂಜು ನಾಪತ್ತೆ.

8. ಜಿತೋತ್ ಕಡ್ಡಿಯನ್ನು ನೀರಿನಲ್ಲಿ ಕುದಿಸಿ ಜೀರಿಗೆ ಮೆಣಸಿನಕಾಳು ಹಾಕಿ ನಿಂಬೆ ಹುಳಿ, ಉಪ್ಪನ್ನು ಬೆರಸಿ ಕುಡಿಯುವುದು. ಮೈಕೈ ನೋವು, ನೆಗಡಿ ಮತ್ತು ಜ್ವರಕ್ಕೆ ಉತ್ತಮ.

9. ಅರಳು ಕಷಾಯ:— ಅರಳುಕಾಳು, ಮೆಣಸಿನಕಾಳು ಪುಡಿಮಾಡಿ ನೀರಿನಲ್ಲಿ ಕುದಿಸಿ ಕಷಾಯ ಮಾಡಿ ಕುಡಿಯುವುದು. ಕೆಮ್ಮು ಮತ್ತು ಜ್ವರಕ್ಕೆ ಒಳ್ಳೆಯದು.

10. ನಿಂಬೆಹಣ್ಣಿನ ಪಾನಕ—ಬೆಳಿಗ್ಗೆ ಎದ್ದ ಕೂಡಲೇ ಕುಡಿಯಬೇಕು. ನೀರಿನಲ್ಲಿ ಹಣ್ಣನ್ನು ಕುದಿಸಿ, ಜೀರಿಗೆ+ಮೆಣಸಿನಕಾಳು+ಅರಿಸಿನ ಕೊಂಬು ಹಾಕಿ ನೀರಿನಲ್ಲಿ ಕುದಿಸಿ ಒರಳಿನಲ್ಲಿ ತಿರುವಿ ಬೆಲ್ಲ ಬೆರೆಸಿ ಕುಡಿಯುವುದು. ಪಿತ್ತ, ನಂಜು ಉಷ್ಣ ಇವು ಮೂರಕ್ಕೂ ಉತ್ತಮ ಔಷಧ.

11. ಕೊಡಸನ ಹೂ—ಈ ಹೂವನ್ನು ತಂದು ಬಿಸಿಲಿನಲ್ಲಿ ಒಣಗಿಸಿ ಉಪ್ಪು ನೀರಿನಲ್ಲಿ ನೆನಸಿ ಮತ್ತೆ ಬಿಸಿಲಿನಲ್ಲಿ ಒಣಗಿಸಬೇಕು. ತುಪ್ಪದಲ್ಲಿ ಕರಿದು ಊಟದಲ್ಲಿ ಉಪಯೋಗಿಸುವುದು. ಇದು ಬಸಳೆ ರುಚಿ ಮತ್ತು ದೇಹದಲ್ಲಿರುವ ನಂಜಿನ ಅಂಶ ಹೋಗುತ್ತದೆ.

12. ಹೆಸರುಕಾಳನ್ನು ಚೆನ್ನಾಗಿ ಬೇಯಿಸಿ ಬಂದಮೇಲೆ ಬೆಲ್ಲ ಹಾಕಿ ಹಾಲು ಬೆರೆಸಿ ಕುಡಿಯುವುದು. ಪಿತ್ತ ತಲೆತಿರುಗುವಿಕೆಗೆ ಒಳ್ಳೆಯದು.

13. ನೆಲ್ಲಿಕಾಯಿಯನ್ನು ಕುಟ್ಟಿ ಪುಡಿಮಾಡಿ ಜೀರಿಗೆ, ಮೆಣಸು ಹಾಕಬೇಕು. ಮಜ್ಜಿಗೆಯಲ್ಲಿ ಕದಡಿ ಸ್ವಲ್ಪ ಬೆಲ್ಲ ಅಥವಾ ಸಕ್ಕರೆ ಹಾಕಿ ಊಟಕ್ಕೆ ಉಪಯೋಗಿಸಿದರೆ ಪಿತ್ತ ಕಡಮೆಯಾಗುತ್ತದೆ.

14. ಕೊಡಸನ ಬೇರನ್ನು ಹುಳಿಮಜ್ಜಿಗೆಯಲ್ಲಿ ತೇಯ್ದು ಕುಡಿದರೆ ಶೀತೋಷ್ಣದಿಂದ ಉಂಟಾಗುವ ಭೇದಿಗೆ ಒಳ್ಳೆಯ ಔಷಧ.

15. ಊಟದಲ್ಲಿ ಉಪಯೋಗಿಸುವ ಕಂಚಿಕಾಯಿ ಚಟ್ನಿ ಮತ್ತು ಗಂಧದ ಸೊಪ್ಪು (ಎಲೆ ಉರಿಗೆ ಸೊಪ್ಪು) ಚಟ್ನಿಗಳು ಪಿತ್ತ ಮತ್ತು ನಂಜುಗಳ ನಿರ್ಮೂಲನಕ್ಕೆ ಗುಣಕಾರಿ.

16. ಶ್ರೀಗಂಧವನ್ನು ತೇಯ್ದು ಬೆಲ್ಲ, ನಿಂಬೆಹುಳಿ, ಉಪ್ಪು ನೀರಿಗೆ ಹಾಕಿ ಬೆಳಿಗ್ಗೆ ಎದ್ದ ಕೂಡಲೆ ಉಪಯೋಗಿಸಬೇಕು. ನಂಜು ಮತ್ತು ಪಿತ್ತಕ್ಕೆ ಒಳ್ಳೆಯದು.

17. ಶುಂಠಿರಸ ತೆಗೆದು ಕುಡಿಯುವುದು. ವಾಂತಿ ಭೇದಿಗೆ ಉತ್ತಮ ಔಷಧ.

18. ಕಸೆಕಸೆಯನ್ನು ಮಜ್ಜಿಗೆಯಲ್ಲಿ ಅರೆದು ಸಣ್ಣ ಮಕ್ಕಳಿಗೆ ಕುಡಿಸಿದರೆ ಭೇದಿ ಕಡಿಮೆಯಾಗುತ್ತದೆ.

19. ಉಷ್ಣದಿಂದ ಭೇದಿಯಾಗಿದ್ದಲ್ಲಿ ಎಳನೀರು ಕುಡಿಸುತ್ತಾರೆ.

20. ಉಷ್ಣತೆಯಿಂದ ಮೂತ್ರ ಕಟ್ಟಿದಲ್ಲಿ ಬಾರ್ಲಿ, ದ್ರಾಕ್ಷಿ ಕಷಾಯ ಒಳ್ಳೆಯದು.

21. ಉತ್ತುತ್ತೆಯನ್ನು ತೇಯ್ದು ಹಾಲಿನಲ್ಲಿ ಬೆರೆಸಿ ಕುಡಿಯುವುದರಿಂದ ಭೇದಿಯಾಗದಿದ್ದವರಿಗೆ ಅನುಕೂಲ.

22. ಜೇನುಮೇಣಕ್ಕೆ ಎಳನೀರು ಸೇರಿಸಿ ಕುದಿಸಬೇಕು. ಸೀಸೆಯಲ್ಲಿ ಹಾಕಿಟ್ಟರೆ, ಕಾಲು ಒಡೆದಾಗಲೆಲ್ಲಾ ಹಚ್ಚುವುದರಿಂದ ಗುಣವಾಗುತ್ತದೆ.

23. ಕಾಯಿನೀರನ್ನು ಚೆನ್ನಾಗಿ ಕುದಿಸಿದಾಗ, ಅದು ಕಪ್ಪಗೆ ಲೇಹದಂತೆ ಗಟ್ಟಿಯಾಗುತ್ತದೆ. ಇದನ್ನು ಕಡಿದ ಗಾಯಕ್ಕೆ ಹಚ್ಚಿದರೆ ತತ್‌ಕ್ಷಣ ಗುಣವಾಗುತ್ತದೆ. ನೋವು ಇರುವುದಿಲ್ಲ.

24. ಜೇನುತುಪ್ಪ, ಸೀಮೆಎಣ್ಣೆ, ಸುಣ್ಣ ಮತ್ತು ತುಪ್ಪ ಇವು ಸುಟ್ಟಗಾಯಕ್ಕೆ ಇತರೆ ಔಷಧಗಳು.

25. ಆಕಳುತುಪ್ಪ—ಹೊಟ್ಟೆಗೆ ತೆಗೆದುಕೊಳ್ಳುವುದು. ಮೈಗೆ ಹಚ್ಚಿ ಸ್ನಾನಮಾಡುವುದು. ಕಾಫಿ, ಟೀಯಲ್ಲಿ ಬೆರೆಸಿ ಕುಡಿಯುವುದು. ವಾತಕ್ಕೆ ಉಪಶಮನಕಾರಿ.

26. ಜೇಷ್ಠಮದ್ದು, ಸಕ್ಕರೆ ಮತ್ತು ಜೀರಿಗೆ ಮೂರನ್ನೂ ಬೆರೆಸಿ ಬಾಯಲ್ಲಿಟ್ಟು ಅಗಿಯುವುದರಿಂದ ಕೆಮ್ಮು ಕಡಿಮೆಯಾಗುತ್ತದೆ.

27. ಭತಿ ಗಿಡದ ಬೇರನ್ನು ನಿಂಬೆಹುಳಿಯಲ್ಲಿ ತೇಯ್ದು ನೆಕ್ಕುವುದು. ಸ್ವಚ್ಛವಾಗಿ ಉಚ್ಚಾರವಾಗದ ನಾಲಿಗೆಗೆ ಇದು ಸಹಕಾರಿ. ಸಣ್ಣ ಮಕ್ಕಳ ತೊದಲು ಮಾತಿಗೆ ಇದು ಸಿದ್ಧೌಷಧ.

28. ಓಮಿನ ಕಾಳನ್ನು ಕೊಬ್ಬರಿ ಎಣ್ಣೆಗೆ ಬೆರಸಿ ಕುದಿಸಿ ಕಿವಿಗೆ ಬಿಡುವುದು. ಕಿವಿ ನೋವಿಗೆ ಒಳ್ಳೆಯದು.

29. ಕಣ್ಣು ಪಟ್ಟು (ಕುಟುಕು)—ಕಣ್ಣಿಗೆ ಹರಳೆಣ್ಣೆ ಬಿಡುವುದು. ಹಾಲಿನ ಕೆನೆ, ಗೋವಿನ ಹಸಿಹಾಲು, ಎದೆಹಾಲು ಇತರೆ ಔಷಧಗಳು. ಕಣ್ಣುರಿ, ಕಣ್ಣು ಕೆಂಪಾಗುವಿಕೆ ಕಡಿಮೆಯಾಗುತ್ತದೆ.

30. ಮೆಂತ್ಯೆ—ಅಕ್ಕಿ ಸೇರಿಸಿ ಅನ್ನಮಾಡಿ ಆಕಳು ತುಪ್ಪ ಹಾಕಿ ಊಟ ಮಾಡುವುದು. ಉಪ್ಪು, ತಂಬಾಕಿನ ಚೂರು ಇತರೆ ಔಷಧಗಳು. ಹಲ್ಲುನೋವು ಕಡಿಮೆಯಾಗುತ್ತದೆ.

31. ಸುಣ್ಣ ಮತ್ತು ಬೆಲ್ಲವನ್ನು ಕಲಸಿ ಗಂಟಲಿನ ಹೊರಭಾಗಕ್ಕೆ ಹಚ್ಚುವುದು. ಸಂಜಿನಕಾಯಿಯನ್ನು ನಿಂಬೆಹುಳಿಯಲ್ಲಿ ತೇಯ್ದು ನೆಕ್ಕಿದರೆ ಗಂಟಲುನೋವು ಹೋಗುತ್ತದೆ.

32. ಕುಂಕುಮವನ್ನು ಬೆಣ್ಣೆಯ ಜೊತೆಗೆ ತೇಯ್ದು ಹಚ್ಚುವುದರಿಂದ, ಬಸಲೆಸೊಪ್ಪು ಅರೆದು ಹಚ್ಚುವುದರಿಂದ ಶಂಖತೇಯ್ದು ಹಚ್ಚುವುದರಿಂದ,ಕುರು, ಕೀವು ತುಂಬಿ ವ್ರಣವಾಗುವಿಕೆ ಸಂಪೂರ್ಣ ಮಾಯವಾಗುತ್ತದೆ.

33. ಪೆಟ್ಟಾಗಿ ರಕ್ತ ಬಂದರೆ ಕಾಫಿಪುಡಿ ಹಾಕಿದರೆ ನಿಲ್ಲುತ್ತದೆ.

34. ಗದ್ದೆ ಉರಿಗೆ ಬಳ್ಳಿಯನ್ನು ಜಪ್ಪಿ ಜೀರಿಗೆ ಮತ್ತು ಮೆಣಸಿನಕಾಳು ಹಾಕಿ ಕಷಾಯ ಮಾಡುವುದು. ಸಣ್ಣ ಜ್ವರಕ್ಕೆ ಒಳ್ಳೆಯದು.

35. ದೂರ್ವೆಯನ್ನು ಜಪ್ಪಿ ಜೀರಿಗೆ ಮತ್ತು ಮೆಣಸಿನಕಾಳು ಹಾಕಿ ಕಷಾಯ ಮಾಡುವುದು. ಸಣ್ಣ ಹುಡುಗರಿಗೆ ಬರುವ ಚಳಿಜ್ವರಕ್ಕೆ ದಿವ್ಯ ಔಷಧ.

36. ಕಳ್ಳಂಗಡಲೆ ಬೇರನ್ನು ಕುಟ್ಟಿ ಕಷಾಯ ಮಾಡುವುದು ಜ್ವರಕ್ಕೆ ಉಪಶಮನಕಾರಿ.

37. ಹಂಗಾರಚಕ್ಕೆ ರಸ ತೆಗೆದು ಪ್ರತಿದಿನ ಮುಂಜಾನೆ ಒಂದೊಂದು ಚಮಚ ತೆಗೆದುಕೊಳ್ಳುವುದು. ರಕ್ತ ಇಲ್ಲದೆ ದುರ್ಬಲರಾಗಿರುವ ಹುಡುಗರಿಗೆ ತುಂಬಾ ಒಳ್ಳೆಯದು.

38. ಬಲಗನಿ ಚಕ್ಕೆಯನ್ನು ಒರಳಿನಲ್ಲಿ ತಿವಿದು ರಸ ತೆಗೆದು ಕಾಯಿನೀರಿಗೆ ಹಾಕಿ ಕುಡಿಸುವುದು. ಅರಸಿನ ಕಾಮಾಲೆ ರೋಗಕ್ಕೆ ಒಳ್ಳೆಯ ಔಷಧ.

39. ರಾತ್ರಿ ಮಲಗುವಾಗ ಈರುಳ್ಳಿ ರಸಕ್ಕೆ ಜೇನುತುಪ್ಪ ಹಚ್ಚಿ ಕೊಡುವುದು. ಉಬ್ಬಸಕ್ಕೆ ಉಪಶಮನಕಾರಿ.

40. ಕಂಚಿ ಸೊಪ್ಪನ್ನು ನೀರಿನಲ್ಲಿ ಕುದಿಸಿ ಮೆಣಸಿನಕಾಳು + ಜೀರಿಗೆ + ನಿಂಬೆಹುಳಿ + ಉಪ್ಪು ಹಾಕಿ ಕುಡಿಯುವುದು. ಫ್ಲೂ ಕಾಯಿಲೆಗೆ ಗುಣಕಾರಿ ಔಷಧ. ಬಾಯಾರಿಕೆಯಾದ ಹಾಗೆ ಕೊಡುತ್ತಾ ಹೋಗಬೇಕು.

41. ಕೈಕಾಲು ಉಳುಕಿದಾಗ ಆಕಳು ತುಪ್ಪ ಹಚ್ಚಿ ಸೇಸಿದರೆ ಕಡಿಮೆಯಾಗುತ್ತದೆ.

42. ಅರಾರೂಟ್ ಗಿಡದ ಗೆಡ್ಡೆಯನ್ನು ಒರಳಿನಲ್ಲಿ ತಿರುವಿ ಹಿಟ್ಟುಮಾಡಿ ಒಣಗಿಸಿ,

ನೀರಿನಲ್ಲಿ ಕದಡಿ ಕಾಯಿಸಿ ಹಾಲು ಸಕ್ಕರೆ ಹಾಕಿ ಕುಡಿಯುವುದು. ಆಮಶಂಕೆ, ಹೊಟ್ಟೆನೋವಿಗೆ ಉತ್ತಮ ಔಷಧ.

43. ಬೆಂಡೆಕಾಯಿ ದಂಟನ್ನು ನೀರಿನಲ್ಲಿ ಕುದಿಸಿ ಹಾಲು ಸಕ್ಕರೆ ಹಾಕಿ ಕುಡಿಯುವುದು. ಬೆಂಡೆಕಾಯನ್ನು ಕುದಿಸಿ ಹಾಲು ಸಕ್ಕರೆ ಹಾಕಿ ಕುಡಿಯುವುದು. ಕೆಮ್ಮು. ಹೊಟ್ಟೆನೋವು ಕಡಿಮೆಯಾಗುತ್ತದೆ.

44. ಕಹಿ ಹಿಂಡ್ಲೆ ಕಾಯಿಯನ್ನು ಕೊಯಿದು ಕೆಂಡದಲ್ಲಿ ಹಾಕಿ ತೆಗೆದು ಬೆರಳಿಗೆ ಚೋಪಿ ಹಾಕಿದರೆ ಉಗುರುಸುತ್ತು ಕಡಿಮೆಯಾಗುತ್ತದೆ.

45. ಎಳೆ ಹಾಗಲಕಾಯಿ ಸಿಹಿಮೂತ್ರರೋಗಕ್ಕೆ ಸಿದ್ಧೌಷಧ.

46. ಹಣ್ಣು ಗೋಟುಸಿಪ್ಪೆಯ ರಸ ತೆಗೆದು ಕಿವಿಗೆ ಬಿಡುವುದು. ಕಿವಿಗೆ ಉಣುಗು ಹೋದರೆ ಸತ್ತು ಹೊರಗೆ ಬರುತ್ತದೆ.

47. ರಸನಿಂಬೆಹಣ್ಣನ್ನು ಬೂದಿಮುಚ್ಚಿದ ಕೆಂಡದಲ್ಲಿಟ್ಟು ಬೇಯಿಸುವುದು. ರಸತೆಗೆದು ಜೋಡಿಬೆಲ್ಲ + ಜೀರಿಗೆ + ಮೆಣಸಿನಕಾಳು ಸೇರಿಸುವುದು. ಇದರ ಸೇವನೆಯಿಂದ ಕಫ ನೀರಾಗುತ್ತದೆ. ನೆಗಡಿ ಕಡಿಮೆಯಾಗುತ್ತದೆ.

48. ತುಳಸಿರಸ ತೆಗೆದು ಜೇನುತುಪ್ಪ ಹಾಕಿ ಕುಡಿಸುವುದು. ಡಿಫ್ತೀರಿಯಾ ರೋಗಕ್ಕೆ ಒಳ್ಳೆಯ ಔಷಧ.

49. ಹಾಗಲಸೊಪ್ಪು ರಸ ತೆಗೆದು ಜೇನುತುಪ್ಪ ಹಾಕಿ ಕುಡಿಸುವುದು. ಡಿಫ್ತೀರಿಯಾ ರೋಗಕ್ಕೆ ಗುಣಕಾರಿ.

50. ಕರೇ ತುಳಸಿಯ ರಸ ತೆಗೆದು ಕಿವಿಗೆ ಬಿಡುವುದು ಕಿವಿ ನೋವಿಗೆ ಒಳ್ಳೆಯದು.

51. ಕರಿಬೇವನ್ನು ಆಕಳ ಹಾಲಿನಲ್ಲಿ ಅರೆದು ಕುಡಿಯುವುದು. ಉರಿಮೂತ್ರಕ್ಕೆ ಉಪಶಮನಕಾರಿ.

52. ತೋಟದಲ್ಲಿ ಹೊಳೆ ಹಂಚಿನಲ್ಲಿ ದೊರೆಯುವ ಬೆಳೆಸೂಳಿಗೆಡ್ಡೆಯನ್ನು ಆಕಳ ಹಾಲಿನಲ್ಲಿ ಅರೆದು ಪ್ರತಿದಿನ ಮುಂಜಾನೆ ಮೂರು ದಿವಸ ಕುಡಿದರೆ ಉರಿಮೂತ್ರ ಸಂಪೂರ್ಣ ಮಾಯವಾಗುತ್ತದೆ.

53. ಚವಿ ಬೇರನ್ನು ಆದಿತ್ಯವಾರ ಮತ್ತು ಗುರುವಾರ ಹಳೆಯ ನೀರು ಅಥವಾ ಹಸುವಿನ ಹಾಲಿನಲ್ಲಿ ತೇಯ್ದು ಬಸಿರಿಯರಿಗೆ ಕೊಡುತ್ತಾರೆ (ವಾಂತಿಯಾದರೆ ನಿಲ್ಲುತ್ತದೆ).

54. ಬಾಣಂತಿಯರಿಗೆ—ಮಗು ಹುಟ್ಟಿದ ಕೂಡಲೆ ಕಾಳುಜೀರಿಗೆ ಮತ್ತು ಮೆಣಸು ಕಾಳನ್ನು ಕುಟ್ಟಿ ಕಷಾಯ ಮಾಡಿ ಕುಡಿಸುತ್ತಾರೆ. ಇದರಿಂದ ನಂಜು ಕಡಿಮೆಯಾಗುತ್ತದೆ. ಮೆಣಸಿನಕಾಳು ಒಡೆದು ತುಪ್ಪದಲ್ಲಿ ಕುದಿಸಿ ಬೆಲ್ಲಹಾಕಿ ಮತ್ತೆ ಕುದಿಸಿ ಸ್ವಲ್ಪ ಜೇನುತುಪ್ಪ. ಹಾಗೂ ಸ್ವಲ್ಪ ಆಕಳತುಪ್ಪ ಹಾಕಿ ಕೊಡುತ್ತಾರೆ (ಪದ್ಧತಿ). ಆಮೇಲೆ ಪ್ರತಿದಿವಸ ಅನ್ನ, ಮೆಣಸಿನಸಾರು ಕೊಡುತ್ತಾರೆ. ದುಂಡುಮಲ್ಲಿಗೆ ಸೊಪ್ಪಿನ ಸಾರು ಮಾಡಿಕೊಡುತ್ತಾರೆ. ಪ್ರತಿದಿವಸ ಬೆಳಿಗ್ಗೆ ಕಿರುಕೊಡಸನ ಬೇರು, ಚಿತ್ತಟ್ಟಿ ಬೇರು, ಹೊಳೆದಾಸವಾಳದ ಬೇರು ಹೀಗೆ ಒಂದು ತಿಂಗಳಿನ ತನಕ ಬೇರೆ ಬೇರೆ ಬೇರುಗಳನ್ನು ಒರಳಿನಲ್ಲಿ ತಿರುವಿ ಕುದಿಸಿ ಕೊಡುತ್ತಾರೆ. ಎರಡನೆಯ ತಿಂಗಳಿನಲ್ಲಿ ಮೆಂತ್ಯೆ ಅನ್ನ, ಜೀರಿಗೆ ಅನ್ನ, ಸಾಸಿವೆಅನ್ನ, ಕಂಸಿ ಸೊಪ್ಪಿನ ರಸ ತೆಗೆದು ಅನ್ನಕ್ಕೆ ಸೇರಿಸಿ ಕೊಡುವುದು, ಹೀಗೆ ಒಂದು ತಿಂಗಳ ತನಕ ಬೇರೆ ಬೇರೆ ಅನ್ನವನ್ನು ಉಪಯೋಗಿಸುತ್ತಾರೆ. ಮೂರನೆಯ ತಿಂಗಳು ಲೇಹವನ್ನು ಬೆಳಗ್ಗೆ ಎದ್ದ ಕೂಡಲೆ ಹಾಲಿನ ಜೊತೆಗೆ ತೆಗೆದುಕೊಳ್ಳುತ್ತಾರೆ. ಶುಂಠಿಯನ್ನು ಅಂಟು ತುಪ್ಪದಲ್ಲಿ ಕರಿದು ಕಸೆಕಸೆ, ಜೇಷ್ಠಮುದುಹುಡಿ, ಲವಂಗ, ಪತ್ರೆ, ಜಾಕಾಯಿ, ದ್ರಾಕ್ಷಿ, ಕಲ್ಲುಸಕ್ಕರೆ, ಉತ್ತುತ್ತೆ, ಬಾದಾಮಿ ಇವಿಷ್ಟು ಹಾಕಿ ಸಕ್ಕರೆ ಪಾಕ ಹಾಕಿ ಉಂಡೆ ಮಾಡಿ ಪ್ರತಿದಿನ ಬೆಳಿಗ್ಗೆ ಕೊಡುತ್ತಾರೆ.

ಈ ನಿಟ್ಟಿನಲ್ಲಿ ವೈದ್ಯಕೀಯ ಸಮಾಜಶಾಸ್ತ್ರ ಹೆಚ್ಚಿನ ಬೆಳಕು ಬೀರುತ್ತದೆ ಎಂದು ನಾವು ಆಶಿಸಬಹುದು.

ಕೆ. ರಘುಪತಿಭಟ್ಟ

ಉಪ್ಪಿನಂಗಡಿ ಪರಿಸರದ ಊರುಗಳು

ಬ್ರಿಟಿಷರ ಕಾಲದಲ್ಲಿ ತಾಲೂಕಿನಸ್ಥಾನ ಪಡೆದಿದ್ದ ಉಪ್ಪಿನಂಗಡಿ ಇದೀಗ ಬಂಟ್ವಾಳ ತಾಲೂಕಿನ ಒಂದು ಮುಖ್ಯ ಕೇಂದ್ರವಾಗಿದೆ. ನೇತ್ರಾವತಿ ಮತ್ತು ಕುಮಾರಧಾರಾ ನದಿಗಳು ಪರಸ್ಪರ ಸಂಗಮಿಸುವ ಪವಿತ್ರ ಸ್ಥಳ ಇದು. ತುಳುವಿನಲ್ಲಿ ಉಪ್ಪಿನಂಗಡಿಯನ್ನು 'ಉಬಾರ್' ಎಂದೇ ಕರೆಯುವುದು ರೂಢಿ. ಇಲ್ಲಿ ಹಿಂದೆ ಉಪ್ಪಿಗೆ ಬತ್ತ, ಬತ್ತಕ್ಕೆ ಉಪ್ಪು (ಉಪ್ಪು+ಬಾರ್) (ತು = ಬತ್ತ) ಹೀಗೆ ವಿನಿಮಯ ನಡೆಯುತ್ತಿತ್ತೆಂದೂ, ಅದರಿಂದ ಈ ಹೆಸರು ಸಿದ್ಧಿಸಿದೆ ಎನ್ನುತ್ತಾರೆ. ಎರಡು 'ಆರ್' (ಹೊಳೆ)ಗಳು ಇಲ್ಲಿ ಸಂಗಮಿಸುವುದರಿಂದಲೂ, ಕೋಶದಲ್ಲಿ 'ಉಬಾರ್' ಎಂಬುದಕ್ಕೆ 'high tide' ಎಂದೂ 'ಉಬಾರ್ ಮಿತಾರ್‌ವುನಿ' ಎಂಬುದಕ್ಕೆ 'fish to ascend a river with the tide'[1] ಎಂದೂ ಅರ್ಥವಿರುವುದರಿಂದ, 'ಉಬಾರ್' ಎಂಬ ಸ್ಥಳನಾಮವು ನಿರ್ದಿಷ್ಟವಾದ ಜಲಸ್ವರೂಪವನ್ನು ಹೇಳುತ್ತದೆ ಅನ್ನಬಹುದು.[2]

ಪ್ರಾಯಃ ಘಟ್ಟಪ್ರದೇಶಕ್ಕೆ ಉಪ್ಪನ್ನು ಹೇರಿ ಸಾಗಿಸುತ್ತಿದ್ದ ಒಂದು ಕೇಂದ್ರಸ್ಥಾನವಾಗಿ, ಅಂಗಡಿಯಾಗಿ ಈ ಊರು ಸಾಕಷ್ಟು ಪ್ರಾಚೀನ ಕಾಲದಿಂದಲೇ ಜನಪ್ರಿಯವಾಗಿದ್ದಿರಬೇಕು. ಸಂಸ್ಕೃತ ಸ್ಥಳೈತಿಹ್ಯದಲ್ಲಿ ಇದಕ್ಕೆ 'ಗಯಾಹದ ಕ್ಷೇತ್ರ' ಎಂಬ ಅಭಿಧಾನವಿದೆ. ಉಪ್ಪಿನಂಗಡಿಯಲ್ಲಿ ಕುಮಾರಧಾರೆ–ನೇತ್ರಾವತಿಗಳು ಪರಸ್ಪರ ಕೂಡುವ ಸ್ಥಳದಿಂದ ತೊಡಗಿ ಉದ್ದಕ್ಕೂ ಸಹಸ್ರ ಶಿವಲಿಂಗಗಳು ತಲೆಯೆತ್ತಿ, ಕಡೆಯ ಲಿಂಗಗಳು ಈಗ ಕಡೇಶ್ವಾಲ್ಯ' (ಕಡೆಯ ಶಿವಾಲಯ) ಎನ್ನಿಸಿಕೊಂಡ ಕ್ಷೇತ್ರದ ಎದುರು ಹೊಳೆಯಲ್ಲಿ ಈಗಲೂ ಕಾಣಿಸುತ್ತವೆ. ಹೀಗೆ ಈ ಭಾಗದ ನದಿಯಲ್ಲಿನ ಒಂದೊಂದು ಕಲ್ಲಿಗೂ ಶಿವಲಿಂಗದ ಮಹಿಮೆ–ಪೂಜ್ಯತೆ ಸಂದಿರುವುದನ್ನು ಕಂಡಲ್ಲಿ ಜನತೆಯ ಅಪಾರ ಶ್ರದ್ಧೆಯ, ಅಸೀಮ ಪೂಜ್ಯಭಾವದ ಅರಿವಾಗದಿರದು.

ಉಪ್ಪಿನಂಗಡಿ ಪರಿಸರದ ಕೆಲವು ಸ್ವಾರಸ್ಯಕರ ಊರುಗಳ ಹೆಸರು ಹೀಗಿವೆ:

1. ಮೈರ: ವಸ್ತುತಃ ಇದು ಒಂದು ಮನೆಯ ಅಡಿ, ಅಷ್ಟೆ. ಇಲ್ಲಿ ಮನೆಗಳು ಸಾಕಷ್ಟು ದೂರದಲ್ಲಿರುವುದರಿಂದ, ಈ ಭಾಗದ ಒಂದೊಂದು ಮನೆಯೂ ಒಂದೊಂದು ಸ್ಥಳವಾಗಿ, ಒಂದೊಂದು ಸ್ವತಂತ್ರ ಹೆಸರಿನಿಂದ ವಿಶಿಷ್ಟವಾಗಿದೆ. 'ಮಯಿರ'ದಲ್ಲಿ ಒಂದು ಬದಿ ಕಾಡು, ಇನ್ನೊಂದು ಬದಿ ಬೈಲು, ತೋಟ ಹಾಗೂ ತೋಡು. ಕೆಲವರ್ಷಗಳ ಹಿಂದೆ ಈ ಕಾಡಿನಲ್ಲಿ 'ಮೀರ'(= ಕಳ್ಳು) ಮಾರುತ್ತಿದ್ದರೆಂದೂ ಅದರಿಂದ ಈ ಹೆಸರು ಬಂತೆಂದೂ ಹೇಳಲಾಗುತ್ತದೆ. ಇತ್ತೀಚೆಗೆ ಈ ಮನೆಯವರು ತಮ್ಮ ಮನೆಗೆ 'ಮೀರಾವನ' ಎಂಬ ಹೆಸರು ಇರಿಸಿಕೊಂಡಿದ್ದಾರೆ, ಅಲ್ಲದೆ, ಸಮೀಪದಲ್ಲೇ ಇರುವ 'ಮೈಸಂದಾಯ' (ಮಹಿಶಾಸುರ ಮೈರ?) ಭೂತದಿಂದ ಈ ಹೆಸರು ಬಂದಿರಬಹುದೆಂದೂ ವಾದಿಸಲಾಗುತ್ತಿದೆ. ಆದರೆ, ಭೂಸನ್ನಿವೇಶವನ್ನು ಗಮನ

ದಲ್ಲಿರಿಸಿ ಹೇಳುವುದಾದರೆ ಇದು 'ಮಿಯಾರ' ಎಂಬ ಊರ ಹೆಸರಿನ ನಿಷ್ಪತ್ತಿಗೆ ಅನುಗುಣವಾಗಿದೆ. ಈ ಸ್ಥಳದ 'ಮೈ' (ತು.—ಅಂಚು, ಬದಿ ಇ.)ಯಲ್ಲಿ 'ಆರ್' (ನೀರು) ಇರುವುದರಿಂದ, ಮೈ + ಆರ್ ಮೈಯಾರ ಮೈರ ಎಂದಾಗಿದೆ ಅನ್ನಬಹುದು. ಇದೇ ಹೆಸರಿನ ಇನ್ನೊಂದು ಊರು ಇದೇ ತಾಲೂಕಿನಲ್ಲಿದ್ದು, ಅದರ ಭೂಸ್ಥಿತಿಯೂ ಇದನ್ನು ಹೋಲುವುದರಿಂದ ನಮ್ಮ ವಿವರಣೆಗೆ ಸಮರ್ಥನೆ ದೊರಕಿದಂತಾಯಿತು.

2. ಅಮೈ: ಅಷ್ಟೇ ಸಂಗ್ರಹರೂಪದ ಅತ್ಯಂತ ಸ್ವಾರಸ್ಯಕರ ಹೆಸರಿದು. ಇಲ್ಲೊಂದು ತೋಡು ('ಅಮೈತಾರ್') ಮಧ್ಯೆ ಹರಿದು, ಇದರ ಈ ಬದಿಯವರು ಆ ಬದಿಯನ್ನು (ಆ + ಮೆಯ್ = ಅಮ್ಮೈ > ಅಮೈ) ಹೀಗೆ ಕರೆದಿರಬೇಕು. ಈ ತೋಡಿನ ಇನ್ನೊಂದು ಬದಿಗೆ 'ಕಡಂಬು' ಎಂಬ ಹೆಸರು. ಇದೂ ಬಹುಶಃ 'ತೋಡನ್ನು ದಾಟಿದಾಗ (ಅಚೆಗೆ) ಸಿಕ್ಕುವ ಊರು'[3] ಎಂಬರ್ಥದಲ್ಲಿ ಹುಟ್ಟಿರಬೇಕು. 'ಅಮೈ' ಎಂಬ ಹೆಸರಿನ ಇನ್ನೊಂದು ಊರು ಇದೇ ತಾಲೂಕಿನ ಅಸ್ವಸ್ನದ ಬಳಿ ಇದೆ. ಇಲ್ಲೊಂದು ದೊಡ್ಡ ಗುಡ್ಡವಿದ್ದು, ಅದರ ಈ ಬದಿಯವರು ಆ ಬದಿಯನ್ನ ಹೀಗೆ ಕರೆದಿರಬೇಕು.

ಇಂಥ ಊರ ಹೆಸರುಗಳಿಂದ ಅತ್ಯಂತ ಮಹತ್ವದ ಎರಡು ಸಂಗತಿಗಳು ಹೊರಬೀಳುತ್ತವೆ: (i) ಭೂಪ್ರಕೃತಿಯು ಸ್ಥಳಗಳ ಹೆಸರನ್ನು ಮೂಲತಃ ನಿರ್ದೇಶಿಸುತ್ತದೆ; ಒಂದು ಊರನ್ನು ಇನ್ನೊಂದರಿಂದ ಪ್ರತ್ಯೇಕಿಸಿ, ಹೆಸರಿನ ಪೃಥಗ್ಭಾವದ ಗುರುತಿಸುವಿಕೆಗೆ (distinctive identification) ಕಾರಣವಾಗುತ್ತದೆ ಈ ಪ್ರಕ್ರಿಯೆ ಅತ್ಯಂತ ಸಹಜವೂ ಅಷ್ಟೇ ಮೂಲಭೂತವೂ ಆದುದು. (ii) ಈ ರೂಪ (ಅಮೈ) ಸ್ಥಳನಾಮಕರಣದ ಮೂಲ ಧ್ಯೇಯವನ್ನೇ ಸೂಚಿಸುವಂತಿದೆ—ಸಾಲಭ್ಯಸೃಷ್ಟಿಯ ಎರಡಕ್ಷರದ ಮನಸೀಯ ಹೆಸರಿದು. ಅಲ್ಲದೆ, ಈ ಪ್ರದೇಶದ ಸಾದನತ್ವಾದ ತುಳುಭಾಷೆಯಿಂದಲೆ ಹೊಮ್ಮಿದ ಸುಂದರ ನಾಮಕರಣ ಇದು.

3. ಮಾಣಿ: ಬಂಟ್ವಾಳ ತಾಲೂಕಿನ ಒಂದು ಪ್ರಮುಖ ಗ್ರಾಮ. ಇದರ ಮೂಲರೂಪ 'ಮಾಣೆ' ಎಂದಿರಬೇಕು. 'ಮಾಣೆ' ಎಂದರೆ ತುಳುವಿನಲ್ಲಿ 'ಎತ್ತರದ ಗುಡ್ಡಪ್ರದೇಶ' ಎಂದು ನಾನು ಅನ್ಯತ್ರ ತೋರಿಸಿದ್ದೇನೆ. ಇಲ್ಲಿನ ಭೂವಿವರ ಇದನ್ನ ಸಮರ್ಥಿಸುತ್ತದೆ.[4] ಇದರ ಸರಿಯಾದ ರೂಪ ಬಳಕೆ ತಪ್ಪಿದಾಗ 'ಮಾಣಿ' ಎಂಬ ವಿಲಕ್ಷಣ ಉಚ್ಚಾರ ರೂಢವಾಯಿತು. ಅದರೊಂದಿಗೆ ಕೆಲವು ಹಾಸ್ಯಕಥನಗಳು, ಸ್ವಕಪೋಲಕಲ್ಪಿತ 'ಪ್ರಸಂಗ'ಗಳು ಹುಟ್ಟಿಕೊಂಡವು.[5]

4. ಸತ್ತಿಕಲ್ಲು: ಮೈರದಿಂದ ಪೇರುಮೊಗ್ರುವಿನಾಗಿ ಸಾಗುವ ರಾಜಾರಸ್ತೆಯ ಒಂದು ತುಂಡು, ಅಂದರೆ ಒಂದೆರಡು ಫರ್ಲಾಂಗು ದೂರಕ್ಕೆ ಈ ಹೆಸರು. ಇಲ್ಲೆಲ್ಲೂ 'ಸತೀಕಲ್ಲು' (ಮಾಸ್ತಿಕಲ್ಲು) ಇನ್ನೂ ಕಾಣಸಲಿಲ್ಲ; ತಿಳಿದುಬಂದಿಲ್ಲ. ಪ್ರಾಯಃ ಇದು ಶಕ್ತಿಕಲ್ಲು = ಸತಿಕಲ್ಲು— ಹೀಗೆ ಬಂದಿರಬಹುದೆಂದು ಸನ್ಯದನುಟ್ಟಿಗೆ ಹೇಳಬಹುದು ಇಲ್ಲಿ ಹಿಂದೆ ಒಂದು ಶಕ್ತಿಪರೀಕ್ಷಿಸುವ ಕಲ್ಲು ಇತ್ತೆಂದೂ, ಒಮ್ಮೆ ಗಾಡಿ ಹೊಡೆಯುವನೊಬ್ಬ ಇದನ್ನೆತ್ತಿ ತನ್ನ ಗಾಡಿಯಲ್ಲಿ ಹಾಕಿ ದೂರ ಕೊಂಡೊಯ್ದನೆಂದೂ, ಆಮೇಲೂ ಆ ಭಾಗಕ್ಕೆ ಈ ಹೆಸರು ಪ್ರಚಲಿತವಾಗುಳಿಯಿತೆಂದು ತಿಳಿದುಬರುತ್ತದೆ.

5. ಕೈಂತಜೆ: ಕೆದಿಲ, ಕೈಲಾರು, ಕೈಂತಜೆ, ಮೈರ ಮುಂತಾದ ಸ್ಥಳಗಳಲ್ಲಿನ ಹವ್ಯಕ ಬ್ರಾಹ್ಮಣ ಕುಟುಂಬಗಳು ಮೂಲತಃ ಒಂದೇ ಮನೆತನದವರಾಗಿದ್ದು ಕಾಲಾಂತರದಲ್ಲಿ ಪಾಲು ಮಾಡಿಕೊಂಡು ದೂರವಾದವರು. ಹೀಗಾಗಿ ಒಂದು ಕಾಲದಲ್ಲಿ ಈ ಮನೆಯಲ್ಲಿ 'ಹಲವಾರು ಕೈಗಳು ಉಣ್ಣುತ್ತಿದ್ದುದರಿಂದ' 'ಕೈಂತಜೆ' ಎಂಬ ಹೆಸರಾಯಿತೆಂದು ಹೇಳುವುದಿದೆ. ಇನ್ನೊಂದು ಅಭಿಪ್ರಾಯದ ಪ್ರಕಾರ, ಮುಲ್ಲರಾಯ ಭೂತ ಘಟ್ಟದಿಂದಿಳಿಯುತ್ತ ತನ್ನ ಕೈ ಇಟ್ಟ

ಸ್ಥಳ 'ಕೈಂತಜೆ' ಎಂದೂ, ಕಾಲೂರಿನ ಸ್ಥಳ 'ಕೈಲಾರು' ಎಂದೂ, ಹೆಸರುಗೊಂಡಿತು.[6] ಪ್ರಾಕೃತಿಕವಾಗಿ ಹೇಳುವುದಾದರೆ, ಇದರ ನಿಷ್ಪತ್ತಿ ಬೇರೆಯೇ ರೀತಿಯದ್ದಾಗಿರಬೇಕು ಅನ್ನಿಸುತ್ತದೆ. 'ಕೈಂತಜೆ' ಎಂಬುದು ಬಹುಶಃ 'ಕಯಂ + ತ + ಅಜೆ' (ಗುಂಡಿಭೂಭಾಗವುಳ್ಳ ಬಯಲು ಪ್ರದೇಶ) ಎಂದಾಗಿದ್ದರೆ, 'ಕೈಲಾರ್' ಎಂಬುದು ಮೂಲದಲ್ಲಿ 'ಕಯಾಲ್‌ಕಾರ್' ಎಂದಿದ್ದು, ಅದೇ ಮುಂದೆ ಕಾಲಾಂತರದಲ್ಲಿ ಹ್ರಸ್ವವಾಗಿ ಕಯ್ಲಕಾರ್ ಕಯ್ಲಾರ್ ('ಕ' ಲೋಪ)[7] ಎಂದಾಗಿರಬಹುದೇ ಎಂಬ ಸಂದೇಹ ಉಂಟಾಗುತ್ತದೆ.

6. ಕುಕ್ಕಜೆ: 'ಕುಕ್ಕು' (ಮಾವಿನಹಣ್ಣು) ಬೆಳೆವ 'ಅಜೆ' ಎಂಬುದಾಗಲೀ 'ಕುಕ್ಕ: ಸುಬ್ರಹ್ಮಣ್ಯನ ಹೆಸರು; ಕುಕ್ಕ–ಸೇನಾನಿ, ಗುರಿಕಾರ; ಅವನ ಅಜೆ' ಎಂಬ ವಿವರಣೆಯಾಗಲೀ ಈ ಶಬ್ದದ ಮೂಲರೂಪವನ್ನು ಭೂಸನ್ನಿವೇಶದೊಂದಿಗೆ ಹೋಲಿಸಿ ನಿರ್ಣಯಕ್ಕೆ ಬರುವ ಪ್ರಯತ್ನ ನಡೆಸದುದರ ಫಲವಾಗಿ ಹುಟ್ಟಿಕೊಂಡುದು ಎನ್ನಬೇಕಾಗಿದೆ. ಇದೂ, ಅನ್ಯತ್ರ ಹೇಳಿರುವಂತೆ[8] ಶಿಖರವಾಚಕ ಪದ (ಬಹುಶಃ 'ಕುಕ್' ಎಂಬ ಮೂಲ)ದಿಂದ ಹುಟ್ಟಿಕೊಂಡುದು. 'ಕುಕ್ಕುತಡಿ' ಎಂಬ ಇನ್ನೊಂದು ಸ್ಥಳವೂ, 'ಮಾವಿನ ಮರಗಳ ಅಡಿ ಹಾಡಿ' ಎಂಬುದಾಗಿ ಕಾಣಿಸಿಕೊಂಡರೂ, ತುಂಬ ಎತ್ತರದ ಸ್ಥಳವಾಗಿರುವುದು ಗಮನಾರ್ಹ. 'ಕುಕ್ಕಜೆ'ಯಲ್ಲಿ 'ಮಿತ್ತಕುಕ್ಕಜೆ' 'ಕಿರ್ತಕುಕ್ಕಜೆ' ಎಂದು ಎರಡು ವಿಂಗಡಣೆಯಿದೆ. ಕುಕ್ಕಜೆ ಎಂಬ ಹೆಸರು ಇದೇ ತಾಲೂಕಿನಲ್ಲಿ ಇನ್ನೊಂದೆಡೆ–ಮುಂಚಿಕುಕ್ಕಜೆಯಲ್ಲಿ, ಹಾಗೂ ಬೆಳ್ತಂಗಡಿಯಲ್ಲಿ ಒಂದು ಕಡೆ ಇದ್ದು, ಇವೂ ಸಹ ಉನ್ನತ ಭೂಸ್ಥಿತಿಯನ್ನು ಹೊಂದಿವೆ ಎಂಬುದನ್ನು ಲಕ್ಷಿಸಬೇಕು.

7. ನೆಕ್ಕಿಲಾಡಿ: ಈ ಹೆಸರಿನ ಊರು ಪುತ್ತೂರು ತಾ. ನಲ್ಲಿ ಒಂದು, ಉಪ್ಪಿನಂಗಡಿ ಸಮೀಪ ಎರಡು, ಇವೆ. ಇದರ ನಿರುಕ್ತಿ ಹೀಗಿದೆ: ನೆಕ್ಕಿ + ಇಲ್ಲ + ಅಡಿ. ನೆಕ್ಕಿ ಬೆಳೆಯುತ್ತಿದ್ದ ಪ್ರದೇಶ ಅಥವಾ ನೆಕ್ಕಿಗಿಡಗಳಿಂದ ಗುರುತಿಸಲ್ಪಟ್ಟ ಮನೆಯುಳ್ಳ ಊರು ಎಂದರ್ಥ. ಮನೆಯನ್ನು ಗುರುತಿಸುವಾಗ, ವ್ಯಕ್ತಿಯ ಕುಲವನ್ನು ಹೇಳುವಾಗ, ಇಂಥ ಮರಗಿಡಗಳನ್ನು ಬಳಸಿದುದಕ್ಕೆ ತುಳುನಾಡಿನಲ್ಲಿ ಬೇಕಾದಷ್ಟು ದೃಷ್ಟಾಂತಗಳುಂಟು. ಕಡೇಶ್ವಾಲ್ಯದ ಸಮೀಪದ ನೆಕ್ಕಿಲಾಡಿ ಪ್ರಾಚೀನ ಯಾ ಮೂಲ ನೆಕ್ಕಿಲಾಡಿ ಇರಲಿಕ್ಕಿಲ್ಲ. ಪ್ರಾಯಃ ಮೂಲದ ಇನ್ನೊಂದು ನೆಕ್ಕಿಲಾಡಿಯವರು ಇಲ್ಲಿಗೆ ಬಂದು ನೆಲೆಸಿದುದರಿಂದ ಈ ಮನೆಯಡಿಗೆ ಈ ಹೆಸರು ಬಳಕೆಗೆ ಬಂದಿರಬೇಕು. ಇದರ ಸಮೀಪದಲ್ಲಿ 'ಸಂಪ್ರೋಳಿ'. ಎಂಬ ಒಂದು ಸಣ್ಣ ಭಾಗ ಮನೆಯಡಿ ಇದೆ. ಅಣ್ಣಂಗಳದ ಸಮೀಪ ಒಂದು ಸಂಪೋಳಿ ಇದ್ದು, ಅಲ್ಲಿನ ಒಂದು ಕುಟುಂಬ ಕಡೇಶ್ವಾಲ್ಯದ 'ಬೀದಿ'ಯ ಬಳಿ ನೆಲಸಿದ ಕಾರಣ, ಈ ಭಾಗಕ್ಕೂ ಅದೇ ಹೆಸರು ಅನ್ವಯವಾಯಿತು.

8. ಬಡೆಕ್ಕಿಲ: ಇದೊಂದು ದಿಕ್ಕನ್ನು ನಿರ್ದೇಶಿಸುವ ಹೆಸರು. ಬಹುಶಃ ತುಳುವಿನ ಬಡಕಾಯಿ (ಬಡಗಣ) + ಇಲ್ (ಮನೆ) ಎಂಬುದೇ ಇದರ ಮೂಲವಾಗಿದೆ.[9] ಆದರೆ, ಸ್ಥಳೀಕರು ಇದು 'ಬತಗು + ಕಳ' ಎಂಬುದರಿಂದ ನಿಷ್ಪನ್ನವಾಯಿತೆನ್ನುತ್ತಾರೆ. ಏಕೆಂದರೆ, ಸಮೀಪದಲ್ಲಿ 'ಎಮರ್ಕಳ' ಎಂಬ ಸ್ಥಳವಿದೆ. ಕಳ ಎಂದರೆ ಸಮತಟ್ಟಾಗಿಸಿದ ಕೃಷಿತೋಟ ಮಾತ್ರ ಯೋಗ್ಯವಾದ ಭೂಮಿ. ಈ ಸ್ಥಳಕ್ಕೆ ತೆಂಕಲಾಗಿರುವವರಿಂದ–ಅವರಿಗೆ ಮಾತ್ರ ಇದು ಬಡಗಲಾಗಿರುವುದರಿಂದ–ಈ ನಾಮಕರಣವಾಗಿದೆ ಅನ್ನಬಹುದು.

9. ಬಾರಂಗಾಯಿ: ಈ ಹೆಸರಿನ ನಿಷ್ಪತ್ತಿ ಸುಲಭವಿಲ್ಲ. ಕೆಲ ವರ್ಷಗಳ ಹಿಂದೆ ಇಲ್ಲಿ ಚಮ್ಮಾರರು ವಾಸಿಸುತ್ತಿದ್ದು, ಮುಂದೆ ಅತ್ತ ಪಾರಿ ದೂರಹೋಗಿ ನೆಲೆಸಿದರು. ಇವರ ಪೈಕಿ ಕುಪ್ರಸಿದ್ಧನಾದ ವೀರಪ್ಪನಾಯಕನ ದುಷ್ಕಾರ್ಯಗಳ ನೆನಪು ಜನರಲ್ಲಿ ಈಗಲೂ ಹಸಿರಾಗುಳಿದಿದೆ. ಅವನು ತನನಾಗವನರ ಕೋಣಗಳು ಇಲ್ಲಿಗೆ ಬಂದಾಗ ಕಡಿದು ಚರ್ಮ ಸುಲಿದು, ತನ್ನವರಿಗೆ ಅವುಗಳ

ಮಾಂಸ ತಿನ್ನಿಸುತ್ತಿದ್ದನಂತೆ. 'ಬಾರ್' ಎಂಬ ಪದಕ್ಕೆ 'ಚರ್ಮ' ಎಂಬರ್ಥ. ಬಹುಶಃ ಚರ್ಮ ಹದಮಾಡುವ ಸಮಗಾರರು ನೆಲಸಿದ್ದ ಕಯ (ಗುಂಡಿ, ತಗ್ಗುಪ್ರದೇಶ) ಎಂಬರ್ಥದಲ್ಲಿ ಈ ಹೆಸರು ಬಂದಿರಬೇಕೆಂಬ ಸಂಶಯ ಮೂಡುವುದು ಸಹಜ.

ಇಲ್ಲೇ ಸಮೀಪದಲ್ಲಿ ಅಮ್ಮೆತಾರ್ ಮತ್ತು ಬಲದೇವರ ಗುಂಡಿಗಳ ಸಂಗಮಸ್ಥಾನದಲ್ಲಿ, ನಡುವೆ ಕುದುರಿನ ಭಾಗದಲ್ಲಿ, ಒಂದು ಬನದಲ್ಲಿ ಪ್ರಾಚೀನ ಗುಡಿಯ ಅವಶೇಷಗಳಿವೆ. ಗರ್ಭಗುಡಿ ಹಾಗೂ ಅದರೆದುರು ಸಣ್ಣ ಮುಖಮಂಟಪದಂಥ ರಚನೆಯಿದ್ದ ಭಾಗ ಎತ್ತರವಾಗಿದ್ದು ಜರಿದಿದೆ. ಪಾಣಿಪೀಠ ಸುಂದರವಾಗಿದ್ದು, ನಡುವೆ ಮೂರ್ತಿ ನೆಟ್ಟಿದ್ದ ಗುಳಿಯಿದೆ; ಇದು ಒಂದು ಕಡೆಗೆ ಉರುಳಿದೆ. ಪಾಣಿಪೀಠವಿದ್ದ ಅಡಿಭಾಗದಲ್ಲಿ ಸುತ್ತಲೂ ಕಲ್ಲಹಾಸುಗಳೂ, ಎದುರಲ್ಲಿ ಗಂಧ ತೇಯುವ ಕಲ್ಲೂ, ಕಾಣಸುತ್ತವೆ. ಗುಡಿಯ ಅಡಿಭಾಗದಲ್ಲೂ, ಪೌಳಿಯಿದ್ದ ಭಾಗದಲ್ಲೂ ಮರಗಳು ಬೆಳೆದಿದ್ದು ಹಾಳು ಸುರಿವುತ್ತಿದೆ. ಆಚೀಚೆ ಗುಳಿಗ ಮತ್ತು ಪಂಜುರ್ಲಿ ಭೂತಗಳ 'ಸ್ಥಾನ'ಗಳಿವೆ. ಗುಡಿಯಿರುವ ಸಾರಿನ ಕಯಕ್ಕೆ 'ಬಲದೇವರ ಗುಂಡಿ' ಎಂಬ ಹೆಸರು ಬಂದಿರುವುದನ್ನೂ, ತಾರಿನಾಚೆಗಿನ ತೋಟಕ್ಕೆ 'ಬಲತೋಟ' ಎಂಬ ಹೆಸರಿರುವುದನ್ನೂ ಗಮನಿಸಿದಾಗ, ಇದು ಬಲದೇವರ ಗುಡಿಯಾಗಿದ್ದಿರಬಹುದೇ ಎಂಬ ಶಂಕೆ ಮೂಡುತ್ತದೆ. ಆದರೆ, ಹತ್ತಿರದಲ್ಲಿ ಭೂತದ ಸ್ಥಾನಗಳಿರುವುದನ್ನೂ, ದೇವಳದ ರಚನಾಕ್ರಮ ಮತ್ತು ಸನ್ನಿವೇಶವನ್ನೂ, ಹಾಗೂ, ಇಲ್ಲಿಗೂ ಕಡೇಶ್ವಾಲ್ಯಕ್ಕೂ ಯಾವುದೋ ದೈವ ಸಂಬಂಧವಿದೆ ಎಂಬ ಪ್ರತೀತಿಯನ್ನೂ ಪರಿಶೀಲಿಸಿದಲ್ಲಿ ಈ ಸಂಶಯ ಟೊಳ್ಳಾಗುತ್ತದೆ. ಇಲ್ಲಿನ ಮೂರ್ತಿ (ಶಿವ?) ಬೇರೆಲ್ಲಿಗೋ ರವಾನೆಯಾಗಿರುವ ಸಂಭವವಿದೆ.

ದೇಗುಲದ ಸನ್ನಿವೇಶದಲ್ಲಿ ಸಾರ್ ಕವಲಾಗಿ, ಈ ಹಾಡಿಯನ್ನು ಕುದುರಿನಂತೆ ನಿರ್ಮಿಸಿ, ಮುಂದಕ್ಕೆ ಕೂಡುವುದರಿಂದ, 'ಎರಡು ತೋಡುಗಳ (ಅಮ್ಮೆತಾರ್–ಬಲದೇವರ ಗುಂಡಿ) ಸಂಗಮಸ್ಥಾನದ ಕಯ ಎಂಬರ್ಥದಲ್ಲಿ ಬಾರಂಗಾಯಿ' (ಉಬಾರಂಗಯ <ಬಾರಂಗಯ < ಬಾರಂಗ್ಯಾ) ಬಂದಿರುವುದು ಹೆಚ್ಚು ಸಹಜ ಎನ್ನಿಸುತ್ತದೆ.

ಆದರೆ, ಬಾರಂಗಾಯಿಯ ಮೂಲಸ್ಥಾನಕ್ಕೆ 'ನಡರಾಯ' ಎಂಬ ಹೆಸರಿದೆ. ಇದರ ಭೂಸನ್ನಿವೇಶ ಕುತೂಹಲಕರ. ಎರಡು ಬದಿಯಲ್ಲಿ ಗುಡ್ಡ, ನಡುವೆ ಒಂಕ, ತುದಿಯಲ್ಲಿ ಒಂದು ತೋಡು: ಹೆಸರು ನಡರಾಯ. ಬಹುಶಃ ಈ ಹೆಸರು ನಡು + ಅರ್ + ಕಯ> ನಡಾರ್ಯ > ನಡರಾಯ ಎಂಬಂತೆ ಸಾಗಿಬಂದಿರಬಹುದು.

10. ಜತ್ತನಕೋಡಿ ಮತ್ತು ಜತ್ತಿಕುಮೇರು: ಸು. 150 ವರ್ಷಗಳಾಚೆ ಈ ಭಾಗ ದಟ್ಟಕಾಡಾಗಿದ್ದು ಹುಲಿ ಕಾಡುಕೋಣ ಮುಂತಾದ ಕ್ರೂರ ಪ್ರಾಣಿಗಳ ಆಡುಂಬೊಲವಾಗಿತ್ತು. ಆಗ ಜತ್ತಿ ಎಂಬೊಬ್ಬ ಮರಾಠಿಗನು ಗುಡ್ಡವನ್ನು ಕಡಿದು 'ಕುಮೇರು' (waste land cleared for cultivation) ಮಾಡಿದನೆಂದು ತಿಳಿದುಬರುತ್ತದೆ. ಅವನು ಮಾಡಿದ ಕುಮೇರು ಹಾಗೂ ಅವನು ನೆಲೆನಿಂತ ಮೂಲೆ ಎಂಬುದನ್ನು ನಿರ್ದೇಶಿಸಲಿಕ್ಕೆ ಜತ್ತಿಕುಮೇರು ಮತ್ತು ಜತ್ತನಕೋಡಿ ಎಂಬ ಹೆಸರು ಅನುಕ್ರಮವಾಗಿ ತಲೆಯೆತ್ತಿದಂತೆ ತೋರುತ್ತದೆ. ಅಲ್ಲದೆ, ಈ ಪರಿಸರದಲ್ಲಿ 'ಕೋಡಿ' ಎಂಬ ಅಂತ್ಯಭಾಗ (post-position) ವುಳ್ಳ ಸ್ಥಳನಾಮ ಪೂರ್ವಭಾಗ (preposition)ದಲ್ಲಿ ಆ ಆ 'ಕೋಡಿ'ಯಲ್ಲಿ ಮೊದಲು ವಾಸ್ತವ್ಯಹೂಡಿರಬಹುದಾದ ವ್ಯಕ್ತಿಗಳ ಹೆಸರು ಸೂಚಿತವಾಗಿದೆ ಎಂಬುದು ಗಮನೀಯ. ಉದಾ: ಪಾಟ್ರಿಕೋಡಿ, ದಾಮುಕೋಡಿ, ಪಾಚುಕೋಡಿ, ಅರಬ್ಬಿಕೋಡಿ, ಪರವೆರೆ (ಜಾತಿವರ್ಗ) ಕೋಡಿ, ಕಾಂತುಕೋಡಿ, ಸ(<ಸು)ಬ್ಬಣ್ಣಕೋಡಿ, ಶಿವರಾಮಕೋಡಿ, ತಿಪ್ಪಕೋಡಿ, ಬಲ್ಯಾಯ (ಕುಲನಾಮ) ಕೋಡಿ, ಇ.

11. ಕುದುಂಬ್ಲಜೆ: ಒಂದು ಕಡೆ ಎತ್ತರದ ಗುಡ್ಡ, ಇನ್ನೊಂದು ಕಡೆ ಎತ್ತರದ ಭೂಮಿ ನಡುವೆ ಕಿರಿಯಗಲದ ಮಜಲು, ಪಕ್ಕದಲ್ಲೆ ತೋಡು. ಈ ಮಜಲಲ್ಲಿ ಯಾವಾಗಲೂ ಒಂದು ಜಾತಿಯ ಸಣ್ಣಹುಲ್ಲು (ಕುದುಂಪುಲ್ < ಕು (ಕಿ)ರು + ಪುಲ್) ಬೆಳೆಯುತ್ತಿದ್ದುದರಿಂದ 'ಕುದುಂಪುಲ್ + ಅಜೆ' > ಕುದುಂಬ್ಲಾಜೆ ಆಗಿರುವ ಸಾಧ್ಯತೆಯಿದೆ. ಹತ್ತಿರದಲ್ಲೆ ಇರುವ 'ಕುದುಂಬ್ಲಾಡಿ' ಯೂ ಪ್ರಾಯಃ ಹೀಗೆಯೇ ನಿಷ್ಪನ್ನವಾಗಿದ್ದಿರಬಹುದು.

ಇದೇ ಪರಿಸರದಲ್ಲಿ 'ಕುದ್ಮಾನ್ (ಕುದ್ಮಣ್)' ಎಂಬ ಊರಿದೆ. ತುಳುವಿನಲ್ಲಿ ಕುದ್ಮಣ್ ಅವೆಮಣ್ಣು ಎಂದಿರುವುದರಿಂದ, ಇದರ ಉತ್ತರ ಭಾಗದಲ್ಲಿ ಹರಿಯುವ ತೋಡಿಯಿಂದಾಗಿ ಗದ್ದೆಯ ಮಣ್ಣು ಜಿಗುಟಾಗಿರುವುದರಿಂದ, ಈ ಹೆಸರು ಬಂದಿದೆ ಎನ್ನುತ್ತಾರೆ. ಈ ಸ್ಥಳದ ಭೂವಿವರರೀತ್ಯಾ ಇನ್ನೊಂದು ಬಗೆಯಲ್ಲಿ ಈ ಹೆಸರು ಬಂದಿರಬಹುದು ಅನ್ನಿಸುತ್ತದೆ. ಎರಡು ಗುಡ್ಡಗಳ ನಡುವಣ ಬೈಲು ಇದು. ಕುದ್ (ಸಣ್ಣ) ಮಣ್ಣು (ಬೈಲು) ಎಂದೋ, ಕುದ್ (ಸಿ ಎಫ್. ಕುಂದ, ಗುಡ್ಡ) ಮಣ್ಣು (ಬೈಲು)–ಗುಡ್ಡಗಳ ನಡುವಣ ಬಯಲುಪ್ರದೇಶ ವೆಂದೋ, ಇದು ಸಿದ್ಧಿಸಿರಬಹುದು. ಕುದುಂಬ್ಲಾಜೆಯೂ ಪ್ರಾಯಃ ಹೀಗೆಯೇ–ಕುದುಂ + ಅಲ + ಅಜೆ-ಹುಟ್ಟಿರಬಹುದೇನೋ.

12. ಪುಂಡಿಕ್ಯಾ: ಎರಡು ಕಡೆ ಎತ್ತರದ ಗುಡ್ಡ ನಡುವೆ ಒಂದು ಸೀಳಲ್ಲಿ ಈಗ ಅಡಿಕೆ ಸಸಿ ನಟ್ಟಿರುವ ಭಾಗ 'ಕಯ' (ಗುಂಡಿ)ಯಾಗಿದೆ. ಅಡಿಕೆ ಬೆಳೆ ಬೆಳೆಸುವ ಮುನ್ನ ಇಲ್ಲಿ 'ಪುಂಡಿತ್ತ್' (ಪುಂಡಿ+ ಬಿತ್ತ್: ಹಿಡಿಬೀಜ) ಬಿತ್ತುತ್ತಿದ್ದುದರಿಂದ, ಪ್ರಾಯಃ ಪುಂಡಿ+ ಕಾಯ > ಪುಂಡಿಕ್ಯಾ ಆಗಿರಬಹುದಾಗಿದೆ.

13. ಕೆದಿಲ: ಉಪ್ಪಿನಂಗಡಿ ಸಮೀಪದ ಒಂದು ಗ್ರಾಮ. 'ಸಹ್ಯಾದ್ರಿ'ಯಲ್ಲಿ ಇದಕ್ಕೆ 'ಕೇಜೆಲ್' ಎಂಬ ಹೆಸರಿದೆಯಂತೆ. ತುಳುವಿನಲ್ಲಿ 'ಕೇಜೆಲ್' ಅಂದರೆ 'ಕೆಂಪುನೀರಿನ ಒಸರು' ಎಂದಾಗುತ್ತದೆ. ಭೂಪ್ರಕೃತಿಯ ದೃಷ್ಟಿಯಿಂದ ಈ ಹೆಸರು ಒಪ್ಪುತ್ತದೆ. ಆದರೆ 'ಕೆದಿಲ' ಅಂದಾಗ 'ಕೆದು + ಇಲ್' (ಕೆರೆಯ ಸಮೀಪದ ಮನೆ: ಸಿ ಎಫ್. ನೆಕ್ಕಿಲಾಡಿ ಇ) ಎಂದೂ ಆಗುವುದಾದ್ದರಿಂದ ಈ ನಿರುಕ್ತಿ ವಿಚಾರಣೀಯವಾದುದು.

14. ಕೊಳ್ಚಪ್ಪು :ಶಿಖರಗಳ ನಡುವಣ ಬಯಲುಪ್ರದೇಶ. ಕೋಡು+ ಚೆಪ್ಪು–ಶಿಖರದ ಇಳಿಜಾರು, ತಗ್ಗು, ಬಯಲುಭೂಮಿ ಎಂಬರ್ಥದಲ್ಲಿ ಬಂದಿರಬಹುದು. ಇದರ ಸಮೀಪದಲ್ಲಿ ಪರವರೆಕೋಡಿ ಎಂಬ ಸ್ಥಳವಿದೆ. ಪರವರೆಂಬ ನಿಮ್ನವರ್ಗದಿಂದ ಬಂದ ಹೆಸರಿದು. 'ಕೊಳಚಪ್ಪು ಎಂಬುದಕ್ಕೆ ಸ್ಥಳೀಕರು ಕೊಡುವ ವಿವರಣೆ ಬೇರೆಯೇ ಆಗಿದೆ. ಇಲ್ಲಿನ ಕೊಳದಲ್ಲಿ[10] ನಾರಿಗಾಗಿ ತೆರೆಗಿನ ಚಿಪ್ಪನ್ನು ಕೊಳೆಯಹಾಕುತ್ತಿದ್ದುದರಿಂದ 'ಕೊಳಚೆಪ್ಪು' ಎಂದಾಯಿತು ಎಂದು ಅಂಬೋಣ.

15. ಗಡಿಯಾರ: ತುಂಬ ಕುತೂಹಲ ಹುಟ್ಟಿಸುವ ಹೆಸರಿದು. ಬಲಗಲಾಗಿ ಕಡೆಶ್ವಾಲ ಪಡುವಿನಲ್ಲಿ ಮಾಣಿ, ಕೆಳಗೆ ಬುಡೋಳಿ ಹಾಗೂ ತೆಂಕಿನಲ್ಲಿ ಪೆರಿರಾಜೆ–ಇವು ಗಡಿಯಾರಿನ ಮೇರೆಗಳು. ಇಲ್ಲೊಂದು ದೊಡ್ಡ ಶಿಖರವಿದ್ದು, ಅದು ಊರಿನ ಗಡಿಯಂತೆ ಕೆಲಸ ಮಾಡುತ್ತದೆ. ಆದ್ದರಿಂದ ಇದರ ನಿಷ್ಪತ್ತಿ ಹೀಗಿರಬೇಕು: ಗಡಿ + ಕಾರ್–ಗಡಿಪ್ರದೇಶದ ಎತ್ತರದ ಶಿಖರ.[11] ಸಮರ್ಥನೆಗೆ ಇಲ್ಲಿನ ಭೂವಿವರ ಹಾಗೂ ಇದರ ಕೆಳಗಿನ ಊರಿನ ಹೆಸರು-ಬುಡೋಳಿ (ಬುಡ+ ಹಳ್ಳಿ) ಎಂಬುವು ಸಮರ್ಥನೆ ನೀಡುತ್ತವೆ. ಅಲ್ಲದೆ, ಸ್ಥಳನಾಮ ಸಮಸ್ತಪದಗಳಲ್ಲಿ ಅಘೋಷಸ್ಪರ್ಶವ್ಯಂಜನವಾದ 'ಕ'ಕಾರದ ಲೋಪವಾಗಿರುವುದಕ್ಕೆ ಸಾಕಷ್ಟು ದೃಷ್ಟಾಂತಗಳು ಲಭ್ಯವಾಗಿವೆ. ಉದಾ: ಸುರುತಕಲ್ > ತುರತಾಲ್ (ಸ್ಥಳೀಯ ತುಳುರೂಪ), ಶಾಸ್ತ + ಕಾನ > ಶಾಸ್ತಾನ, ಪೆರ್ಮ + ಕಜ > ಪೆರ್ಮಜ, ಮುಂ.

ಈ ಪರಿಸರದ ಸ್ಥಳನಾಮಗಳ ಪರಿಶೀಲನೆಯಿಂದ ಕೆಲವು ಮಹತ್ವದ ಸಂಗತಿಗಳು ಬೆಳಕಿಗೆ ಬರುವಂತಾಗಿದೆ. ಸಾಮಾನ್ಯವಾಗಿ ಸ್ಥಳಗಳ ನಾಮನಿರ್ದೇಶನದ ಮುಖ್ಯ ಉದ್ದಿಶ್ಯ (referent) ಭೂಸನ್ನಿವೇಶ (topography), ಅರ್ಥಾತ್, ಸ್ಥಳದ ಏರುತಗ್ಗು, ನೀರು–ಪಾರು, ಅಥವಾ ಇವೇ ಮುಂತಾದ ಪ್ರಾಕೃತಿಕ ಲಕ್ಷಣಗಳ ಗಾತ್ರ, ಯಾ ಸಾಮೀಪ್ಯ ಎಂಬುದಕ್ಕೆ ಇಲ್ಲಿನ ಸ್ಥಳನಾಮಗಳಲ್ಲಿ ಬಲವಾದ ಸಾಕ್ಷ್ಯವೊದಗುತ್ತದೆ. ದೊಡ್ಡ ದೊಡ್ಡ ಊರ ಹೆಸರುಗಳು ಸಾಮಾನ್ಯವಾಗಿ ಪ್ರಕೃತಿವಾಚಕವಾಗಿರುವುದು ಇಲ್ಲಿನ ಜನ ಮೂಲತಃ ಮಣ್ಣಿನ ಮಕ್ಕಳಾಗಿರುವುದನ್ನೂ ಅವಕ್ಕೆ ತಕ್ಕಂಥ ಜೀವನ ದೃಷ್ಟಿಯನ್ನು ಬೆಳೆಸಿಕೊಂಡಿರುವುದನ್ನೂ ಸೂಚಿಸುತ್ತವೆ. ಸಣ್ಣಪುಟ್ಟ ಸ್ಥಳಗಳು–ಮೂಲೆಗಳು ಯಾ ಕೋಡಿಗಳು ಅಲ್ಲಿ ಮೊದಲು ನೆಲೆಗೊಂಡ ವ್ಯಕ್ತಿಯ ಹೆಸರನ್ನು ತಳೆದಿರಬಹುದಾದರೂ, ಆ ಹೆಸರುಗಳು ವ್ಯಕ್ತಿಯನ್ನು ದೈವೀಕರಿಸುವ ಉದ್ದೇಶದಿಂದ ಹೊರಟಿರದೆ, ಸ್ಥಳದ ಗುರುತಿಸುವಿಕೆಗಾಗಿ (identification) ಮಾತ್ರ ಬಳಕೆಯಾಗಿರುವುವು ಎಂಬುದು ಇಲ್ಲಿನ ಜನಜೀವನದ ಒಂದು ಚಿತ್ರವನ್ನೂ ಜನರ ಪ್ರವೃತ್ತಿಯ ಪರಿಚಯವನ್ನೂ ಒದಗಿಸುತ್ತದೆಯಾದ್ದರಿಂದ ತುಂಬ ಮಹತ್ವದ ಅಂಶವಾಗಿದೆ.

ಉಪ್ಪಿನಂಗಡಿ ಪರಿಸರದ ಸ್ಥಳನಾಮಗಳನ್ನು ಈ ತೆರನಾಗಿ ವರ್ಗೀಕರಿಸಬಹುದು:

(i) ಎತ್ತರದಿಂದ: ಪೆರ್ನೆ, ಕರುವೇಲು, ಪಣಜೆ, ಗುಡ್ಡೆಕೋಡಿ, ಮುಂಡಾಲ, ಮಾಣಿ, ಗಡಿಯಾರ, ಬಾಜಾರಗುಡ್ಡೆ, ಕುಕ್ಕೆಮನೆ, ಅನಡ್ಕ. ಬೆಟ್ಟುಗದ್ದೆ. ಕುಂಜಾರು, ಕೋಡಂದೂರು, ಮಿತ್ತೂರ್, ಮಲ್ಯೊಟ್ಟು ಇ.

(ii) ಬಂಡೆ, ಕಲ್ಲು ಮುಂ. ಗಳಿಂದ: ಮಲ್ಲಪಾದೆ, ಅರಿಕಲ್ಲು, ಬೊಳ್ಕಲ್ಲು, ಮುರ (laterite) ಇ.

(iii) ಗುಂಡಿ, ತಗ್ಗು, ಹೊಂಡಗಳಿಂದ: ತಿರ್ತಡ್ಕ, ಕೃಷ್ಣಗುರಿ, ಪಂಜುರ್ಲಿಕಯ, ಕಂಪ, ಆನೆಗುಂಡಿ, ಪಂಜಿಗುಂಡಿ,[12] ಕಲ್ಲುಗುಂಡಿ, ಮಯ್ಯಂತಿಗುರಿ, ಕೊರತಿ (= ದೈವ) ಗುರಿ, ಬಿರುಮಂಣಗುಳಿ, ಒಡ್ಯದ ಕಯ (ನೀರು ಮೇಲಿಂದ ಕೆಳಕ್ಕೆ ಒದ್ದುವ ಕಯ), ಕೊಂಕಣಿಗುಂಡಿ,[13] ಉಜಿರೆಗುಂಡಿ,[14] ಸೂಳೆಕಯ, ಕುಂಟಲಗುಂಡಿ, ಪಂಜುರ್ಲಿ (ದೈವ) ಗುಂಡಿ, ದೇವರಗುಂಡಿ, ಕಣ್ಯೊಟ್ಟು (> ಕಣಿ + ಬೆಟ್ಟು, : ಒಂದು ಕಡೆ ಬೆಟ್ಟು, ಮತ್ತೊಂದೆಡೆ ಕಣಿ) ಮುಂ.

(iv) ಸಸ್ಯವರ್ಗದಿಂದ: ನೆಕ್ಕಿಲಾಡಿ, ಸಂಪೋಳ್ಳಿ ಬೇಂಗತ್ತಡಿ. ದಾರಿಮ (< ದಾಳಿಂಬ), ಮುಚ್ಚಿಲದ ಬೈಲು,[15] ಕೂವೆ (ಅರಾರೋಟು) ಹಿತ್ಲು, ಗುಜುರು ಕುಕ್ಕು,[16] ಪಲಸತ್ತೋಡಿ,[17] ಮುಂಗಿಲಿ (ಮುಂಗ್ಲಿ = ಬಿದಿರು) ಮನೆ, ದರ್ಬೆ, ಕರ್ಕಿಲ, ವಾಟೆತಿಮಾರು, ಕುಕ್ಕುದಕಟ್ಟೆ, ನೆಕ್ಕರೆ,[18] ಪರಿಯೋಳಿ, ಪ್ರೋಟೆತ್ತಾರು, ಸಾವಿಕಕ್ಕು, ಬೆದ್ರ. ಪೂಲಡ್ಕ, ಇ.

(v) ನೀರು, ನೀರಿನ ಸಾಮೀಪ್ಯದಿಂದ: ಕಳಂಜ (ಕಡಪು), ಬಿಳಿಯೂರು,[19] ಕಜೆ,[20] ವಾಲ್ತಜೆ, ಪಳಂತಜೆ, ಮುರಿಯಾಜೆ, ಕಡಪುದ ಬಾಕಿಲ್, ಕಡವ, ಬೊಳ್ಳಮಜಲು, ಕೆಲಿಂಜ, ನೇಲ್ಯಾರು, ನೆಡ್ಯಾಳ, ಮಿತ್ತಾಳ. ಮಡಿಯಾಲ, ಕೆರೆಂಗೋಡಿ, ಓಡಾಲು, ತೂಂಬಿನಬಾಕಿಲ್, ಹಾರೆಕರೆ, ಇ.

(vi) ಬಯಲು ಮಜಲು ಇ. ಭೂಸ್ಥಿತಿಯಿಂದ: ಸಂತೆಮಜಲು, ಸಾವಿಬೈಲು, ಪಚ್ಚಡೆ ಬೈಲು, ತಿಮಾರಜೆ, ಅಂಬೆದಬೈಲು, ಅಮ್ಮೈಬೈಲು, ಪಾಂಡಿಬೈಲು, ಕರಿಮಜಲು, ಒಳಕುಮೇರಿ, ಮಜಿ. ಪಾಪೆತಿಮಾರು, ಬಾರ್ತಿಕುಮೇರು, ಕನಕಮಜಲು. ನಡುಮುಗೇರು, ರಾಜಾಲ್, ಇ.

(vii) ವ್ಯಕ್ತಿ ಹಾಗೂ ದೈವಗಳಿಂದ: ಪನುಮಜೆ, ಜತ್ತನಕೋಡಿ, ಜತ್ತಿಕುಮೇರಿ, ಕೃಷ್ಣಗುರಿ, ಪೆಲಂಪು[21], ದಾಮುಕೋಡಿ, ಅಂಗರಜೆ, ಪಾಚುಕೋಡಿ, ಅರಬಿಕೋಡಿ, ಕಾಂಜಳಿಕೆ?,

ಕಾಂತಕೋಡಿ, ಬಿರುಮುಂಣಗುಳಿ, ಸಬ್ಬಣಕೋಡಿ, ಶಿವರಾಮಕೋಡಿ, ತಿಪ್ಪಕೋಡಿ, ಮಲ್ಯೊಟ್ಟು (ಮಲ್ಲಿ + ಬೆಟ್ಟು), ಬಾಗುಪಾಲು,[22] ಕೊರತಿಗುಳಿ, ಬಲದೇವರ ಗುಂಡಿ, ಕ್ಷೇತ್ರ ಪಳಿಕೆ,[23] ಪಂಜುರ್ಲಿಗುಂಡಿ, ದೇವರಗುಂಡಿ, ಮುಂ.

(viii) ಪ್ರಾಣಿಗಳಿಂದ : ಕುದುರೆಮಾರು (?)[24] ಅನಡ್ಕ (?)[25] ಮುದಲಾಜೆ,[26] ಪಿಲಿಗೂಡು, ಪಿಲಿಕುಡೇಲು (?) ಪಂಜಿಗುಂಡಿ (?), ಕಾಟಿಹಳ್ಳ. ಪಂಜಿಬಲ್ಲೆ, ಪಂಜಿಗುಡ್ಡೆ, ಕೋಣಂಗುಡ್ಡೆ, ಇ.

ಈ ಪರಿಸರದ ಊರವೆಸರುಗಳು ಇನ್ನೊಂದು ಮಹತ್ವದ ಲಕ್ಷಣವನ್ನು ಒಳಗೊಂಡಿವೆ. ಅದೇನೆಂದರೆ—ಇವು ಬಹುತೇಕವಾಗಿ ಸಾರವತ್ತಾದ ತುಳು ಭಾಷೆಯ ಪದಗಳಾಗಿವೆ. ಎಂಬುದು ; ಅಲ್ಲದೆ, ಅನ್ಯಭಾಷೆಯ ಮೇಲಾಡಳಿತಕ್ಕೆ ಸಿಕ್ಕದೆ, ಒಳನಾಡಿನ ತುಳುವಿನ ಸತ್ವವನ್ನೂ ಸ್ವತ್ವ (originality, individuality)ವನ್ನೂ ಉಳಿಸಿಕೊಂಡ ಪದಗಳಾಗಿವೆ ಎಂಬುದು ಒಂದು. ದೃಷ್ಟಿಯಿಂದ ' ಶುದ್ಧ 'ತುಳು ಈ ಪ್ರದೇಶನಲ್ಲಿ ಬಳಕೆಯಲ್ಲಿರುವುದರಿಂದ ಇದನ್ನು ' ಬಂಟ್ವಾಳ ತುಳು' ಎಂದು ಪ್ರತ್ಯೇಕ ವರ್ಗವಾಗಿ ಕಲ್ಪಿಸಿ ಕರೆದಿರುವುದು ಅರ್ಥಪೂರ್ಣವಾಗಿದೆ. ಮೇಲೆ ನಾವು ಉಲ್ಲೇಖಿಸಿದ ದೃಷ್ಟಾಂತಗಳು ಈ ಮಾತನ್ನು ಆಧರಿಸುತ್ತವೆ, ಧಾರಾಳವಾಗಿ.

ಅಡಿಟಿಪ್ಪಣಿಗಳು

1. *Tulu English Dictionary*, p. 26

2. ಉಬಾರ್—ಉಪ್ಪಿನಂಗಡಿ ಎಂಬಿವು ಒಂದರಿಂದೊಂದು ಬಂದಿರುವ ಸಂಭವ ಕಡಿಮೆ. 'ಉಬಾರ್' ಎಂಬುದು ಪ್ರಾಯಃ ಎರಡು ಹೊಳೆಗಳು ಅಥವಾ ತೋಡುಗಳು ಒಂದನ್ನೊಂದು ಕೂಡುವ ಭೂಲಕ್ಷಣವನ್ನು ಸೂಚಿಸುತ್ತದೆ ಎನ್ನಬಹುದು. cf. ಉಬ್ರಂಗಳ, ಉಬರಡ್ಕ ಇ. ತುಳುನಾಡಿನ ಪ್ರಸಿದ್ಧ ಸ್ಥಳನಾಮಶೋಧಕರಾದ ನರ್ತಳ ಮಾರಪ್ಪಶೆಟ್ಟರೂ ಸಹ 'ಉಬಾರ್' ಎಂಬುದು ಎರಡು ನದಿಗಳು ಒಟ್ಟಿಗೆ ಕೂಡಿ, 'ಉಬ್ಬೇರು'ವುದರಿಂದ ಬಂದಿರಬೇಕೆಂಬ ಅಭಿಪ್ರಾಯ ತಳೆಯುತ್ತಾರೆ.

3. cf. ಕಡಪ (ತುಳು) = beyond, across ಕಡಪು = to cross ಕಡವು = ferry, TED p. 45

4. ಮಾಣಾಯಿ, ಮಾಣಿಬೆಟ್ಟು, ಮಾಣ್ಯ, ಮಾಣಿಪುರ, ಮಣಿಪಾಲ ಮುಂತಾದ ತುಳು ನಾಡಿನ ಊರುಗಳ ಭೂಸಂನಿವೇಶವೂ ಇದೇರೀತಿ ಇದ್ದು, ಬಹುಶಃ ಇದೇ ಮೂಲರೂಪದಿಂದ, ಇದೇ ಅರ್ಥದಲ್ಲಿ ನಿಷ್ಪನ್ನವಾಗಿರಬೇಕು.

5. ನೋಡಿ : ಮಾನವಿಕ ಕರ್ಣಾಟಕ, ಸಂ. 7. ಸಂ. 1. 'ಸ್ಥಳನಾಮಗಳು'.

6. ಈ ಭಾಗದಲ್ಲಿ ಈ ಭೂತದ ವರ್ಚಸ್ಸು ಜಾಸ್ತಿ ; ಈ ಕುರಿತಾದ ಉಲ್ಲೇಖ ಮಲ್ಲ ರಾಯಭೂತದ ಪಾಡ್ದನದಲ್ಲಿ ಬರುತ್ತದೆ ; ಈಗಲೂ ಈ ಭೂತ ಈ ಮನೆತನದ ಮೂಲದವರ ಹೆಸರು ಹೇಳುತ್ತದೆ—ಎಂಬುದು, ಇದೀಗ ಈ ಭೂತದ ಸ್ಥಾನ 'ಮಾಡತೋಟ' ಎಂಬಲ್ಲಿದೆ.

7. ಇದು ಇಲ್ಲಿನ ಭೂಗುಣಕ್ಕೆ ಅನುಸಾರವಾದ ವಿವರಣೆ. ಉಚ್ಚಾರದಲ್ಲಿ 'ಕಯ್ಲ ಕಾರ್ ಎಂಬುದು ಕೈಯಾರೆಂದೋ ಕೈಲಾರೆಂದೋ ಆಗುವುದು ಅಸಂಭವವಿಲ್ಲ. cf ಗಡಿ + ಕಾರ್ <ಗಡಿಯಾರ್, ಸುರತಕಲ್> ಸುರತಾಲ್, ಇ.

8. ನೋಡಿ : ನನ್ನಲೇಖನ : ಕುಕ್ಕೆ : ಸ್ಥಳನಾಮ ರೂಪನಿಷ್ಪತ್ತಿ ', ಯುಗಪುರುಷ', ಎಪ್ರಿಲ್ 77

9. ಸ್ವಾಭಾವಿಕ ನಿರ್ಜನ ಪರಿಸರವಾಗಿದ್ದ ಈ ಭಾಗ ಈಗಲೂ ವಿರಳ ಜನಸಂಖ್ಯೆಯದು. ಈ ಪ್ರದೇಶದಲ್ಲಿ ಒಂದೊಂದು ಮನೆಯೇ ಆಸ್ತಿ–ತೋಟಗಳೊಂದಿಗೆ ಒಂದೊಂದು ಸ್ವತಂತ್ರ ಊರಿನಂತೆ, ಮನೆಯ ಹೆಸರೇ ಊರ ಹೆಸರೆಂಬಂತೆ, ಕಾಲಾಂತರದಲ್ಲಿ ರೂಢಿಯಾಗಿಬಿಡುವುದು ಅಚ್ಚರಿಯೇನಲ್ಲ.

10. ಇಲ್ಲಿನ ಕೊಳದಲ್ಲಿ ಪ್ರಾಚೀನಕಾಲದ ಕಂಚಿನ ಸು. ೮ ಕಿಲೋಗ್ರಾಮ್ ತೂಕದ ದೇವೀ ವಿಗ್ರಹ ಸಿಕ್ಕಿರುವುದಾಗಿ ತಿಳಿದು ಬಂದಿದೆ.

11. ನೋಡಿ: 'ಕಾರ್ಕಳ: ಹೆಸರು ಹೇಗೆ ಬಂತು? "ಕಲಾಪ್ರದರ್ಶನ', ಜುಲೈ, 77.

12. ತುಳುವಿನಲ್ಲಿ 'ಪಿಲಿ, ಪಂಜಿ....' ಮುಂತಾದ ಪದಗಳು ತಮ್ಮ ವ್ಯಂಗ್ಯಾರ್ಥ (expanded sense)ದಿಂದ 'ದೊಡ್ಡ' ಎಂಬರ್ಥವನ್ನೂ ಕೊಡುವುದಿದೆ. ಇದಕ್ಕೆ ಸ್ಥಳ ನಾಮಗಳಲ್ಲೂ ಧಾರಾಳವಾಗಿ ಸಾಕ್ಷಿ ಸಿಗುತ್ತದೆ. ಉದಾ. ಪಂಜಿಮೊಗರು, ಪಿಲಿಮೊಗರು, ಪಂಜಜೆ, ಪಂಜಡ್ಕ, ಪಿಲಿಕಜೆ, ಪಿಲಾರು ಇ., ಇ.

13. ಕೊಂಕಣನೊಬ್ಬ ತಾನು ಕದ್ದ ಹಲಸಿನ ಹಣ್ಣುಗಳನ್ನು ಇಲ್ಲಿನ ಗುಂಡಿಯಲ್ಲಿ ಬಚ್ಚಿಡುತ್ತಿದ್ದನೆಂಬ ಐತಿಹ್ಯ.

14. ಉಜಿರೆಗುಂಡಿ <ವಜ್ರಗುಂಡಿ(?): ಇಲ್ಲಿಗೆ ಅಕ್ಕಿ ತೆಗೆದುಕೊಂಡು ಪ್ರಾರ್ಥಿಸಿದಲ್ಲಿ ವಜ್ರವಾಗುತ್ತಿತ್ತಂತೆ.

15. ಮುಚ್ಚಿಲು ಎಂಬುದು ಉದ್ದೆಲೆಯ ಒಂದು ಜಾತಿಯ ಮರ. ಉಡುಪಿ ತಾ. ನ 'ಮುಚ್ಲು ಕೋಡು' ಎಂಬ ಸ್ಥಳನಾಮವೂ ಹೀಗಿಯೇ ಬಂದಿರುವ ಸಾಧ್ಯತೆಯಿದೆ.

16. ಭಯಂಕರ ದೊಡ್ಡ ಮಾವಿನಮರದಿಂದ.

17. ಪಾಲಾಶದ ಮರದಿಂದ; ಈಗಲೂ ಇಲ್ಲಿ ಪಾಲಾಶದ ಮರಗಳು ವಿಪುಲವಾಗಿವೆ. (ಪಲಸ: ತು.)

18. ನೆಕ್ಕರೆಯಲ್ಲಿ 'ಮೇಲಣ ನೆಕ್ಕರೆ' ಹಾಗೂ 'ಕೆಳಗಣ ನೆಕ್ಕರೆ' ಎಂದು ಎರಡು ವಿಭಾಗ. ಈಗಲೂ ಇಲ್ಲಿ ನೆಕ್ಕರೆ ಮಾವಿನಮರಗಳಿದ್ದು, ಒಂದು ಕಾಲದಲ್ಲಿ ಅಧಿಕಸಂಖ್ಯೆಯಲ್ಲಿದ್ದಿರಬೇಕೆಂಬ ಶಂಕೆಯನ್ನುಂಟುಮಾಡುತ್ತದೆ.

19. 'ಬೆ (ಬೊ)ಳ್', ಎಂಬುದು ಮೂಲತಃ ಜಲಾಧಿಕ್ಯವಾಚಕವಾಗಿರುವುದೆಂಬುದಕ್ಕೆ ತುಳು ನಾಡಿನಲ್ಲಿ ಹಲವಾರು ಸ್ಥಳನಾಮಗಳು ಹಾಗೂ ಅವುಗಳ ಭೂಸನ್ನಿವೇಶ ಸಮರ್ಥನೆ ನೀಡುತ್ತವೆ ವಿವರಕ್ಕಾಗಿ ನೋಡಿ: ನನ್ನ ಪ್ರಬಂಧ: ಅಡಿಟಿಪ್ಪಣಿ 5; ಹಾಗೂ 'ಬೆ (ಬೊಳ್) ಊರುಗಳು: ಅಧ್ಯಯನ', 'ಯುಗಪುರುಷ', ಮಾರ್ಚ್, 77.

20. ಅಜ, ಕಜ ಮುಂತಾದ ಪದಗಳು ನೀರ ಹರಿತದ ಮಾರ್ಗವನ್ನು ಸೂಚಿಸುವಂತಿದ್ದು, ಈ ಪ್ರತ್ಯಯವುಳ್ಳ ಸ್ಥಳನಾಮಗಳು ಸಾಮಾನ್ಯವಾಗಿ ನೀರಿಗೆ (ಹೊಳೆಗೆ) ಹತ್ತಿರವಾಗಿರುವುದೇ ಅಧಿಕ

21. 'ಪೇರಿ' ಎಂಬ ಪರ್ಬು ಇಲ್ಲಿ 'ಬಲಪು' (= ಅಗಳು, ತು.) ಹಾಕಿ ನೆಲೆನಿಂತುದರಿಂದ ಈ ಹೆಸರು ಬಂದಿದೆ ಎನ್ನಲಾಗಿದೆ.

22. ಕತೇಸ್ವಾಲ್ಯದ ಸಮೀಪದ ಒಂದು ಮೂಲೆ ಇದು. 'ಬಾಗು' ಎಂಬ ಹೆಸರಿನ ದೇವದಾಸಿಯೊಬ್ಬಳು ಪಡೆದ ಭೂಮಿಯ ಪಾಲನ್ನು ಉದ್ದೇಶಿಸಿ ಬಂದ ಹೆಸರು.

23. ಕ್ಷೇತ್ರಪಾಲ ದೈವದಿಂದ

24. ಕಡೆಶ್ವಾಲ್ಯದಲ್ಲಿ ಹಿಂದೆ ಇದ್ದನೆನ್ನಲಾದ ಕನಕಬಾಹುವಿನ ಕುದುರೆ ಈ ಗದ್ದೆಯಲ್ಲಿ ಮಾಯವಾಗಿತ್ತೆಂಬ ದಂತಕಥೆ.

25. ಇದೇ ರಾಜ ಆನೆಯನ್ನು ಬಿಟ್ಟುಬಿಟ್ಟ ಸ್ಥಳ ಎಂಬ ಐತಿಹ್ಯ.

26. ಮುದಲೆ + ಅಜೆ. ಮುದಲೆ (ತು.)= ಮೊಸಳೆ.

[ಕೃತಜ್ಞತೆ : ಉಪ್ಪಿನಂಗಡಿ ಪರಿಸರದ ಊರುಗಳ 'ಸ್ಥಳ ಸಮೀಕ್ಷೆ' (field survey spot study) ನಡೆಸುವಲ್ಲಿ ಹಲವಾರು ರೀತಿಯಲ್ಲಿ ಉಪಕರಿಸಿದ ಶ್ರೀ ಕೇಶವಭಟ್ಟ ಮೀರಾವನ ಹಾಗೂ ಅವರ ಚಿರಂಜೀವಿಗಳಿಗೂ, ಶ್ರೀಯುತರುಗಳಾದ ಪೇರುಮೊಗ್ರು ದಾದಪ್ಪ ಪೂಜಾರಿ, ಜತ್ತನಕೋಡಿಯ ನರಸಿಂಹಭಟ್ಟರು ಮತ್ತು ಅವರ ತೀರ್ಥರೂಪರು, ಬಡೆಕ್ಕಿಲ ವೆಂಕಟರಮಣ ಭಟ್ಟರು, ಅಣ್ಣಂಗಳ ನಾರಣಪ್ಪಯ್ಯ ಹಾಗೂ ಸಂಬಂಧಿಸಿದಗ್ರಾಮಗಳ ಯಜಮಾನರಿಗೂ ಲೇಖಕ ಕೃತಜ್ಞನಾಗಿದ್ದಾನೆ.]

ಸ್ಥಳನಾಮ ಹಳೆಯದಾಗಿರಬಹುದಾದರೂ, ವಿಜ್ಞಾನದ ಒಂದು ಶಾಖೆಯೆಂದು ಪರಿಗಣಿಸಬಹುದಾದ 'ಸ್ಥಳನಾಮ ಶಾಸ್ತ್ರ ಅಥವಾ ವಿಜ್ಞಾನ' (Toponomy) ಈಚಿನದು; ಅರ್ವಾಚೀನ ನಾಮದು.... ಸ್ಥಳನಾಮ ಶಾಸ್ತ್ರವೂ (Toponomy < topos (place) Tonyma (= name G K) ಒಂದು ಸ್ಥಳದ ಹೆಸರಿನ ಕುರಿತಾಗಿ ಚರ್ಚಿಸುವ ಒಂದು ಶಾಸ್ತ್ರಯಾ ವಿಜ್ಞಾನ ಶಾಖೆ (nomy < nomos= law. the science of. topos= place =place-name) ಎಂದೂ ಸ್ಥಳನಾಮ ಶಾಸ್ತ್ರ ನಡೆದು ಬಂದ ದಾರಿ.

ಕೆ. ರಘುನಾಥ ಭಟ್ಟರ ಲೇಖನ 'ಸ್ಥಳನಾಮಗಳು'
(ಮಾನವಿಕ ಕರ್ಣಾಟಕ, ಸಂಪುಟ ೭, ಸಂಚಿಕೆ ೧, ಪು ೬೫)

ಎಸ್. ಪಿ ಪಾಟೀಲ

ಕರ್ನಾಟಕದ ಜೈನ ಮಂತ್ರಿಗಗಳು - ಸೇನಾಪತಿಳು

ಭಾರತವು ಹಲವಾರು ಮತ ಧರ್ಮಗಳ ನೆಲೆವೀಡು. ಅವರಲ್ಲಿ ಜೈನಧರ್ಮವೂ ಒಂದು. ಜೈನಧರ್ಮ–ಸಂಸ್ಕೃತಿಯ ಕುರಿತು ಅನೇಕ ಪ್ರಾಚೀನ ಜೈನೇತರ ಕೃತಿಗಳಲ್ಲಿಯೂ ಉಲ್ಲೇಖ ದೊರೆಯುವುದು. ಭಾರತದಲ್ಲಿ ಆರ್ಯರ ಆಗಮನಕ್ಕಿಂತ ಪೂರ್ವದಲ್ಲಿಯೇ ಅದು ನೆಲೆಸಿದ್ದಿತು ಎಂಬ ವಿಷಯ ವಿದ್ವಾಂಸರಿಗೆ ಸಮ್ಮತವಾಗಿದೆ. ಈ ಜೈನಧರ್ಮದ ಇತಿಹಾಸವು ಕರ್ನಾಟಕದ ಇತಿಹಾಸದೊಂದಿಗೆ ಬೆರೆತು ಒಂದಾಗಿ ಮುಂದುವರಿದಿದೆ. ಆದರೆ ಅದು ಕರ್ನಾಟಕಕ್ಕೆ ಯಾವಾಗ ಕಾಲಿರಿಸಿತೆಂಬ ಬಗೆಗೆ ಖಚಿತವಾಗಿ ಹೇಳಲು ಬರುವುದಿಲ್ಲ. ಕರ್ನಾಟಕವನ್ನು ಜೀವಂಧರನೆಂಬ ರಾಜನು ಆಳುವ ಕಾಲಕ್ಕೆ ಮಹಾವೀರ ತೀರ್ಥಂಕರರ ಸಮವಸರಣವು ಅಲ್ಲಿಗೆ ಬಂದಿತ್ತೆಂದು ಭಾಸ್ಕರಕವಿಯ 'ಜೀವಂಧರಚರಿತೆ'ಯಲ್ಲಿ ಹೇಳಲಾಗಿದೆ. ಆದರೆ ಇದಕ್ಕಿಂತ ಖಚಿತವಾದ ಆಧಾರವೆಂದರೆ ಕ್ರಿ. ಪೂ. 3ನೆಯ ಶತಮಾನದಲ್ಲಿ ಕಡೆಯ ಶ್ರುತಕೇವಲಿಗಳಾದ ಭದ್ರಬಾಹು ಸ್ವಾಮಿಗಳು ಮೌರ್ಯಚಂದ್ರಗುಪ್ತನೊಂದಿಗೆ ಶ್ರವಣಬೆಳಗೊಳಕ್ಕೆ ಬಂದು, ಅಲ್ಲಿಯ ಚಂದ್ರಗಿರಿಯ ಬೆಟ್ಟದ ಮೇಲೆ ಸಲ್ಲೇಖನವಿಧಿಪೂರ್ವಕ ಕಾಲವಶರಾದರು ಎಂದು ಹೇಳುವ ಶ್ರವಣಬೆಳಗೊಳದ ಒಂದು ಶಾಸನ ದಕ್ಷಿಣ ಭಾರತದ ಕರ್ನಾಟಕದಲ್ಲಿ ಜೈನ ಧರ್ಮದ ಬೆಳವಣಿಗೆಯ ಪ್ರಥಮ ಹಂತವಿದು. ಅಲ್ಲಿಂದ ಮುಂದೆ 12–13ನೆಯ ಶತಮಾನದವರೆಗೆ ಜೈನಧರ್ಮವು ಕರ್ನಾಟಕದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸಿರುವುದು ವೇದ್ಯವಾಗುವುದು.

ಕರ್ನಾಟಕದಲ್ಲಿ ಜೈನಧರ್ಮದ ಪ್ರಭಾವಕ್ಕೊಳಗಾಗದ ಒಂದೂ ಅರಸುಮನೆತನವಿರಲಿಲ್ಲ. ಕದಂಬ, ಗಂಗ, ರಾಷ್ಟ್ರಕೂಟ, ರಟ್ಟ ಮತ್ತು ಕಲಚೂರಿ ಇವು ಪ್ರಭಾವಿ ಹಾಗೂ ಪ್ರಬಲ ಅರಸು ಮನೆತನಗಳಾಗಿದ್ದು, ಜೈನಧರ್ಮವನ್ನು ರಾಜಧರ್ಮವೆಂದು ಅಥವಾ ರಾಜ್ಯದಲ್ಲಿದ್ದ ಆ ಧರ್ಮದ ಅಸಂಖ್ಯ ಪ್ರಜೆಗಳನ್ನು ತಮ್ಮ ಆಶ್ರಯದಲ್ಲಿ ಉದಾರ ಭಾವ, ಸಹನಶೀಲತೆಯಿಂದ ರಕ್ಷಿಸಿಕೊಂಡು ಬಂದವುಗಳಾಗಿವೆ. ಗಂಗರಿಂದ ಜೈನಧರ್ಮಕ್ಕೆ ರಾಜಾಶ್ರಯ ಲಭಿಸಿತು. ಕದಂಬರು ಜೈನಧರ್ಮದ ರಕ್ಷಣೆ–ಪೋಷಣೆಗಾಗಿ ಜೈನಧರ್ಮದವರಿಗೆ ಅನೇಕ ದಾನಗಳನ್ನಿತ್ತ ಸಂಗತಿಯನ್ನು ವಿವರಿಸುವ ಶಾಸನಗಳು ದೊರೆಯುವುವು. ಈ ರಾಜವಂಶದ ಧರ್ಮ ಜೈನವಾಗಿದ್ದಿತು.[1]

ಬನವಾಸಿಯ ಪ್ರಾಚೀನ ಕದಂಬರೂ, ಚಾಲುಕ್ಯರೂ—ಪಲ್ಲವರ ನಂತರ ತುಳುದೇಶದಲ್ಲಿ ಆಳಿದ ಅರಸರು ನಿಸ್ಸಂದೇಹವಾಗಿ ಜೈನರಿದ್ದರೆಂದು ಗೊತ್ತಾಗುತ್ತದೆ.[2] ಹೀಗೆ ರಾಜಾಶ್ರಯವನ್ನು ಪಡೆದ ಜೈನಧರ್ಮವು ಕರ್ನಾಟಕದಲ್ಲೆಲ್ಲ ಹಬ್ಬಿ ತನ್ನ ಪ್ರಭಾವ ಬೀರಿತ್ತು. ಆದುದರಿಂದಲೇ ಹನ್ನೆರಡನೆಯ ಶತಮಾನದ ಒಂದು ಶಾಸನ ಅಂದಿನ ಜೈನಧರ್ಮದ ವೈಭವದ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದು :

ಜಿನಧರ್ಮಾವಾಸಮಾದತ್ತುಮಳವಿನಯದಾಗರಮಾದತ್ತು ಪದ್ಮಾ
ಸನನಿರ್ಪಾ ಸದ್ಮಮಾದತ್ತು ವಿಶದಯಶೋಧಾಮಮಾದತ್ತು ವಿದ್ಯಾ
ಧನ ಧರ್ಮಸ್ಥಾನಮಾದತ್ತಸಮು ತರಳ ಗಂಭೀರ ಸದ್ಗೇಹಮಾದ
ತ್ತೆನಿಸಲ್ಕಿಂತುಳ್ಳ ನಾನಾಮಹಿಮೆಯೊಳೆಸಗುಂ ಚಾರು ಕರ್ನಾಟದೇಶಂ

—ಶಾಸನಪದ್ಯಮಂಜರಿ-240

ಕರ್ನಾಟಕದಲ್ಲಿ ಜೈನಧರ್ಮಕ್ಕೆ ಆರಂಭದಿಂದಲೇ ರಾಜಾಶ್ರಯ ಲಭಿಸಿತು. ಅನೇಕ ರಾಜರು ಸ್ವತಃ ಜೈನಧರ್ಮದವರಾಗಿದ್ದರು. ಇದರಿಂದಾಗಿ ಅವರ ಚಟುವಟಿಕೆ ಇನ್ನಷ್ಟು ಹೆಚ್ಚಲು ಸಹಾಯವಾಯಿತು. ರಾಜರಂತೆ ಅವರ ಮಂತ್ರಿಗಳೂ, ಸೇನಾಪತಿಗಳೂ ಜೈನರಾಗಿದ್ದು ನಾಡಿನ ಆಡಳಿತ ಸಂರಕ್ಷಣೆಯ ಕಾರ್ಯವನ್ನು ದಕ್ಷತೆಯಿಂದ ಪೂರೈಸುವುದರ ಜೊತೆಗೆ ಧರ್ಮ ಮಾರ್ಗದಿಂದಲೂ ಮಾನವಕುಲದ ಕಲ್ಯಾಣಕ್ಕಾಗಿ ಶ್ರಮಿಸಿದುದು ಕಂಡುಬರುವುದು ಆದರೆ ಸಾಮಾನ್ಯವಾಗಿ ಇತಿಹಾಸವು ರಾಜ–ಮಹಾರಾಜರ ಶೌರ್ಯ–ಸಾಹಸ, ದಾನ–ಧರ್ಮ, ಸಾಹಿತ್ಯ-ಕಲಾಭಿರುಚಿ ಮೊದಲಾದ ಅಂಶಗಳನ್ನು ಚಿತ್ರಿಸುವ ಸಾಧನವಾಗಿದೆಯಲ್ಲದೆ ಈ ವಿಷಯಗಳಲ್ಲಿ ಅವರಿಗೆ ಮಾರ್ಗದರ್ಶನವೀಯುವ ಮಂತ್ರಿ. ಯುದ್ಧಭೂಮಿಯಲ್ಲಿ ಜಯಗಳಿಸಿಕೊಡುವ ಸೇನಾ ಪತಿಗಳ ಹೆಸರುಗಳು ತೆರೆಯ ಮರೆಯಲ್ಲಿ ಉಳಿಯುವ ಸಂಭವವೇ ಅಧಿಕ. ಹೀಗಾಗಿ ಕನ್ನಡ ನಾಡಿನ ಅನೇಕ ಜೈನ ಮಂತ್ರಿ-ಸೇನಾಪತಿಗಳ ಹಿರಿಯ ವ್ಯಕ್ತಿತ್ವದ ಪರಿಚಯವಾಗಿರದೇ ಉಳಿದಿರುವ ಸಂಭವವಿದೆ. ಆದರೂ ಕೆಲವು ಜನರು ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದಾಗಿ ಅದ್ವಿತೀಯ ಮಾನವೀಯತೆಯಿಂದಾಗಿ ನಾಡಿನ ಜನರ ಹೃದಯದಲ್ಲಿ ಇಂದಿಗೂ ಗೌರವದ ಸ್ಥಾನ ಪಡೆದಿದ್ದಾರೆ. ಅವರ ಹಾಗೂ ಅವರ ಕುಟುಂಬ ವರ್ಗದವರ ಉದಾತ್ತ ಕಾರ್ಯಗಳು ಮುಂದಿನ ಜನಾಂಗಕ್ಕೆ ಆದರ್ಶಪ್ರಾಯವಾದ ಸ್ಮಾರಕಗಳಾಗಿ ನಿತ್ಯನಂದಾದೀಪಗಳಾಗಿ ಉಳಿದಿವೆ. ಈ ದೃಷ್ಟಿಯಿಂದ ಕರ್ನಾಟಕದ ಜೈನಮಂತ್ರಿಗಳು–ಸೇನಾಪತಿಗಳಲ್ಲಿ ಕೆಲವರ ಕುರಿತು ಯೋಚಿಸಬಹುದಾಗಿದೆ. ಆದರೆ ಈ ಮಹಾವ್ಯಕ್ತಿಗಳ ಕುರಿತು ವಿವರವಾದ ವಿವೇಚನೆಗೆ ಇನ್ನೂ ಸಾಕಷ್ಟು ಅವಕಾಶವಿದೆಯೆಂಬುದನ್ನು ಮರೆಯಲಾಗದು.

ಕರ್ನಾಟಕದ ಜೈನ ಸೇನಾಪತಿ–ಮಂತ್ರಿ–ಕವಿಗಳಲ್ಲಿ ರಾಜನಿಷ್ಠನಾಗಿ, ಅತಿಶಯ ಪರಾಕ್ರಮದಿಂದ ಹೋರಾಡಿ, ಧರ್ಮವನ್ನು ನಿತ್ಯಜೀವನದಲ್ಲಿ ಬಾಳಿ ಬದುಕಿ, ಲೋಕೋತ್ತರಕಲಾ ಪೂರ್ಣವಾದ ಶಿಲ್ಪವನ್ನು ನಿರ್ಮಿಸಿ, ರನ್ನನಂತಹ ಮಹಾಕವಿಗೆ ಆಶ್ರಯವಿತ್ತು ಅಜರಾಮರನಾದ ಚಾವುಂಡರಾಯನ ಚರಿತ್ರೆ ಅದ್ವಿತೀಯವೂ, ಅಪೂರ್ವವೂ ಆಗಿದೆ. ಚಾವುಂಡರಾಯ ಗಂಗ ಮಾರಸಿಂಹನ ಮಂತ್ರಿ. ಗಂಗ ಮಾರಸಿಂಹ ಯುಗಪುರುಷ; ಒಳ್ಳೆಯ ವೈಭವದಿಂದ ರಾಜ್ಯವಾಳಿ, ಕೊನೆಗೆ ರಾಜ್ಯಪದವನ್ನು ತ್ಯಜಿಸಿ, ಅಜಿತಸೇನಾಚಾರ್ಯರಲ್ಲಿ ದೀಕ್ಷೆಪಡೆದು, ಸಲ್ಲೇಖನ ವ್ರತ ಸ್ವೀಕರಿಸಿ, ಬಂಕಾಪುರದಲ್ಲಿ ಕ್ರಿ. ಶ. 975ರಲ್ಲಿ ದೇಹ ತ್ಯಜಿಸಿದವನು. ಮಾರಸಿಂಹನ ತರುವಾಯ ಪಟ್ಟಕ್ಕೆ ಬಂದ ಎಳೆಹರೆಯದ ರಾಚಮಲ್ಲನ ಮಂತ್ರಿ, ಸೇನಾಪತಿಯಾಗಿಯೂ ಚಾವುಂಡರಾಯ ರಾಜ್ಯದ ಭಾರವನ್ನು ಹೊತ್ತು ಯಶಸ್ವಿಯಾಗಿ ನಿರ್ವಹಿಸಿದನು ಗಂಗರ ಅನೇಕ ವಿಜಯಗಳ ಕಾರಣಪುರುಷ ಚಾವುಂಡರಾಯ. ಅವನ ಧೈರ್ಯ ಸಾಹಸಗಳ ವರ್ಣನೆ ಅನೇಕ ಶಾಸನಗಳಲ್ಲಿ ಕೆನೆಗೊಂಡು ನಿಂತಿದೆ

"ಅಳ್ದನ ಬೆಸದಿಂ ಖೇಡಗ ಕಾಳಗದೊಳ್ ವಜ್ಜಳದೇವನಂ ಗೆಲ್ದ ಸಾಹಸದಿಂ ಸಮರಧುರಂಧರಂ ಗೋನೂರ ಬಯಲೊಳ್ ಬಂದೊಡ್ಡಿದ ನೊಳಂಬರ ಕಾಳಗದೊಳ್ ಜಗದೇಕವೀರನ ಮುಂದೆ ತನ್ನ ಬಲಮಂ ಮೆರೆದುದರಿಂ ವೀರಮಾರ್ತಾಂಡಂ. ಉಚ್ಚಂಗಿಯ ಕೋಟೆಯೊಳ್ ರಾಜಾದಿತ್ಯನೊಳ್ ಒರ್ವನೆ ರಣಮಂ ಮೆರೆದುದರಿಂದೆ ರಣರಂಗಸಿಂಗಂ, ಬಾಗೆಯೂರ ಕೋಟೆಯೊಳ್ ರಾಜ, ಭಾಸ,

ಸಿವರ, ಕುಣಾಂಕ ಮೊದಲಾದ ಕಲಿಗಳು ಒಂದೇ ಮೈಯೊಳ್ ಪಣೆಯರಿಪುದರಿಂ ಭುಜವಿಕ್ರಮಂ. ತನ್ನ ತಮ್ಮನಂ ನಾಗವರ್ಮನಂ ಕೊಂದ ಪತಿಗೆ ಛಲದಂಕ ಗಂಗನುಂ ಗಂಗರಭಟನುಮೆನಿಸಿದ ಮುದುರಾಚಯ್ಯನಂ ಕೊಂದುದರಿಂದ ಸಮರಪರಶುರಾಮಂ, ಜಟ್ಟಿಗರನಟ್ಟಿದ ದಂಡಿನೊಳ್ ನಿಷ್ಕಂಟಕಂ ಮಾಡಿದುದರಿಂ ಪ್ರತಿಪಕ್ಷರಾಕ್ಷಸಂ, ವೀರಭಟಕೋಟಿಯಂ ತವೆಕೊಂದುದರಿಂ ಭಟಮಾರಿ ನಿಶ್ಶಂಕಾದಿ ಗುಣಪರಿರಕ್ಷಣೈಕಕಾರಣನಪ್ಪುದರಿಂ ಸಮ್ಯಕ್ತ್ವರತ್ನಾಕರಂ, ಪರಾಂಗನಾ, ಪರದ್ರವ್ಯ ಪರಾಙ್ಮುಖನಪ್ಪುದರಿಂ, ಶೌಚಾಭರಣಂ, ಪರಿಹಾಸದೊಳಂ ಸೂನೃತ ವಚನನಪ್ಪುದರಿಂ ಸತ್ಯಯುಧಿಷ್ಠಿರಂ, ಅತಿಪ್ರಚಂಡವೀರ, ಮಾಂಡಲೀಕ ಖಂಡಮುಂಡನಮಣಿಯಪ್ಪುದರಿಂದ ಸುಭಟಚೂಡಾಮಣಿ", (ಚಾವುಂಡರಾಯ ಪುರಾಣ) ಎಂಬ ಅವನ ಈ ಪದವಿಗಳು ಅವನ ಶೌರ್ಯ, ಸಾಹಸ, ಸಮ್ಯಕ್ತ್ವಕ್ಕೆ ಸಾಕ್ಷಿಯಾಗಿವೆ.

ಚಾವುಂಡರಾಯನ ತಾಯಿ ಕಾಳಲಾದೇವಿ. ಜಿನಭಕ್ತೆ. ಅವನು ಅವಳ ಬಯಕೆಯಂತೆ ಶ್ರವಣಬೆಳಗೊಳದ ವಿಂಧ್ಯಗಿರಿಯ ಮೇಲೆ ಲೋಕೋತ್ತರ ಕಲಾನಿಧಿ ಬಾಹುಬಲಿಯ ಬೃಹತ್ ಮೂರ್ತಿಯನ್ನು ನಿರ್ಮಿಸಿದನು. ಬಾಹುಬಲಿಯ ತ್ಯಾಗವನ್ನೂ, ಶಾಂತಭಾವವನ್ನೂ, ಮಂದಹಾಸವನ್ನೂ ಪ್ರತಿನಿಧಿಸುವ ಈ ಶಿಲ್ಪ ಕಲಾಕೃತಿ ಕನ್ನಡನಾಡಿನ ಶಿಲ್ಪಕ್ಷೇತ್ರಕ್ಕೆ ಚಾವುಂಡರಾಯನ ಅಪೂರ್ವ ಕಾಣಿಕೆಯಾಗಿದೆ. ಭದ್ರಬಾಹುಭಟ್ಟಾರಕರಿಂದ ಪವಿತ್ರ ಧಾರ್ಮಿಕ ಕ್ಷೇತ್ರವಾದ ಶ್ರವಣಬೆಳಗೊಳವು ಚಾವುಂಡರಾಯನಿಂದ ಅದ್ವಿತೀಯ ಕಲೆಯ ಬೀಡಾಗಿ ಜಗತ್ತಿನ ಎಲ್ಲ ಮೂಲೆಯ ಜನವನ್ನು ಆಕರ್ಷಿಸಿ, ಸಂಸಾರದ ನಶ್ವರತೆಯನ್ನೂ. ತ್ಯಾಗದ ಹಿರಿಮೆಯನ್ನೂ ಬೀರುವ ಮಹಿಮೋನ್ನತ ಕ್ಷೇತ್ರವಾಗಿ ಪರಿಣಮಿಸಿತು. ಚಾವುಂಡರಾಯನನ್ನು ಪ್ರೀತಿಯಿಂದ 'ಗೊಮ್ಮಟ'ನೆಂದು ಕರೆಯುತ್ತಿದ್ದುದರಿಂದ ಅವನು ಸ್ಥಾಪಿಸಿದ ಬಾಹುಬಲಿಯು 'ಗೋಮಟೇಶ್ವರ'ನೆಂದು ಪ್ರಸಿದ್ಧನಾದನು.

ಚಾವುಂಡರಾಯನಿಂದ ಮಾಡಿಸಲ್ಪಟ್ಟ ಗೊಮ್ಮಟನ ಮುಖಾರವಿಂದವನ್ನು ಸರ್ವಾರ್ಥಸಿದ್ಧಿಯ ದೇವತೆಗಳೂ ಪರಮಾವಧಿಯ ಮುನಿಗಳೂ ನೋಡಿ ಪುನೀತರಾದರು ಎಂದು ಅದರ ಪವಿತ್ರತೆಯನ್ನೂ, ಮಹಿಮೆಯನ್ನೂ ಹೊಗಳಲಾಗಿದೆ.[3]

ಚಾವುಂಡರಾಯನು ಸಿದ್ಧಾಂತಚಕ್ರವರ್ತಿ ನೇಮಿಚಂದ್ರಾಚಾರ್ಯರ ಶಿಷ್ಯ. ಮೊದಲಿನಿಂದಲೂ ಸಾಹಿತ್ಯಪ್ರಿಯ, ಸಂಸ್ಕೃತಿಯ ಅಭಿಮಾನಿ–ರಕ್ಷಕ. ಎಡೆಬಿಡದ ರಾಜಕಾರ್ಯದಲ್ಲಿಯ ಬಿಡುವಿನ ಸಮಯದಲ್ಲಿ ಗುರುಗಳಲ್ಲಿ ಹೋಗಿ ಧರ್ಮಚಿಂತನೆ ಮಾಡುವ ಸಾತ್ವಿಕ ಶ್ರಾವಕ. ಅವನಿಗಾಗಿ ನೇಮಿಚಂದ್ರಾಚಾರ್ಯರು ಧವಳ ಮೊದಲಾದ ಗ್ರಂಥಗಳನ್ನು ಓದಿ ವಿವರಿಸಿ ಹೇಳುತ್ತಿದ್ದರು. ಅಷ್ಟೇ ಅಲ್ಲದೆ ಗೊಮ್ಮಟನಿಗಾಗಿ ಅದನ್ನು ಸಂಗ್ರಹಿಸಿ 'ಗೊಮ್ಮಟಸಾರ'ವನ್ನು ಸಿದ್ಧಪಡಿಸಿದರು.[4] ಚಾವುಂಡರಾಯನು ಕರ್ಮವಿಜ್ಞಾನದ ಗೊಮ್ಮಟಸಾರಕ್ಕೆ ಅಚ್ಚಗನ್ನಡದಲ್ಲಿ ವೃತ್ತಿಯನ್ನು ಬರೆದನು.[5]

'ತ್ರಿಷಷ್ಟಿಲಕ್ಷಣ ಮಹಾಪುರಾಣ'ವು ಚಾವುಂಡರಾಯನಿಂದ ರಚಿತವಾದ ಗದ್ಯ ಮಹಾಪುರಾಣ. ಕನ್ನಡ ಸಾಹಿತ್ಯದಲ್ಲಿ ಎರಡನೆಯ ಗದ್ಯಕೃತಿಯೆಂಬ ಗೌರವಕ್ಕೆ ಪಾತ್ರವಾಯಿತು. ಚಾವುಂಡರಾಯನಿಂದ ರಚಿತವಾದುದರಿಂದ 'ಚಾವುಂಡರಾಯ ಪುರಾಣ'ವೆಂದು ಕರೆಯಲ್ಪಟ್ಟಿತು. "ಗದ್ಯಗೊಮ್ಮಟ"ವೆಂಬ ಗೌರವವೂ ಅದಕ್ಕೆ ಸಂದಿದೆ.

ಚಾವುಂಡರಾಯನು ಸಂಸ್ಕೃತದಲ್ಲಿ 'ಚರಿತ್ರಸಾರ'ವೆಂಬ ಗ್ರಂಥವನ್ನು ರಚಿಸಿದನೆಂದು ಹೇಳಲಾಗುವುದು. ರನ್ನನಂತಹ ಮಹಾಕವಿಗೆ ಆಶ್ರಯವಿತ್ತು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದನು. ರನ್ನನ 'ಸಮರಪರಶುರಾಮಚರಿತೆ' ಚಾವುಂಡರಾಯನ ಚರಿತೆಯೇ ಆಗಿರಬಹುದು. ಚಾವುಂಡರಾಯನಿಂದ ಜೈನ ಸಾಹಿತ್ಯ–ಸಂಸ್ಕೃತಿ ಕಲೆಗಳ ಬೆಳವಣಿಗೆಗೆ ತುಂಬ

ಸಹಾಯ ನಂದಿದೆ. "ಗೊಮ್ಮಟರಾಯನ ವ್ಯಕ್ತಿತ್ವವು ಶ್ರವಣಬೆಳಗೊಳದ ಗೊಮ್ಮಟ ಮೂರ್ತಿಗಿಂತಲೂ ಉನ್ನತವಾಗಿತ್ತು. ಎಂತಲೇ ಅವನು ಮಾಡಿದ ಕಾರ್ಯಗಳು ಜೈನಧರ್ಮ ಇರುವವರೆಗೂ ಇರುವಂತಹವಿವೆ. ಇಷ್ಟೇ ಅಲ್ಲ, ಧರ್ಮದ ವಿಕಾಸಕ್ಕೆ ನೆರವಾಗುವಂತೆಯೂ ಇವೆ".[6]

ಚಾವುಂಡರಾಯನ ಮಗ ಜಿನದೇವನೂ ಅಜಿತಸೇನಾಚಾರ್ಯರ ಶಿಷ್ಯ. ಶ್ರವಣಬೆಳಗೊಳದಲ್ಲಿ ಜಿನಮಂದಿರ ನಿರ್ಮಿಸಿದ ವಿವರ ಒಂದು ಶಾಸನದಲ್ಲಿ ಬರುವದು :

ಜಿನಗೃಹಮಂ ಬೆಳ್ಗೊಳದೊಳ್
ಜನಮೆಲ್ಲಂ ಪೊಗಳೆ ಮನ್ತ್ರಿ ಚಾಮುಂಡನ ನಂದ
ನನೊಲವಿಂ ಮಾಡಿಸಿದಂ
ಜಿನದೇವಣನಜಿತಸೇನಮುನಿಪರ ಗುಡ್ಡಂ[7]

ಹೀಗೆ ತಂದೆ ಮಕ್ಕಳಿಬ್ಬರೂ ರಾಷ್ಟ್ರೋನ್ನತಿಯ ಕಾರ್ಯದೊಂದಿಗೆ, ಆತ್ಮೋನ್ನತಿಯ ಕಾರ್ಯವನ್ನು ಕೈಕೊಂಡವರು.

ನೃಪತುಂಗನ ರಾಜ್ಯಾವಧಿಯ ಕಾಲದಲ್ಲಿ ಬಂಕೇಯನೆಂಬ ವೀರನ ಹೆಸರನ್ನು ಕಾಣುತ್ತೇವೆ. ಅವನ ತಂದೆ ಧೋರ, ತಾಯಿ ವಿಜಯಾಂಬೆ. ಅವನು ನೃಪತುಂಗನಿಗೆ ರಾಜ್ಯಕಾರ್ಯದಲ್ಲಿ ಮಾರ್ಗದರ್ಶಕನಾಗಿದ್ದ. ಅವನನ್ನು 'ವಿತತ ಜ್ಯೋತಿರ್ನಿಶಿತಾಸಿರಿ ಘಾಪರ್ದ' ಎಂದು ಕರೆಯಲಾಗಿದೆ. ನೃಪತುಂಗನಿಂದ ದೊರೆತ ಭೂದಾನವನ್ನು ಕೊಳನೂರಿನಲ್ಲಿ ತಾನು ಕಟ್ಟಿದ ಜಿನಮಂದಿರದ ಪೂಜಾಕಾರ್ಯಗಳ ವ್ಯವಸ್ಥೆಗಾಗಿ ದಾನವಿತ್ತನು. ವೀರನಾಗಿದ್ದಂತೆ ಧರ್ಮಶ್ರಾವಕನೂ ಆಗಿದ್ದನು. ಅವನ ಹೆಸರಿನಲ್ಲಿ ಅವನ ಮಗ ಬಂಕಾಪುರವೆಂಬ ನಗರವನ್ನು ನಿರ್ಮಿಸಿದನೆಂದು ತಿಳಿಯುವದು. ಗಂಗ ಮಾರಸಿಂಹ ಸಲ್ಲೇಖನ ವ್ರತ ಸ್ವೀಕರಿಸಿದುದು ಇಲ್ಲಿಯೇ. ಬಂಕೇಯನಿಂದಾಗಿ ಮಾನ್ಯಖೇಟ ರಾಜಧಾನಿಯಲ್ಲಿ ಜೈನ ವಿದ್ವಾಂಸರಿಗೂ ಹಾಗೂ ಅಧಿಕಾರಿಗಳಿಗೂ ಪ್ರೋತ್ಸಾಹ ದೊರೆಯಲು ಅನುಕೂಲವಾಯಿತು.

ದಾನಚಿಂತಾಮಣಿಅತ್ತಿಮಬ್ಬೆಯ ತಂದೆ ಮಲ್ಲಪ ಹಾಗೂ ಕಕ್ಕ ಪೊನ್ನಮಯ್ಯರು ರಾಷ್ಟ್ರಕೂಟ 3ನೆಯ ಕೃಷ್ಣನೃಪನಲ್ಲಿ ಸೇನಾಪತಿಗಳಾಗಿದ್ದರು. ಪೊನ್ನಮಹಾಕವಿಯಿಂದ ಶಾಂತಿಪುರಾಣವನ್ನು ಬರೆಯಿಸಿದರೆಂಬುದನ್ನು ಪೊನ್ನನೇ 'ಶಾಂತಿ ಪುರಾಣ'ದಲ್ಲಿ ಹೇಳಿದ್ದಾನೆ:

ಶಾಂತಿಪುರಾಣದ ನಿರ್ಮಾ
ಣಂ ತಕ್ಕಡೆ ಮಲ್ಲಪಯ್ಯನಿಂ ತದನುಜನಿಂ
ಶಾಂತಿಧನ ಪುನ್ನಮಯ್ಯಾನಿ
ನೇಂತಮ್ಮುತೀರ್ವರುಂ ಕೃತಾರ್ಥರೋ ಜಗದೊಳ್

ಅದರಂತೆ 'ಶಾಂತಿಪುರಾಣ'ದ 1. 37–55, 12. 61–63, 81 ಪದ್ಯಗಳಲ್ಲಿ ಆಶ್ವಾಸಾಂತ ಗದ್ಯದಲ್ಲಿ ಈ ಪುರಾಣದ ಕಾರಣಕರ್ತೃಗಳಾದ ಸಹೋದರರನ್ನು ಪೊನ್ನಕವಿ ಶ್ರದ್ಧೆ-ಭಕ್ತಿಯಿಂದ ಹೊಗಳಿದ್ದಾನೆ.

ಮಲ್ಲಪ ಪೊನ್ನಮಯ್ಯರ ಮನೆ ಪಂಡಿತಮಂಡಳಿ, ಕವಿಮಂಡಳಿಗೆ ತವರ್ಮನೆಯಾಗಿತ್ತು.[8] ಅವರೀರ್ವರೂ ರಣವೀರರೂ ಧರ್ಮಪರರೂ ಶೀಲ, ಬಲ, ಕಲೆ ಹಾಗೂ ಸಂಯಮ ಸಂಪನ್ನರು. ಇಂಥ ಮನೆತನದಲ್ಲಿ ಮಲ್ಲಪನ ಕುವರಿಯಾಗಿ ಜನಿಸಿದ ಅತ್ತಿಮಬ್ಬೆಯು ರತ್ನತ್ರಯಾಲಂಕೃತೆಯುಂ, ದಾನಚಿಂತಾಮಣಿಯುಂ. ಚರಿತ್ರಮೇರುವುಂ, ಗುಣದಂಕಕಾರ್ತಿಯುಂ.... ಕವಿವರ ಕಾಮಧೇನುವುಂ, ಜಿನಧರ್ಮಪತಾಕೆಯುಂ, ಮಹಾಸತಿಕುಲತಿಲಕೆಯುಂ[9] ಆಗಿದ್ದಳು. ಕೈಹಿಡಿದ ಪತಿ ನಾಗಮಯ್ಯನು, ಚಾಲುಕ್ಯ ಆಹವಮಲ್ಲನ ದಂಡನಾಯಕ. 'ಒರಟರ ಮಲ್ಲ'

ಬಿರುದಾಂಕಿತ. ಹೀಗೆ ಹೆತ್ತಮನೆ, ಹೊಕ್ಕ ಮನೆಗಳೆರಡೂ ಶೌರ್ಯ–ವೀರ–ಸಾಹಸಕ್ಕೆ ಹೆಸರಾದುದರಿಂದ ಅತ್ತಿಮಬ್ಬೆ ಹೆಣ್ಣಾದರೂ, ಸೇನಾಪತಿ–ಮಂತ್ರಿಯಾಗಿರದಿದ್ದರೂ, ಮನೆಯಲ್ಲಿದ್ದು ಅವಳು ಮಾಡಿದ ಕಾರ್ಯ ಯಾವ ಮಂತ್ರಿ ಸೇನಾಪತಿಗಳಿಗೂ ಕಡಿಮೆಯದಲ್ಲ. ಯುದ್ಧರಂಗದಲ್ಲಿ ವೈರಿಗಳೊಡನೆ ಹೋರಾಡುತ್ತ ವೀರಸ್ವರ್ಗವನ್ನು ಸೇರಿದ ಪತಿಯ ಅಗಲುವಿಕೆಯಿಂದ ಅತ್ತಿಮಬ್ಬೆಯ ಜೀವನ ಇನ್ನಷ್ಟು ಕರ್ತವ್ಯಪರವಾಯಿತು. ರಾಷ್ಟ್ರಕಾರ್ಯ, ಧರ್ಮಕಾರ್ಯಕ್ಕಾಗಿ ತನ್ನ ಜೀವಿತವನ್ನು ಮುಡುಪಿಟ್ಟಳು. "ಅಸಿಧಾರಾವ್ರತಂಗಳಂ ತಾಳ್ದ ಧರ್ಮಮಂ ಮಾಡುವ.... ಒಡಲನುಪವಾಸದಿಂ ತನ್ನೊಡವೆಯುನನವರತ ದಾನದಿಂ ತವಿಸಿ ಜಸಂ ಪಡೆದಳ್."[10] ಅವಳ ದಾನ, ಪೂಜೆ, ಶೀಲ, ಉಪವಾಸಗಳ ಕೀರ್ತಿ ನಾಲ್ಕೂ ದಿಕ್ಕುಗಳಲ್ಲಿ ಹಬ್ಬಿತು.

ಬುಧಜನವಂದಿತೆ ಧರ್ಮ
ಪ್ರಧಾನೆ ದರ್ಶನವಿಶುದ್ಧೆ ದಾನಗುಣೈಕಾಂ
ಬುಧಿಯೆನಿಸಿದ ಕವಿವರ ಕಾ
ಮಧೇನುವೆಂದೆಂಬುದತ್ತಿಮಬ್ಬೆಯನೆ ಜಗಂ[11]
ಜಿನಪದಭಕ್ತೆ ಜಗತ್ರಯ
ಜಿನವಂದಿತೆ ಚಕ್ರವರ್ತಿಪೂಜಿತೆ ಜಿನಶಾ
ಸನರುಚಿ ಪಡೆವಳತ್ತೈಲನ
ಜನನಿಯೆ ತೀರ್ಥಂಕರ ಜನನಿಯೆನ್ನದರೊಳರೆ[12]
ಆಸನ್ನಭವ್ಯೆಯುಂ ಜಿನ
ಶಾಸನದೀಪಿಕೆಯುಮೆನಿಸಿ ಮಣಿಕನಕಮಯೋದ್ಭಾ
ವಿಸಿ ಜಿನಪ್ರತಿಮೆಗಳಂ
ಸಾವಿರದಯ್ನೂರರನತ್ತಿಯಿಂ ಮಾಡಿಸಿದಳ್[13]

ಪೊನ್ನನ 'ಶಾಂತಿಪುರಾಣ'ದ ಸಾವಿರ ಪ್ರತಿಗಳನ್ನೂ 1500 ಜಿನಬಿಂಬಗಳನ್ನೂ ಮಾಡಿಸಿ ದಾನ ಚಿಂತಾಮಣಿಯಾದಳು. ಚಾವುಂಡರಾಯ, ಶಂಕರಗಂಡ ಇವು ಧರ್ಮಕಾರ್ಯದಲ್ಲಿಯ ಹಿರಿಯ ಹೆಸರುಗಳು. ಆದರೆ ಇವರೆಲ್ಲರಿಗಿಂತಲೂ ಅತ್ತಿಮಬ್ಬೆಯ ವ್ಯಕ್ತಿತ್ವ ಹಿರಿದೆಂದು ರನ್ನಕವಿಯ ಅಭಿಪ್ರಾಯ.[14] ಅಷ್ಟೇ ಏಕೆ ಚಕ್ರವರ್ತಿಗಳಿಗಿಂತ ಅವಳ ವ್ಯಕ್ತಿತ್ವ ಹಿರಿದೆಂದು ಅವನು ಹೇಳುವನು [15] ಅಲ್ಲದೆ,

ಬಿಳಿಯರಳೆಯಂತೆ ಗಂಗಾ
ಜಳದಂತೆಸೆವಜಿತಸೇನಮುನಿಪತಿಯ ಗುಣಾ
ವಳಿಯಂತೆ ನೆಗಳ್ದ ಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ[16]

ಎಂದು ಅವಳ ಪವಿತ್ರ ಜೀವನವನ್ನು ರನ್ನಕವಿ ತನ್ನ ಭಕ್ತಿಭಾವರಸವಲ್ಲಿ ಅದ್ದಿ ಸಾಕಾರಗೊಳಿಸಿದ್ದಾನೆ.

ಹೊಯ್ಸಳ ವಿಷ್ಣುವರ್ಧನ (1110–1142)ನು ಪ್ರಸಿದ್ಧ ಅರಸುಗಳಲ್ಲಿ ಒಬ್ಬ. ಅವನು ಸ್ವತಃ ವೈಷ್ಣವ ಮತವನ್ನು ಸ್ವೀಕರಿಸಿದ್ದರೂ ಅವನ ಪ್ರಭಾವಶಾಲಿಯಾದ ಮಂತ್ರಿಗಳೂ ಸೇನಾಪತಿಗಳೂ ಜೈನಧರ್ಮಾನುಯಾಯಿಗಳಾಗಿದ್ದರು. ಅವರಲ್ಲಿ ಸೇನಾಪತಿಯಾದ ಗಂಗರಾಜನ ಧಾರ್ಮಿಕ ಕಾರ್ಯಗಳ ವರ್ಣನೆ ಶ್ರವಣಬೆಳಗೊಳ ಶಾಸನಗಳಲ್ಲಿ ದೊರೆಯುವವು. ಗಂಗರಾಜನ ತಂದೆಯಾದ ಏಚಿಗಾಂಕನ ಮನೆಯಲ್ಲಿ 'ಸುಜನಜನ ಸಮಾಶ್ರಯನುಂ ಬುಧಜನನುಂ ಜಿನಪೂಜನೆ ಜಿನವಂದನೆ

ಜಿನಮುಹಿಮೆಗಳಾವ ಕಾಲಮುಂ ಶೋಭಿಸುಗುಂ.'[17] ಅವನ ತಾಯಿ 'ಉತ್ತಮ ಗುಣತತಿ ವನಿತಾವೃತ್ತಿಯನೊಳಕೊಂಡುದೆಂದು ಜಗಮೆಲ್ಲಂ ಕಯ್ಯೆತ್ತಿ ವಿನಮುಮುಳಗುಣಸಂಪತ್ತಿಗೆ ಜಗದೊಳಗೆ ಪೋಚಿಕಬ್ಬೆಯೆ ನೋಂತಳು."[18] ಈ ಸಾತ್ವಿಕ ದಂಪತಿಗಳ ಮಗ ಗಂಗರಾಜ. 'ಪುತ್ರನಖಿಳ ತೀರ್ಥಕರ ಪರಮದೇವ ಪರಮಚರಿತಾಕರ್ಣ ನೋದೀರ್ಣವಿಪುಳಪುಳಕ ಪರಿಕಳಿತವಾರಬಾಣ ....ಆಹಾರಾಭಯಭೈಷಜ್ಯಶಾಸ್ತ್ರದಾನವಿನೋದನುಂ ಸಕಳಲೋಕಶೋಕಾ ಪನೋದನುಂ.... ಇಂತೆನಿಪ ಶ್ರೀಮನ್ಮಹಾಪ್ರಧಾನಂ ದಂಡನಾಯಕಂ."[19] ಈ ಪರಿಸರದಲ್ಲಿಬೆಳೆದು ಬಂದ ಗಂಗರಾಜ ಜಿನಧರ್ಮನನ್ನು ಬದುಕಿ ಬೆಳೆಸುವುದಕ್ಕೋಸ್ಕರ ಶ್ರಮಿಸಿದುದು ಸಹಜವಾಗಿದೆ. ಅದರ ಪರಿಣಾಮವಾಗಿ ಅನೇಕ ಜಿನಮಂದಿರಗಳ ನಿರ್ಮಾಣವಾಯಿತು, ಹಲವು ಮಂದಿರಗಳ ಜೀರ್ಣೋದ್ಧಾರ ಕಾರ್ಯ ಆರಂಭವಾಯಿತು. ಅದರಂತೆ ಅನೇಕ ಜೈನ ಸಂಸ್ಥೆಗಳಿಗೆ ವಿಪುಲ ದಾನ ಲಭಿಸಿತು.

ಗಂಗರಾಜನು ಶುಭಚಂದ್ರಸಿದ್ಧಾಂತದೇವರ ಶಿಷ್ಯ. 'ಶ್ರೀಜೈನಧರ್ಮಾಮೃತಾಂಬುಧಿ ಪ್ರವರ್ಧನ ಸುಧಾಕರ, ಸಮ್ಯಕ್ತ್ವರತ್ನಾಕರ ಆಹಾರಾಭಯಭೈಷಜ್ಯ ಶಾಸ್ತ್ರದಾನವಿನೋದ, ಸಕಳ ಲೋಕಶೋಕಾಪನೋದನುಂ'[20]. ಮಹಾಸಾಮಂತಾಧಿಪತಿ, ಮಹಾಪ್ರಚಂಡದಂಡ ನಾಯಕಂ,ವೈರಿಭಯದಾಯಕಂ, ಗೋತ್ರಪವಿತ್ರಂ, ಬುಧಜನಮಿತ್ರಂ, ಶ್ರೀಜೈನಧರ್ಮಾಮೃತಾಂಬುಧಿ ಪ್ರವರ್ಧನ ಸುಧಾಕರಂ, ಸಮ್ಯಕ್ತ್ವರತ್ನಾಕರಂ ಎಂಬ ಅನೇಕ ಪದವಿಗಳು ಅವನ ವ್ಯಕ್ತಿತ್ವದ ಉದಾತ್ತ ಅಂಶವನ್ನು ಸ್ಪಷ್ಟಪಡಿಸುವವು.

ಹೊಯ್ಸಳ ವಿಷ್ಣುವರ್ಧನನ ಅನೇಕ ವೈರಿಗಳನ್ನು ಗಂಗರಾಜ ಸೋಲಿಸಿದನು. ಇವನ ವಿಜಯದಿಂದ ಹೊಯ್ಸಳ ರಾಜ್ಯವು ಕೊಂಗು, ನಂಗಲಿ, ಗಂಗವಾಡಿ, ಬನವಾಸಿ, ಹಾನುಗಲ್, ಹುಲಿಗೆರೆ, ಹಲಸಿಗೆ, ಬೆಳುವಲದ ವರೆಗೆ ವಿಸ್ತಾರಗೊಂಡಿತು. ಗಂಗರಾಜನು ಚಾಲುಕ್ಯ ರಾಜನಾದ ತ್ರಿಭುವನಮಲ್ಲನ ಸೈನ್ಯವನ್ನು ಸೋಲಿಸಿದಾಗ 'ಪರಮ' ಎಂಬ ಹೆಸರಿನ ಊರನ್ನು ಬಿಟ್ಟಿದೇವನು ಬಹುಮಾನವಾಗಿ ಕೊಟ್ಟನು.[21] ಗಂಗರಾಜನು ಅದನ್ನು ತನ್ನ ತಾಯಿ ಪೋಚಿಕಬ್ಬೆ ಹಾಗೂ ಹೆಂಡತಿ ಲಕ್ಷ್ಮೀಮತಿಯೂ ಕೂಡಿ ಕಟ್ಟಿಸಿದ ಜಿನಮಂದಿರಕ್ಕೆ ಅರ್ಪಿಸಿದನು.

'ತ್ರೈಲೋಕ್ಯರಂಜನಂ ಜೈನ ಚೈತ್ಯಾಲಯಮಂ ಚೀಕರತ್'[22] ಎಂದು ಒಂದು ಶಾಸನದಿಂದ ತಿಳಿಯುವದು. ಶ್ರವಣಬೆಳಗೊಳದ ಗೋಮಟೇಶ್ವರನ ಪಾದದ ಬಳಿಯ ಶಾಸನ[23] 'ಶ್ರೀಗಂಗರಾಜ ಸುತ್ತಾಲಯವಂ ಮಾಡಿಸಿದ' ಎಂದು ಹೇಳುವದು. ಇದನ್ನೇ ಇನ್ನೊಂದು ಮರಾಠಿ ಶಾಸನ[24] 'ಶ್ರೀ ಗಂಗರಾಜೇ ಸುತ್ತಾಲೇ ಕರವಿಯಲೇಂ' ಎಂದು ತಿಳಿಸುವದು. ಗಂಗರಾಜನು ಗೋವಿಂದವಾಡಿಯ ಪಾರ್ಶ್ವನಾಥ ತೀರ್ಥಂಕರ ಬಸದಿಯನ್ನು ಕಟ್ಟಿ ದಾನಕೊಟ್ಟ ವಿವರವನ್ನು ಸಾಣೇನಹಳ್ಳಿ ಶಾಸನ[25] ವಿವರಿಸುವದು.

ಗಂಗರಾಜನ ತಾಯಿ ಪೋಚಿಕಬ್ಬೆ " ತನುವಂ ಜಿನಪತಿನುತಿಯಿಂ, ಧನವಂ ಮುನಿಜನದ ತೃಪ್ತಿಯಿಂ ಸಫಳಮಿಂನೆನಗೆಂಬೀ ನಂಬುಗೆಯೊಳ್ ಸನುಂ ಜಗದೊಳಗೆ ಪೋಚಿಕಬ್ಬೆಯೆ ನಿಜಿರಿಪಳು". ಚಾರಿತ್ರ್ಯಸಂಪನ್ನೆ ತನ್ನ ಇಳಿವಯಸ್ಸಿನಲ್ಲಿ ಸಲ್ಲೇಖನವ್ರತ ಸ್ವೀಕರಿಸಿದಳು[26]. ಈ ಮಹಾತಾಯಿಯ ಸ್ಮರಣಾರ್ಥವಾಗಿ ಗಂಗರಾಜ ಶ್ರವಣಬೆಳ್ಗೊಳದಲ್ಲಿ ಒಂದು ಬಸದಿಯನ್ನು ಕಟ್ಟಿಸಿದನು.[27]

ಹೀಗೆ ಜಿನಧರ್ಮ ರಕ್ಷಣೆಗಾಗಿ ಜಿನಮಂದಿರಗಳ ನಿರ್ಮಾಣ, ಜೀರ್ಣೋದ್ಧಾರ, ನಿತ್ಯ ನಿರ್ವಹಣೆಗಾಗಿ ದಾನಕಾರ್ಯಾದಿಗಳಿಂದ ಗಂಗರಾಜ ಅಂದು ಜಿನಸಮಯವಾರ್ಧಿವರ್ಧನ ಚಂದ್ರನಾಗಿದ್ದನು. ಅವನ ಕಾರ್ಯ ಚಾವುಂಡರಾಯನಗಿಂತ ಅನಂತಪಟ್ಟು ಶ್ರೇಷ್ಠವೆಂಬುದನ್ನು ವಿವರಿಸುವ ಶಾಸನ ಹೀಗಿದೆ;

"ಗಂಗರಾಜನಾಮುನ್ನಿನ ಗಂಗರರಾಯಂಗಂ ನೂರ್ಮಡಿ ಧನ್ಯನಲ್ತೆ ಎತ್ತಿದನೆಲ್ಲಿಗಲ್ಲಿ ನೆಲೆವೀಡನೆ ಮಾಡಿದನೆಲ್ಲಿಗಲ್ಲಿ ಕಣ್ಸತ್ತಿದುದೆಲ್ಲಿಗಲ್ಲಿ ಮನಮಾವೆಡೆಯೆಯಿದ್ದುದೆಲ್ಲಿಗಲ್ಲಿ ಸಂಪತ್ತಿನ ಜೈನಗೇಹಮನೆ ಮಾಡಿಸೆ ದೇಶದೊಳಲ್ಲಿಗಲ್ಲಿಗೆತ್ತೆತ್ತಲುಮಾವಗಂ ಪಳೆಯ ಮಾಳ್ಕೆವೊಲಾದುದು ಗಂಗರಾಜನಿಂ ॥ ಜಿನಧರ್ಮಾಗ್ರಣಿಯತ್ತಿಮಬ್ಬರಸಿಯಂ ಲೋಕಂ ಗುಣಂಗೊಳ್ವುದೇಕೆನೆ ಗೋದಾವರಿ ನಿಂದ ಕಾರಣದಿನೀಗಳು ಗಂಗದಂಡಾಧಿನಾಥನುಮಂ ಕಾವೇರಿ ಪೆರ್ಚಿ ಸುತ್ತಿ ಪಿರಿದುಂ ನೀರೊತ್ತಿಯುಂ ಮುಟ್ಟಿತಿಲ್ಲೆನೆ ಸಂಮ್ಯಕ್ತ್ವದ ಪೆಂಪನೇಂ ನೆಱೆಯೆ ಬಂಣಿಪ್ಪಂಣನೇ ವಂಣಿಪಂ"[28]

ಗಂಗರಾಜನಂತೆ ಅವನ ಮನೆತನದ ಉಳಿದ ಸಂಬಂಧಿಗಳೂ ಜೈನಧರ್ಮದ ಶ್ರೇಷ್ಠ ಉಪಾಸಕರಾಗಿದ್ದರು. ಗಂಗರಾಜನ ಪತ್ನಿ ಲಕ್ಷ್ಮೀಮತಿಯು ಅವನೊಂದಿಗೆ ಧರ್ಮಕಾರ್ಯ ದಲ್ಲಿ ಸದಾ ಮುಂದೆ ಇದ್ದವಳು. ಅವಳು "ಪರಮಪದಾರ್ಥನಿರ್ಣಯಮನಾಂತ ವಿದಗ್ಧತೆ, ದುರ್ನಯಂಗಳೊಳ್ಪರಿಚಯಮೆಂದುಮಿಲ್ಲದತಿ ಮುಗ್ಧತೆ, ತನ್ನಿನಿಯಂಗೆ ಚಿತ್ತದೊಳ್ಪಿರಿದನು ರಾಗಮುಂ ಪಡೆವ ರೂಪು, ವಿನೇಯ ಜನಾಂತರಂಗದೊಳ್ನಿರುಪಮ ಭಕ್ತಿಯುಂ ಪಡೆವ ಪೆಂಪಿವು ಲಕ್ಷ್ಮಲೆಗೆಂದುಮನ್ವಿತಂ" ॥

"ಚತುರತೆಯೊಳ್ ಲಾವಣ್ಯದೊ
ಳತಿಶಯಮೆನೆ ನೆಗಳ್ದ ದೇವ ಭಕ್ತಿಯೊಳಿಂತೀ
ಕ್ಷಿತಿಯೊಳಗೆ ಗಂಗರಾಜನ
ಸತಿ ಲಕ್ಷ್ಮಾಂಬಿಕೆಯೊಳಿತರ ಸತಿಯದ್ದೊರೆಯೇ ॥
ಸೌಭಾಗ್ಯದೊಳಮುದ್ದಾರದಿಂ
ಸೋಭಾಸ್ಪದವಾದ ರೂಪಿನೊಳ್ಪಿಂ ಪ್ರತ್ಯ
ಕ್ಷೀಭೂತ ಲಕ್ಷ್ಮಿಯೆಂದಪು
ದೀಭೂತಳಮಿನಿತುಮೆಯ್ದೆ ಲಕ್ಷ್ಮೀಮತಿಯಂ"[29]

ಎಂದು ಲಕ್ಷ್ಮೀಮತಿಯ ಸಚ್ಚಾರಿತ್ರವನ್ನೂ ದೇವಭಕ್ತಿಯನ್ನೂ ಈ ಶಾಸನ ವಿಶದಪಡಿಸುವುದು.

ಅವಳ ಬಂಧು ಬೂಚಣ್ಣನು ಶುಭಚಂದ್ರಸಿದ್ಧಾಂತದೇವರ ಶಿಷ್ಯನಾಗಿದ್ದನು. ಇವನು ಸರ್ವಪರಿಗ್ರಹಗಳನ್ನು ತ್ಯಜಿಸಿ ಸಲ್ಲೇಖನ ವಿಧಿಯಿಂದ ದೇಹ ತ್ಯಜಿಸಿದನು. ಲಕ್ಷ್ಮೀಮತಿಯು ಇವನಿಗಾಗಿ ಒಂದು ಸ್ಮಾರಕಕಂಬವನ್ನು ನಿಲ್ಲಿಸಿ ಶಾಸನವನ್ನು ಬರೆಯಿಸಿದ್ದಾಳೆ.[30] ಅಲ್ಲದೆ ಮೇಘಚಂದ್ರ ತ್ರೈವಿದ್ಯದೇವರ ಸ್ಮರಣೆಗಾಗಿ ಶ್ರವಣಬೆಳಗೊಳದಲ್ಲಿ ಒಂದು ಜಿನಮಂದಿರವನ್ನು ಕಟ್ಟಿಸಿದ್ದಾಳೆ. ಅದಕ್ಕೆ ಈಗ 'ಎರಡುಕಟ್ಟೆ ಬಸ್ತಿ' ಎಂದು ಕರೆಯುವರು. ಸಲ್ಲೇಖನ ವಿಧಿ ಪ್ರಕಾರ ದೇಹ ತ್ಯಜಿಸಿದ ಧರ್ಮಾತ್ಮೆ ಇವಳು.

ಬಮ್ಮಚಮೂಪತಿಯು ಗಂಗರಾಜನ ಅಣ್ಣ. ಹೊಯ್ಸಳ ರಾಜ್ಯದಲ್ಲಿ ಸೇನಾಪತಿಯಾಗಿ ದ್ದವ. ಈ ಇಬ್ಬರೂ ಅಣ್ಣ ತಮ್ಮಂದಿರು ಅನೇಕ ಜಿನಮಂದಿರಗಳನ್ನು ನಿರ್ಮಿಸಿದರು. ಬಮ್ಮಚಮೂಪತಿಯ ಪತ್ನಿ "ಶುಭಚಂದ್ರದೇವರ ಗುಡ್ಡಿ", "ವರಜಿನ ಪೂಜೆಯನತ್ಯಾದರ ದಿಂದಂ ಜಕ್ಕಣಬ್ಬೆ ಮಾಡಿಸುವಳು, ಸಚ್ಚರಿತೆ ಗುಣಾನ್ವಿತೆಯೆಂದೀ ಧರಣೀತಳ ಮೆಚ್ಚಿ ಪೊಗಳು ತಿರ್ಪುದು ನಿಚ್ಚಂ."[31] ಅವಳು "ಮೋಕ್ಷತಿಳಕ"ವನ್ನು ನೋಂತು "ನಯಣದ ದೇವರ" ಪ್ರತಿಷ್ಠೆ ಮಾಡಿಸಿದಳೆಂದೂ ಕೆರೆಯನ್ನು ಕಟ್ಟಿಸಿದಳೆಂದೂ[32] ಶಾಸನಗಳಿಂದ ತಿಳಿಯುವುದು.

ಗಂಗರಾಜನ ಮಗ ಬೊಪ್ಪಣ. ಇವನೂ ವಿಷ್ಣುವರ್ಧನನ ಸೇನಾಪತಿ. ಶ್ರವಣಬೆಳಗೊಳದಲ್ಲಿ ಇವನು ಕಟ್ಟಿಸಿದ ಜಿನಮಂದಿರಕ್ಕೆ "ಬೊಪ್ಪಣ ಚೈತ್ಯಾಲಯ"ವೆಂಬ ಹೆಸರಿದೆ. ಅಲ್ಲದೆ ಗಂಗರಾಜನ ಮರಣದ ತರುವಾಯ ಅವನ ನೆನಪಿಗಾಗಿ ಶ್ರವಣಬೆಳಗೊಳದಲ್ಲಿ ಪಾರ್ಶ್ವನಾಥ ಮಂದಿರವನ್ನು ಕಟ್ಟಿಸಿದನು. ಅದನ್ನು ದ್ರೋಹಘರಟ್ಟ ಜಿನಾಲಯವೆಂದು ಕರೆಯುವರು. ಅದರಂತೆ ತಂದೆಯ ಸ್ಮರಣಾರ್ಥವಾಗಿ ನಾಗಮಂಗಲ ತಾಲೂಕಿನ ಕವಡಹಳ್ಳಿಯಲ್ಲಿಯೂ ಒಂದು ಜಿನಮಂದಿರವನ್ನು ಕಟ್ಟಿಸಿದನು.

ಬೊಪ್ಪಣನ ಹೆಂಡತಿ, ಸೇನಾಪತಿ ಮರಿಯಾನೆ ಮತ್ತು ಭರತ ಇವರ ತಂಗಿಯಾಗಿದ್ದಳು. ಗಂಗರಾಜನ ಹೆಂಡತಿ ಲಕ್ಷ್ಮಮತಿ ಮರಿಯಾನೆ, ಭರತರಿಗೆ ಸೋದರತ್ತೆಯಾಗಿದ್ದಳು. ಇವರೀರ್ವರು 1ನೆಯ ನರಸಿಂಹ (1141–1173)ನ ಕಾಲದಲ್ಲಿ ಸೇನಾನಾಯಕರಾಗಿದ್ದರು. ಶ್ರವಣಬೆಳಗೊಳದಲ್ಲಿ ಭರತ–ಬಾಹುಬಲಿಯ ಮೂರ್ತಿಗಳನ್ನು ಸ್ಥಾಪಿಸಿದರು.[33] ಗಂಡ ವಿಮುಕ್ತಸಿದ್ಧಾಂತದೇವರು ಇವರ ಗುರುಗಳು.

'ಭರತಬಾಹುಬಲಿ ಕೇವಳಿಗಳ ಪ್ರತಿಮೆಗಳುಮನೀಬಸದಿಗಳುಮಾತೀರ್ಥದ್ವಾರ ಪಕ್ಷಶೋಭಾರ್ತ್ಥಂ ಮಾಡಿಸಿದನೀರಂಗದ ಹಪ್ಪಳಿಗೆಯುಮನೀ ಮಹಾಸೋಪಾನ ಪಜ್ತಿಯುಮಂ ರಚಿಸಿದಂ, ಶ್ರೀ ಗೊಮ್ಮಟದೇವರ ಸುತ್ತಲು ರಂಗದ ಹಪ್ಪಳಿಗೆಯುಂ ಬಿಗಿಯಿಸಿದನನ್ತುಮಲ್ಲದೆಯುಮೀಗಂಗವಾಡಿನಾಡೊಳಲ್ಲಿಗಲ್ಲಿಗೆಲ್ಲಿ ನೋರ್ಪಡಂ ॥ ಪ್ರಕಟಮಕೋವಿಭುವೆಣ್ಬತ್ತು ಕನ್ನೆವಸದಿಗಳನೊಸೆದು ಜೀರ್ಣೋದ್ಧಾರ ಪ್ರಕರಮನಿನ್ನೂಱಂ ಲೌಕಿಕ ಧೃತಿಮಾಡಿಸಿದನೆಸೆಯೆ ಭರತಚಮೂಪಂ ॥[34] ಚಾವುಂಡರಾಯನಂತೆ ಭರತ ಭರತಬಾಹುಬಲಿಗಳ ಮೂರ್ತಿಯನ್ನು ನಿರ್ಮಿಸಿ ಎಂಬತ್ತು ಜಿನಮಂದಿರಗಳನ್ನು ನಿರ್ಮಿಸಿ, ಎರಡುನೂರು ಜಿನಮಂದಿರಗಳ ಜೀರ್ಣೋದ್ಧಾರ ಕಾರ್ಯ ಕೈಕೊಂಡು ಜಿನಧರ್ಮದೀಪಕನೆನಿಸಿದನು.

ಹೊಯ್ಸಳ 1ನೆಯ ನರಸಿಂಹನ 'ಮಹಾಪ್ರಧಾನ' ಹಾಗೂ 'ಹಿರಿಯ ಭಂಡಾರಿ' ಹುಳ್ಳರಾಜ. ಹುಳ್ಳನನ ಕುರಿತು ಅನೇಕ ಶಾಸನಗಳು ವಿವರಿಸುತ್ತವೆ. "ಜಿನಗೇಹೋದ್ಧರಣಂಗಳಿಂ ಜಿನಮಹಾಪೂಜಾ ಸಮಾಜಂಗಳಿಂ ಜಿನಯೋಗಿಬ್ರಜದಾನದಿಂ ಜಿನಪದಸ್ತೋತ್ರ ಕ್ರಿಯಾನಿಷ್ಠೆಯಿಂ ಜಿನಸತ್ಪುಣ್ಯಪುರಾಣಸಂಶ್ರವಣದಿಂ ಸಂತೋಷಮಂ ತಾಳ್ದಿ ಭವ್ಯಸುತ್ರಂ ನಿಚ್ಚಲುಮಿನ್ತೆ ಪೊಬ್ಬುಗಳೆದಂ ಶ್ರೀಹುಳ್ಳದಂಡಾಧಿಪಂ". ಅವನು ಕೊಲ್ಲಾಪುರದ ರೂಪನಾರಾಯಣ ಬಸದಿಗೆ, ಬಂಕಾಪುರದ ರೂಪನಾರಾಯಣ ಬಸದಿಗೆ ದಾನವಿತ್ತನು. ಬಂಕಾಪುರದ ಜಿನಮಂದಿರದ ಜೀರ್ಣೋದ್ಧಾರ ಕೈಕೊಂಡನು. ಕೊಪ್ಪಳದ ಅನೇಕ ಜಿನಮಂದಿರಗಳಿಗೆ ದಾನವಿತ್ತನು. ಶ್ರವಣಬೆಳಗೊಳದ ಗೊಮ್ಮಟೇಶ್ವರ, ಪಾರ್ಶ್ವನಾಥ, ಹಾಗೂ ತಾನು ಕಟ್ಟಿಸಿದ ಚತುರ್ವಿಂಶತಿ ಬಸದಿಯ ತೀರ್ಥಂಕರರ ಅಷ್ಟವಿಧಾರ್ಚನೆ ಪೂಜೆ ಹಾಗೂ ಮುನಿಗಳ ಆಹಾರ ದಾನಕ್ಕಾಗಿಯೂ 'ಸವಣೇರು' ಊರನ್ನು ದತ್ತಿಯಾಗಿ ಕೊಟ್ಟನು.[35]

ಹೀಗೆ ಹೊಯ್ಸಳರಾಜ್ಯದ ಅನೇಕ ಜೈನ ಮಂತ್ರಿ ಸೇನಾಪತಿ ಹಾಗೂ ಅವರಕುಟುಂಬ ವರ್ಗದವರಿಂದ ಜೈನಧರ್ಮಕ್ಕೆ ಅಮೂಲ್ಯ ಸೇವೆ ಸಂದಿದೆ. ಅದುದರಿಂದಲೇ ಒಂದು ಶಾಸನದಲ್ಲಿ ನೂರು ಜನ ಚಾವುಂಡರಾಯರಿಗಿಂತ ಗಂಗರಾಜನ ತೂಕವು ಹೆಚ್ಚಾಗುವದೆಂದು ಹೇಳಿದೆ.[36]

ಬೈಚಪ್ಪನ ಮಗ ಇರುಗಪ್ಪನು ವಿಜಯನಗರದ ಎರಡನೆಯ ಹರಿಹರನ ಮಹಾಪ್ರಧಾನನಾಗಿದ್ದನು. ಇವನೂ ಪ್ರಸಿದ್ಧ ಜೈನವೀರನು. ಇವನು ಶ್ರವಣಬೆಳಗೊಳದಲ್ಲಿ ಒಂದು ಕೆರೆಯನ್ನೂ, ಹೂದೋಟವನ್ನೂ ನಿರ್ಮಿಸಿದನು.[37] ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಜಿನಮಂದಿರಗಳನ್ನು ಕಟ್ಟಿಸಿದನು.[38] ಅಲ್ಲದೆ ಸಂಸ್ಕೃತ 'ನಾನಾರ್ಥರತ್ನಮಾಲೆ' ಎಂಬ ಕೋಶವನ್ನು ರಚಿಸಿದನು.

ಇವನ ಪ್ರಭಾವದಿಂದಾಗಿ ಅನೇಕ ಜನರು ಜೈನಧರ್ಮವನ್ನು ಸ್ವೀಕರಿಸಿದರು. ಇದೇ ಸುಮಾರಿಗೆ ಮುಂಡಪ್ಪ ದಂಡನಾಯಕನ ಆಶ್ರಯದಲ್ಲಿದ್ದ ಮಧುರಕವಿಯು ಧರ್ಮನಾಥ ತೀರ್ಥಂಕರ ಪುರಾಣವನ್ನು ರಚಿಸಿದನು.

ರಾಜ ಮಹಾರಾಜರ ಪ್ರೀತಿ ವಿಶ್ವಾಸ ಗಳಿಸಿಕೊಂಡು, ಜನಬಲ ಧನಬಲ ಹೊಂದಿ, ಅಧಿಕಾರದಿಂದ ಕೂಡಿದ ವ್ಯಕ್ತಿ ಸ್ವಸುಖದಲ್ಲಿಯೇ ಮುಳುಗುವದು ಸಹಜ. ಆದರೆ ಕರ್ನಾಟಕದ ಜೈನ ಮಂತ್ರಿ, ಸೇನಾಪತಿಗಳು ಲೌಕಿಕದಲ್ಲಿದ್ದರೂ, ಅದರಿಂದ ಮುಕ್ತರಾಗಿದ್ದಂತೆ ತೋರುವರು. ನಿರಂತರ ಗುರುಗಳ ಮಾರ್ಗದರ್ಶನ ಪಡೆಯುವ ಸೌಭಾಗ್ಯ ಅವರದಾಗಿದೆ. ಆದುದರಿಂದ ರಾಷ್ಟ್ರಕಾರ್ಯದ ಲೋಕಕಲ್ಯಾಣದೊಂದಿಗೆ ಆತ್ಮಕಲ್ಯಾಣದ ಕುರಿತು ಸದಾ ಜಾಗೃತರಾಗಿದ್ದಾರೆ. ಸಾಹಿತ್ಯ ಕಲೆಗಳನ್ನು ಗೌರವಿಸಿ ಅವುಗಳ ಬೆಳವಣಿಗೆಗೆ ಸಹಾಯಕರಾಗಿದ್ದಾರೆ. ಕೇವಲ ಮಂತ್ರಿ, ಸೇನಾಪತಿಗಳು ಮಾತ್ರ ಈ ಧರ್ಮಕಾರ್ಯವನ್ನು ಕೈಕೊಂಡಿರದೆ ಹೆಂಡತಿ-ತಾಯಿ ಮೊದಲಾಗಿ ಅವರ ಕುಟುಂಬ ವರ್ಗದವರೆಲ್ಲರೂ ಅದರಲ್ಲಿ ಭಕ್ತಿ ಭಾವದಿಂದ ಸಹಭಾಗಿಯಾದುದು ಅವರ ವ್ಯಕ್ತಿತ್ವದಲ್ಲಿ ಧರ್ಮ ಒಂದಾಗಿದ್ದಿತೆಂಬುದನ್ನು ತೋರುವದು.

> "ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
> ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್ ನಂಬಿದ
> ರ್ಗೆರೆವಟ್ಟಾಗಿರು ಶಿಷ್ಟರಂ ಪೊರೆಯನುತ್ತಿಂತೆಲ್ಲವಂ ಪಿಂದೆ ತಾ
> ಯೆರೆದಳ್ಪಾಲೆರೆವಂದು ತೊಟ್ಟು ಲಕ್ಷ್ಮಿಧರಾಮಾತ್ಯನಾ"[39]

ಮೇಲಿನ ಶಾಸನ ಹೇಳುವಂತೆ ತಾಯಂದಿರ ಈ ನೀತಿಯ ಪಾಠವನ್ನು ಎಳವೆಯಲ್ಲಿಯೇ ಅರಗಿಸಿಕೊಂಡು, ಧರ್ಮಗುರುಗಳ ಉಪದೇಶವನ್ನು ಪಡೆದು, ಜನಹಿತ ಆತ್ಮಹಿತ ಕಾರ್ಯ ಮಾಡಿ ಬಾಳಿ ಬೆಳಗಿದ್ದಾರೆ ಈ ಕರ್ನಾಟಕದ ಜೈನ ಮಂತ್ರಿ-ಸೇನಾಪತಿಗಳು. ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಶ್ರೀಮಂತ ದಾನಿಗಳಿಗೂ, ಅಧಿಕಾರಿಗಳಿಗೂ, ಸಕಲ ಪ್ರಜೆಗಳಿಗೂ ತಮ್ಮ ಮಹತ್ಕಾರ್ಯದಿಂದ ಆದರ್ಶಪ್ರಾಯರಾಗಿದ್ದಾರೆ, ಅನುಕರಣೀಯರಾಗಿದ್ದಾರೆ.

ಅಡಿಟಿಪ್ಪಣಿಗಳು

1. ಮಿರ್ಜಿ ಅಣ್ಣಾರಾಯರು : ಜೈನಧರ್ಮ, ಪು. 104
2. ಅದೇ ಪು. 104-105 (ಎಪಿಗ್ರಾಫಿಯಾ ರಿಪೋರ್ಟ, 1923-24)
3. ಗೊಮ್ಮಟಸಾರ ಭಾಗ 2, ಪು. 969
4. ಅದೇ ಭಾಗ 2, ಪು. 972
5. ಹಂಪ ನಾಗರಾಜಯ್ಯ, (ಸಂ.) ದಿವ್ಯಧ್ವನಿ : ಪು. 100
6. ಮಿರ್ಜಿ ಅಣ್ಣಾರಾಯರು : ಜೈನಧರ್ಮ, ಪು. 107
7. ಎಪಿಗ್ರಾಫಿಯ ಕರ್ನಾಟಕ 2 (1973) ನಂ. 150
8. ರನ್ನ : ಅಜಿತನಾಥ ಪುರಾಣ, 1-28
9. ಅದೇ, 1-38 ವ
10. ಅದೇ, 1-50, 51
11. ಅದೇ, 1-56
12. ಅದೇ, 1-56
13. ಅದೇ, 1-58
14. ಅದೇ, 12-9

15. ಅದೇ, 12–11
16. ಅದೇ, 12–6
17. ಎ.ಕ. 2, ನಂ. 82
18. ಅದೇ, ನಂ. 82
19. ಅದೇ, ನಂ 82
20. ಅದೇ, ನಂ. 82
21. ಅದೇ, ನಂ. 154
22. ಅದೇ, ನಂ. 82
23. ಅದೇ, ನಂ. 274
24. ಅದೇ, ನಂ. 277
25. ಅದೇ, ನಂ. 547
26. ಅದೇ, ನಂ. 136
27. ಅದೇ, ನಂ. 80
28. ಅದೇ, ನಂ. 82
29. ಅದೇ, ನಂ. 157
30. ಅದೇ, ನಂ. 156
31. ಅದೇ, ನಂ. 135
32. ಅದೇ, ನಂ. 503, 504
33. ಅದೇ. ನಂ. 371, 372
34. ಅದೇ, ನಂ 373
35. ಅದೇ, ನಂ. 275, 342, 476
36. ಮಿರ್ಜಿ ಅಣ್ಣಾರಾಯರು : ಜೈನಧರ್ಮ. ಪು. 112
37. ಎ. ಕ. 2, ನಂ. 357
38. *South Indian Inscriptions* Vol. IX, Nos. 152, 153, 156
39. ಅದೇ, ಸಂ. iv. ನಂ. 267



ನಾಗೇಂದ್ರ ಸ್ಥಪತಿಗಳು ತಮ್ಮ ಶಿಲ್ಪಕೃತಿಯೊಡನೆ



ಶಿವಾನುಗ್ರಹ (ಶಿಲ್ಪ)



ಸತ್ಯನಾರಾಯಣ (ಶಿಲ್ಪ)



ತಿರುವೈಯ್ಯಾರಿನಲ್ಲಿರುವ ರಾಮಪಂಚಾಯತನ

ಪಿ. ಆರ್. ತಿಪ್ಪೇಸ್ವಾಮಿ

ಪ್ರಬುದ್ಧ ಶಿಲ್ಪಿ ಎಸ್. ನಾಗೇಂದ್ರ ಸ್ಥಪತಿ

ಮೈಸೂರಿನ ರಾಮಾನುಜ ರಸ್ತೆಯಲ್ಲಿ ದಕ್ಷಿಣಾಭಿಮುಖವಾಗಿ ನಡೆದು ಬನ್ನಿ. ತುಸು ದೂರ ಜನಜಂಗುಳಿಯ ಸದ್ದುಗದ್ದಲಗಳು ಬರಬರುತ್ತ ಕಡಿಮೆಯಾಗುತ್ತಾ ಬಂದು ಶ್ರೀ ಶಿವರಾತ್ರೀಶ್ವರ ಪ್ರಾಥಶಾಲೆಯಿಂದ ಮುಂದೆ ವಿಶಾಲವಾದ ಅಶ್ವತ್ಥವೃಕ್ಷ ಒಂದು ತಡೆದು ನಿಲ್ಲಿಸುತ್ತದೆ. ಅಲ್ಲಿ ನಿಂತು ಮುಂದೆ ನೋಡಿದರೆ ಕೆಲವು ಭವ್ಯಕಟ್ಟಡಗಳು ವಿನೂತನ ಗುಡಿಗೋಪುರಗಳು ಕಣ್‌ಮನಗಳನ್ನು ಆಕರ್ಷಿಸುತ್ತವೆ. ಯಾವುದೋ ಭವ್ಯನೆಲೆಗೆ ಬಂದಂತೆ ಭಾಸವಾಗುತ್ತದೆ. ರಸ್ತೆಯ ಎಡಬದಿಯಲ್ಲಿ ವಿಶಾಲವಾದ ಒಂದು ಆವರಣ ಗೋಡೆಯ ನಡುವೆ ಸುಂದರವಾದ ಒಂದು ಸೌಧ ದೃಷ್ಟಿಯನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಅಲ್ಲೇ ಸಂಸ್ಕೃತದಲ್ಲಿ "ಶ್ರೀ ಶಿಲ್ಪಸಿದ್ಧಾಂತಿ ಬ್ರಹ್ಮರ್ಷಿ ಗುರುಕುಲಂ" ಎಂಬ ಅಂಕಿತವನ್ನು ಓದಿ ವಿಚಾರಿಸುವಲ್ಲಿ ಅದು ಮೈಸೂರಿನಲ್ಲಿ ಸ್ಥಾಪಿತವಾಗಿರುವ ಶಿಲ್ಪ ಕಲಾಗಾರವೆಂದೇ ತಿಳಿಯಬರುತ್ತದೆ. ಶ್ರೀ ನಾಗೇಂದ್ರ ಸ್ಥಪತಿಗಳೇ ಅದರ ವ್ಯವಸ್ಥಾಪಕರೆಂಬುದೂ ತಿಳಿದ ಮೇಲೆ ಅವರನ್ನು ಭೇಟಿಮಾಡಿ ಪರಿಚಯವನ್ನು ಪಡೆದು ಬರುವ ಆಸೆ ಸಹಜವಾದುದಾಗಿತ್ತು. 'ನಮ್ಮ ಪ್ರಾಚೀನ ಕಲೆ ಸಂಸ್ಕೃತಿಗಳು ಇನ್ನೂ ಉಸಿರಾಡುತ್ತಿವೆ' ಎಂಬಂತಿರುವ ಈ ನೆಲೆ ಅಂತಹ ಕುತೂಹಲವನ್ನು ಕೆರಳಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಆಶ್ರಮದ ಕಲಾಪೂರ್ಣವಾದ ಮಹಾದ್ವಾರವನ್ನು ಹಾದು ಸೌಧವನ್ನು ಪ್ರವೇಶಿಸಿದರೆ ಚಿತ್ರಶಾಲೆಯೊಂದು ಭವ್ಯತಮ ದೃಶ್ಯಾವಳಿಯನ್ನು ನೋಟಕ್ಕೆ ದೊರಕಿಸಿ ಆನಂದವನ್ನುಂಟುಮಾಡುತ್ತದೆ. ನಾನಾ ಬಗೆಯ, ನಾನಾ ವರ್ಣಗಳ ಕಲಾಕೃತಿಗಳೂ ಶಿಲ್ಪಕೃತಿಗಳೂ ಆ ಹಜಾರವನ್ನು ಅಲಂಕರಿಸಿವೆ. ಚಾರಿತ್ರಿಕ ಕಲಾಕೃತಿಗಳಂತೂ ಅಮೋಘ ರೀತಿಯಲ್ಲಿ ತಮ್ಮ ಆಕರ್ಷಣೆಯನ್ನು ಬೀರುತ್ತವೆ. ಅಲ್ಲಿಂದ ಮುಂದೆ ಮತ್ತೆ ಒಂದೆರಡು ಹಜಾರಗಳನ್ನು ದಾಟಿ ಬಂದರೆ ವಿಶಾಲವಾದ ಅಂಗಳ, ಆದರ ನಡುವೆ ನೂರೊಂದು ಲಿಂಗಗಳಿಂದಲೂ, ಪ್ರತಿಮೆಗಳಿಂದಲೂ ಅಲಂಕೃತವಾದ ಗೋಪುರಾಕಾರದ ಮಧ್ಯವೃತ್ತವನ್ನು ಕಾಣುತ್ತೇವೆ. ಅಂಗಳವನ್ನು ದಾಟಿ ಹಂತಗಳನ್ನು ಇಳಿದು ಬಲಕ್ಕೆ ತಿರುಗಿದರೆ ಅಲ್ಲೇ ಶಿಲ್ಪಕಲಾಗಾರ ತನ್ನ ಚಣ್ ಚಣ್ ನಿನಾದದೊಡನೆ ಸ್ವಾಗತವನ್ನು ಕೋರುತ್ತದೆ. ಒಂದು ದೊಡ್ಡ ಲೋಹಮಂದಿರದಲ್ಲಿ ನೂರಾರು ಒರಟು ಶಿಲೆಗಳು ಶಿಲ್ಪಿಯ ಕೈಚಳಕದಿಂದ ಸಂಸ್ಕಾರಗೊಂಡು ಜೀವಕಳೆಯನ್ನು ಪಡೆಯಲು ಕಾದಿರುವಂತೆ ಅಸ್ತವ್ಯಸ್ತವಾಗಿ ಬಿದ್ದಿವೆ. ನಾನಾ ಬಗೆಯ ಅರೆಮುಗಿದ ದೇವಾನುದೇವತೆಗಳು ಶಿಲ್ಪಬ್ರಹ್ಮನ ಹಸ್ತಸ್ಪರ್ಶವನ್ನು ಎದುರುನೋಡುತ್ತ ಮುಕ್ತಿಯನ್ನು ನಿರೀಕ್ಷಿಸುತ್ತಿವೆ. ಪೂರ್ಣವಾದವು ಕೆಲವು, ಪ್ರಭಾವಳಿಯನ್ನು ಬಡಿಸಿದವು ಕೆಲವು, ಅಳತೆಗೆ ಕೆಮ್ಮಣ್ಣಿನ ಗೆರೆಗಳನ್ನು ಹಾಕಿ ಕಡೆತಕ್ಕಾಗಿ ಸಿದ್ಧವಾಗಿರುವುವು ಕೆಲವು. ಹೀಗೆ ಹಲವು ಬಗೆಯ ವಿಗ್ರಹಗಳು ಆ ಮಂದಿರದಲ್ಲಿ

ತಮ್ಮದೇ ಆದ ಒಂದು ಲೋಕವನ್ನು ಸೃಷ್ಟಿಸಿಕೊಂಡಂತೆ ಶೋಭಿಸುತ್ತಿವೆ. ಅಲ್ಲೊಂದು ಕಡೆ ಸಂಜೆಯಾಗುತ್ತಾ ಬಂದಿದ್ದರೂ ಲೆಕ್ಕಿಸದೆ ಬಂದವರು ಹತ್ತಿರ ಸುಳಿದರೂ ತಿಳಿಯದಂತೆ ತದೇಕಚಿತ್ತರಾಗಿ ವೀರಮಂಡಿಯೂರಿ ಶಿಲ್ಪಕೃತಿಯೊಂದನ್ನು ಸಿದ್ಧಗೊಳಿಸುತ್ತಿರುವ ಶ್ರೀ ಸ್ಥಪತಿಯವರನ್ನು ನೋಡಿದೆ. ತುಂಬು ಶರೀರದ, ಮಂದನಗೆಯ, ಆಕರ್ಷಕ ವರ್ಣದ ಶ್ರೀಯುತರು ತಲೆ ಎತ್ತಿದಾಗ ಬಂದವರ ಕಡೆ ಕುಶಲ ಮಾತುಗಳನ್ನಾಡಿದಾಗ, ಅವರ ವ್ಯಕ್ತಿತ್ವದಂತೆಯೇ ಅವರ ನುಡಿಯ ಗಾಂಭೀರ್ಯವೂ ಸಹಜ ವಿನಯವೂ ಸ್ನೇಹವನ್ನು ತಂದುಕೊಡುತ್ತದೆ. ತಮ್ಮ ಕಚ್ಚೆಪಂಚೆ ಅಂಚಿನ ಮೇಲೆ ಉದುರಿರುವ ಕಲ್ಲಿನ ಪುಡಿಯನ್ನು ಕೊಡವಿಕೊಳ್ಳುತ್ತ, ಮೈಮೇಲಿನ ವಸ್ತ್ರವನ್ನು ಸರಿಯಾಗಿ ಎಳೆದುಕೊಳ್ಳುತ್ತ ತಮ್ಮ ಕೊಠಡಿಯ ಕಡೆ ಕರೆದುಕೊಂಡು ಹೋದರು. ಅವರ ವಿನಯಪೂರ್ಣ ನುಡಿಗಳು ಅಭಿಮಾನವನ್ನು ಹೆಚ್ಚಿಸುತ್ತಿತ್ತು.

ಶಿಲ್ಪಾಲಯದಲ್ಲಿದ್ದಾಗ ಶ್ರೀ ಸ್ಥಪತಿಯವರು ಶಿಲಾ ವಿಗ್ರಹಗಳ ನಡುವೆ ಕಾರ್ಯೋನ್ಮುಖರಾಗಿರುತ್ತಾರೆ. ಅವರ ಕೊಠಡಿಗೆ ಬಂದಾಗ ಅರೆಮುಗಿದ ಕೆಲವು ವರ್ಣಪೂರ್ಣ ಕಲಾಕೃತಿಗಳು ಅವರ ಅವಿಶ್ರಾಂತ ಕಲಾಸೇವೆಯನ್ನು ವ್ಯಕ್ತಪಡಿಸುವಂತೆ ಗೋಡೆಯೊರಗಿ ನಿಂತಿದ್ದುವು. ಪೂರ್ಣವಾದ ಕಲಾಕೃತಿಗಳು ಭಿತ್ತಿಯಲ್ಲಿ ಅಲಂಕಾರಪ್ರಾಯವಾಗಿ ಶೋಭಿಸುತ್ತಿದ್ದುವು. ಚಿತ್ರಸಮೂಹದ ನಡುವೆ ಸ್ಥಪತಿಯವರೊಡನೆ ಕುಳಿತು ಕಲೆಗೆ ಸಂಬಂಧಪಟ್ಟಂತೆ ಮಾತಾಡಿದ್ದೇ ಒಂದು ಸೊಗಸು. ಮಾತು ಮುಂದುವರಿದಂತೆ ಮೂಲೆಯಲ್ಲಿ ನಿಂತ ಮಾದರೀಕೃತಿಯೊಂದರ ಕಡೆ ಕೈತೋರುತ್ತ ಕನ್ನಡಿಗರ ಹೆಮ್ಮೆಯ ಸಾಧನೆಯಾಗಿರುವ ಬೆಂಗಳೂರಿನ ವಿಧಾನ ಸೌಧದ ಗೋಪುರಕ್ಕೆ ತಾವು ಹಾಕಿಕೊಟ್ಟ "ಡಿಸೈನ್" ಅದೆಂದು ಶ್ರೀಯುತರು ತೋರಿದರು. ವಿಧಾನ ಸೌಧದ ಈ ಗೋಪುರವನ್ನು ದ್ರಾವಿಡ ರೀತಿಯಲ್ಲಿ ನಿರ್ಮಿಸಬೇಕೆಂದಿದ್ದ ಕೆಲವರ ಅಭಿಪ್ರಾಯವನ್ನು ಖಂಡಿಸಿ ಚೋಳರ ಮಾದರಿಯನ್ನು ಹಾಕಿಕೊಟ್ಟವರು ಶ್ರೀ ಸ್ಥಪತಿಯವರು. ಇವರ ಕಲಾಸೇವೆಯನ್ನು ಮೆಚ್ಚಿಕೊಂಡಿದ್ದ ಆಗಿನ ಸರ್ಕಾರದವರು ಸಲಹಾಮಂಡಲಿಯಲ್ಲಿ ಶ್ರೀಯುತರನ್ನು ಸೇರಿಸಿಕೊಂಡಿದ್ದರು. ಅಲ್ಲದೆ ಇವರ ಸಲಹೆಗಳಿಗೆ ಹೆಚ್ಚು ಪ್ರಾಶಸ್ತ್ಯವೂ ದೊರೆಯುತ್ತಿತ್ತೆಂಬುದಕ್ಕೆ ಪ್ರಕೃತ ಭವ್ಯಗೋಪುರವೇ ನಿದರ್ಶನವಾಗಿ ನಿಂತಿದೆ. ಇಷ್ಟೇ ಅಲ್ಲದೆ ವಿಧಾನ ಸೌಧದ ಕಲಾಪೂರ್ಣ ನೆಲೆಗಳಲ್ಲೆಲ್ಲಾ ಶ್ರೀಯುತರ ಕೈವಾಡವು ಕಂಡುಬರುತ್ತದೆ.

ಅಭಿನವ ಜಕಣಾಚಾರ್ಯರೆಂದು ಪ್ರಸಿದ್ಧರಾಗಿದ್ದ ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳ ಏಕಮಾತ್ರ ಪುತ್ರರಾಗಿ ಜನಿಸಿ ಶ್ರೀಯುತರು ತಮ್ಮ ತಂದೆಯವರ ಶಿಲ್ಪ ಕಲಾಕೀರ್ತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದರು. ಅವರು ಹಾಕಿಕೊಟ್ಟ ಬುನಾದಿಯ ಮೇಲೆ ಭವ್ಯ ಕಲಾಸೌಧವನ್ನು ಕಟ್ಟುವ ಕೆಚ್ಚೆದೆಯಿಂದ ಪ್ರಗತಿಪರರಾಗಿ ನಡೆದವರು. ತಂದೆಯವರು ಸ್ಥಾಪಿಸಿದ ಸಂಸ್ಥೆಗಾಗಿ ತಮ್ಮ ತನುಮನವನ್ನು ಮೀಸಲಿರಿಸಿ ಅಹರ್ನಿಶಿಯೂ ಕಲಾಸೇವೆಯೊಂದೇ ತಮ್ಮ ಜೀವನದ ಗುರಿ ಎಂಬಂತೆ ಶ್ರದ್ಧಾಪೂರ್ಣರಾಗಿ ಕೆಲಸ ಮಾಡಿದವರು. ಅಂತೆಯೇ ಅನೇಕ ಮಂದಿ ಶಿಷ್ಯರನ್ನು ಪಡೆದು ಶಿಲ್ಪಕಲೆಯಲ್ಲಿ ಉತ್ತಮ ಶಿಕ್ಷಣವನ್ನು ಕೊಟ್ಟವರು.

ಶ್ರೀ ನಾಗೇಂದ್ರ ಸ್ಥಪತಿಯವರು 1913ರಲ್ಲಿ ಮೈಸೂರಿನಲ್ಲಿ ಜನ್ಮ ಎತ್ತಿದರು ಇವರ ನಾಮಕರಣಕ್ಕೆ ಮುಂಚೆ ತೊಟ್ಟಿಲಿನಲ್ಲಿ ಸರ್ಪವೊಂದು ಕಾಣಿಸಿಕೊಂಡುದರಿಂದ ಶ್ರೀಯುತರಿಗೆ ನಾಗೇಂದ್ರ ಸ್ಥಪತಿ ಎಂಬ ಹೆಸರನ್ನು ಇಡಲಾಯಿತೆಂಬ ಸ್ವಾರಸ್ಯವಾದ ಕಥೆಯನ್ನು ಹೇಳುತ್ತಾರೆ. ಇದೊಂದು ಪವಾಡದಂತೆ ತೋರಿದರೂ ಶ್ರೀ ಸ್ಥಪತಿಗಳು ಅಂದು ತಮ್ಮ ಗುರುವಿನಿಂದ "ಉತ್ತಮ ಶಿಲ್ಪಿಯಾಗು" ಎಂಬ ಆಶೀರ್ವಾದವನ್ನು ಪಡೆದಂತೆ ನಾಗೇಂದ್ರನೂ ಹರಸಿ ಹೋಗಿರಬಹುದು. ಬಾಲ್ಯದಿಂದಲೂ ಶಿಲ್ಪಕಲೆಯ ವಾತಾವರಣದಲ್ಲಿಯೇ ಬೆಳೆದು ಬಂದ ಇವರಿಗೆ ಕಲೆಯಲ್ಲಿ ವಿಶೇಷವಾದ ಆಸಕ್ತಿಯೂ ಪರಿಶ್ರಮವೂ ಉಂಟಾಗಿ ಮುಂದಿನ ಉತ್ತಮ ಭವಿಷ್ಯಕ್ಕೆ

ತಳಹದಿಯಾದುವು. ಶ್ರೀ ಸಿದ್ದಲಿಂಗ ಸ್ವಾಮಿಗಳವರು ತಮ್ಮ ಶಿಷ್ಯರೊಡನೆ ವಿಗ್ರಹಗಳನ್ನು ಕಡೆಯುವಾಗ ಅವುಗಳನ್ನು ನೋಡುತ್ತಾ ಮನಸ್ಸಿನಲ್ಲಿ ಭವ್ಯಚಿತ್ರಗಳನ್ನು ಕಲ್ಪಿಸಿಕೊಳ್ಳುತ್ತಾ, ಕೊನೆಗೆ ಚಾಣ ಹಿಡಿಯುವ ಮಟ್ಟಕ್ಕೆ ಶ್ರೀಯುತರು ಬಂದರು. ಇವಕ್ಕೆ ಪೂರಕ ಆಗುವಂತೆ ರೇಖೆ ಮುಂತಾದುವುಗಳಲ್ಲಿ ವಿಶೇಷ ಪಾಂಡಿತ್ಯವನ್ನು ಗಳಿಸಿಕೊಳ್ಳುವುದಕ್ಕೂ ನೆರವಾಗುವಂತೆ ಶ್ರೀ ಚಾಮರಾಜೇಂದ್ರ ಕಲಾಶಾಲೆಯ ವಿದ್ಯಾರ್ಥಿಯಾಗಿ ತಮ್ಮ ಇಪ್ಪತ್ತಮೂರನೆಯ ವಯಸ್ಸಿನಲ್ಲಿ ಸೇರಿದರು. ದಿವಂಗತ ಕೇಶವಯ್ಯನವರ ಮಾರ್ಗದರ್ಶಿತ್ವದಲ್ಲಿ ಉತ್ತಮ ಶಿಕ್ಷಣವನ್ನು ಪಡೆದು ಇಪ್ಪತ್ತೆಂಟನೆಯ ವಯಸ್ಸಿಗೆ ಕಲಾಶಾಲೆಯಿಂದ ಹೊರಬಂದರು. ಶಿಲ್ಪ, ಜ್ಯೋತಿಷ, ಚಿತ್ರ ಮುಂತಾದುವುಗಳ ಕಡೆ ಶ್ರೀಯುತರ ಒಲವು ಹೆಚ್ಚಾಗಿ ಪಾಠಶಾಲೆಯ ಓದು ಅಷ್ಟಾಗಿ ಮುಂದುವರಿಯಲಿಲ್ಲ. ಸಂಗೀತದಲ್ಲೂ ಅಭಿರುಚಿ ತಲೆದೋರಿ ಮೃದಂಗವಾದನದಲ್ಲಿ ವಿಶೇಷ ಪರಿಶ್ರಮವನ್ನು ಗಳಿಸಿದರು. ದಿವಂಗತ ಆಸ್ಥಾನ್ ವಿದ್ವಾನ್ ಶ್ರೀ ಚಿಕ್ಕರಾಮರಾಯರ ಕಚೇರಿಗಳಿಗೂ ಸಂಗೀತಶಾಸ್ತ್ರರತ್ನರೆಂದು ಪ್ರಖ್ಯಾತರಾಗಿರುವ ಶ್ರೀ ವಾಸುದೇವಾಚಾರ್ಯರ ಕಚೇರಿಗಳಿಗೂ ಮೃದಂಗ ಬಾರಿಸಿ ಖ್ಯಾತಿಯನ್ನು ಪಡೆದು 'ವಿದ್ವಾನ್' ಎಂಬ ಬಿರುದನ್ನು ಪಡೆದುಕೊಂಡಿದ್ದರು. ಹೀಗೆಯೇ ಕಲೆಯ ನಾನಾ ಪ್ರಕಾರಗಳಲ್ಲಿ ಶ್ರೀಯುತರು ಪಳಗಿ ಕೊನೆಗೆ ರಕ್ತಗತವಾದ ಶಿಲ್ಪವೃತ್ತಿಯೊಂದನ್ನು ಕೈಗೊಂಡು ಅದರ ಬೆಳವಣಿಗೆಗೆ ಟೊಂಕ ಕಟ್ಟಿ ದುಡಿದರು.

ಚಾಮರಾಜ ಕಲಾಶಾಲೆಯಲ್ಲಿ ಪಾಶ್ಚಿಮಾತ್ಯ ಸಂಪ್ರದಾಯದಲ್ಲಿ ಶಿಕ್ಷಣವನ್ನು ಪಡೆದವರು ಅನೇಕ ಶಾಸ್ತ್ರೀಯ ವರ್ಣಚಿತ್ರಗಳನ್ನು ಆ ಸಂಪ್ರದಾಯದಲ್ಲಿ ರಚಿಸಿ ಅಚ್ಚಿಸಿದ್ದಾರೆ. ಇವರ ಅನೇಕ ದೇವತಾ ಚಿತ್ರಪಟಗಳನ್ನು ನಾನಾ ಕಡೆಗಳಲ್ಲಿ ಕಾಣಬಹುದು. ಶ್ರೀ ಸಿದ್ಧಲಿಂಗ ಸ್ವಾಮಿಗಳವರ ಜೊತೆಯಲ್ಲಿ ಅರಮನೆಗೆ ಹೋಗಿಬರುವ ಅವಕಾಶ ತಾರುಣ್ಯದಲ್ಲಿ ಇವರ ಪಾಲಿಗೂ ದೊರಕಿತ್ತು. ಕಲೆಗೆ ಸಂಬಂಧಪಟ್ಟ ಕಾರ್ಯಗಳಲ್ಲಿ ತಮ್ಮ ತಂದೆಯವರಿಗೆ ನೆರವಾಗಿ ಅಲ್ಲಿಯೂ ಕೂಡ ತಮ್ಮ ಕಲೆಯ ಕುರುಹುಗಳನ್ನು ನಿಲ್ಲಿಸಿದ್ದಾರೆ. ಅರಮನೆಯ ಸಭಾಮಂಟಪದ "ಸೀಲಿಂಗ್ ಡಿಸೈನ್ಸ್"ನಲ್ಲಿ ಬರುವ ಶಾಸ್ತ್ರೀಯ ಚಿತ್ರಗಳಲ್ಲಿ ಶ್ರೀ ಸಿದ್ಧಲಿಂಗಸ್ವಾಮಿಗಳ ಮಾರ್ಗದರ್ಶನದಲ್ಲಿಯೇ ಕೆಲಸಮಾಡುತ್ತ ಉತ್ತಮ ವರ್ಣಮೋಡಿಯನ್ನು ಮೆರೆದರು. ಶ್ರೀ ಜಯಚಾಮರಾಜೇಂದ್ರ ಒಡೆಯರ ಕಾಲದಲ್ಲೂ ಅರಮನೆಗೆ ಪೂಜಾದಿಗಳಿಗೆ ಅನೇಕ ಕಲಾಕೃತಿಗಳನ್ನು ಬರೆದುಕೊಟ್ಟಿದ್ದರು. ಹೀಗೆಯೇ ಶಾಸ್ತ್ರೀಯ ಚಿತ್ರಕಲೆಯಲ್ಲಿ ಅನುಪಮ ಕೌಶಲವನ್ನು ಸಾಧಿಸಿಕೊಂಡಂತೆ ಶಿಲ್ಪಗಳ ನಿರ್ಮಾಣದಲ್ಲೂ ಅಮೋಘ ಚಾತುರ್ಯವನ್ನು ತೋರಿದ್ದರು. ಶ್ರೀ ಸ್ಥಪತಿಗಳನ್ನು ಉತ್ತಮ ಶಿಲ್ಪಿ ಎಂದೇ ಪರಿಗಣಿಸುವುದು ಸಹಜವೂ ಔಚಿತ್ಯಪೂರ್ಣವೂ ಆಗಿದೆ ಎಂಬುದಕ್ಕೆ ಅವರು ಕಡೆದಿರುವ ಅನೇಕಾನೇಕ ನೈಜ ಕಲಾಮೂರ್ತಿಗಳೇ ನಿದರ್ಶನಪ್ರಾಯವಾಗಿವೆ.

ಶ್ರೀ ಸ್ಥಪತಿಯವರು ಈವರೆಗೂ ಅನೇಕ ವಿಗ್ರಹಗಳನ್ನು ಕಡೆದು ಕೀರ್ತಿವಂತರಾಗಿದ್ದರು. ಬೀದರ್ ಸಮೀಪದ ಬಸವಕಲ್ಯಾಣದ ಅಕ್ಕಮಹಾದೇವಿಯ ಗುಹೆಗೆ ಒಂದು ಅಪೂರ್ವ ಶಿಲ್ಪಕೃತಿಯನ್ನು ಕಡೆದುಕೊಟ್ಟಿದ್ದಾರೆ. ಅಕ್ಕನ ಸಹಜ ಗಾಂಭೀರ್ಯ, ಭಾವತನ್ಮಯತೆಗಳನ್ನು ತರುವಲ್ಲಿ ಅವರ ಚಾಣ ಇಲ್ಲಿ ಯಶಸ್ವಿಯಾಗಿದೆ. ಕಮಲಪೀಠದ ಮೇಲೆ ಕುಳಿತ ಅಕ್ಕ ಕೈಯಲ್ಲಿ ಶಿವಲಿಂಗವನ್ನು ಹಿಡಿದು ಚನ್ನಮಲ್ಲಿಕಾರ್ಜುನನ ಧ್ಯಾನದಲ್ಲಿ ಪರವಶಳಾಗಿದ್ದಾಳೆ. ತೋಳು ಕೊರಳುಗಳಲ್ಲಿ ರುದ್ರಾಕ್ಷಿಮಣಿಗಳನ್ನು ಧರಿಸಿ, ನೊಸಲಿಗೆ ವಿಭೂತಿಯನ್ನು ಧರಿಸಿ ಪದ್ಮಾಸನದಲ್ಲಿ ಶಿವಪೂಜೆಗೆ ಕುಳಿತಿರುವ ಶಿವಭಕ್ತಿಯ ಪರಾಕಾಷ್ಠೆಯನ್ನು ಎತ್ತಿ ತೋರುತ್ತದೆ. ಈ ಶಿಲ್ಪಕೃತಿಯನ್ನು ಬಸವೇಶ್ವರ ದೇವಸ್ಥಾನದ ವ್ಯವಸ್ಥಾಪಕರು ತರಿಸಿಕೊಂಡು ವೈಭವಪೂರಿತ ಮೆರವಣಿಗೆಯಲ್ಲಿ ಅಕ್ಕನ ಗುಹೆಗೆ ತೆಗೆದುಕೊಂಡು ಹೋಗಿ ಅಲ್ಲಿ ಪ್ರತಿಷ್ಠಿಸಿದರು. ಸಮಾರಂಭಕ್ಕೆ

ಬಂದಿದ್ದ ಇಪ್ಪತ್ತು ಸಹಸ್ರಜನರೂ ಆಕೃತಿಯನ್ನು ಕಂಡು ಬಹು ಮೆಚ್ಚಿಕೊಂಡುದಾಗಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸಿ. ಎಂ. ವಾರದರವರು ಶ್ರೀ ಸ್ಥಪತಿಯವರಿಗೆ ಕಾಗದ ಬರೆದು "Every one appreciated the fine workmanship of the image" ಎಂದು ತಿಳಿಸಿದ್ದಾರೆ.

1950ರಲ್ಲಿ ಅರಮನೆಯ ಭುವನೇಶ್ವರಿ ದೇವಾಲಯಕ್ಕೆ ಸುಮಾರು ಐದು ಅಡಿ ಎತ್ತರದ ಅತ್ಯುತ್ತಮ ಶಿಲಾಮೂರ್ತಿಯೊಂದನ್ನು ಕಡೆದುಕೊಟ್ಟಿದ್ದಾರೆ. ಇದು ಶ್ರೀ ಸ್ಥಪತಿಯವರ ಶಿಲ್ಪ ಕೃತಿಗಳಲ್ಲೆಲ್ಲಾ ಕಿರೀಟಪ್ರಾಯವಾದುದು. ಭುವನೇಶ್ವರಿಯ ವದನಾರವಿಂದದಲ್ಲಿ ಅವರು ಮೂಡಿಸಿರುವ ಮಧುರ ನಗೆ ಅಪೂರ್ವ ಕಲಾಕೌಶಲವನ್ನು ಸಾರುತ್ತದೆ. ದೇವಿಯ ಮೈಮೇಲಿನ ವಸ್ತ್ರದ ನೂರಾರು ಮಡಿಕೆಗಳು ಶಿವನ ಜಟೆಯಿಂದಿಳಿಯುವ ಗಂಗೆಯ ಕೇಶರಾಶಿಯಂತೆ ಅದ್ಭುತವಾಗಿ ಬಿಡಿಸಲ್ಪಟ್ಟಿವೆ. ಆಭರಣಗಳಲ್ಲಿಯೂ ಕಿರೀಟದಲ್ಲಿಯೂ ಹಸ್ತಮುದ್ರಿಕೆಯಲ್ಲೂ ಉತ್ತಮ ಕೌಶಲ ಕಾಣಬರುತ್ತದೆ. ಇದಿಷ್ಟೇ ಅಲ್ಲದೆ ಪ್ರಭಾವಳಿಯೇ ಒಂದು ವಿಶಿಷ್ಟಪೂರ್ಣವಾದುದು. ಶಾರ್ದೂಲದ ಮುಡಿಗಳ ಮೇಲೆ ನಿಂತಂತೆ ಕಡೆದಿರುವ ಈ ಪ್ರಭಾವಳಿಯಲ್ಲಿ ಒಂದೊಂದು ಬಳ್ಳಿಸುತ್ತಿನ ಉಂಗುರಗಳಲ್ಲೂ ಒಂದೊಂದು ಉತ್ತಮ ಮೂರ್ತಿಗಳನ್ನು ಬಿಡಿಸಿದ್ದಾರೆ. ಶಾರ್ದೂಲಗಳ ನಖಗಳೂ ಮಣಿಮಾಲೆಗಳೂ ಮನೋಹರವಾಗಿ ಬಿಡಿಸಲ್ಪಟ್ಟಿವೆ. ಶ್ರೀ ಸಿದ್ಧಲಿಂಗಸ್ವಾಮಿಗಳ ನೇತೃತ್ವದಲ್ಲಿ ಕಡೆಯಲ್ಪಟ್ಟ ಈ ವಿಗ್ರಹವು ಸ್ಥಪತಿಗಳ ಶಿಲ್ಪಪ್ರಾಧಿಮೆಯನ್ನು ಸಾರತಕ್ಕದಾಗಿದೆ.

ಮೈಸೂರು ನಗರದ ಸುಂದರ ದೇವಾಲಯಗಳಲ್ಲಿ ಶ್ರೀ ಸಿದ್ಧಲಿಂಗಸ್ವಾಮಿಗಳಿಂದ ಹೊಯ್ಸಳ ಮಾದರಿಯಲ್ಲಿ ಕಟ್ಟಲ್ಪಟ್ಟಿರುವ ಕಾಮಕಾಮೇಶ್ವರಿ ದೇವಾಲಯವೂ ಒಂದು. ಕೇವಲ ಶಿಲೆಯಲ್ಲಿಯೇ ಇದನ್ನು ಶಿಲ್ಪಮಯವಾಗಿ ಕಟ್ಟುವ ಒಂದು ಬೃಹತ್ ಸಾಧನೆಯನ್ನು ಶ್ರೀ ಸಿದ್ಧಲಿಂಗಸ್ವಾಮಿಗಳು ತೋರಿದ್ದಾರೆ. ದೇವಾಲಯದ ಭಿತ್ತಿಗಳಲ್ಲಿ ಶಿವಲೀಲೆಗೆ ಸಂಬಂಧಪಟ್ಟ ಅನೇಕ ಶಿಲಾಮೂರ್ತಿಗಳನ್ನು ಸುಂದರವಾಗಿ ಕಡೆಯಲಾಗಿದೆ. ಇವುಗಳಲ್ಲಿ ಬಹುಪಾಲು ಶ್ರೀ ಸ್ಥಪತಿಯವರಿಂದ ಕಡೆಯಲ್ಪಟ್ಟವಾಗಿವೆ. ಒಂದೊಂದು ಮೂರ್ತಿಯೂ ಒಂದೊಂದು ವಿಧದಲ್ಲಿ ಒಂದೊಂದು ವಿನ್ಯಾಸದಲ್ಲಿ ಕಂಗೊಳಿಸುತ್ತ ನಮ್ಮ ಪ್ರಾಚೀನ ಶಿಲ್ಪ ಸೌಂದರ್ಯವನ್ನು ನೆನಪಿಗೆ ತರುತ್ತವೆ. ಶ್ರೀ ಸ್ಥಪತಿಯವರು ಈ ಶಿಲಾಮೂರ್ತಿಗಳನ್ನು ಕಡೆಯಲು ಶ್ರಮಪೂರ್ಣ ಸಾಧನೆಯನ್ನು ನಡೆಸಿದ್ದಾರೆ. ದೇವಾಲಯದ ಒಳಗಿನ ಭೀಮಾಕಾರದ ನಾಲ್ಕು ಸ್ತಂಭಗಳನ್ನೂ ಕಲಾಮಯವಾಗಿ ಮಾಡಲು ಇವರೂ ನೆರವಾಗಿದ್ದರು. ದೇವಾಲಯದ ಮುಂಭಾಗದಲ್ಲಿ ಮಹಾನಂದಿಯ ವಿಗ್ರಹವೊಂದನ್ನು ಪ್ರತಿಷ್ಠಿಸಲಾಗಿದೆ. ಉನ್ನತಾಕಾರದ ಈ ನಂದಿಯನ್ನು ಕಡೆಯಲು ಶಿಲೆಯನ್ನು ಮೈಸೂರಿಗೆ ಸಾಗಿಸಿಕೊಂಡು ಬರುವುದರಲ್ಲಿ ಅಪಾರ ಶ್ರಮವಾಗಿದೆ. ಕಾಮಕಾಮೇಶ್ವರಿ ದೇವಾಲಯದ ಮುಂದೆ ಬಹುದೊಡ್ಡ ನಂದಿಯ ವಿಗ್ರಹವನ್ನು ಕಡೆಯಬೇಕೆಂಬ ಮಹದಿಚ್ಛೆ ಶ್ರೀಸಿದ್ಧಲಿಂಗಸ್ವಾಮಿಯವರಿಗಿದ್ದು ಅವರು ಆ ಸಂದರ್ಭದಲ್ಲಿ ಅಸ್ವಸ್ಥರಾದುದರಿಂದ ಅಷ್ಟು ಬೃಹದಾಕಾರದ ಶಿಲೆಯನ್ನು ತರಲು ಸಾಧ್ಯವಾಗುವುದೋ ಇಲ್ಲವೋ ಎಂಬ ಶಂಕೆಯಿಂದಿದ್ದರು. ಹದಿನೆಂಟು ಮೈಲಿ ದೂರದಲ್ಲಿರುವ ಕಲ್ಲಿನ ಗಣಿಯಲ್ಲಿ ಮಹಾನಂದಿಗಾಗಿ ದೊಡ್ಡ ಶಿಲೆಯೊಂದು ಪ್ರಾಪ್ತವಾಯಿತು. ಅದನ್ನು ಸಾಗಿಸಿಕೊಂಡು ಬರಲು ಸಾಧ್ಯವಾಗದೆ ಸುಮಾರು ಎರಡು ವರ್ಷ ಕಾಲ ಅಲ್ಲಿಯೇ ಉಳಿಯಬೇಕಾಯಿತು. ಶ್ರೀ ಸಿದ್ಧಲಿಂಗಸ್ವಾಮಿಗಳು ತಮ್ಮ ಕುಮಾರನನ್ನು ಬಳಿಗೆ ಕರೆದು "ನಿನ್ನಲ್ಲಿ ಆ ಕಲ್ಲನ್ನು ಸಾಗಿಸಿಕೊಂಡು ಬರುವ ಯೋಗ್ಯತೆ ಇಲ್ಲ—ಯಾವುದೋ ಒಂದು ಸಣ್ಣ ನಂದಿಯನ್ನು ಮಾಡಿ ಆಯಿತು ಎನ್ನಿಸಿಬಿಡುತ್ತೀಯೆ" ಎಂದು ಜಿಗುಪ್ಸೆಯಿಂದ ನುಡಿದರು. ಆಗ ಶ್ರೀ ಸ್ಥಪತಿಯವರು ಮನಸ್ಸಿನಲ್ಲಿ ಛಲವನ್ನು ತಾಳಿ ನಂದಿಯ ಸಾಧಾರಣ ಆಕಾರವನ್ನಾಗಲೇ

ಅಲ್ಲಿಯೇ ಬಿಡಿಸಿ ಸುಮಾರು ಹದಿನೈದು ಅಡಿ ಆಳದ ದೊಡ್ಡ ಹಳ್ಳದಿಂದ ಅದನ್ನು ಆನೆಗಳ ಮೂಲಕ ಮೇಲಕ್ಕೆ ತಳ್ಳಿಸಿ ಲಾರಿಯಲ್ಲಿ ತಮ್ಮ ಶಿಲ್ಪಾಲಯಕ್ಕೆ ತಂದುಹಾಕಿದರು. ತಮ್ಮ ಪುತ್ರನ ಸಾಹಸವನ್ನು ಕಂಡು ಶ್ರೀ ಸ್ವಾಮಿಗಳು ಆನಂದದಿಂದ ಆಸ್ರುಬಾಷ್ಪವನ್ನು ಸುರಿಸಿದರು. ಇವರ ಉದ್ದೇಶ ನೆರವೇರಿದಂತಾಯಿತು. "ಇನ್ನು ಯಾವಾಗಲಾದರೂ ಅದನ್ನು ಪೂರ್ಣಮಾಡಿ ಪ್ರತಿಷ್ಠೆ ಮಾಡಿ" ಎಂದು ಹೇಳಿ 1952ರಲ್ಲಿ ಶ್ರೀಮಠ ಹಾಗೂ ಶಿಲ್ಪವಿದ್ಯಾಲಯಗಳ ಸರ್ವಾಧಿಕಾರತ್ವವನ್ನು ಶ್ರೀ ಸ್ಥಪತಿಯವರಿಗೆ ವಹಿಸಿ "ಮುಂದೆ ಇದು ಪ್ರಸಿದ್ಧ ಕಲಾಕ್ಷೇತ್ರವಾಗಿ ಪರಿಣಮಿಸಲಿ" ಎಂದು ಆಶೀರ್ವದಿಸಿದರು. ಶ್ರೀ ಸ್ವಾಮಿಗಳವರು 2–5–1952ರಲ್ಲಿ ಶಿವಸಾಯುಜ್ಯವನ್ನು ಪಡೆದ ಮೇಲೆ ಅವರ ಮಹದೋದ್ದೇಶವಾಗಿದ್ದ ನಂದಿಯ ಪ್ರತಿಷ್ಠಾಪನೆಯ ಕಡೆಗೆ ಸ್ಥಪತಿಯವರ ಚಿತ್ತ ವಾಲಿತು. ಹಗಲಿರುಳು ಶ್ರಮಿಸಿ 1954ರಲ್ಲಿ ನಂದಿಯ ಪ್ರತಿಷ್ಠಾಪನೆ ಮಾಡಿದರು. ಈ ನಂದಿಯ ವಿಗ್ರಹ ತುಂಬ ಆಕರ್ಷಕವಾಗಿದೆ. ಕೊರಳಿನ ಕಿಂಕಿಣಿಗಳೂ, ಗಂಟೆಯ ಸರವೂ, ಗೊಂಡೆಗಳೂ, ಬಹು ಕುಶಲವಾಗಿ ಮನೋಹರವಾಗಿ ಬಿಡಿಸಲ್ಪಟ್ಟವೆ. ಕುತ್ತಿಗೆಯ ಸುಕ್ಕುಗಳೂ, ಮುಖದ ಸೌಂದರ್ಯವೂ, ಶರೀರದ ಅಚ್ಚುಕಟ್ಟೂ, ಮೈಮೇಲಿನ ತೊಡಿಗೆಗಳೂ ತುಂಬ ಚಾಕಚಕ್ಯತೆಯಿಂದ ಬಿಡಿಸಲಾಗಿದೆ. ಇಲ್ಲಿನ ಆಕರ್ಷಕ ಶಿಲ್ಪಮೂರ್ತಿಗಳಲ್ಲಿ ನಂದಿಗೆ ಅಗ್ರಸ್ಥಾನ ಎನ್ನಬಹುದಾಗಿದೆ.

ಇವರ ಇನ್ನೂ ಉತ್ತಮ ಶಿಲ್ಪಕೃತಿಗಳೆಂದರೆ ಬೆಂಗಳೂರಿನ ಸುಬ್ರಹ್ಮಣ್ಯಪುರದ ದೇವಾಲಯಕ್ಕೆ 1953ರಲ್ಲಿ ಮಾಡಿಕೊಟ್ಟ ವಲ್ಲಿದೇವಸೇನನ ಸುಬ್ರಹ್ಮಣ್ಯಸ್ವಾಮಿ, ಚಿಕ್ಕಮಗಳೂರಿನ ಸತಿಸೋದರ ಸಮೇತವಾದ ಶ್ರೀರಾಮವಿಗ್ರಹ, 1956ರಲ್ಲಿ ಗುಲ್ಬರ್ಗದ ದೇವಸ್ಥಾನಕ್ಕೆ ಮಾಡಿಕೊಟ್ಟ ನಾಲ್ಕೂವರೆ ಅಡಿ ಎತ್ತರದ ಮಹಾಕಾಳಿಕಾ, 1950ರಲ್ಲಿ ದಾವಣಗೆರೆಯ ಪಾರ್ಶ್ವನಾಥ ದೇವಾಲಯಕ್ಕೆ ಮಾಡಿಕೊಟ್ಟ ಪಾರ್ಶ್ವನಾಥ ಮುಂತಾದುವು ಹೆಸರಿಸಬಹುದಾದ ಶಿಲ್ಪ ಕಲಾಕೃತಿಗಳಾಗಿವೆ.

ಇಷ್ಟೇ ಅಲ್ಲದೆ ಶ್ರೀಯುತರು 19:4ರಲ್ಲಿ ಭವಾನಿ ಪ್ರಾಜೆಕ್ಟಿಗೆ ಭವಾನಿದೇವಿ, ಬೊಂಬಾಯಿಯ ರುಮಿಯಾ ಅಂಡ್ ಕಂಪನಿಗೆ ಬುದ್ಧ, ರಾಮದೇವ, ಗಣಪತಿ, ಬಳ್ಳಾರಿ ಜಿಲ್ಲೆಗೆ ಜಡೆಸಿದ್ಧಯೋಗಿಗಳು, ಆ ಪ್ರದೇಶಕ್ಕೆ ಪಾಮುಡಿ ಸತ್ಯನಾರಾಯಣಸ್ವಾಮಿ, ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಗೆ ವೆಂಕಟೇಶ್ವರ, ದತ್ತಾತ್ರೇಯಸ್ವಾಮಿ, ಹಾವೇರಿಗೆ ವೀರಭದ್ರಸ್ವಾಮಿ, ಗೋಕರ್ಣ ಕ್ಷೇತ್ರಕ್ಕೆ ನವಲೀಲಾಸಹಿತ ರೇಣುಕಮೂರ್ತಿ, ಅಜ್ಮೀರದ ಪುಷ್ಕರದಲ್ಲಿರುವ ಮಹಾಸುದರ್ಶನ ಚಕ್ರ, ನರೇಗಲ್ಲಿನ ಸಿಂಹವಾಹಿನಿ, ಗದಗಿನ ಪಂಚಲಿಂಗೋದ್ಭವ ಮೂರ್ತಿಗಳು, ಕೂಡಲಿ ಸಂಸ್ಥಾನದ ಶಾರದಾ ಶಿಲಾಮೂರ್ತಿಗಳನ್ನು ತುಂಬ ಯಶಸ್ವಿಯಾಗಿ, ಅಚ್ಚುಕಟ್ಟಾಗಿ, ಮನೋಹರವಾಗಿ ಕಡೆದುಕೊಟ್ಟು ಮೈಸೂರಿನ ಶಿಲ್ಪಕೀರ್ತಿಯನ್ನು ಬೆಳಗುತ್ತ ಬಂದಿರುವರಷ್ಟೇ ಅಲ್ಲದೆ ಅವರ ಪಿತೃಶ್ರೀಯವರ ಕೀರ್ತಿಯನ್ನೂ ಉಳಿಸಿದ ಪುಣ್ಯಶಾಲಿಗಳಾಗಿದ್ದರು.

ಶ್ರೀ ಸ್ವಾಮಿಗಳವರ ನೇತೃತ್ವದಲ್ಲಿ ಕಟ್ಟುನಿಟ್ಟಿನ ಜೀವನವನ್ನು ನಡೆಸಿಕೊಂಡು ಬಂದಿದ್ದ ಸ್ಥಪತಿಯವರು ಖ್ಯಾತಿಯ ಶಿಖರವನ್ನೇರಲು ಅವರ ತೀರ್ಥರೂಪರವರೇ ಕಾರಣಕರ್ತರು. ತಮ್ಮ ಮಗನನ್ನು ಯಾವ ವ್ಯರ್ಥ ಕಾಲಹರಣಕ್ಕೂ ಬಿಡದೆ ಶಿಸ್ತಿನಿಂದ ಕಲಾಭ್ಯಾಸ ಮಾಡಲು ಆಗಾಗ್ಗೆ ಎಚ್ಚರಿಸುತ್ತಲೇ ಇದ್ದರು. ಶ್ರೀ ಸ್ಥಪತಿಯವರಿಗೆ ಚಿತ್ರಗಳನ್ನು ಅಚ್ಚಿಸಲು ಮುದ್ರಣಾಲಯವೊಂದನ್ನು ಇಡಬೇಕೆಂಬ ಹಿರಿಯಾಸೆ ಇದ್ದಿತು. ಶ್ರೀ ಸ್ವಾಮಿಗಳವರಿಗೆ ಇದು ಇಷ್ಟವಾಗಲಿಲ್ಲ. "ಬೇಕಾದರೆ ಶಿಲೆಗಳನ್ನೋ, ಬಣ್ಣ ಬ್ರಷ್‌ಗಳನ್ನೋ ತಂದಿಟ್ಟುಕೊ, ನಮ್ಮ ಕೈಯಲ್ಲಿ ಸರಳ ರೀತಿಯ ಪ್ರೆಸ್ಸು ಇರುವಾಗ ಬೇರೆ ಯಂತ್ರಗಳ ಹಂಗೇಕೆ?" ಎಂದು ಟೀಕಿಸುತ್ತಿದ್ದರು.

ಹೀಗೆಯೇ ಇವರ ಕಲಾವಾಹಿನಿ ಶಿಸ್ತು ನಿಯಮಗಳ ನೈಜ ತಟಗಳ ನಡುವೆ ಹರಿದುಬಂದಿದೆ. ಜೀವನದಲ್ಲಿ ಶ್ರದ್ಧೆ, ಆಸಕ್ತಿ, ಹಿರಿಯರಲ್ಲಿ ಭಕ್ತಿ, ಕಲೆಗೆ ಸಂಬಂಧಪಟ್ಟ ಕೆಲಸಗಳೆಂದರೆ ಅತ್ಯಂತ ಉತ್ಸಾಹ, ಇವುಗಳನ್ನು ತಮ್ಮ ಮೂಲ ಮಂತ್ರವನ್ನಾಗಿಟ್ಟುಕೊಂಡು ಶ್ರೀ ಸ್ಥಪತಿಯವರು ಕಲಾಕ್ಷೇತ್ರದಲ್ಲಿ ನಡೆದು ಬಂದಿದ್ದರು. ಇಂಥ ಖ್ಯಾತ ಶಿಲ್ಪಿ ನಮ್ಮಿಂದ ಅಗಲಿ ಇಂದಿಗೆ ಐದು ವರ್ಷಗಳಾದವು. ಆದರೆ ಅವರು ರಚಿಸಿ ಬಿಟ್ಟುಹೋದ ಕೃತಿಗಳು ಅವರ ಹೆಸರನ್ನು ಸದಾ ನಮ್ಮ ನಾಲಿಗೆಯ ಮೇಲೆ ತರುತ್ತವೆ.

ಸಿ. ಪಿ. ಕೆ.

ಚಿಂತನ-೭*

I

ಸುಖ–ದುಃಖ

ಲಿಯೊ ಟಾಲ್‌ಸ್ಟಾಯ್ ಅವರ ಸುಪ್ರಸಿದ್ಧ ಕಾದಂಬರಿಯೊಂದು ಈ ಹೇಳಿಕೆಯಿಂದ ಮೊದಲಾಗುತ್ತದೆ: "ಸುಖೀ ಕುಟುಂಬಗಳೆಲ್ಲ ಒಂದೇ ತೆರನಾಗಿರುತ್ತವೆ; ಅಸುಖಿಯಾದ ಪ್ರತಿಯೊಂದು ಕುಟುಂಬವೂ ತನ್ನದೇ ರೀತಿಯಲ್ಲಿ ಅಸುಖಿಯಾಗಿರುತ್ತದೆ". ಈ ಹೇಳಿಕೆಗೆ ಎಷ್ಟು ಬೇಕಾದರೂ ವ್ಯಾಖ್ಯಾನ ಮಾಡಬಹುದು. ಇತರ ತಾತ್ಪರ್ಯವಿಷ್ಟೆ: ಸುಖದ ಸ್ವರೂಪ ಒಂದು, ದುಃಖದ ಸ್ವರೂಪ ಅನೇಕ, ಅನಂತ. ಸುಖವನ್ನು ರೂಪಿಸುವ ಅಂಶಗಳನ್ನು ಪಟ್ಟಿಮಾಡಬಹುದು. ದುಃಖದ ಪ್ರಕಾರಗಳನ್ನು ಪಟ್ಟಿಮಾಡಿ ಮುಗಿಸುವುದು ಶಕ್ಯವಿಲ್ಲ.

ಸುಖವನ್ನು ಲೌಕಿಕ, ಅಲೌಕಿಕ ಎಂದು ಎರಡು ವರ್ಗ ಮಾಡಬಹುದು. ಪ್ರಾಪಂಚಿಕವಾದುದನ್ನೆಲ್ಲ ತ್ಯಜಿಸಿ, ಪಾರಮಾರ್ಥಿಕ ಸುಖವನ್ನು ಪಡೆದು ತಣಿಯುವುದು ಎಲ್ಲರಿಗೂ ಸಾಧ್ಯವಿಲ್ಲ. ಅಂಥವರು ಲಕ್ಷಕ್ಕೊಬ್ಬರು ಅಥವಾ ಕೋಟಿಗೊಬ್ಬರು. ಆ ಪರಿಯ ಸುಖ ನಮಗೆ ಪ್ರಕೃತವಲ್ಲ; "ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ" ಎಂಬ ಗೀತೋಕ್ತಿಗೆ ಅರ್ಹರಾದವರ ವಿಷಯವೂ ನಮಗೆ ಅಪ್ರಸಕ್ತ. ಪ್ರಾಪಂಚಿಕವಾದ ನಿಲುವಿನಿಂದ ಸುಖ ಎಂದರೇನು ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಆದರೆ ಸುಖದುಃಖವಿವೇಚನೆ ಸರಳ ಸುಲಭವಾದುದಲ್ಲ ಎಂಬುದನ್ನು ಮೊದಲೇ ಒಪ್ಪಿಕೊಳ್ಳಬೇಕು. ಸುಖವಾಗಲಿ, ದುಃಖವಾಗಲಿ ಮೂಲಭೂತವಾಗಿ ವ್ಯಕ್ತಿನಿಷ್ಠವಾದುದು: ಆದರೆ ಅದರಲ್ಲಿ ವಸ್ತುನಿಷ್ಠತೆಯ ಪಾಲು ಉಂಟೇ ಉಂಟು.

ಐಹಿಕ ಸುಖವನ್ನೆ ನಾವು ತೆಗೆದುಕೊಂಡರೂ ಅದು 'ಸುಖ' ಎನಿಸಿಕೊಳ್ಳಬೇಕಾದರೆ ಆಮುಷ್ಮಿಕ ಸುಖದ ಒಂದು ಅಂಶ ಅದರಲ್ಲಿ ಇರಲೇಬೇಕು: ಅದು ಚಿತ್ತಸಂತೃಪ್ತಿ. ತೃಪ್ತಿಯೇ ಸುಖ, ಅತೃಪ್ತಿಯೇ ದುಃಖ ಎಂದು ಸೂತ್ರಪ್ರಾಯವಾಗಿ ಹೇಳಬಹುದು. ಮನಸ್ಸಿನಲ್ಲಿ ತೃಪ್ತಿ ಇಲ್ಲದಿದ್ದರೆ ಹೊರಗಿನ ಯಾವ ಸಾಧನ ಸಂಪತ್ತುಗಳೂ ಸುಖದಾಯಕವಾಗಲಾರವು; ತೃಪ್ತಿಯಿದ್ದರೆ ಬಾಹ್ಯ ಸಾಮಗ್ರಿಗಳ ಅರಕೆ ಸುಖಕ್ಕೆ ಅಡ್ಡಿಯಾಗಲಾರದು. ಸಂಸ್ಕೃತ ಸುಭಾಷಿತ ಒಂದು ಸೊಗಸಾದ ಹೋಲಿಕೆಯ ಮೂಲಕ ಹೇಳುತ್ತದೆ:

---

* ಮೈಸೂರು ಆಕಾಶವಾಣಿ ಸೌಜನ್ಯದಿಂದ

ತುಷ್ಟ ಮಾನಸವುಳ್ಳ ನರನಿಗೆ ಸಕಲ ಸಂಪತ್ತಿರುವುದು :
ಕಾಲೊಳಿಕ್ಕವ ಧರಿಸಿದವನಿಗೆ ಭೂಮಿಯೇ ಚರ್ಮಾವೃತ !

ಆದರೆ ಮನಸ್ಸು ತುಷ್ಟವೂ ತೃಪ್ತವೂ ಆಗಿರಬೇಕಾದರೆ ಕೆಲವು ಕನಿಷ್ಠ ಅವಶ್ಯಕತೆಗಳಾದರೂ ಪೂರೈಕೆಗೊಳ್ಳಬೇಕಾಗುತ್ತದೆ. ಸಾಕಷ್ಟು ಧನ, ಆರೋಗ್ಯ, ಸಾಂಸಾರಿಕ ಕ್ಲೇಶಗಳಾಗಲಿ ಸಮಸ್ಯೆಗಳಾಗಲಿ ಇಲ್ಲದಿರುವಿಕೆ ಇತ್ಯಾದಿ. ತದ್ವಿರುದ್ಧವಾಗಿ, ದಾರಿದ್ರ್ಯ, ರೋಗರುಜಿನಗಳು, ನಾನಾ ತಾಪತ್ರಯಗಳು ಮನಶ್ಶಾಂತಿಯನ್ನು ಕಲಕಿ, ದುಃಖಹೇತುಗಳಾಗುತ್ತವೆ. ಐಶ್ವರ್ಯವೊಂದರಿಂದಲೆ ಸುಖ ಲಭಿಸುತ್ತದೆಂದು ಯಾರಾದರೂ ತಿಳಿದಿದ್ದರೆ ಅದು ದಡ್ಡತನವಷ್ಟೆ. ಆರೋಗ್ಯವಿಲ್ಲದವನಿಗೆ ಐಶ್ವರ್ಯದಿಂದೇನು ಫಲ? ಆದ್ದರಿಂದಲೆ, "ಆರೋಗ್ಯವೇ ಭಾಗ್ಯ" ಎನ್ನುವುದು. ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ, ಎರಡೂ ಸುಖಕಾರಕಗಳು. ಇಂತಹ ಸುಖವನ್ನು ಐಶ್ವರ್ಯ ಹೆಚ್ಚಿಸಬಹುದಷ್ಟೆ. ಅದೇ ಸುಖವಾಗಲಾರದು ಅಥವಾ ಸುಖವನ್ನು ತಂದುಕೊಡಲಾರದು.

ಕೆಲವರ ದುಃಖ ಬಾಹ್ಯಕಾರಣಗಳಿಂದ ಉಂಟಾಗತಕ್ಕದ್ದು: ಹಣದ ಅಭಾವ, ಪರಿಹಾರವಿಲ್ಲದ ವ್ಯಾಧಿ ಇತ್ಯಾದಿಗಳಿಗೆ ತುತ್ತಾದವರು ನಿಜವಾಗಿಯೂ ದುಃಖಿಗಳು. ಅದಕ್ಕೆ ಅವರು ಜವಾಬ್ದಾರರಲ್ಲ. ಇನ್ನು ಕೆಲವರ ದುಃಖ ಸ್ವಯಂಕೃತವೂ, ಕೃತಕವೂ ಆದದ್ದು. ಇರುವ ಸಂಪತ್ತು ಸಾಲದು, ಮತ್ತಷ್ಟು ಬೇಕು, ಅದು ಬೇಕು, ಇದು ಬೇಕು—ಹೀಗೆ 'ಬ್ರೇಕಿಲ್ಲದ ಬೇಕು'ಗಳನ್ನು ಬೆನ್ನಟ್ಟುವ ದುರಾಶಾಪಿಶಾಚಗ್ರಸ್ತರಿಗೆ ಸುಖ ಮೃಗಜಲವಾಗುತ್ತದೆ. ಇದ್ದುದರಲ್ಲಿ ತೃಪ್ತಿಪಟ್ಟುಕೊಳ್ಳುವುದೆ ಸುಖಸಂಪಾದನೆಯ ರಹಸ್ಯ. ಈ ಸೂಕ್ತಿಯನ್ನು ಲಕ್ಷಿಸಬಹುದು:

ಹೇರಾಸೆ ಯಾರದೋ ಅವನೇ ದರಿದ್ರನಾಗಿರಲಿ.
ಶ್ರೀಮಂತನಾರು, ಬಡನು ಯಾರು—ತೃಪ್ತಿಯಿರೆ ಮನದಿ ?

ಅಲ್ಪಸಂತೃಪ್ತಿ ಮತ್ತು ಅತ್ಯಾಶೆಯ ವರ್ಜನೆ ಸಿರಿತನಕ್ಕೂ ಬಡತನಕ್ಕೂ ಇರುವ ಭೇದವನ್ನು ತೊಡೆದುಹಾಕುತ್ತದೆ. ಅವುಗಳಿಂದ ಬರುವ ಆನಂದವೆ ಮಾನವನ ಪಾಲಿಗೆ ಅತ್ಯಮೂಲ್ಯವಾದ ಆಸ್ತಿ. ಈ ಸುಭಾಷಿತವನ್ನೂ ಪರಿಭಾವಿಸಬಹುದು:

ಸರ್ಪಗಳು ಗಾಳಿಯನು ಕುಡಿಯುವುವು, ಆದರೂ ದೌರ್ಬಲ್ಯವಿಲ್ಲ;
ಒಣಹುಲ್ಲು ತಿನ್ನುವುವು ಆನೆಗಳು, ಆದರೂ ಬಲಶಾಲಿಯಹವು;
ಬರಿ ಗೆಡ್ಡೆ ಗೆಣಸುಗಳನೇ ತಿಂದು ಮುನಿವರರು ಕಾಲಹಾಕುವರು;
ಸಂತೋಷವೊಂದೆ ಮಾನವನ ಪಾಲಿಗೆ ಪರಮ ನಿಧಿಯಾಗಿರುವುದು.

ತಮಗಿಂತ ಮೇಲಿರುವವರನ್ನು ಕಂಡು, ನಾನೂ ಹಾಗಾಗಲಿಲ್ಲವಲ್ಲ ಎಂದು ಅಸುಖಿಗಳಾಗುವುದು ಜನರ ಸ್ವಭಾವ. ತಮಗಿಂತ ಹೀನಸ್ಥಿತಿಯಲ್ಲಿರುವವರನ್ನು ನೋಡಿ ಅವರು ತಾವೇ ಭಾಗ್ಯವಂತರೆಂದುಕೊಳ್ಳುವುದನ್ನು ಕಲಿಯಬೇಕು. ಯಾರೋ ಒಬ್ಬ ಹೇಳಿದ್ದಾನೆ: "ನನ್ನ ಕಾಲಿಗೆ ಬೂಟುಗಳಿಲ್ಲವೆಂದು ಕೊರಗುತ್ತಿದ್ದೆ. ಆದರೆ ಕಾಲೇ ಇಲ್ಲದವನನ್ನು ಒಮ್ಮೆ ಕಂಡಾಗ ನಾನು ಅದೃಷ್ಟಶಾಲಿ ಎಂಬುದು ತಿಳಿಯಿತು."

ಅಂತೂ ಲೋಕದಲ್ಲಿ ಸುಖವೂ ಇದೆ; ದುಃಖವೂ ಇದೆ. ದುಃಖದ ಪ್ರಮಾಣವೆ ನಿಸ್ಸಂಶಯವಾಗಿ ಅಧಿಕ. ಸುಖ ದುಃಖಕ್ಕೆ ದಾರಿಯಾಗದಂತೆ ನೋಡಿಕೊಳ್ಳಬೇಕು; ದುಃಖವನ್ನು ಅಳಿಸುವ ಪ್ರಯತ್ನಗಳನ್ನೂ ಮಾಡಬೇಕು. ನಿಜವಾದ ದುಃಖವನ್ನು ನಿವಾರಿಸಬಹುದೇನೋ;

ಆದರೆ ಕೃತಕವಾದ ದುಃಖಕ್ಕೆ ಔಷಧವಿಲ್ಲ. ಅಲ್ಲದೆ, ಸುಖ ದುಃಖಗಳ ಕಲ್ಪನೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತದೆ. ಸಾಧಾರಣೀಕರಣ ಪ್ರಾಯಃ ಸಾಧ್ಯವಿಲ್ಲ.

ಇನ್ನೊಂದು ದೃಷ್ಟಿಯಿಂದ ನೋಡಿದರೆ, ಒಂದಲ್ಲ ಒಂದು ದುಃಖ-ಸಣ್ಣದೋ ದೊಡ್ಡದೋ-ಪ್ರತಿಯೊಬ್ಬರಿಗೂ ಇದ್ದೇ ಇರುತ್ತದೆ. ಪರಿಪೂರ್ಣ ಸುಖಭಾಜನರು ವಿರಳ. ಎಲ್ಲರ ಮನೆಯ ದೋಸೆಯೂ ತೂತೇ ಎಂಬ ಗಾದೆ ಅರ್ಥವತ್ತಾದುದು. ಅದಕ್ಕೆ ಯಾರೋ ಇನ್ನೊಂದು ಮಾತು ಸೇರಿಸಿದ್ದಾರೆ: 'ಕೆಲವರ ಮನೆಯ ಕಾವಲಿಯೆ ತೂತು', ಕಾವಲಿಯ ತೂತನ್ನು ಸರಿಪಡಿಸ ಬಹುದು. ಆದರೆ ದೋಸೆಯ ತೂತನ್ನು ಮುಚ್ಚುವಂತಿಲ್ಲ: ಅದರ ಸ್ವಭಾವವೇ ಹಾಗೆ.

"ಚಕ್ರಾರಪಂಕ್ತಿರಿವ ಗಚ್ಛತಿ ಭಾಗ್ಯಪಂಕ್ತಿಃ" ಎಂಬ ಸೂಕ್ತಿಯೂ ಈ ಸಂದರ್ಭ ದಲ್ಲಿ ನೆನಪಾಗುತ್ತದೆ. ಜೀವನದಲ್ಲಿ ಸುಖದುಃಖಗಳು, ಏಳುಬೀಳುಗಳು ಸಹಜ; ಸುಖವಾಗಲಿ, ದುಃಖವಾಗಲಿ ಹುಟ್ಟಿನಿಂದ ಸಾವಿನವರೆಗೆ ಏಕಪ್ರಕಾರವಾಗಿ ಉಳಿಯಲಾರದು. ಯೋಗಿಯಾ ಗುವುದು ಎಲ್ಲರಿಗೂ ಸಾಧ್ಯವಿಲ್ಲವಾದರೂ ಆದಷ್ಟು ಮಟ್ಟಿಗೆ ಸ್ಥಿತಪ್ರಜ್ಞರಾಗಿರುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಅದರಿಂದ ತಕ್ಕಮಟ್ಟಿಗಾದರೂ ಸುಖವನ್ನು ಸಾಧಿಸಬಹುದು.

ಪರಿಪೂರ್ಣಸುಖ ಎಂಬುದಿಲ್ಲ ಎಂದೆನಲ್ಲವೆ? "call no man happy till he dies" (ಸಾಯುವತನಕ ಮನುಷ್ಯನಿಗೆ ಸುಖವಿಲ್ಲ) ಎಂಬ ಗ್ರೀಕ್ ನಾಟಕಕಾರನೊಬ್ಬನ ಪ್ರಸಿದ್ಧವಾದ ಹೇಳಿಕೆ ನೆನಪಿಗೆ ಬರುತ್ತದೆ. ಸತ್ತಮೇಲಾದರೂ ಸುಖವಿದೆಯೆ? ಅದೂ ಖಚಿತವಿಲ್ಲ. ಹುಟ್ಟದಿರುವುದೇ ಸುಖ ಎನ್ನಬಹುದು. ಆದರೆ ಅದು ನಮ್ಮ ಕೈಯಲ್ಲಿಲ್ಲವಲ್ಲ! ಬಹು ವಿಚಿತ್ರ ಮಾನವನ ಬದುಕು.

II

ದೋಷಾನ್ವೇಷಣೆ

ಊರ್ಧ್ವಮುಖತೆಗಿಂತ ಮಿಗಿಲಾಗಿ ಅಧೋಮುಖತೆಯೆ ಮಾನವಚೇತನದ ಪ್ರವೃತ್ತಿ; ಅದು ಕೆಟ್ಟದ್ದರ ಕಡೆಗೆ ತೂಗುವಷ್ಟು ಸುಲಭವಾಗಿ, ಸಹಜವಾಗಿ ಒಳ್ಳೆಯದರ ಕಡೆಗೆ ತೂಗುವು ದಿಲ್ಲ. ಗುಣದೋಷಗಳನ್ನು ಗುರುತಿಸುವುದರ ವಿಷಯದಲ್ಲೂ ಈ ಮಾತು ದಿಟ. ನಾವು ಇತ ರರ ದೋಷಗಳನ್ನು ಗುರುತಿಸುವಲ್ಲಿ ತೋರುವಷ್ಟು ಆಸಕ್ತಿಯನ್ನು ಗುಣಗ್ರಹಣದಲ್ಲಿ ತೋರು ವುದಿಲ್ಲ.

ಪ್ರಪಂಚದಲ್ಲಿ ಪರಿಪೂರ್ಣತೆ ಎಂಬುದಿಲ್ಲ; ಯಾರಲ್ಲೆ ಆಗಲಿ, ಯಾವುದರಲ್ಲಿ ಆಗಲಿ ಗುಣದೋಷಗಳೆರಡೂ ಯಾವುದೋ ಪ್ರಮಾಣದಲ್ಲಿ ಬೆರೆತುಕೊಂಡಿರುತ್ತವೆ. ನಮ್ಮ ಮೊದಲ ಕರ್ತವ್ಯ ಗುಣವನ್ನು ಮೆಚ್ಚಿಕೊಳ್ಳುವುದು, ಎತ್ತಿಹೇಳುವುದು ಹೀಗೆಂದರೆ, ದೋಷವನ್ನು ಮರೆಯಿಸಬೇಕೆಂದು ಅರ್ಥವಲ್ಲ, ಮೆರೆಯಿಸಬಾರದು ಎಂದಷ್ಟೆ. ಎಷ್ಟೋ ಸಂದರ್ಭಗಳಲ್ಲಿ, ಕಾಳಿದಾಸ ಹೇಳುವಂತೆ "ಏಕೋ ಹಿ ದೋಷೋ ಗುಣಸಂನಿಪಾತೇ ನಿಮಜ್ಜತೀಂದೋಃ ಕಿರ ಣೇಷ್ವಿವಾಂಕಃ॥ (ದೋಷಾಂಶ ಗುಣಸಮುದಾಯದಲ್ಲಿ ಮುಳುಗಿ ಹೋಗಿರುತ್ತದೆ, ಚಂದ್ರನ ಕಲೆ ಚಂದ್ರಿಕೆಯಲ್ಲಿ ಹೇಗೋ ಹಾಗೆ). ಅದನ್ನೆ ಹೆಕ್ಕಿ, ಡಂಗುರ ಬಾರಿಸುತ್ತ ಸಾರುವುದು ಜಾಣತನದ ಲಕ್ಷಣವಲ್ಲ, ಸದಭಿರುಚಿಯಲ್ಲ.

ಹಾಗೆ ನೋಡಿದರೆ, ಯಾರಲ್ಲಿ ದೋಷವಿಲ್ಲ? ಮರ್ಯಾದಾಪುರುಷೋತ್ತಮನೆಂದು ನಾವು ಕೊಂಡಾಡುವ ಶ್ರೀರಾಮನಲ್ಲಿರಲಿಲ್ಲವೆ? ವಾಲ್ಮೀಕಿ ಮಹರ್ಷಿಗಳು ರಾಮಾಯಣದ ಆರಂಭದಲ್ಲಿ ರಾಮನಿಗೆ ಹಚ್ಚಿರುವ ವಿಶೇಷಣಮಾಲಿಕೆಯಲ್ಲಿ "ಸ್ವದೋಷ ಪರದೋಷವಿತ್" (ತನ್ನ ಮತ್ತು ಇತರರ ದೋಷಗಳನ್ನು ಬಲ್ಲವನು) ಎಂಬುದೊಂದು. ರಾಮ ನಿರ್ದೋಷನಾಗಿದ್ದರೆ ವಾಲ್ಮೀಕಿಗಳು 'ಸ್ವದೋಷವಿತ್' ಎಂದೇಕೆ ಹೇಳುತ್ತಿದ್ದರು? ಅವನ ವ್ಯಕ್ತಿತ್ವದಲ್ಲೂ ಕೊರತೆಗಳಿದ್ದಿರಬೇಕು; ಆದರೆ ಅವು ಇತರರ ಗಮನಕ್ಕೆ ಬರದಷ್ಟು ಅಲ್ಪವಾದವು, ಅವನಿಗೆ ಮಾತ್ರ ಗೊತ್ತಿದ್ದವು. ಇಂದು ನಾವು ಅವುಗಳನ್ನು ಶ್ರಮಪೂರ್ವಕವಾದ ಸಂಶೋಧನೆಯಿಂದ ಕಂಡುಹಿಡಿದು, ದೊಡ್ಡದು ಮಾಡಿ, ರಾಮನಲ್ಲಿ ಇಂಥಿಂಥ ದೋಷಗಳಿದ್ದವು, ಅವನು ಮಹಾತ್ಮನಲ್ಲ, ಸಾಮಾನ್ಯ ಮನುಷ್ಯ ಎಂದು ಸಿದ್ಧಾಂತ ಮಾಡಿದರೆ ಗಾಂಪರಾಗುತ್ತೇವೆ. ಅವನ ಗುಣಗಣವನ್ನು ಅಲ್ಲಗಳೆದ ಪಕ್ಷದಲ್ಲಿ, ಭಾರತೀಯ ಸಂಸ್ಕೃತಿಯ ಆಧಾರಸ್ತಂಭವೊಂದು ಕುಸಿದು ಬೀಳುತ್ತದೆ.

ರಾಮನಿಗೆ ತನ್ನ ದೋಷಗಳು ತಿಳಿದಿದ್ದುವು; ಅವನು ಮಹಾವ್ಯಕ್ತಿಯಾಗಿರುವುದಕ್ಕೆ ಅದೂ ಒಂದು ಕಾರಣ. ಆದರೆ ಲೋಕದಲ್ಲಿ ಬಹುಜನರಿಗೆ ತಮ್ಮ ದೋಷಗಳು ಗಮನಕ್ಕೆ ಬರುವುದೇ ಇಲ್ಲ; ಇತರರ ದೋಷಗಳು ಮಾತ್ರ ಗೋಚರಿಸುತ್ತವೆ; ಅವು ಸಣ್ಣಪುಟ್ಟವಾಗಿದ್ದರೂ ಅವರಿಗೆ ಭೂತಾಕಾರವಾಗಿ ಭಾಸವಾಗುತ್ತವೆ. ಇಂಥವರನ್ನು ದುರ್ಜನರೆನ್ನಬೇಕಾಗುತ್ತದೆ. ಸಂಸ್ಕೃತ ಸುಭಾಷಿತವೊಂದು ಹೀಗೆ ಹೇಳುತ್ತದೆ:

ಪರದೋಷ ಸಾಸಿವೆಯ ಗಾತ್ರದಷ್ಟಿದ್ದರೂ ಕಾಣುವನು ದುಷ್ಟ;
ತನ್ನ ದೋಷವೊ ಬಿಲ್ವಗಾತ್ರದಷ್ಟಿದ್ದರೂ, ಕಂಡರೂ ಕಾಣ !

ಕಣ್ಣಿಗೆ ತನ್ನ ಕಾಡಿಗೆ ಕಾಣದಿರುವುದು ಸಹಜವೇ. ತಮ್ಮದೇ ನಾಯಿಬಾಲವಾಗಿರುವಾಗ ಇಂಥ ಮಂದಿ ಕುದುರೆಯ ಬಾಲವನ್ನು 'ಛೀ, ಚೆನ್ನಾಗಿಲ್ಲ' ಎಂದು ಟೀಕಿಸುತ್ತಾರೆ.

ಅಂತೂ ಜಗತ್ತಿನಲ್ಲಿ ಬಹಳ ಜನ ದೋಷೈಕರತಿಯುಳ್ಳವರು; ಪರರ ದೋಷಗಳಲ್ಲಿ ರಮಿಸುವುದರಲ್ಲಿ ಅವರು ಪರಮಸುಖಸಂತೃಪ್ತಿಗಳನ್ನು ಕಂಡುಕೊಳ್ಳುತ್ತಾರೆ: ಗುಣಗಳಿಂದ ಅವರಿಗೆ ಸಂತೋಷವಿಲ್ಲ. ಕಸ್ತೂರಿಯನ್ನು ಕಡೆಗಣಿಸಿ ಕಸವನ್ನು ಆಘ್ರಾಣಿಸುವ ಈ ಬಗೆಯ ಜನ ಸರ್ವಜ್ಞನ ವಚನವೊಂದನ್ನು ನೆನಪಿಗೆ ತರುತ್ತಾರೆ :

ಗಂಧವನು ತೀವಲ್ಲಿ ಒಂದು ನೊಣವನು ಕಾಣೆ
ಸಂಧಿಸಿ ಮಲವ ಬಿಡುವಲ್ಲಿ ನೊಣಮುತ್ತು
ವಂದವನು ನೋಡು ಸರ್ವಜ್ಞ

ಸರ್ವಜ್ಞನಿಗಿಂತ ಪರಿಣಾಮಕಾರಿಯಾಗಿ ವಿಡಂಬಿಸುವುದು ಸಾಧ್ಯವಿಲ್ಲ.

ಗುಣಗ್ರಾಹಿಗಳು ಸಮಾಜದಲ್ಲಿ ಇಲ್ಲವೇ ಇಲ್ಲವೆಂದಲ್ಲ. ತೀರ ವಿರಳವಷ್ಟೆ. ಇದೊಂದು ಸಂಸ್ಕೃತ ಸೂಕ್ತಿ :

ಗುಣಿಯು ನಿರ್ಗುಣಿ ತಿಳಿಯಲಾರನು, ಗುಣಿಗೆ ಗುಣಿಯೊಳು ಮತ್ಸರ;
ಗುಣಿಗಳಾಗಿಯು, ಗುಣವ ಮೆಚ್ಚುವ ಸರಳಜನಗಳು ಸುವಿರಳ.

ಇಂತಹ ವಿರಳರು ಸಣ್ಣ ಪ್ರಮಾಣದ ಗುಣವನ್ನೂ ದೊಡ್ಡದು ಮಾಡಿ ಶಂಸಿಸುವ ಸಜ್ಜನರು. ಅಂಥವರು ನಮಸ್ಕಾರ್ಯರು:

ಪರಗುಣಶೀಕರಮುದಧಿಂ ಕೃತ್ವಾ ತತ್ರೈವ ಖೇಲದ್ಭ್ಯ:
ಅಜ್ಞಾತಮತ್ಸರೇಭ್ಯಃ ತೇಭ್ಯಃ ಸದ್ಭ್ಯೋ, ನಮೋಸ್ತು ವಿದ್ವದ್ಭ್ಯಃ

(ಅಸೂಯೆಯನ್ನರಿಯದ ವಿದ್ವಾಂಸರು ಅವರು; ಇತರರ ಗುಣದ ಒಂದು ಹನಿಯನ್ನು ಸಮುದ್ರವನ್ನಾಗಿ ಮಾಡಿ ಅದರಲ್ಲಿ ಓಲಾಡುವ ಸಜ್ಜನರು ಅವರು ; ಅವರಿಗೆ ವಂದನೆ).

ಇನ್ನು ಕೆಲವರಿರುತ್ತಾರೆ. ಅವರಿಗೆ ಗುಣಗಳೂ ದೋಷಗಳಾಗಿ ತೋರುತ್ತವೆ. ಅನ್ಯರ 'ಸ್ವಧರ್ಮ' ಅವರ ಪಾಲಿಗೆ 'ಅಧರ್ಮ' ವಾಗುತ್ತದೆ. ಹಕ್ಕಿ ಈಜುವುದಿಲ್ಲ, ಮೀನು ಹಾರುವುದಿಲ್ಲ, ಚಂದ್ರ ಸುಡುವುದಿಲ್ಲ ಇತ್ಯಾದಿಯಾಗಿ ಅವರು ಆಕ್ಷೇಪಿಸುತ್ತಾರೆ. ಇದು ದೋಷೈಕದೃಷ್ಟಿಯ ಅತಿರೇಕ ದಶೆ.

ನಾವು ದೋಷಗಳನ್ನು ಬಚ್ಚಿಡಬೇಕಾಗಿಲ್ಲ; ಆದರೆ ಅವಕ್ಕೆ ಎರಡನೆಯ ಸ್ಥಾನ ಕೊಡೋಣ; ಅವು ಗೌಣವಾಗಲಿ. ಪ್ರಧಾನ ಸ್ಥಾನ ಸಲ್ಲಬೇಕಾದುದು ಗುಣಗಳಿಗೆ; ಹಾಗೆಂದು, ಇಲ್ಲದ ಗುಣಗಳನ್ನು ಕಲ್ಪಿಸಬೇಕಾಗಿಲ್ಲ. ಇರುವ ಗುಣಗಳನ್ನು ತಿರಸ್ಕರಿಸದೆ ಪುರಸ್ಕರಿಸಿದರೆ ಸಾಕು. ಗುಣವನ್ನು ಒಂದು ವೇಳೆ ಉತ್ಪ್ರೇಕ್ಷಿಸಿದರೂ ತಪ್ಪಲ್ಲ; ಆದರೆ ಆದರ ಉಸಾಬರಿಗೇ ಹೋಗದೆ, ದೋಷವನ್ನು ಮಾತ್ರ ಉದ್ಘಾಟಿಸಿದರೆ ಅದರಿಂದ ಅಪಾಯವುಂಟು. ದೋಷಗಳು ಆಯಾ ವ್ಯಕ್ತಿಗೇ ಗೊತ್ತಿರುವ ಸಾಧ್ಯತೆಯಿದೆ; ಆದರೆ ಗುಣಗಳು ಗೊತ್ತಿಲ್ಲದಿರಬಹುದು. ಅವುಗಳನ್ನು ಬೇರೆಯವರು ತೋರಿಸಿಕೊಡಬೇಕು. ಗುಣಸ್ತವನದಿಂದ ಒಬ್ಬ ವ್ಯಕ್ತಿಗೆ ಸ್ಫೂರ್ತಿ, ಉತ್ತೇಜನಗಳನ್ನು ಕೊಟ್ಟಂತಾಗುತ್ತದೆ; ಕೃತಾರ್ಥತೆಯ ಭಾವನೆಯನ್ನು ಮೂಡಿಸಿದಂತಾಗುತ್ತದೆ; ಅವನ ಬೆಳವಣಿಗೆಗೆ ಇಂಬು ನೀಡಿದಂತಾಗುತ್ತದೆ. ಕೇವಲ ದೋಷ ಸಂಕೀರ್ತನದಿಂದ ವ್ಯಕ್ತಿಯ ಮನಸ್ಸನ್ನು ಜಗ್ಗಿ ಕುಗ್ಗಿಸಿದಂತಾಗುತ್ತದೆ; ಅವನ ಬೆಳವಣಿಗೆ ಅದರಿಂದ ಮುರುಟಿಹೋಗಬಹುದು. ಸುಕುಮಾರ ಮನಸ್ಸುಗಳಂತೂ ಬರಿಯ ಟೀಕೆಗಳಿಂದ ಆಘಾತಕ್ಕೀಡಾಗುತ್ತವೆ.

ಧನಕನಕಗಳನ್ನು ಕೊಡುವುದು ನಮ್ಮಿಂದಾಗದಿರಬಹುದು; ಆದರೆ ಒಳ್ಳೆಯ ಮಾತನ್ನಾದರೂ ಆಡಿ ಹುರುಪು ಹುಮ್ಮಸ್ಸುಗಳನ್ನುಂಟುಮಾಡುವುದು ಸಾಧ್ಯವಿಲ್ಲವೇ?

ಸರ್ವಜಂತುಗಳು ತುಷ್ಟಿಗೊಳ್ಳುವುವು ಪ್ರಿಯವಾಕ್ಯವನಾಡಿದರೆ;
ಅದರಿಂ ಪ್ರಿಯವನೆ ನುಡಿಯುವುದೆಲ್ಲರು–ಬಡತನ ಮಾತಿನೊಳೇಕೆ?

ಒಳ್ಳೆಯ ಮಾತಿಗೂ ಕ್ಷಾಮವೆ? ನಾಲ್ಕು ಹೊಗಳಿಕೆಯ ನುಡಿಗಳನ್ನಾಡಿದರೆ ನಾವು ಕಳೆದುಕೊಳ್ಳುವ ಗಂಟಾದರೂ ಏನು? ಹಾಗೆಂದು ಅಸತ್ಯವನ್ನಾಡಬೇಕಾಗಿಲ್ಲ, ಔಚಿತ್ಯವನ್ನು ಮೀರಬೇಕಾಗಿಲ್ಲ. ಸತ್ಯ, ಔಚಿತ್ಯಗಳ ಚೌಕಟ್ಟಿನೊಳಗಿದ್ದುಕೊಂಡೆ ಒಬ್ಬ ವ್ಯಕ್ತಿಯನ್ನು ಶ್ಲಾಘಿಸಿ ಅವನಿಗೆ ಹಿತವನ್ನೆಸಗಬಹುದು. ಉನ್ನತ ಸಾಧನೆಗಳಿಗೆ ಅವನನ್ನು ಪ್ರೇರಿಸಬಹುದು. ಹೊಗಳಿಕೆಯಿಂದ ಹನುಮಂತ ಹಿಗ್ಗಿ ಸಮುದ್ರ ಹಾರಲಿಲ್ಲವೆ?

"ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" ಎಂದರು ಬಸವಣ್ಣನವರು. ಮೊದಲು ನಮ್ಮ ಡೊಂಕನ್ನು ಕಂಡುಕೊಂಡು, ತಿದ್ದಿಕೊಳ್ಳಬೇಕು: ಅನಂತರ ಲೋಕದ ಡೊಂಕನ್ನು ಕಂಡು ತಿದ್ದಲು ಯತ್ನಿಸಿದರೆ ತಪ್ಪೇನಿಲ್ಲ. ಲೋಕವೆಲ್ಲ ಡೊಂಕು ಎಂಬ ಪೂರ್ವಗ್ರಹ ಮಾತ್ರ ಬೇಡ: ಅದರ ಋಜುತ್ವ

ವನ್ನೂ ಮುಕ್ತಮನಸ್ಸಿನಿಂದ, ಮುಕ್ತಕಂಠದಿಂದ ಒಪ್ಪಿಕೊಳ್ಳೋಣ. ದೋಷಾನ್ವೇಷಣೆಯಲ್ಲ, ಗುಣೋಪಾಸನೆ ನಮ್ಮ ಆದರ್ಶವಾಗಿರಲಿ.

III

ಅಸ್ಪೃಶ್ಯತೆ

ಅಸ್ಪೃಶ್ಯತೆ ಮತ್ತು ಅದರ ನಿವಾರಣೆ ಈಚೆಗೆ ಮೇಲಿಂದಮೇಲೆ ಕೇಳಿಬರುತ್ತಿರುವ ಮಾತು. ಹಿಂದಿನಿಂದಲೂ–ಮಹಾತ್ಮ ಗಾಂಧಿಯವರ ಕಾಲದಿಂದಲೂ–ಇದು ಕೇಳಿಬರುತ್ತಲೇ ಇದೆ; ಈಗ ಇದಕ್ಕೆ ರಾಜಕೀಯದ ಬಣ್ಣ ಬೇರೆ ಸೇರಿಕೊಂಡಿರುವುದೊಂದು ವಿಶೇಷ. ಏನೇ ಇರಲಿ, ಭರತಖಂಡಕ್ಕೆ ಬಡಿದಿರುವ ಬಹುದೊಡ್ಡ ಸಮಸ್ಯೆ ಅಸ್ಪೃಶ್ಯತೆ; ಇದು ನಿರವಶೇಷವಾಗಿ ತೊಡೆದು ಹೋಗುವವರೆಗೂ ದೇಶಕ್ಕೆ ಉದ್ಧಾರವಿಲ್ಲ; ಸರ್ವೋದಯವಿಲ್ಲ.

ಅಸ್ಪೃಶ್ಯತೆಯೆಂದರೇನು? ಗಾಂಧೀಜಿ ಒಂದೆಡೆ ಅದನ್ನು ಹೀಗೆ ಲಕ್ಷಣೀಕರಿಸಿದ್ದಾರೆ: "untouchability means pollution by the touch of certain persons by reason of their birth in a particular state or family." (ಒಂದು ನಿರ್ದಿಷ್ಟ ಸ್ಥಿತಿಯಲ್ಲಿ ಅಥವಾ ಕುಟುಂಬದಲ್ಲಿ ಹುಟ್ಟಿದ ಕಾರಣದಿಂದಾಗಿ ಕೆಲವರು ವ್ಯಕ್ತಿಗಳನ್ನು ಮುಟ್ಟುವುದರಿಂದುಂಟಾಗುವ ಮಾಲಿನ್ಯ). ಇಲ್ಲಿ ಹುಟ್ಟಿನ ಕಾರಣ ಎಂಬುದು ಮುಖ್ಯ. ಏಕೆಂದರೆ ಅಸ್ಪೃಶ್ಯತೆ, ಮೈಲಿಗೆ, ಸೂತಕ ಮುಂತಾದ ಮಾತುಗಳಿಗೆ ಅರ್ಥವಿಲ್ಲದಿಲ್ಲ. ಅವರೆ ಅವಕ್ಕೂ ಒಬ್ಬ ವ್ಯಕ್ತಿಯ ಹುಟ್ಟಿಗೂ ಯಾವುದೇ ಸಂಬಂಧವಿಲ್ಲ. ಉದಾಹರಣೆಗೆ, ಅಂಟುಜಾಡ್ಯವುಳ್ಳ ವ್ಯಕ್ತಿಯನ್ನು ಮುಟ್ಟಬಾರದು: ಅದರಿಂದ ಇತರರಿಗೂ ರೋಗ ಹರಡುವ ಸಂಭವವಿರುತ್ತದೆ. ಅಂಥ ರೋಗಿಗಳು ಅಸ್ಪೃಶ್ಯರೇ ಹೌದು. ಆದರೆ ಆ ಅಸ್ಪೃಶ್ಯತೆ ಜನ್ಮತಃ ಬಂದುದಲ್ಲ. ಆದರೆ ಭರತಖಂಡದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಸಮಾಜದ ಒಂದು ದೊಡ್ಡ ವರ್ಗವನ್ನು ಕೇವಲ ಹುಟ್ಟಿನ ನಿಮಿತ್ತದಿಂದ ಅಸ್ಪೃಶ್ಯರೆಂದು ಹೆಸರಿಸಿ ಊರಿಂದ ಹೊರಗಿರಿಸಲಾಗಿದೆ; ದೂರೀಕರಿಸಲಾಗಿದೆ. ಮತ್ತಾವ ದೇಶದಲ್ಲೂ ಇಲ್ಲದ, ಭಾರತಕ್ಕೇ ವಿಶಿಷ್ಟವಾದ ಈ ಪಿಡುಗಿನಿಂದ ಈ ದೇಶದ ವೈಭವಪೂರ್ಣ ಚರಿತ್ರೆ ಕಲುಷಿತವಾಗಿದೆ. ಅಸ್ಪೃಶ್ಯತೆ ಭಾರತೀಯ ಸಮಾಜಕ್ಕೆ ಅಂಟಿ ಬಂದ ಕರಾಳ ಕಳಂಕ, ಘೋರ ಶಾಪ; ಅದಕ್ಕೆ ಮಾರಕವಾಗಿರುವ ಅರ್ಬುದ ವ್ರಣ. ಇದೊಂದು ಅತಾರ್ಕಿಕವಾದ ಅಮಾನುಷ ಪದ್ಧತಿ; ಇಂದಿನ ವೈಜ್ಞಾನಿಕ ಯುಗದಲ್ಲಂತೂ ಹಾಸ್ಯಾಸ್ಪದವಾದುದು.

ಅಸ್ಪೃಶ್ಯತೆಯನ್ನು ಕುರಿತು ಮಾತನಾಡುವಾಗ, ಗಾಂಧೀಜಿಯ ಹೆಸರನ್ನೆತ್ತದಿರುವುದು ಸಾಧ್ಯವಿಲ್ಲ; ಈ ಸಮಸ್ಯೆಯ ಬಗೆಗೆ ಅವರಷ್ಟು ಆಲೋಚಿಸಿದವರು, ಅದರ ನಿರ್ಮೂಲನಕ್ಕಾಗಿ ಅವರಷ್ಟು ಶ್ರಮಿಸಿದವರು ಇನ್ನೊಬ್ಬರಿಲ್ಲ. ಅಸ್ಪೃಶ್ಯತೆಯನ್ನು ಅವರು 'ಹಿಂದೂ ಧರ್ಮಕ್ಕೆ ಹತ್ತಿದ ಗೆದ್ದಲು', 'ಹಿಂದೂ ಧರ್ಮಕ್ಕೆ ಅಮರಿಕೊಂಡಿರುವ ಪಿಶಾಚ', 'ಸಹಸ್ರಮುಖ ಸರ್ಪ'–ಮುಂತಾದ ನುಡಿಗಳಿಂದ ಬಣ್ಣಿಸಿದ್ದಾರೆ; ಅದು "ಹಿಂದೂ ಧರ್ಮದ ಜೀವವನ್ನು ತಿನ್ನುತ್ತಿದೆ" ಎಂದು ವಿಷಾದಿಸಿದ್ದಾರೆ; ಅದು "ದೇವರ ಮತ್ತು ಮಾನವನ ವಿರುದ್ಧ ಎಸಗಿದ ಪಾಪ"ವೆಂದು ಖಂಡಿಸಿದ್ದಾರೆ. "ನನಗೆ ಮೋಕ್ಷ ಬೇಕು, ಪುನರ್ಜನ್ಮ ಬೇಕಿಲ್ಲ. ಮತ್ತೆ ನಾನು ಹುಟ್ಟಲೇ ಬೇಕಾದಲ್ಲಿ ಅಸ್ಪೃಶ್ಯನಾಗಿ ಹುಟ್ಟಬೇಕು" ಎಂದಿದ್ದಾರೆ. ಅಸ್ಪೃಶ್ಯರ ದುರವಸ್ಥೆಯನ್ನು ಕುರಿತು ಅವರ ಮರುಕಕ್ಕೆ, ಅವರ ಉದ್ಧಾರವನ್ನು ಕುರಿತ ಅವರ ಕಳಕಳಿಗೆ ಇದು ಸಾಕ್ಷಿ.

ಗಾಂಧೀಜಿಯ ಪ್ರಕಾರ ಅಸ್ಪೃಶ್ಯತೆ ಎಂದೂ ಧರ್ಮದ ಒಂದು ಅಂಗವಲ್ಲ. "ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ। ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ॥" (ಗೀತೆ, 5.18) (ವಿದ್ಯಾವಿನಯಗಳಿಂದ ಕೂಡಿದ ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ನಾಯಿಮಾಂಸವನ್ನು ತಿನ್ನುವವನು–ಎಲ್ಲರಲ್ಲಿಯೂ ಜ್ಞಾನಿಗಳು ಸಮದರ್ಶಿಗಳು) ಎನ್ನುವ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಗೆ ಸ್ಥಾನವಿಲ್ಲ. ಆದರೂ ಸಮದರ್ಶನ ಹಿಂದೆ ಬಿದ್ದು ಆ ದುಷ್ಟಪದ್ಧತಿ ಹೇಗೊ ಬೆಳೆದುಕೊಂಡು ಬಂದು ಬೇರೂರಿತು. ಕೆಲವು ಸಂಕುಚಿತ ಶಾಸ್ತ್ರಗಳೂ ಸ್ಮೃತಿಗಳೂ ಅಸ್ಪೃಶ್ಯತೆಯನ್ನು ಸೃಜಿಸಿದಂತೆ ತೋರುತ್ತದೆ. ಗಾಂಧೀಜಿ ಹೇಳುತ್ತಾರೆ: "ಸಂಸ್ಕೃತದಲ್ಲಿ ಬರೆದಿಟ್ಟದ್ದೆಲ್ಲ ಶಾಸ್ತ್ರವಲ್ಲ; ಅದಕ್ಕೆ ನಾವು ಬದ್ಧರಾಗಬೇಕಿಲ್ಲ." ಈ ಸಂದರ್ಭದಲ್ಲಿ ಕುವೆಂಪು ಅವರ ಕೆಲವು ಕವನ ಪಂಕ್ತಿಗಳನ್ನು ಸ್ಮರಿಸಬಹುದು:

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯ ದನಿಯೆ ಋಷಿ. ಮನು ನಿನಗೆ ನೀನು!

ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮಿಾಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರಸಮ್ಮತನದೇನು?

ಅಸ್ಪೃಶ್ಯತೆ ಜಾತಿಪದ್ಧತಿಯ ಫಲವಲ್ಲವೆಂದೂ ಉಚ್ಚ-ನೀಚ ಭೇದದ ಫಲವೆಂದೂ ಹೇಳುತ್ತಾರೆ ಗಾಂಧೀಜಿ. ಆದರೆ ಜಾತಿಪದ್ಧತಿಗೂ ಅಸ್ಪೃಶ್ಯತೆಗೂ ಸಂಬಂಧವುಂಟೇ ಉಂಟು. ವಾಸ್ತವವಾಗಿ, ಜಾತಿಪದ್ಧತಿಯೆ ಭರತಖಂಡದ ಎಲ್ಲ ಅರಿಷ್ಟಗಳಿಗೂ ಮೂಲ. ವರ್ಣವ್ಯವಸ್ಥೆಯ ಹೆಸರಿನಲ್ಲಿ ಜಾತಿವ್ಯವಸ್ಥೆಯನ್ನು ಗಾಂಧೀಜಿ ಸಮರ್ಥಿಸಿರುವುದು ಅವರ ವಿಚಾರಧಾರೆಯಲ್ಲಿ ಕಂಡುಬರುವ ಒಂದು ವಿರೋಧಾಭಾಸ. ಅಂತೂ ಅವರ ಪಾಲಿಗೆ "ಅಸ್ಪೃಶ್ಯತಾನಿರೋಧ ಅಂತಿಮವಾಗಿ ಮಾನವ ಭ್ರಾತೃತ್ವದ ಸಾಕ್ಷಾತ್ಕಾರ ಪ್ರಯತ್ನ."

ಒಬ್ಬ ವ್ಯಕ್ತಿ ಅಸ್ಪೃಶ್ಯನಾಗುವುದು ತನ್ನ ಹುಟ್ಟಿನಿಂದಲ್ಲ, ಆಚಾರದಿಂದ. ನಿಜವಾದ ಅಸ್ಪೃಶ್ಯರೆಂದರೆ ದುರ್ಜನರು. ನಿಜವಾಗಿ ಅಸ್ಪೃಶ್ಯವಾದವು ಮನಸ್ಸಿನ ಕೆಟ್ಟ ಭಾವನೆಗಳು. ಅಸ್ಪೃಶ್ಯರೆನಿಸಿಕೊಂಡವರು ಕೆಲವು ದುರಭ್ಯಾಸಗಳನ್ನು ಬಿಡಬೇಕೆಂದು ಗಾಂಧೀಜಿ ಕರೆಯಿತ್ತಿರುವುದು ಸಮುಚಿತ. ತಾವು ಅಸ್ಪೃಶ್ಯರು, ಕೀಳಾದವರು ಎಂಬ ಮನೋಭಾವವನ್ನು ಅವರು ತೊರೆದು, ಆತ್ಮಪ್ರತ್ಯಯವನ್ನು ಬೆಳೆಸಿಕೊಂಡು ಮೇಲುವರ್ಗದವರೊಡನೆ ಸೌಹಾರ್ದಯುತವಾದ ಸ್ಪರ್ಧೆಯಲ್ಲಿ ತೊಡಗಬೇಕು. ಸ್ಪರ್ಧೆಯೆಂದರೆ ದ್ವೇಷವೆಂದು ಅರ್ಥವಲ್ಲ. ಮೇಲುವರ್ಗದವರೂ ಕಾಲಧರ್ಮಕ್ಕೆ ಹೊಂದಿಕೊಂಡು ಅಸ್ಪೃಶ್ಯರೆನಿಸಿಕೊಂಡವರನ್ನು ಸರಿಸಮಾನವಾಗಿ ಪರಿಗಣಿಸಿ, ಮುಂದಕ್ಕೆ ಬರುವ ಎಲ್ಲ ಅವಕಾಶಗಳನ್ನೂ ಅವರಿಗೆ ಕಲ್ಪಿಸಿಕೊಡಬೇಕು. "ಅಸ್ಪೃಶ್ಯತೆ ತೊಲಗಿದೆಯೆಂಬ ಭರವಸೆ ನನಗಿದೆ" ಎಂದಿದ್ದರು ಗಾಂಧೀಜಿ. ಆದರೆ ಅದು ತೊಲಗಿಲ್ಲ. ಇನ್ನಾದರೂ ಅದನ್ನು ತೊಲಗಿಸಬೇಕಾಗಿದೆ. ಇದು ಹೃದಯ ಪರಿವರ್ತನೆಯಿಂದ ಆಗಬೇಕೇ ಹೊರತು ಕಾನೂನಿನ ಬಲದಿಂದಲ್ಲ. ಇತಿಹಾಸವನ್ನು ಅಥವಾ ಅದರ ಕೆಲವು ಭಾಗಗಳನ್ನು ಮರೆತು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ಆಧಾರದ ಮೇಲೆ ಸುಖೀ ಸಮಾಜ

ವೊಂದನ್ನು ನಾವು ನಿರ್ಮಿಸಬೇಕಾಗಿದೆ. ಅಸ್ಪೃಶ್ಯತೆ, ಮೇಲು–ಕೀಳುಭಾವನೆ ಅಳಿಯುವವರೆಗೆ ಸರ್ವೋದಯದ ಆದರ್ಶ ಬರಿಯ ಬಾಯಿಮಾತಾಗಿ ಅಥವಾ ನಿರ್ಜೀವ ಬರಹವಾಗಿ, ವೇದಿಕೆಯ ಮೇಲಿನ ಘೋಷಣೆಯಾಗಿ ಉಳಿಯುತ್ತದಷ್ಟೆ. ಆದರೆ ಸರ್ವೋದಯವನ್ನು ಅಹಿಂಸಾತ್ಮಕ ವಿಧಾನದಿಂದ, ರಕ್ತರಹಿತ ಕ್ರಾಂತಿಯ ಮೂಲಕ ಸಾಧಿಸಬೇಕೆಂಬುದನ್ನು ನಾವು ಮರೆಯಬಾರದು. ಸಂಘರ್ಷ ರಕ್ತಪಾತಗಳಿಗೆ ಎಡೆಗೊಟ್ಟಲ್ಲಿ, ಭರತಖಂಡ ಹಿಂದೆ ಎದುರಿಸಿದ ಅಪಾಯಗಳಿಗಿಂತ ಭಯಂಕರವಾದ ಅಪಾಯಗಳ ಸುಳಿಗೆ ಸಿಕ್ಕುವುದರಲ್ಲಿ ಸಂದೇಹವಿಲ್ಲ.

ಮಾನವರೆಲ್ಲರೂ ದೇವರ ಮಕ್ಕಳು ; ಎಲ್ಲರೂ ಸೋದರರು, ಸಮಾನರು. ಹುಟ್ಟಿನಿಂದ ಯಾರೂ ಅಸ್ಪೃಶ್ಯರಲ್ಲ. ಹಾಗೆ ನೋಡಿದರೆ ಅಸ್ಪೃಶ್ಯ ಒಬ್ಬನೇ ಒಬ್ಬ : ದೇವರು ! ಅವನು ಅಸ್ಪೃಶ್ಯ ಮಾತ್ರವಲ್ಲ, ಅದೃಶ್ಯ ಮತ್ತು ಅಗಮ್ಯ ಕೂಡ.

IV

ಅಸೂಯೆ

ಆಹಾರ, ನಿದ್ರೆ, ಭಯ, ಮೈಥುನಗಳು ಮಾನವರಿಗೂ ಪ್ರಾಣಿಗಳಿಗೂ ಸಮಾನವೆಂದು ಹೇಳಲಾಗಿದೆ. ಆದರೂ, ಎರಡೂ ವರ್ಗಗಳ ನಡುವೆ ಗಣನೀಯವಾದ ಭಿನ್ನತೆಗಳೂ ಉಂಟು. ಕೆಲವಂಶಗಳಲ್ಲಿ ಮೃಗಗಳಿಗಿಂತ ಮಾನವ ಮೇಲಾಗಿದ್ದರೂ ಅಥವಾ ಹಾಗೆನಿಸಿಕೊಂಡಿದ್ದರೂ ಇನ್ನು ಕೆಲವಂಶಗಳಲ್ಲಿ ಅವನು ಮೃಗಗಳಿಗಿಂತ ಕೀಳೆಂದೇ ಹೇಳಬೇಕಾಗುತ್ತದೆ. ಮಾನವನಲ್ಲಿ ಮನೆಮಾಡಿಕೊಂಡಿರುವ ಷಡ್ವೈರಿಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಲ್ಲವೂ ಪಶುಗಳಲ್ಲಿರುವುದಿಲ್ಲ. ಉದಾಹರಣೆಗೆ, ಮಾತ್ಸರ್ಯ ಮನುಷ್ಯನಿಗೇ ವಿಶೇಷವಾದ ಸಹಜಪ್ರವೃತ್ತಿ ಅಥವಾ ದುರ್ಗುಣವೆಂದು ತೋರುತ್ತದೆ. ಈ ಬಗ್ಗೆ ಡಿ.ವಿ.ಜಿ. ಅವರ ಈ ಮಾತು ಗಮನಾರ್ಹವಾದುದು :

> ಹೊಟ್ಟೆಯೊಂದರ ರಗಳೆ ಸಾಲದೆಂದೇನೊ ವಿಧಿ
> ಹೊಟ್ಟೆಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್
> ಹೊಟ್ಟೆತುಂಬಿದ ತೋಳ ಮಲಗೀತು, ನೀಂ ಪೆರರ
> ದಿಟ್ಟಿಸುತ ಕರುಬುವೆಯೋ–ಮಂಕುತಿಮ್ಮ

ತುಂಬ ಹುರುಳುಳ್ಳ ನುಡಿಗಳಿವು. ಅಸೂಯೆ ಅಥವಾ ಮಾತ್ಸರ್ಯ ಎಂಬುದಕ್ಕೆ ಸಮಾನಾರ್ಥಕವಾದ ಕನ್ನಡಪದ 'ಹೊಟ್ಟೆಕಿಚ್ಚು' ಅಥವಾ 'ಹೊಟ್ಟೆ ಉರಿ.' ಇದು ಆ ಗುಣದ ಸ್ವರೂಪ ಹಾಗೂ ಪರಿಣಾಮವನ್ನು ಧ್ವನಿಸುವ ಶಕ್ತಿವತ್ತಾದ ಶಬ್ದ. ಮೊದಲೇ ಮನುಷ್ಯನ ಜಠರಾಗ್ನಿ ದುರ್ದಮ್ಯವಾದುದು, ಬಡಬಾನಲಸದೃಶವಾದುದು. ಅದರೊಡನೆ ಹೊಟ್ಟೆಯ ಕಿಚ್ಚೂ ಮೇಳವಿಸಿದರೆ ಏನು ಗತಿ ? ಅದರಿಂದಾಗುವ ಅನಾಹುತಪರಂಪರೆಗೆ ಎಲ್ಲೆಯುಂಟೆ, ಎಣೆಯುಂಟೆ ?

ಈ ಸಂದರ್ಭದಲ್ಲಿ ಬಸವಣ್ಣನವರ ಉಕ್ತಿಯೊಂದು ಜ್ಞಾಪಕಕ್ಕೆ ಬರುತ್ತದೆ : "ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು, ಕೂಡಲಸಂಗಮದೇವಾ." ಇಲ್ಲಿ 'ಮನೆಯೊಳಗಣ ಕಿಚ್ಚು' ಎಂದರೆ ಹೊಟ್ಟೆಕಿಚ್ಚು ಎಂದಿಟ್ಟುಕೊಂಡರೆ ತಪ್ಪಾಗದೇನೋ. ಬಸವಣ್ಣನವರು ಕೊಟ್ಟಿರುವ ಎಚ್ಚರಿಕೆ ಸರ್ವರೂ ಲಕ್ಷಿಸಬೇಕಾದುದು. ನಮ್ಮ ಮನೆಯನ್ನು ಆವರಿಸಿದ ಬೆಂಕಿ ಮೊದಲು ನಮ್ಮ ಮನೆಯನ್ನು ಸುಟ್ಟು ಭಸ್ಮಾವಶೇಷಗೊಳಿಸಿ, ಅನಂತರ

ನೆರೆಮನೆಗಳಿಗೆ ಹಬ್ಬಿ ಹಾನಿಹೇತುವಾಗುತ್ತದೆ. ಅವರೆ ನಮ್ಮ ಹೊಟ್ಟೆಕಿಚ್ಚು ಅನ್ಯರಿಗೆ ಕೇಡು ಮಾಡುತ್ತದೋ ಇಲ್ಲವೋ: ನಮಗಂತೂ ಅದರಿಂದ ಕೆಡುಕು ಕಟ್ಟಿಟ್ಟದ್ದು. ಹೊಟ್ಟೆಯುರಿಗೆ ತುತ್ತಾದ ಚಿತ್ತ ಶಾಂತಿಗೆ ಎರವಾಗುತ್ತದೆ, ನರಕೋಪಮ ಹಿಂಸೆಗೆ ಗುರಿಯಾಗಿ, ಸುಖಬಾಹಿರವಾಗುತ್ತದೆ. ಹೊಟ್ಟೆಯುರಿ ಎಂಬುದು ಇಬ್ಬಾಯ ಕತ್ತಿ; ಪ್ರಯೋಗಿಸುವವನನ್ನೂ ಅದು ಬಲಿತೆಗೆದುಕೊಳ್ಳುತ್ತದೆ. ಇಲ್ಲಿ 'ಉರಿ' ಎಂಬುದು ಬರಿಯ ರೂಪಕವಲ್ಲ, ಅಕ್ಷರಶಃ, ಸತ್ಯ. ಮನಸ್ಸಿನಲ್ಲಿ ಭಾವಗಳು ತೀವ್ರವಾಗಿ ಕೆರಳಿದಾಗ ಜಠರದಲ್ಲಿ ಹಲವು ರಸಗಳು ಸ್ರವಿಸಿ ಹುಣ್ಣುಗಳಿಗೆ ಕಾರಣವಾಗುತ್ತದೆ ಎಂದು ವೈದ್ಯರು ಹೇಳುತ್ತಾರೆ ಆದ್ದರಿಂದ ದ್ವೇಷಾಸೂಯೆಗಳು ಇತರರಿಗಿರಲಿ, ಆಯಾ ವ್ಯಕ್ತಿಗೇ ಅಪಾಯಕರ, ಆದಕಾರಣ ತ್ಯಾಜ್ಯ ಎಂದು ಬೇರೆ ಹೇಳಬೇಕಾಗಿಲ್ಲ. ಅಲ್ಲದೆ, ಎಷ್ಟು ಜನ ಇದುವರೆಗೆ ಈ ಹಿತವಚನವನ್ನು ಹೇಳಿಲ್ಲ!

ಆದರೆ ಅಸೂಯೆಯನ್ನು ಬಿಡುವುದು ಅಷ್ಟು ಸುಲಭವೆ? ಸಾಮಾನ್ಯರಿರಲಿ, ಜ್ಞಾನಿಗಳಿಗೂ ಅದರಿಂದ ಬಿಡುಗಡೆಯಿಲ್ಲ: 'ಬೋದ್ಧಾರೋ ಮತ್ಸರಗ್ರಸ್ತಾಃ.' ಇದು ಮನುಕುಲದಷ್ಟೆ ಪುರಾತನವಾದ ಪ್ರವೃತ್ತಿ. ನಮ್ಮ ರಾಷ್ಟ್ರೀಯ ಮಹಾಕಾವ್ಯವಾದ ಮಹಾಭಾರತದ ಕತೆಯೆ ಅಸೂಯಾಮೂಲವಾದುದು; ಇಡೀ ಕಾವ್ಯ ಅಸೂಯೆಯ ದಾರುಣದುರಂತಕ್ಕೆ ಹಿಡಿದ ಹೆಗ್ಗನ್ನಡಿ. ಕುಂತಿ ಐವರು ಮಕ್ಕಳನ್ನು ಹಡೆದಳೆಂದು ಕೇಳಿದ ಗಂಧಾರಿ ಸೈರಿಸಲಾರದೆ ಅಸೂಯಾವಿಷ್ಟಳಾಗಿ, ತನ್ನ ಗರ್ಭವನ್ನು ಕಿವುಚಿಕೊಂಡದ್ದರ ಫಲವಾಗಿ ಹುಟ್ಟಿದ ಕೌರವರು ತಾಯಿ ಹಾಕಿದ ಅಸೂಯಾಪಥದಲ್ಲೆ ಉದ್ದಕ್ಕೂ ನಡೆದು ನಾಶಗೊಂಡರು. ಸಕಲ ವೈಭವ ಸಂಪತ್ತುಗಳಿದ್ದರೂ ಅವರಿಗೆ ನೆಮ್ಮದಿಯಿತ್ತೆಂದು ಹೇಳುವಂತಿಲ್ಲ. ಅವರ ಕಾಟದಿಂದಾಗಿ ಪಾಂಡವರಿಗೂ ಸುಖ ಮರುಮರೀಚಿಕೆಯಾಯಿತು. "ಕಡೆಗುಂ ಪೊಲಸಾಯ್ತು ಭಾರತಂ."

ಮಾನವನಲ್ಲಿ ಏತಕ್ಕೆ ಹುಟ್ಟುತ್ತದೆ ಅಸೂಯೆ? ಒಂದು ಕಾರಣವನ್ನೇನೋ ಊಹಿಸಬಹುದು. ಅದು ನೈಚ್ಯಾನುಸಂಧಾನ (inferiority complex). ತನಗಿಂತ ವಿದ್ಯೆಯಲ್ಲಿ ಐಶ್ವರ್ಯದಲ್ಲಿ ಅಧಿಕಾರದಲ್ಲಿ ಮೇಲಿರುವವರನ್ನು ಕಂಡರೆ, ಕೆಳಗಿರುವವರಿಗೆ ಅಸೂಯೆ ಮೂಡುವುದು ಸ್ವಾಭಾವಿಕ. ಇದಕ್ಕೆ ಪರಿಹಾರವುಂಟು. ಕೆಳಗಿನವರೂ ಆ ಎತ್ತರಕ್ಕೆ ಪ್ರಯತ್ನಪೂರ್ವಕವಾಗಿ ಏರಿ, ಅಸೂಯಾಭೂತದಿಂದ ಪಾರಾಗಬಹುದು. ಶಕ್ತಿಸಂಚಯ, ಸಾಧನೆ, ಸಿದ್ಧಿಗಳು ಮಾತ್ಸರ್ಯದಿಂದ ಮುಕ್ತಿಯನ್ನು ದೊರಕಿಸಬಲ್ಲವು. ಆದರೆ ನಿರ್ನಿಮಿತ್ತವಾಗಿ ಅಸೂಯೆ ಪಡುವವರಿಗೆ ಏನು ಮಾಡುವುದು? ದುರ್ಯೋಧನಾದಿಗಳಿಗೆ ಯಾವ ಕೊರತೆಯಿತ್ತು? ಪಾಂಡವರನ್ನು ಕುರಿತು ಅವರು ಕರುಬಲು ಪ್ರಬಲ ಕಾರಣವೇನೂ ಇರಲಿಲ್ಲ. ಇಂಥ ಅಸೂಯಾವ್ಯಾಧಿಗೆ ಮದ್ದಿಲ್ಲ; ಅಂಥವರ ಸಾವಿನೊಡನೆಯೆ ಅವರ ಇತಿಶ್ರೀಯಾಗಬೇಕು.

ಅಸೂಯಾಗ್ರಸ್ತರಲ್ಲಿ ಬಹುಶಃ ಮೂರು ವಿಧ. ತಮ್ಮಷ್ಟಕ್ಕೆ ಸುಮ್ಮನೆ ಅಸೂಯೆಪಟ್ಟುಕೊಳ್ಳುವವರದು ಒಂದು ವರ್ಗ; ಇವರು ತಮಗೆ ಅಸೂಯೆಯನ್ನು ಚೋದಿಸಿದ ವ್ಯಕ್ತಿಯ ತಂಟೆಗೆ ಹೋಗುವುದಿಲ್ಲ; ಅವನು ಹಾಳಾಗಲೆಂದು ಬಯಸುವುದಿಲ್ಲ. ಇವರನ್ನು ಮಧ್ಯಮ ವರ್ಗದವರೆಂದು ಕರೆಯಬಹುದು. ಇವರು ಎಷ್ಟೋ ವಾಸಿ. ಇನ್ನೊಂದು ವರ್ಗದವರಿರುತ್ತಾರೆ: ಅವರು ತಮ್ಮ ಮಾತ್ಸರ್ಯಕ್ಕೆ ಗುರಿಯಾದ ವ್ಯಕ್ತಿಗೆ ಅನಿಷ್ಟವನ್ನು ಹಾರೈಸುತ್ತಾರೆ ಮಾತ್ರವಲ್ಲ, ಅವನಿಗೆ ಹೇಗಾದರೂ, ಏನಾದರೂ ಕೇಡುಮಾಡಲು ಅವನನ್ನು ಕೆಳಕ್ಕೆಳೆಯಲು ಯತ್ನಿಸುತ್ತಾರೆ. ಇಂಥವರು ಅಧಮರು. ಮತ್ತೆ ಕೆಲವರು ಅಸೂಯೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅಹಂಕಾರವನ್ನು ಬೆಳೆಯಿಸಿಕೊಳ್ಳುತ್ತಾರೆ; ಇವರಿಂದ ಅಪಾಯವಿಲ್ಲ. ಇಂಥವರನ್ನು ಬೇಕಾದರೆ ತೌಲನಿಕವಾಗಿ ಉತ್ತಮವರ್ಗ ಎಂದು ಕರೆಯಬಹುದೇನೋ. ಆದರೆ ಅಸೂಯೆ, ಅಹಂಕಾರಗಳಲ್ಲಿ ಔತ್ತಮ್ಯದ ಪ್ರಶ್ನೆ ಎಲ್ಲಿ ಬಂತು?

ಮಾನವನ ಮನಸ್ಸು ಸಮುದ್ರದಂತೆ. ಇದನ್ನು ಸತ್ ಮತ್ತು ಅಸತ್ ಶಕ್ತಿಗಳು ಸದಾ ಕಡೆಯುತ್ತಿರುತ್ತವೆ. ಅಸೂಯೆ, ಕೋಪ ಮುಂತಾದ ವಿಷಪದಾರ್ಥಗಳೇ ಮೊದಲು ಹುಟ್ಟುತಕ್ಕವು. ಇವುಗಳನ್ನು ಆಯಾ ವ್ಯಕ್ತಿಯೆ ನುಂಗಿಕೊಂಡು, ನಂಜುಂಡನಾಗಬೇಕು; ಶಿವನಾಗಬೇಕು. ಅನಂತರ ಅಮೃತೋದ್ಭವ. ಅದನ್ನು ಸಮಾಜಕ್ಕೆ ಕೊಡಬೇಕು.

ಅಸೂಯಾರಾಹಿತ್ಯ ಬಹು ದೊಡ್ಡ ಗುಣ; ವಿರಳವಾದುದೂ ಹೌದು. ನಮ್ಮ ಸಾಂಪ್ರದಾಯಿಕ ಹೆಸರುಗಳಲ್ಲಿ 'ಅನಸೂಯಾ' ಎಂಬುದೊಂದು. ಅಕಾಮ, ಅಕ್ರೋಧ, ಅಹಿಂಸಾ ಇತ್ಯಾದಿ ಹೆಸರುಗಳನ್ನು ನಾವು ಕೇಳಿಲ್ಲ; 'ಅನಸೂಯಾ' ಎಂಬುದು ಮಾತ್ರ ಬಹಳ ಪರಿಚಿತ. ನಮ್ಮ ಆರ್ಷ ಪರಂಪರೆ ಅನಸೂಯಾ ಪ್ರವೃತ್ತಿಗೆ ಕೊಟ್ಟ ಪ್ರಾಶಸ್ತ್ಯ ಇದರಿಂದ ಪ್ರಕಟವಾಗುತ್ತದೆಯಲ್ಲವೆ? ಉಳಿದ ಎಲ್ಲ ಶೀಲ ಸದ್ಗುಣಗಳಿಗೂ ಅದು ಮೂಲಭೂತವಾದುದು. ಮಾನವ ಮಾತ್ಸರ್ಯವನ್ನು ಗೆದ್ದರೆ, ಹೊಟ್ಟೆ ಕಿಚ್ಚಿನಿಂದನ್ನು ನಂದಿಸಿದರೆ ಮತ್ತಾವುದೂ ಅವನಿಗೆ ಅಸಾಧ್ಯವಾಗಲಾರದು.

"ಕರುಬರಿಮ್ದಿಂದ ಕಾಡೊಳ್ಳಿತು" ಎಂಬುದು ನಮ್ಮ ಕವಿಯೊಬ್ಬನ ಮಾತು. ಈಗ ಕಾಡಿಲ್ಲ; ಅದರಿಂದ ಊರುಗಳನ್ನು ನಾವು ಬಿಡುವಂತಿಲ್ಲ. ಆದರೆ ಮನಸ್ಸಿದ್ದರೆ ಊರುಗಳ ನಡುವೆಯೆ ತಪೋವನಗಳನ್ನೂ. ಆಶ್ರಮಗಳನ್ನೂ ನಿರ್ಮಿಸಿಕೊಳ್ಳಬಹುದು. ಅವು ನಿಜವಾಗಿ ಇರಬೇಕಾದುದು ಹೊರಗಲ್ಲ, ಒಳಗೆ. "ಮಾವಿದ್ವಿಷಾವಹೈ". ನಮ್ಮಲ್ಲಿ ದ್ವೇಷವಿಲ್ಲದಿರಲಿ, ಮಾತ್ಸರ್ಯವಿಲ್ಲದಿರಲಿ. ನಾವು ಸುಮನಸರಾಗೋಣ.

V

ಪರೀಕ್ಷೆ

ಪರೀಕ್ಷೆ ಎಂದಕೂಡಲೆ ನೆನಪಿಗೆ ಬರತಕ್ಕವು ವರ್ಷಕ್ಕೊಮ್ಮೆ ಅಥವಾ ಇಮ್ಮೆ ನಡೆಯುವ ಶೈಕ್ಷಣಿಕ ಪರೀಕ್ಷೆಗಳು. ಆದರೆ ಬದುಕಿನಲ್ಲಿ ಯಾವಾಗ ಬೇಕಾದರೂ ಪರೀಕ್ಷೆಗಳು ಬರಹುದು: ಇವು ಜೀವನ ಪರೀಕ್ಷೆಗಳು. ಶೈಕ್ಷಣಿಕ ಪರೀಕ್ಷೆಗಳಿಗೊಂದು ವೇಳಾಪಟ್ಟಿ ಇರುತ್ತದೆ. ಅವು ಅನಿರೀಕ್ಷಿತವಾಗಿ ಬರುವುದಿಲ್ಲ. ಆದರೆ ಜೀವನಪರೀಕ್ಷೆಗಳು ಹೇಳದೆ ಕೇಳದೆ ಅನಿರೀಕ್ಷಿತವಾಗಿ ಸಂಭವಿಸುತ್ತವೆ. ನಮ್ಮ ಶಿಕ್ಷಣಪದ್ಧತಿ ಎಂಥದೆಂದರೆ, ಹಿಂದಿನ ಎರಡು ಮೂರು ವರ್ಷಗಳ ಪ್ರಶ್ನಪತ್ರಿಕೆಗಳನ್ನು ನೋಡಿ, ಈ ವರ್ಷ ಯಾವ ಪ್ರಶ್ನೆಗಳನ್ನು ಕೊಡುತ್ತಾರೆಂಬುದನ್ನು ಊಹಿಸುವುದು ಸಾಧ್ಯ. ಆ ಪ್ರಶ್ನೆಗಳು ಎಲ್ಲರಿಗೂ ಸಮಾನ; ಪ್ರಶ್ನೆಗಳಿಗೆ ಬರೆಯಬೇಕಾದ ಉತ್ತರಗಳ ಸ್ವರೂಪವೂ ಒಂದೇ. ಆದರೆ ಜೀವನಪರೀಕ್ಷೆಗಳು ಹೀಗಲ್ಲ; ಅವುಗಳಲ್ಲಿ ಪ್ರಶ್ನೆಗಳನ್ನು ಮುಂದಾಗಿ ಊಹಿಸುವುದು ಸಾಧ್ಯವೇ ಇಲ್ಲ. ಆ ಪ್ರಶ್ನೆಗಳು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಎದುರಾಗುತ್ತವೆ: ಒಬ್ಬರಿಗೆ ಬಂದ ಪ್ರಶ್ನೆ ಮತ್ತೊಬ್ಬರಿಗೆ ಬರದಿರಬಹುದು. ಪ್ರಶ್ನೆಗಳಿಗೆ ತಕ್ಕಂತೆ ಉತ್ತರಗಳೂ ಬೇರೆ ಬೇರೆಯಾಗುವುದು ಅನಿವಾರ್ಯ. ಅಂತು ತಲೆಗೆಲ್ಲ ಒಂದೇ ಮಂತ್ರ ಎನ್ನುವುದು ಶೈಕ್ಷಣಿಕ ಪರೀಕ್ಷೆಗಳಿಗೆ ಅನ್ವಯಿಸುತ್ತದೆ, ಜೀವನಪರೀಕ್ಷೆಗಳಿಗಲ್ಲ.

ಜೀವನದಲ್ಲಿ ಎಲ್ಲರೂ ಒಂದಲ್ಲ ಒಂದು ಸಲ ಪರೀಕ್ಷೆಗೆ ಗುರಿಯಾಗುತ್ತಾರೆ: ಒಮ್ಮೆಯಾದರೂ ಪರೀಕ್ಷೆಗೀಡಾಗದ ವ್ಯಕ್ತಿ ಯಾರೂ ಇರಲಿಕ್ಕಿಲ್ಲ. ಕೆಲವು ಪರೀಕ್ಷೆಗಳು ಸಾಮಾನ್ಯವಾದವು:

ಅವುಗಳಲ್ಲಿ ತೇರ್ಗಡೆಯಾಗುವುದು ಅಶಕ್ಯವಲ್ಲ. ಮತ್ತೆ ಕೆಲವಾದರೋ ಅಗ್ನಿಪರೀಕ್ಷೆಗಳು; ವ್ಯಕ್ತಿಯ ಎಲ್ಲ ಶಕ್ತಿ, ಶ್ರದ್ಧೆಗಳನ್ನು ಒರೆಗೆ ಹಚ್ಚುವಂಥ ಕಠಿಣ ಸವಾಲುಗಳು. ಇವು 'ತನುವ ನಲ್ಲಾಡಿಸಿ ನೋಡುವ,' 'ಮನವನಲ್ಲಾಡಿಸಿ ನೋಡುವ' ಬಿರುಗಾಳಿಗಳು. ಇವು ಬಂದಾಗ, ಬೆದರದೆ ಬೆಚ್ಚದೆ ಅಲ್ಲಾಡದೆ ನುಲ್ಲರಾಗಿ ನಿಲ್ಲುವವರು ಅಪರೂಪ. ಈ ವರ್ಗದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು ಅಸಾಧ್ಯವಲ್ಲವಿದ್ದರೂ ಕಷ್ಟಸಾಧ್ಯ. ಅಸಾಮಾನ್ಯ ಚೇತನಗಳು ಮಾತ್ರ ಈ 'ದಿವ್ಯ'ಗಳಲ್ಲಿ ಗೆಲ್ಲುತ್ತವೆ. ಸಾಮಾನ್ಯ ಚೇತನಗಳು ಸೋಲುತ್ತವೆ. ಸುಟ್ಟುಹೋಗುತ್ತವೆ.

ಈ ಬದುಕೇ ಒಂದು ಅಗ್ನಿಪರೀಕ್ಷೆ, ಇದರಿಂದ ಪಾರಾಗುವ ವಾತೇ ಇಲ್ಲ ಎನ್ನುತ್ತದೆ ಒಂದು ಸುಭಾಷಿತ:

ಸಂಸಾರದಲಿ ಸಿಕ್ಕಿಬಿದ್ದವರ ಕುಶಲವನು ಏನು ಕೇಳುವುದು?–
ಅಗ್ನಿಪತಿತನಿಗೇಕೆ 'ಸುಟ್ಟುಹೋದೆಯೊ ಇಲ್ಲವೋ' ಎಂಬ ಪ್ರಶ್ನೆ ?

ನಿಜ, 'ತಾಪ' ತ್ರಯಗಳು ಎಲ್ಲರಿಗೂ ಇದ್ದವೇ. ಹಾಗೆಂದು ಎಲ್ಲರೂ ವಿರಕ್ತರಾಗುವುದು ಸಾಧ್ಯವಿಲ್ಲ. ಈ ಸಂಸಾರದಲ್ಲಿದ್ದುಕೊಂಡೂ ಬೆಂದುಹೋಗದಂತೆ ಬಾಳುವುದು ಹೇಗೆಂಬುದನ್ನು ನಾವು ಯೋಚಿಸಬೇಕಷ್ಟೆ.

ಎಂಥ ದುರ್ಭರ ಪ್ರಸಂಗವೇ ಆಗಲಿ, ಅದನ್ನು ಎದುರಿಸುತ್ತೇನೆಂಬ ಕೆಚ್ಚುನೆಚ್ಚುಗಳನ್ನು, ಅದಮ್ಯವಾದ ಶ್ರದ್ಧೆಯನ್ನು, ಆಶಾವಾದವನ್ನು ವ್ಯಕ್ತಿ ಬೆಳೆಯಿಸಿಕೊಳ್ಳಬೇಕು. ಎಂತಹ ವಿಷಮ ಪರಿಸ್ಥಿತಿಯಲ್ಲೂ ನಿರಾಶೆಗೆ, ವ್ಯಥೆಗೆ ಎಡೆಗೊಡಬಾರದು. ಈ ಸೂಕ್ತಿ ಗಮನಾರ್ಹವಾಗಿದೆ:

ಮನದೊಳು ವಿಷಾದವನು ತಳೆಯಬಾರದು, ಅದುವೆ ದೋಷಯುತವಹುದು;
ಕೊಲುವುದು ವಿಷಾದ ನರನನು, ಕ್ರುದ್ಧ ಸರ್ಪ ಬಾಲಕನನೆಂತಂತು.

ಕಾಳರಾತ್ರಿಗೂ ಒಂದು ಕಡೆಯುಂಟು ಎಂಬುದು ನಮ್ಮ ನೆನಪಿನಲ್ಲಿರಬೇಕು. ಸೀತೆಯನ್ನು ಕಳೆದುಕೊಂಡಾಗ ಶ್ರೀರಾಮನಂಥವನೂ ತಾತ್ಕಾಲಿಕವಾಗಿ ದುಃಖವಿವಶನಾದ. ಆಗ ಲಕ್ಷ್ಮಣ ಅವನನ್ನು ಸಂತೈಸಬೇಕಾಯಿತು. ಅವನಾಡಿದ ಮಾತು ಒಂದು ಅಣಿಮುತ್ತು: "ಏತಿ ಜೀವಂತಮಾನಂದೋ ನರಂ ವರ್ಷ ಶತಾದಪಿ" (ಬದುಕಿದ್ದರೆ ನೂರು ವರ್ಷವಾದ ಮೇಲಾದರೂ ಮನುಷ್ಯನಿಗೆ ಆನಂದ ಲಭಿಸುತ್ತದೆ.)

ಹೌದು, ಜೀವಂತವಾಗಿರಬೇಕು; ದುಃಖದಿಂದ ಪ್ರಾಣ ಕಳೆದುಕೊಂಡರೆ ಏನು ಬಂತು ಭಾಗ್ಯ ?

ಜೀವನದಲ್ಲಿ ಪರೀಕ್ಷೆಗಳು ಬರುವುದು ಎಷ್ಟೋ ಸಲ ಒಳ್ಳೆಯದು, ಅವು ಸ್ವಾಗತಾರ್ಹ ಎನಿಸುತ್ತವೆ. ಅವು ಮಾನವನ ಸುಪ್ತಸತ್ವವನ್ನು ಎಚ್ಚರಿಸಿ, ಎತ್ತಿ ತೋರುತ್ತವೆ ಮಾತ್ರವಲ್ಲ, ಆ ಸತ್ತ್ವದ ಸಂವರ್ಧನಕ್ಕೂ ನೆರವಾಗುತ್ತವೆ. ಈ ಸಂದರ್ಭದಲ್ಲಿ ಬಸವಣ್ಣನವರ ವಚನವೊಂದು ನೆನಪಿಗೆ ಬರುತ್ತದೆ:

ಅರೆದು ನೋಡುವ ಚಂದನದಂತೆ,
ಅರಿದು ನೋಡುವ ಕಬ್ಬಿನ ಕೋಲಿನಂತೆ
ಒರೆದು ನೋಡುವ ಸುವರ್ಣದ ಚಿನ್ನದಂತೆ........

ಇದು ಭಕ್ತರಿಗೆ ಮಾತ್ರವಲ್ಲ, ಭವಿಗಳಿಗೂ ಅನ್ವಯಿಸುತ್ತದೆ. ತೇದಾಗಲೆ ಚಂದನದ ಪರಿಮಳ ಹೊಮ್ಮುವುದು, ಕತ್ತರಿಸಿದಾಗಲೆ ಕಬ್ಬು ರಸ ಸೂಸುವುದು, ಒರೆ ಹಚ್ಚಿದಾಗಲೆ ಚಿನ್ನದ ನೈಜವಾದ ಬಣ್ಣ ವ್ಯಕ್ತವಾಗುವುದು. ಬಿದ್ದಷ್ಟೂ ಮಣ್ಣು ಹದಗೊಳ್ಳುತ್ತದೆ, ಗಟ್ಟಿಯಾಗುತ್ತದೆ; ಸಮಸ್ಯೆಗಳಿಂದ ಗುದ್ದಿಸಿಕೊಂಡಷ್ಟೂ ಬಲ ಹೆಚ್ಚುತ್ತದೆ. ಮೂಸೆಗೆ ಹಾಕಿದ ಹೊನ್ನು ತನ್ನ ಕಾಳಿಕೆಯನ್ನು ನೀಗಿಕೊಂಡು ಪರಿಶುದ್ಧವಾಗುತ್ತದೆ.

ಒಮ್ಮೊಮ್ಮೆ ಪರೀಕ್ಷೆಯಲ್ಲಿ ಸೋಲಬೇಕಾಗಬಹುದು. ಮರಳಿ ಯತ್ನವ ಮಾಡು ಎಂಬ ಸೂತ್ರ ಆಗ ತಾರಕವಾಗಬೇಕು. ನಪಾಸಾದ ವಿದ್ಯಾರ್ಥಿ ಮತ್ತೆ ಪರೀಕ್ಷೆಗೆ ಕುಳಿತರೆ ತೇರ್ಗಡೆಯಾಗಬಹುದು, ಪ್ರಥಮ ದರ್ಜೆಯಲ್ಲಿ ಆಗಬಹುದು ಅಥವಾ ಪುನಃ ನಪಾಸಾಗಲೂಬಹುದು. ಅಂತೂ ಯಾವಾಗಲೂ ಜಯ ಕಟ್ಟಿಟ್ಟದ್ದು ಎಂದೇನೂ ಹೇಳುವಂತಿಲ್ಲ; ಅಪಜಯ ಅನಿವಾರ್ಯವಾಗಲೂಬಹುದು. ಆದರೆ ಗೆಲ್ಲುವ ಪ್ರಯತ್ನವನ್ನೆ ಮಾಡದೆ ಸುಲಭವಾಗಿ ಸೋಲನ್ನೊಪ್ಪಿಕೊಳ್ಳುವುದು ತಪ್ಪು. ಎಲ್ಲ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿಯೂ ಕೈಮೀರಿದ ಕಾರಣಗಳಿಂದ ಸೋತರೆ ಅದರಲ್ಲೇನೂ ದೋಷವಿಲ್ಲ. ಗುರಿ ಮುಟ್ಟದಿದ್ದರೂ ಮಾರ್ಗಕ್ರಮಣಕ್ಕೆ ಅದರ ಬೆಲೆಯುಂಟೇ ಉಂಟು; ಸಿದ್ಧಿಯಲ್ಲಿ ವೈಫಲ್ಯವುಂಟಾದರೂ ಸಾಧನೆ ವ್ಯರ್ಥವೇನೂ ಅಲ್ಲ. ಡಿ.ವಿ.ಜಿ. ಅವರು ಹೇಳುವಂತೆ–

ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು
ಪಟ್ಟುವರಸೆಗಳೆಲ್ಲ ವಿಫಲವೆನ್ನುವೆಯೇಂ?
ಮುಟ್ಟಿ ನೋಡವನ ಮೈಕಟ್ಟು ಕಬ್ಬಿಣಗಟ್ಟಿ.
ಗಟ್ಟಿತನ ಗರಡಿಫಲ–ಮಂಕುತಿಮ್ಮ

ಇಷ್ಟಂತೂ ಖಚಿತ: ಎಂತಹ ಸನ್ನಿವೇಶದಲ್ಲೇ ಆಗಲಿ, ಯಾವ ಸಮಸ್ಯೆಗೇ ಆಗಲಿ ಸಾವು ಸಮರ್ಪಕ ಪರಿಹಾರವಲ್ಲ. ಉತ್ತರಪತ್ರಿಕೆಯ ಬದಲು ಖಾಲಿ ಹಾಳೆ ಕೊಟ್ಟು ಬಂದರೆ ಸಿಕ್ಕುವ ಸೊನ್ನೆ ಯಾರಿಗೂ ಭೂಷಣವಲ್ಲ.

VI

ಕೀರ್ತಿಕಾಮನೆ

ಕಾಲ ಕೆಟ್ಟುಹೋಯಿತು ಎಂಬ ಉದ್ಗಾರವನ್ನು ಆಗಾಗ ಕೇಳುತ್ತೇವೆ. ಇದು ದಿಟವೆ? ವಾಸ್ತವವಾಗಿ ಕಾಲ ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ; ಅದು ನಿರ್ಲಿಪ್ತವೂ ನಿರ್ಗುಣವೂ ಪರಿವರ್ತನರಹಿತವೂ ಆದ ಅನಂತವಾಹಿನಿ. ಜನರ ಸ್ವಭಾವವನ್ನು ನಾವು ಕಾಲಕ್ಕೆ ಆರೋಪಿಸುತ್ತೇವೆ. Sleepless night ಎಂದ ಹಾಗೆ ಇದೊಂದು transferred epithet. ಜನತೆಯ ಅಭಿರುಚಿ. ಮನೋಧರ್ಮಗಳು. ಜೀವನಮೌಲ್ಯಗಳು ಸದಾ ಒಂದೇ ರೀತಿ ಇರುವುದಿಲ್ಲ; ಆಗಾಗ ಬದಲಾಗುತ್ತವೆ. ಉನ್ನತಿ ಅವನತಿಗಳನ್ನು ಪಡೆಯುತ್ತವೆ. ತದನುಸಾರವಾಗಿ ನಾವು ಒಳ್ಳೆಯದು ಅಥವಾ ಕೆಟ್ಟದ್ದು ಎಂದು ಕಾಲವನ್ನು ವಿಶೇಷಿಸುತ್ತೇವೆ. ಹಾಗೆ ನೋಡಿದರೆ, ಕಾಲ ಒಂದು ದೃಷ್ಟಿಯಿಂದ ಈಗ ಕೆಟ್ಟಿಲ್ಲ, ಉತ್ತಮಗೊಂಡಿದೆ: ಕೆಟ್ಟುಹೋಗಿರತಕ್ಕವರು ಮನುಷ್ಯರೇ ಎಂದು ಹೇಳಬಹುದೇನೊ. ಒಂದು ನಿದರ್ಶನ ಕೊಡಬಹುದು. ಹಿಂದೆ

ಪರಿಹಾರವನ್ನೆ ಕಾಣದಿದ್ದ ಎಷ್ಟೋ ರೋಗಗಳ ನಿವಾರಣೋಪಾಯ ಈಗ ವಿಜ್ಞಾನದ ಕೃಪೆ ಯಿಂದ ಗೊತ್ತಿದೆ; ಕೆಲವು ರೋಗಗಳಂತೂ ನಾಮಾವಶೇಷವಾಗಿವೆ. ಇದು ಕಾಲಮಹಿಮೆ ಯೆನ್ನಬಹುದು. ಆದರೆ ವೈದ್ಯನೊಬ್ಬ ಧನದಾಹದಿಂದ ಸರಿಯಾಗಿ ಚಿಕಿತ್ಸೆ ನೀಡದೆ ರೋಗಿಯ ಸಾವಿಗೆ ಕಾರಣನಾದರೆ, ಅದು ಕಾಲದ ತಪ್ಪೆ?

ಸಾಹಿತ್ಯಕ್ಷೇತ್ರದಲ್ಲಿ ಪ್ರಸಿದ್ಧಿಯನ್ನು ಕುರಿತು ಹಿಂದಿನವರ ಮತ್ತು ಇಂದಿನವರ ಮನೋ ಭಾವ ಎಂಥದು, ಅಂತರವೇನಾದರೂ ಇದೆಯೇ ಎಂಬುದನ್ನು ತುಸು ನೋಡೋಣ. ಕೀರ್ತಿ ಯಾರಿಗೆ ಬೇಡ? ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂದರು ದಾಸರು; ಜೊತೆಗೆ 'ಪ್ರಸಿದ್ಧಿಗಾಗಿ' ಎಂಬುದನ್ನೂ ಸೇರಿಸಬಹುದು. ಈ ಖ್ಯಾತಿಯ ಹಂಬಲ ಮಾನವನ ಉಳಿದೆಲ್ಲ ಹಂಬಲಗಳಿಗಿಂತಲೂ ದೊಡ್ಡದು ಎಂದು ಡಿ.ವಿ.ಜಿ. ಹೇಳುತ್ತಾರೆ:

ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ
ಚಿನ್ನದಾತುರಕಿಂತ ಹೆಣ್ಣುಗಂಡೊಲವು
ಮನ್ನಣೆಯ ದಾಹವೀಯೆಲ್ಲಕಂ ತೀಕ್ಷ್ಣತಮ
ತಿನ್ನುವುದದಾತ್ಮನನೆ-ಮಂಕುತಿಮ್ಮ

ಎಂಥವರನ್ನೂ ಅದು ಬಿಟ್ಟಿದ್ದಲ್ಲ; ಮಿಲ್ಟನ್ ಹೇಳುವಂತೆ ಅದು 'Last infirmity of the noble minds' (ಉದಾತ್ತ ಚೇತನಗಳ ಕಟ್ಟಕಡೆಯ ದೌರ್ಬಲ್ಯ).

ಪ್ರಸಿದ್ಧಿಗಾಗಿ ಬಹುಜನ ಏನು ಮಾಡುವುದಕ್ಕೂ ತಯಾರು; ಯಾವ ಮಾರ್ಗ ಹಿಡಿಯುವು ದಕ್ಕೂ ಅವರು ಹೇಸುವುದಿಲ್ಲ. ಅಂಥವರನ್ನು ಗೇಲಿಮಾಡುವ ಒಂದು ಸಂಸ್ಕೃತ ಪದ್ಯ ವಿದು:

ಘಟಂ ಭಿಂದ್ಯಾತ್ ಪಟಂ ಛಿಂದ್ಯಾತ್
ಕುರ್ಯಾದ್ವಾ ಗಾರ್ದಭ ಸ್ವನಂ
ಏನಕೇನ ಪ್ರಕಾರೇಣ
ಪ್ರಸಿದ್ಧಪುರುಷೋ ಭವ

(ಗಡಿಗೆಯನ್ನು ಒಡೆದು ಹಾಕು, ಬಟ್ಟೆಯನ್ನು ಹರಿದುಹಾಕು, ಕತ್ತೆಯಂತೆ ಕಿರುಚು—ಒಟ್ಟಿನಲ್ಲಿ ಯಾವ ಬಗೆಯಲ್ಲಾದರೂ ಪ್ರಸಿದ್ಧ ಪುರುಷನಾಗು).

ಈ ಮಾತುಗಳು ಹಿಂದಿನವರಿಗಿಂತ ಇಂದಿನವರಿಗೆ ಮಿಗಿಲಾಗಿ ಅನ್ವಯಿಸುತ್ತವೆ. ಈ ಹೊತ್ತು, ಉಳಿದ ರಂಗಗಳಿರಲಿ, ಸಾಹಿತ್ಯರಂಗದಲ್ಲಿ ಖ್ಯಾತಿಯ ಖಯಾಲಿ ಉಲ್ಬಣಾವಸ್ಥೆಯಲ್ಲಿ ರುವುದನ್ನು ಕಾಣುತ್ತಿದ್ದೇವೆ. ತಮ್ಮ ಸ್ವಂತ ತುತ್ತೂರಿಯನ್ನೇ ಅನೇಕರು ಊದುತ್ತಾರೆ. ಒಂದು ಪದ್ಯ ಬರೆದರೆ ಸಾಕು, ಅದಕ್ಕಿಂತಲೂ ದಪ್ಪಕ್ಷರಗಳಲ್ಲಿ ಹೆಸರು ಅಚ್ಚಾಗಬೇಕೆಂಬ ಹುಚ್ಚು ಹಲವರಿಗೆ; ಎಲ್ಲರ ಕಣ್ಣಿಗೂ ಕಿವಿಗೂ ನಮ್ಮ ಹೆಸರು ಬೀಳಬೇಕು, ಎಲ್ಲರ ಬಾಯಿ ಮಾತಾಗಬೇಕು ಎಂಬ ಆಸೆಯಿಲ್ಲದವರೆ ಅಪರೂಪ. ಈ ಆಸೆ ತಪ್ಪೇನೂ ಅಲ್ಲ; ಆದರೆ ಅದರ ಈಡೇರಿಕೆಗಾಗಿ ಗುಂಪುಗಾರಿಕೆ, ರಾಜಕೀಯ, ವಾಮಮಾರ್ಗಾನುಸರಣ ತಪ್ಪು, ಅಷ್ಟೆ. ಸತ್ತ್ವ, ಸಿದ್ಧಿಗಳು ಹಿಂದೆ ಬಿದ್ದು, ಕೀರ್ತಿಕಾಮನೆಯೆ ಪ್ರಧಾನವಾಗುತ್ತಿರುವುದು ಇಂದಿನ ಶೋಚನೀಯ ಪರಿಸ್ಥಿತಿ.

ಕೆಲವು ಪ್ರಾಚೀನ ಕೃತಿಗಳಿವೆ; ಅವುಗಳನ್ನು ಬರೆದವರು ತಮ್ಮ ಹೆಸರುಗಳನ್ನೇ ಹೇಳಿ

ಕೊಂಡಿಲ್ಲ. ಇನ್ನು ಕೆಲವರು ತಮ್ಮ ಕೃತಿಗಳನ್ನು ದೊಡ್ಡವರ ಹೆಸರಿನಲ್ಲಿ ಸಾಗಿಸಿಬಿಟ್ಟಿದ್ದಾರೆ, ಅವರ ಹೆಸರಿನ ಬಲದಿಂದಾದರೂ ಅವು ಬದುಕಿಕೊಳ್ಳಲಿ ಎಂದು. ಕಾಳಿದಾಸ, ಶಂಕರಾಚಾರ್ಯ ಮುಂತಾದವರಿಗೆ ಅವರು ರಚಿಸದಿರುವ ಎಷ್ಟೋ ಕೃತಿಗಳು ಆರೋಪಿತವಾಗಿವೆ. ಪಾಶ್ಚಾತ್ಯರಲ್ಲೂ ಇಂಥ ವಿದ್ಯಮಾನವುಂಟು. ಈ ಪ್ರವೃತ್ತಿಗೆ ಏನೆನ್ನೋಣ? ಇಂದಿನದು ತದ್ವಿರುದ್ಧ ಪ್ರವೃತ್ತಿ: ದೊಡ್ಡವರಿಂದ ಕದ್ದು, ಅದಕ್ಕೆ ತಮ್ಮ ಹೆಸರು ಹಾಕಿಸಿಕೊಂಡು ತನ್ಮೂಲಕ ಪ್ರಸಿದ್ಧಿ ಗಳಿಸಬಯಸುವವರು ಎಷ್ಟೋ ಮಂದಿ ಇದ್ದಾರೆ. ಅನ್ಯರ ಹೆಸರಿನಲ್ಲಿ ತಮ್ಮ ಹೆಸರನ್ನು ಅಳಿಸಿಕೊಳ್ಳುತ್ತಿದ್ದ ಪ್ರಾಚೀನರಿಗೂ ಅನ್ಯರ ಕೃತಿಯನ್ನು ಬಂಡವಾಳ ಮಾಡಿಕೊಂಡು ಹೆಸರು ಗಳಿಸಿಕೊಳ್ಳುವ ಅರ್ವಾಚೀನರಿಗೂ ಇರುವ ಈ ಭೇದ ಎದ್ದು ಕಾಣುವಂಥದು. ಆದರೆ ಈ ಮಾತು ಎಲ್ಲರಿಗೂ ಅನ್ವಯಿಸುವುದಿಲ್ಲ. ಹಿಂದೆಯೂ ಕೃತಿಚೋರರಿದ್ದರು; ಇಂದಿಗೂ ಸ್ವೋಪಜ್ಞರಿದ್ದಾರೆ.

ಇಷ್ಟಾಗಿಯೂ ಹಿಂದಿನ ಕೆಲವರ ಅಕೀರ್ತಿಧೋರಣೆ ಆಶ್ಚರ್ಯಗೊಳಿಸುತ್ತದೆ. ಐವತ್ತೇಳು ಅಡಿ ಎತ್ತರದ ಜಗದ್ಭವ್ಯ ಗೊಮ್ಮಟವಿಗ್ರಹವನ್ನು ಕಡೆದ ಶಿಲ್ಪಿವರೇಣ್ಯನ ಹೆಸರೇ ನಮಗೆ ತಿಳಿದು ಬಂದಿಲ್ಲ. ಮನಸ್ಸುಮಾಡಿದ್ದರೆ ಅವನು ಆ ಬೃಹದ್ ವಿಗ್ರಹದ ಯಾವುದೋ ಒಂದು ಭಾಗದಲ್ಲಿ ತನ್ನ ಹೆಸರನ್ನು ಕೆತ್ತಬಹುದಿತ್ತು; ಅವನಿಗದು ಬೇಕೆನಿಸಲಿಲ್ಲ. ಅವನ ಹೆಸರು ಈಗ ಅಜ್ಞಾತವಾಗಿದೆ; ಉಸಿರು ಮಾತ್ರ ಉದಾತ್ತವಾಗಿ ಉಳಿದುಕೊಂಡಿದೆ.

ಈ ಸಂದರ್ಭದಲ್ಲಿ ಕುವೆಂಪು ಅವರ 'ಶ್ರೀರಾಮಾಯಣದರ್ಶನ'ದ ಒಂದು ಪ್ರಸಂಗ ನೆನಪಾಗುತ್ತದೆ. ರಾಮಲಕ್ಷ್ಮಣ ಸೀತೆಯರು ಕಾಡಿಗೆ ಹೋದಮೇಲೆ ಲಕ್ಷ್ಮಣನ ಪತ್ನಿ ಊರ್ಮಿಳೆ ಸರಯೂ ತೀರದಲ್ಲಿ ತಪೋಮಗ್ನಳಾಗುತ್ತಾಳೆ. ಅವರು ವನವಾಸದಿಂದ ಹಿಂದಿರುಗಿದಾಗ, ಊರ್ಮಿಳೆಯ ತಂಗಿ ಮಾಂಡವಿ ಬಂದು "ಬೇಗಮೇಳ್, ಪೋಗಮೇಳ್ಕುಮಾ ಸ್ವಾಮಿ ತಪಮಿರ್ಪ ನಂದಿಗ್ರಾಮದಾಶ್ರಮಕೆ!" ಎನ್ನುತ್ತಾಳೆ. ಅದಕ್ಕೆ ಊರ್ಮಿಳೆಯ ಉತ್ತರ: "ಮೀಯದುಡೆಯಿ ತೊಡದೆ ಪೋಪುದೇನವರೆಡೆಗೆ, ತಂಗೆ? ಮಂಗಳಮಲ್ತು!" ಆಗ ಮಾಂಡವಿ ಕೇಳುತ್ತಾಳೆ: "ನೋಡಬಾರದೆ ಅವರ್ ನಿನ್ನ ನಿಡುಕಡು ನೋಂಪಿಯಂ?" ಮುಂದೆ ಊರ್ಮಿಳೆ ಆಡುವ ಮಾತುಗಳು ಲೋಕೋತ್ತರ: "ಚಿಃ! ಕಡಲ್ಗಿದಿರ್ ಪನಿಗೇಂ ಪ್ರದರ್ಶನಂ? ದೇವರ ತಪಕ್ಕಿದಿರ್ ನಮ್ಮದೊರ್ ತೃಣಮಲ್ತೆ!....ತನ್ನ ತಾನ್ ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ; ಮೇಣ್ ತಪಕೆ ಕೇಳ್, ತಂಗೆ, ಪರಮಪ್ರಯೋಜನಂ!" ಈ ಕಾಲದಲ್ಲಿ ಕೆಲವರ ಚರ್ಯೆಯನ್ನು ನೋಡಿದಾಗ, 'ತನ್ನ ತಾನೆಲ್ಲಗೈವುದೆ' ಇವರ ಗುರಿಯೇನೊ ಅನಿಸುತ್ತದೆ. ಅಂತೂ ಕಡಲಿನ ಮುಂದೆ ಹನಿಗಳ, ಕಾಡಿನ ಮುಂದೆ ಎಲೆಗಳ, ಸೂರ್ಯನ ಮುಂದೆ ಸೊಡರುಗಳ ಪ್ರದರ್ಶನಪ್ರಿಯತೆಯನ್ನು ಕಾಣುತ್ತಿದ್ದೇವೆ.

ಪ್ರಸಿದ್ಧಿ ತ್ಯಾಜ್ಯವಲ್ಲ. ಹೆಸರೇ ಬೇಡ ಎಂಬ ಎತ್ತರಕ್ಕೆ ಏರಿದವರ ಮಾತು ಬೇಡ; ಅವರು ಜೀವನ್ಮುಕ್ತರು. ಸಾಮಾನ್ಯರಿಗೆ ಹೆಸರು ಬೇಕು; ಆದರೆ ಅದು ನ್ಯಾಯವಾದ ಮಾರ್ಗದಿಂದ ಬರಬೇಕು, ನಿಜವಾದ ಸಾಧನೆ ಅದರ ಬೆನ್ನಿಗಿರಬೇಕು. ಒಳ್ಳೆಯ ಕೆಲಸ ಮಾಡಿದವರಿಗೆ ಕೀರ್ತಿ ತಾನಾಗಿ ಇಂದಲ್ಲ ನಾಳೆ ಸಿಕ್ಕಿಯೇ ಸಿಗುತ್ತದೆ; ಮನ್ನಣೆ ಲಭಿಸಿಯೇ ಲಭಿಸುತ್ತದೆ. ಭವಭೂತಿ ಹೇಳಿದಂತೆ "ಕಾಲ ನಿರವಧಿಯಾದುದು, ಪೃಥ್ವಿ ವಿಪುಲವಾದುದು." ಆದರೆ ಕೀರ್ತಿಯ ಮೇಲೇ ಕಣ್ಣಿಟ್ಟುಕೊಂಡು ಕೆಲಸ ಮಾಡಿದರೆ, ಕೆಲಸವೂ ಮುಕ್ಕಾಗಬಹುದು, ಕೀರ್ತಿಯೂ ಕಲುಷಿತವಾಗಬಹುದು. "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" (ಕರ್ಮದಲ್ಲೇ ನಿನಗೆ ಅಧಿಕಾರ, ಫಲದಲ್ಲಿ ಆಸಕ್ತಿ ಬೇಡ) ಎಂದಿದೆ ಭಗವದ್ಗೀತೆ. ಆ ಮಾತನ್ನೇ ತುಸು ಬದಲಿಸಿ ಹೇಳಿಕೊಳ್ಳಬಹುದು: "ಕರ್ಮದಲ್ಲೆ ನಿನಗೆ ಅಧಿಕಾರ, ಕೀರ್ತಿಯಲ್ಲಿ ಆಸಕ್ತಿ ಬೇಡ."

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ .... ನಾಲ್ಕು ರೂಪಾಯಿ

ಇತರರಿಗೆ .... ಆರು ರೂಪಾಯಿ

ಸಂಸ್ಥೆಗಳಿಗೆ .... ಎಂಟು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ ಮೈಸೂರು–೫೭೦ ೦೦೬